VEC, Library
004213

ಗಾಂಧೀ ಸಾಹಿತ್ಯ



ಜಿ.ವಿ.ನಾರಾಯಣಮೂರ್ತಿ

ತ್ರೈವಾರ್ಷಿಕ ಯೋಜನೆಯ ಗ್ರಂಥಮಾಲೆ-೨೬

L11 JK 6

VEC, Library,.
004213

VIJAYA EVENING COLLEGE,
LIBRARY
BANGALORE-4.
ACCN. NO. 4213
SECTION
COST Rs. 2.50
Date 23.2.73 Librarian.

ಪ್ರಬಂಧ
11379-K2

ತ್ರೈವಾರ್ಷಿಕ ಯೋಜನೆಯ ಪುಸ್ತಕಮಾಲೆ—೨೬ .

ಗಾಂಧೀ ಸಾಹಿತ್ಯ

(ಸಾರ ಸಂಗ್ರಹ)

ಜಿ. ವಿ. ನಾರಾಯಣಮೂರ್ತಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ : : ಬೆಂಗಳೂರು-೧೮

ಮೊದಲನೆಯ ಮುದ್ರಣ : ೧೯೭೩

ಬೆಲೆ : ೨-೫೦

ಮುದ್ರಕರು :

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ

ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೧೮

‘ಗೆ’

ನಿನ್ನ ಮನೆ ಎನ್ನ ನೆಲೆ
ನಿನ್ನ ಅನ್ನ ಎನ್ನ ಜೀವ
ನಿನ್ನ ಸುತೆ ಎನ್ನ ಜೋಡಿ ;
ಇಂತು ಸಾಗಿದೆ, ಈ ಬದುಕು ಸಾಗಿದೆ.

ನಿಮ್ಮ ಸಹನೆ ಬರಹ ಶಕುತಿ
ನಿಮ್ಮ ಒಲವು ಬದುಕಿಗಾಸರೆ
ಅಮ್ಮ ಪೋಗೆ, ಎಲ್ಲವಾದಿರಿ ;
ಇಂತು ಸಾಗಿದೆ, ಈ ಬದುಕು ಸಾಗಿದೆ.

‘ ನಾ ’

ಪ್ರಸ್ತಾವನೆ

ಕನ್ನಡ ನಾಡು ನುಡಿ ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಾಭಿಮಾನಿಗಳ ಸಲಹೆ ಸಹಕಾರ ಪಡೆದು ತ್ರೈವಾರ್ಷಿಕ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ಅಡಕವಾಗಿರುವ ಅಂಶಗಳನ್ನು ೧೯೭೦ನೆಯ ಜನವರಿಯಿಂದ ಮೂರು ವರ್ಷಗಳ ಕಾಲಾವಧಿಯಲ್ಲಿ ಕಾರ್ಯಗತ ಮಾಡಬೇಕಾಗಿದ್ದು ಈ ಯೋಜನೆಗೆ ತಗಲುವ ವೆಚ್ಚವು ಇಪ್ಪತ್ತು ಲಕ್ಷ ರೂಪಾಯಿಗಳೆಂದು ಅಂದಾಜಾಗಿದೆ. ಈ ಮೊತ್ತದ ಮೂರನೆಯ ಒಂದು ಭಾಗದಷ್ಟು ಹಣವನ್ನು ಪುಸ್ತಕಗಳ ಪ್ರಕಟಣೆಗಾಗಿ ಯೋಜನೆಯಲ್ಲಿ ಮೀಸಲಾಗಿರಿಸಿದೆ.

ಪರಿಷತ್ತು ಪ್ರಾರಂಭವಾದ ತರುವಾಯ ಕನ್ನಡದಲ್ಲಿ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿ ಅವು ಓದುಗರ ಮನ್ನಣೆಗೆ ಪಾತ್ರವಾಗಿವೆಯಷ್ಟೆ. ಇದರ ಜೊತೆಗೆ ಪರಿಷತ್ತಿನ ತ್ರೈವಾರ್ಷಿಕ ಯೋಜನೆಯ ಅವಧಿಯಲ್ಲಿ ಒಂದು ನೂರು ಪುಸ್ತಕಗಳನ್ನಾದರೂ ಹೊರತರಬೇಕೆಂದು ನಿಯೋಜಿಸಲಾಗಿದೆ. ಪುನರ್ಮುದ್ರಣವಾಗಬೇಕಾದ ಕೆಲವು ಪ್ರಾಚೀನ ಗ್ರಂಥಗಳನ್ನು ಪ್ರಕಟಿಸುವುದಲ್ಲದೆ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ ಮೊದಲಾದ ನಾನಾ ವಿಷಯಗಳನ್ನು ಕುರಿತ ಗ್ರಂಥಗಳನ್ನೂ ಭಾಷಾಂತರ ಕೃತಿಗಳನ್ನೂ ಜೊತೆಗೆ ವಿದ್ಯಾರ್ಥಿಗಳಿಗೂ ಜನಸಾಮಾನ್ಯರಿಗೂ ಹೆಚ್ಚು ಪ್ರಯೋಜನವಾಗುವಂತೆ ಒಂದು ಸಂಕ್ಷಿಪ್ತ ಶಬ್ದಕೋಶವನ್ನೂ ಆದಷ್ಟು ಜಾಗ್ರತೆ ಪ್ರಕಟಿಸಬೇಕೆಂದು ತೀರ್ಮಾನಿಸಿದೆ.

ಓದುಗರ ದೃಷ್ಟಿಯಿಂದ ಪುಸ್ತಕದ ಬೆಲೆ ದುಬಾರಿಯಾಗದಂತೆ ನೋಡಿಕೊಳ್ಳುವುದು, ಕೆಲವು ಪುಸ್ತಕಗಳನ್ನು ಸಹಾಯಧನ ಪಡೆದು ಕಡಮೆ ಬೆಲೆಗೆ ಮಾರಾಟ ಮಾಡುವುದು ಇವು ಪರಿಷತ್ತಿನ ಆಶಯಗಳಾಗಿವೆ.

ಪ್ರಕಟಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಯ ಕಾರ್ಯವನ್ನು ಕಾರ್ಯಗತ ಮಾಡಲು ಗ್ರಂಥಪ್ರಕಟಣ

ಸಲಹಾ ಸಮಿತಿಯೊಂದನ್ನು ರಚಿಸಿದ್ದು ಆ ಸಮಿತಿಯಲ್ಲಿ ಡಾ|| ಹಾ. ಮಾ. ನಾಯಕ, ಡಾ|| ಜಿ. ಎಸ್. ಶಿವರುದ್ರಪ್ಪ, ಡಾ|| ಆರ್. ಸಿ. ಹಿರೇಮಠ, ಪ್ರೊ|| ಎಂ. ಮರಿಯಪ್ಪ ಭಟ್ಟ, ಶ್ರೀ ಹೆಚ್. ಎಲ್. ನಾಗೇಗೌಡ ಮತ್ತು ಶ್ರೀ ಸಿದ್ದಯ್ಯ ಪುರಾಣಿಕ ಇವರುಗಳು ಸದಸ್ಯರಾಗಿದ್ದಾರೆ. ಡಾ|| ರಂ. ಶ್ರೀ. ಮುಗಳಿಯವರು ಪ್ರಧಾನ ಸಂಪಾದಕತ್ವದ ಹೊಣೆ ಹೊತ್ತಿದ್ದಾರೆ. ಮತ್ತು ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಸಾಂಗ್ಲಿ, ಶ್ರೀ ಹಂಪ. ನಾಗರಾಜಯ್ಯ ಅವರುಗಳು ಈ ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ.

ಈ ಸಮಿತಿಯ ಸಹಕಾರದಿಂದ ಪ್ರಕಟವಾಗುವ ಪರಿಷತ್ತಿನ ಪ್ರಕಟಣೆಗಳನ್ನು ಕನ್ನಡಾಭಿಮಾನಿಗಳು ಆದರದಿಂದ ಬರಮಾಡಿಕೊಂಡು ಆಸ್ಥೆಯಿಂದ ಓದಬೇಕಾಗಿ ಪ್ರಾರ್ಥನೆ.

ದೇಶಹಳ್ಳಿ ಜಿ. ನಾರಾಯಣ

ಬೆಂಗಳೂರು
೨೮-೧-೧೯೭೨

ಅಧ್ಯಕ್ಷ,
ಕನ್ನಡ ಸಾಹಿತ್ಯ ಪರಿಷತ್ತು

ಮುನ್ನುಡಿ

ಭಾರತಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟ ರಾಷ್ಟ್ರಪಿತ ಗಾಂಧೀಜಿಯವರು ಬರಿಯ ರಾಜಕೀಯ ಹೋರಾಟಗಾರರೆ? ಸಾಹಿತಿಗಳೆ? ಎಂಬ ಒಂದು ಪ್ರಶ್ನೆ ಬರುತ್ತದೆ, ಅವರ ಬರವಣಿಗೆಯ ರಾಶಿಯನ್ನು ನೋಡಿದರೆ. ಅವರ ಜೀವನವೆಲ್ಲ ರಾಜಕೀಯಮಯವಾಗಿದ್ದರೂ, ಸ್ವಾತಂತ್ರ್ಯಕ್ಕೆ ಅವರು ನಡೆಸಿದ ಹೋರಾಟದ ಸ್ವರೂಪವನ್ನು ಅವರ ಬರಹಗಳಲ್ಲಿ ಕಾಣಬಹುದು. ಅವರ ಬರಹದ ಸ್ವರೂಪನ್ನು ಪರಿಶೀಲಿಸಿದರೆ ಅದು ಸಾಹಿತ್ಯವಾಗುವುದರಲ್ಲಿ ಸಂದೇಹವಿಲ್ಲ. ಅವರ ಬರವಣಿಗೆ ಒಂದು ರೀತಿಯಲ್ಲಿ ಭಾರತ ಸ್ವಾತಂತ್ರ್ಯದ ಹೋರಾಟದ ಕಥೆ, ಆ ಕಥೆಯಲ್ಲಿ ಹೋರಾಟದ ಸ್ವರೂಪ, ರಾಜಕೀಯ ವ್ಯಕ್ತಿಯ ಸ್ವಭಾವ, ಗುರಿ, ನಿಷ್ಠೆ, ಸತ್ಯಾಚರಣೆ, ವೈರಿಯನ್ನು ಎದುರಿಸುವ ಮನೋಭಾವ, ವ್ಯಕ್ತಿ ಬೆಳಸಿಕೊಳ್ಳಬೇಕಾಗುವ ಮನಃಸ್ಥೈರ್ಯ ಆತ್ಮಾಭಿಮಾನ, ಶತ್ರುಗಳನ್ನು ಕುರಿತು ಸಂದರ್ಶಿಸುವಾಗ ಆಡಬೇಕಾದ ಎಚ್ಚರಿಕೆಯ ಮಾತುಗಾರಿಕೆ, ಇವುಗಳಲ್ಲದೆ, ದೇಶದ ಜನದ ಸಂಪರ್ಕವನ್ನು ಬೆಳಸಿಕೊಳ್ಳಬೇಕಾದ ಆಗತ್ಯ, ಅದಕ್ಕಾಗಿ, ಸಾಮಾನ್ಯ ಜನರೊಡನೆ, ಮಕ್ಕಳೊಡನೆ, ಮಹಿಳೆಯರೊಡನೆ, ನಡೆದುಕೊಳ್ಳುವ ರೀತಿ, ಮೊದಲಾದ ವಿವರಗಳನ್ನು ಕಾಣುತ್ತೇವೆ. ವಿಶ್ವಪೂಜನೀಯರಾದ ಮಹಾತ್ಮರ ಆತ್ಮಪರಿಷ್ಕರಣದ ವಿವೇಚನೆ ಬರಹದಲ್ಲಿ ಮೂಡಿದಾಗ ಅದು ಸಾಹಿತ್ಯವಾಗದೆ ಮತ್ತಾವುದು ಸಾಹಿತ್ಯವಾಗಬಲ್ಲುದು ?

ಗಾಂಧೀಜಿಯವರ ಸಾಹಿತ್ಯದ ವ್ಯಾಪಕತೆ, ಅಗಾಧತೆ ಪರಿಮಿತಿ ಮೀರಿದ್ದು. ಅದನ್ನು ನಮ್ಮ ಜನಕ್ಕೆ ಸುಲಭದಲ್ಲಿ ಸಂಗ್ರಹವಾಗಿ ಪರಿಚಯಿಸಬೇಕಾದ್ದು ನಮ್ಮ ಕರ್ತವ್ಯ ಎಂದು ಭಾವಿಸಿ ಈ ಸಾಹಿತ್ಯವನ್ನು ಆಳವಾಗಿ ಚೆನ್ನಾಗಿ ಅಭ್ಯಾಸಮಾಡಿರುವ ಶ್ರೀ ಜಿ. ವಿ. ನಾರಾಯಣಮೂರ್ತಿ ಅವರನ್ನು ಈ ಸಾಹಿತ್ಯ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಡಬೇಕೆಂದು ಪ್ರಾರ್ಥಿಸಲಾಯಿತು. ಶ್ರೀ ನಾರಾಯಣಮೂರ್ತಿಗಳು 'ಗಾಂಧೀ ಸಾಹಿತ್ಯ'ವನ್ನು ಒಂದು ದತ್ತಿಯ ಉಪನ್ಯಾಸದ ಮೂಲಕ ಜನರಿಗೆ ತಿಳಿಯಹೇಳಿದುದಲ್ಲದೆ

ಅವರು ತಮ್ಮ ಭಾಷಣದ ವಿಷಯವನ್ನು ಪುಸ್ತಕರೂಪದಲ್ಲಿಯೂ ಹೊರತರಲು ಸಹಾಯ ಮಾಡಿದ್ದಾರೆ.

ಬೃಹದಾಕಾರವಾಗಿ ಬೆಳೆದಿರುವ ಗಾಂಧೀ ಸಾಹಿತ್ಯವನ್ನು ವಾಮನ ಸ್ವರೂಪದಲ್ಲಿ ನಿಷ್ಪಕ್ಷವಾಗಿ, ಸರಳ ಸುಂದರ ಕನ್ನಡ ಶೈಲಿಯಲ್ಲಿ ಅಳವಡಿಸಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಗಾಂಧೀ ಸಾಹಿತ್ಯದ ಈ ಕಿರುಹೊತ್ತಗೆ ಜನೋಪಯೋಗಿಯಾಗಬಲ್ಲುದು ಎಂದು ಆಶಿಸುತ್ತೇವೆ.

ರಂ. ಶ್ರೀ. ಮುಗಳಿ
ಪ್ರಧಾನ ಸಂಪಾದಕರು
ಗ್ರಂಥ ಪ್ರಕಟಣಾ ಸಲಹಾ ಸಮಿತಿ

ಬೆಂಗಳೂರು
೩೦ – ೧ – ೧೯೭೨

ಬಿನ್ನಹ

ಸಾಹಿತ್ಯ ರಸಜ್ಞರಲ್ಲಿ ಬಿನ್ನಹ. ಸಾಹಿತಿಯೇ ಅಲ್ಲದ ನಾನು ಈ ಸಾಹಸಕ್ಕೆ ಕೈ ಹಾಕಿದೇನೆ; ಕ್ಷಮೆಯಿರಲಿ. ನನ್ನ ಈ ಸಾಹಸಕ್ಕೆ ಕಾರಣವಿಷ್ಟೆ:

ಕಳೆದ ಆಗಸ್ಟ್ ತಿಂಗಳ ೨೧-೨೨ ರಂದು ತುಮಕೂರಿನಲ್ಲಿ ನಡೆದ ಜಿಲ್ಲೆಯ ಪ್ರಥಮ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ನನಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷ ಶ್ರೀಮಾನ್ ಜಿ. ನಾರಾಯಣ ಅವರು ಭೇಟಿಯಾದಾಗ, "ಸುಮಾರು ೧೨೦-೧೪೦ ಪುಟಗಳಲ್ಲಿ ಗಾಂಧೀ ಸಾಹಿತ್ಯ ಕುರಿತು ಬರೆದುಕೊಡುವಿರಾ?" ಎಂದು ನನ್ನನ್ನು ಕೇಳಿದರು; ಅದೂ ಅಕ್ಟೋಬರ್ ೨, ಗಾಂಧೀ ಜಯಂತಿಯ ಹೊತ್ತಿಗೆ. ಕಾಲ ಬಹಳ ಕಡಮೆಯಿತ್ತು. ನನ್ನ ಆರೋಗ್ಯವೂ ಅಷ್ಟಕ್ಕಷ್ಟೆ; ಹೀಗಾಗಿ 'ಪ್ರಯತ್ನಿಸುವೆ' ಎಂದು ಉತ್ತರವಿತ್ತೆ. ಊರಿಗೆ ಬಂದ ಮೇಲೆ ಆರೋಗ್ಯ ತೊಂದರೆ ಕೊಡಲಾರಂಭಿಸಿತು, ಸುಮ್ಮನಿದ್ದೆ. ಹತ್ತು ದಿನ ಕಳೆಯುವುದರೊಳಗೆ ಶ್ರೀಯುತರ ಪತ್ರ ಬಂದು, ನನ್ನ ಮಾತನ್ನು ಎಚ್ಚರಿಸಿತು. 'ಪ್ರಯತ್ನಿಸುವೆ' ಎಂದೇ ಉತ್ತರ ಬರೆದು, ಆರೋಗ್ಯ ಸ್ವಲ್ಪ ಉತ್ತಮ ಕಂಡ ಕೂಡಲೇ ಕಾರ್ಯಾರಂಭ ಮಾಡಿದೆ. ಈಶಕೃಪೆಯಿಂದ ಈ ಹೊತ್ತಗೆಯ ರೂಪದಲ್ಲಿ—'ಗಾಂಧೀ ಸಾಹಿತ್ಯ (ಸಾರ ಸಂಗ್ರಹ)' ಕಾರ್ಯ ಮುಗಿದಿದೆ. ಶ್ರೀಯುತರ ಪ್ರೇಮದ ಫಲವೇ ಇದು. ಅವರ ಪ್ರತ್ಯಕ್ಷ ಪ್ರೇಮದ ಪ್ರೇರಣೆ ಇಲ್ಲದಿದ್ದರೆ, ಇಂಥದೊಂದು ಕೃತಿಯನ್ನು ತರಬೇಕೆಂಬ ಯೋಚನೆ ನನ್ನಲ್ಲಿ ಉಂಟಾಗುತ್ತಿತ್ತೋ ಹೇಗೋ!

'ಗಾಂಧೀ ಸಾಹಿತ್ಯ'—ನನ್ನ ಮತಿಗೆ ಶಕ್ಯವಿದ್ದಂತೆ, ಕಾಲದ ಮಿತಿಗೆ ಒಳಪಟ್ಟಂತೆ, ಪುಟ ಸಂಖ್ಯೆಗೆ ಅನುಗುಣವಾಗಿ, 'ಸಾರ ಸಂಗ್ರಹ' ರೂಪವನ್ನು ತಾಳಿದೆ. ಇದು ಎಷ್ಟು ಮಟ್ಟಿಗೆ ಸಾರ ಸಂಗ್ರಹ ಎನಿಸೀತೋ ಕಾಣೆ. ಇದು ಒಂದು ಯಥಾದರ್ಶನ (Perspective) ಮಾತ್ರ. ಆದುದರಿಂದ ಪಾಠಕರು ಇದನ್ನೇ ಗ್ರಹಿಸುವ ಸೌಜನ್ಯ ತೋರುವರೆಂದು ನಂಬಿದೇನೆ. ಏಕೆಂದರೆ, ಸಹಸ್ರಾರು ಪುಟಗಳಲ್ಲಿ ಅಡಕವಾಗಿರುವ ಗಹನ ವಿಷಯವನ್ನು ಇಂಥ ಪುಟ್ಟ

ಕಂಪದಲ್ಲಿ ತರುವಂಥ ಕಲೆ ನನಗಂತೂ ಇಲ್ಲ. ಇದು ಒಂದು ಪ್ರಾಮಾಣಿಕ ಪ್ರಯತ್ನ ಮಾತ್ರ; ಪ್ರಾಮಾಣಿಕತೆಯೇ ನನ್ನ ಶಕ್ತಿ ಎಂದಾಗ, ವಾಚಕರ ಸಹೃದಯತೆಗೆ ಕೊರತೆ ಇದ್ದೀತೆ?

ಕಾಲದ ದೃಷ್ಟಿಯಿಂದ ನೋಡಿದಾಗ, ಅರವತ್ತು ವರ್ಷಗಳ ಮೇಲ್ಪಟ್ಟ ಕಾಲದ ಪ್ರವಾಹದಲ್ಲಿ ಹರಿದು ಬಂದು ಸೃಷ್ಟಿಯಾಗಿದೆ ಈ ಗಾಂಧೀ ಸಾಹಿತ್ಯ. ನಾನಿನ್ನೂ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ನನ್ನ ಮನಸ್ಸನ್ನು ಆಕರ್ಷಿಸಿತ್ತು 'ಯಂಗ್ ಇಂಡಿಯಾ'. ಅಂದು ಅದನ್ನು ಓದುವಾಗ ಯಾವ ಉತ್ಸಾಹ-ಆಸಕ್ತಿ ಇತ್ತೋ ಅದೇ ಇಂದಿಗೂ ಇದೆ ಎಂದರೆ, ಸತ್ಯ ನುಡಿ. ಅದರಲ್ಲಿ ನಾನು ಕಂಡ 'ಮೋಡಿ'ಯ ಪ್ರಭಾವ ನನ್ನಲ್ಲಿ ಅಚ್ಚಳಿಯದೆ ಇದೆ. ವರ್ಡ್ಸ್‌ವರ್ತ್ ಕವಿ—ಇಂದ್ರಚಾಪವನ್ನು ಕಂಡು ನುಡಿದ ಮಾತು ನನ್ನ ಸ್ಮರಣೆಗೆ ಬರುತ್ತದೆ: "ಆಗಸದಲ್ಲಿ ಕಾಮನಬಿಲ್ಲನ್ನು ಕಂಡಾಗ, ನನ್ನೆದೆ ನಲಿಯುವುದು. ನಾನು ಕಿಶೋರನಾಗಿದ್ದಾಗ ಹೀಗೆಯೇ ಇತ್ತು. ನನ್ನ ತಾರುಣ್ಯದಲ್ಲಿಯೂ ಹೀಗೆಯೇ ಇದೆ. ನಾಳೆ ಮುಪ್ಪು ಬಂದಾಗಲೂ ಹೀಗೆಯೇ ಇರಲಿ; ಇಲ್ಲವಾದರೆ ಸಾವು ಬರಲಿ."

ನನಗೀಗ ಅರವತ್ತು. ಮುಪ್ಪು ಧಾವಿಸಿ ಬರುತ್ತಿದೆ. ಉಪನಿಷತ್ತಿನ ಮಾತಿನಲ್ಲಿ 'ಮೃತ್ಯುರ್ಧಾವತಿ ಪಂಚಮಃ'. ಗಾಂಧೀ ಸಾಹಿತ್ಯದಲ್ಲಿ ನಾನನುಭವಿಸಿದ ಸತ್ಯ-ಸೌಂದರ್ಯ ಮಾಸಲಾಗಿಲ್ಲ. ನಮ್ಮ ತರುಣರಿಗೇಕೋ ಈ ಸತ್ಯ-ಸೌಂದರ್ಯ ಬೇಕಾಗಿಲ್ಲವೆಂಬುದೇ ನನ್ನ ಚಿಂತೆ. 'ಲೋಕೋ ಭಿನ್ನ ರುಚಿಃ' ಅಲ್ಲವೆ! ಈ ಸಾರಸಂಗ್ರಹ ಆ ಸೌಂದರ್ಯದ ಬಗೆಗೆ ಕಿಂಚಿತ್ತಾದರೂ ಓದುಗರಲ್ಲಿ ರುಚಿಯನ್ನು ಹುಟ್ಟಿಸಿದರೆ, ನನ್ನ ಶ್ರಮ ಸಾರ್ಥಕವೆ.

ಈ 'ಸಾರ ಸಂಗ್ರಹ'ದ ತಂತ್ರದ ಬಗೆಗೆ ಒಂದು ಮಾತು ಅಗತ್ಯ. ಇದು ಯುಗಧರ್ಮಕ್ಕೆ ಅನುಗುಣವಾದ 'ಜಂಬೋ-ಜೆಟ್'ನಲ್ಲಿ ಕುಳಿತು ಗಾಂಧೀ ಸಾಹಿತ್ಯ ಲೋಕದಲ್ಲಿ ವಿಹಾರಕ್ಕೆ ಹೊರಟಂತಿದೆ. ಇಂಥ ವಿಹಾರದಲ್ಲಿ ಗುರುತಿಸಿ. ನೆನಪಿನಲ್ಲಿ ನಿಲ್ಲುವಂಥದೆಂದರೆ, ಅಲ್ಲಲ್ಲೇ ಕಂಡುಬರುವ ದೊಡ್ಡ-ಪುಟ್ಟ ಗಿರಿ-ಶಿಖರಗಳು, ಜಲರಾಶಿ ಮತ್ತು ಭೂಖಂಡಗಳು ತಾನೇ? ಅಂತೆಯೇ ಈ ವಿಹಾರದಲ್ಲಿಯೂ ಎದ್ದುಕಾಣುವ ಹಲವಾರು ಅಂಶಗಳನ್ನು ಮಾತ್ರ ಇಲ್ಲಿ ನಿರೂಪಿಸಲಾಗಿದೆ. ಇದು ಅನಿವಾರ್ಯ ಫಲ-ಕಾಲ ಮತ್ತು ಸ್ಥಳಗಳ ಮಿತಿಯಲ್ಲಿ.

ಈ ಹೊತ್ತಿಗೆಯ ರಚನೆಗೆ ಗಾಂಧೀ ಸ್ಮಾರಕ ನಿಧಿಯ ಕನ್ನಡ ಗಾಂಧೀ ಗ್ರಂಥಮಾಲೆಯ ಸಂಪುಟಗಳು ಪ್ರಧಾನ ಆಕರವಾಗಿವೆ. ವಿಷಯ ನಿರೂಪಣೆಗೆ ಹೊಂದಿಕೊಳ್ಳುವಂತೆ ಅಲ್ಲಲ್ಲೇ ಆ ಸಂಪುಟಗಳಿಂದ ಸಂಬಂಧಪಟ್ಟ ವಾಕ್ಯಗಳನ್ನು ಉದ್ಧರಿಸಿ ಕೊಡಲಾಗಿದೆ. ಆ ಆಕರಕ್ಕೆ ನಾನು ತುಂಬ ಋಣಿ.

ಮತ್ತೊಮ್ಮೆ, ಈ ಕೃತಿಯ ಪ್ರಕಾಶನಕ್ಕೆ ಇಂಬುಗೊಟ್ಟ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ ಶ್ರೀಮಾನ್ ಜಿ. ನಾರಾಯಣ ಅವರಿಗೆ ಅತ್ಯಂತ ಕೃತಜ್ಞ.

ಚಿಕ್ಕನಾಯಕನಹಳ್ಳಿ
೩೦–೧–೭೨

ಜಿ. ವಿ. ನಾರಾಯಣಮೂರ್ತಿ

ಪರಿವಿಡಿ

೧. 'ವಿನಯದ ಪ್ರಭುವೇ'

೨. ಗಾಂಧೀ ಸಾಹಿತ್ಯ – ವಾಙ್ಮಯ ತಪಸ್ಸು . . ೧

೩. ಗಾಂಧೀ ಸಾಹಿತ್ಯ – ಒಂದು ವಿವರಣೆ . . ೭

೪. ಮೂಲ ಸಾಹಿತ್ಯ (Basic Literature) . . ೧೫

೫. ಗಾಂಧೀ ಸಾಹಿತ್ಯ ವಸ್ತು ವಿಸ್ತಾರ . . ೩೬

೬. ಗಾಂಧೀಜಿಯ ಬಗೆಗೆ ಇತರರು ಬರೆದುವು . . ೧೩೧

೭. ಲೇಖಕ ಗಾಂಧೀಜಿ . . ೧೩೪

೮. ಗಾಂಧೀ ಸಾಹಿತ್ಯ : ಇಂದು-ನಾಳೆ . . ೧೫೨

'ವಿನಯದ ಪ್ರಭುವೇ'

(ಇದು ಗಾಂಧೀಜಿ ೧೨-೯-೧೯೩೪ರಲ್ಲಿ ಬರೆದ 'Lord of Humility' ಎಂಬ ಶೀರ್ಷಿಕೆಯ ಕನ್ನಡಾನುವಾದ. ೧೯೪೯ರ ಅಕ್ಟೋಬರ್ ೨, ಹರಿಜನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಗಾಂಧೀಜಿ ಎಂಥ ವಿನಯ ಭಾವದಿಂದ ಭಾರತದ ಮತ್ತು ಮಾನವ ಕುಲದ ನಿಷ್ಕಾಮಸೇವೆ ಸಲ್ಲಿಸುತ್ತಿದ್ದರೆಂಬುದಕ್ಕೆ ಜ್ವಲಂತ ನಿದರ್ಶನ. ಅವರ ಶ್ರದ್ಧೆ, ನಿಷ್ಠೆ, ಸದ್ಭಾವ ನಮ್ಮಲ್ಲಿ ಏನಾದರೂ ಇದೆಯೆ, ಎಂದು 'ಕ್ಷ' ಕಿರಣ ಹಿಡಿದು ಶೋಧಿಸಿಕೊಳ್ಳಬೇಕಾಗಿದೆ ಇಂದು.)

ದೀನ ಹರಿಜನನ ಹೀನ ಕುಟೀರದಲಿ,
ನೆಲೆಸಿರುವ ಹೇ ವಿನಯದ ಪ್ರಭುವೇ ;
ಗಂಗೆ ಯಮುನೆ ಬ್ರಹ್ಮಪುತ್ರಗಳೆಲ್ಲ,
ಹರಿದು ಪಾವನಗೊಂಡ ಸುಂದರ ನಾಡಿನಲೆಲ್ಲ,
ನಿನ್ನನರಸಲು ನೀಡೆಮಗೆ ನೆರವ.

ನೀಡೆಮಗೆ ಎಲ್ಲವನು ಸ್ವಾಗತಿಪ ಮನವ,
ನೀಡೆಮಗೆ ಎಂದೆಂದು ತೆರೆದ ಹೃದಯವ ;
ನೀಡೆಮಗೆ ನಿನ್ನ ವಿನಯ ಭಾವವ,
ನೀಡೆಮಗೆ ಭಾರತದ ಜನಕೋಟಿಯನೆಲ್ಲ,
ಒಂದೆಂದು ಭಾವಿಸುತ ನಡೆಯಲಿಚ್ಛಾಶಕ್ತಿಯ.

ಓ ದೇವ, ದೀನರಲಿ ದೀನ ತಾನೆಂದರಿವ ಮಾನವಗೆ,
ಅರಸಿ ಬರುವುದಾ ನಿನ್ನ ಕೈ ನೆರವು ;
ಬೇಡುವೆವು ಆ ನಿನ್ನ ದಯೆಯೆಮಗೆ ಬರುವಂತೆ,
ಎಮ್ಮೀ ದೇಶಬಾಂಧವರಿಂದ ದೂರ ಸರಿಯದಂತೆ,
ಗೆಳೆಯ ಸೇವಕರಂತೆ ನಾವವರನೆಂದೆಂದು ಸೇವಿಸಂತೆ.

ಆಗೋಣ ಆತ್ಮತ್ಯಾಗದ ಸಾಕಾರ ನಾವು,
ಆಗೋಣ ಮರ್ತ್ಯರೂಪದ ದೇವತ್ವ ನಾವು ;
ಆಗೋಣ ವಿನಯವೇ ಮೈದಾಳಿ ಬಂದಂತೆ,
ಈ ನಾಡ ಪರಿಯನರಿಯೆ ನಾವು,
ಆದನಧಿಕ ತರವಾಗಿ ಪ್ರೀತಿಸಲು ನಾವು.

೧

ಗಾಂಧೀ ಸಾಹಿತ್ಯ - ವಾಙ್ಮಯ ತಪಸ್ಸು

ಮಹಾತ್ಮಾ ಗಾಂಧೀಜಿ ತಮ್ಮ ಆತ್ಮಕಥೆ ಗ್ರಂಥಕ್ಕೆ ಪ್ರಸ್ತಾವನೆ ಬರೆಯುತ್ತಾ ಹೀಗೆ ಹೇಳಿದ್ದಾರೆ: "ನಾನು ಸಾಧಿಸಬೇಕೆಂದಿರುವುದು—ಈ ಮೂವತ್ತು ವರ್ಷಗಳಿಂದ ತೀವ್ರ ಬಯಸಿ ಸಾಧಿಸಲು ಯತ್ನಿಸುತ್ತಿರುವುದು—ಆತ್ಮ ಸಾಕ್ಷಾತ್ಕಾರ, ಈಶ್ವರನ ಪ್ರತ್ಯಕ್ಷ ದರ್ಶನ ಅಥವಾ ಮೋಕ್ಷ. ನನ್ನ ಬಾಳು, ಕ್ರಿಯೆ ಮತ್ತು ಇರವು ಎಲ್ಲವೂ ಈ ಗುರಿಯ ಸಾಧನೆಗಾಗಿಯೇ. ನನ್ನ ಮಾತು, ಬರೆಹ ಮತ್ತು ರಾಜಕೀಯ ಕ್ಷೇತ್ರದಲ್ಲಿ ಎಲ್ಲ ಪ್ರಯತ್ನಗಳ ಗುರಿ ಇದೇ ಆಗಿದೆ."[1] ಗಾಂಧೀಜಿಯ ಜೀವನ, ಕೃತಿ ಮತ್ತು ವಿಚಾರ ಇವುಗಳ ಬಗೆಗೆ ಏನನ್ನು ಅರ್ಥಮಾಡಿಕೊಳ್ಳಬೇಕಾದರೂ ಮೇಲಿನ ಮಾತು ಕೀಲಿಕೈಯಂತಿದೆ. ಎಲ್ಲದರ ಗುರಿಯೂ ಆತ್ಮ ಸಾಕ್ಷಾತ್ಕಾರವೇ. ಅವರೇ ಮುಂದೆ ಅದೇ ಪ್ರಸ್ತಾವನೆಯಲ್ಲಿ ಹೇಳಿರುವಂತೆ, ಈ ಆತ್ಮ ಸಾಕ್ಷಾತ್ಕಾರ 'ಸತ್ಯಶೋಧನೆ'. ಆ ಸತ್ಯ ಯಾವುದು? ಇದಕ್ಕೆ ಅವರೇ ಹೀಗೆ ಉತ್ತರವಿತ್ತಿದ್ದಾರೆ: "ಈ ಸತ್ಯ ಬರಿಯ ವಾಕ್‌ಸತ್ಯ ಮಾತ್ರವಲ್ಲ. ಇದು ಆಲೋಚನೆಯ ಸತ್ಯ ಸಹ. ಇದು ನಮಗೆ ತಿಳಿದಿರುವ ಸಾಪೇಕ್ಷ ಸತ್ಯ ಮಾತ್ರವಲ್ಲ, ಇದು ಸನಾತನ ಸತ್ಯ, ಅಂದರೆ ಪರಮಾತ್ಮ. ದೇವರ ಲಕ್ಷಣಗಳು ಅನಂತ

---

1. ಆತ್ಮಕಥೆ: ಪುಟ ೩.

ವಾಗಿವೆ. ಏಕೆಂದರೆ ಅವನ ವಿಭೂತಿಯೂ ಅನಂತವೇ. ಅವುಗಳನ್ನು ಕಂಡು ನಾನು ಆಶ್ಚರ್ಯ ಮತ್ತು ಭಯಮಗ್ನನಾಗುತ್ತೇನೆ. ಒಂದು ಕ್ಷಣ ನಿಶ್ಚೇಷ್ಟಿತ ನಾಗುತ್ತೇನೆ. ಆದರೆ ನಾನು ದೇವರನ್ನು ಸತ್ಯವೆಂದೇ ಉಪಾಸಿಸುತ್ತೇನೆ . . . ಪರಮ ಸತ್ಯದ ಸಾಕ್ಷಾತ್ಕಾರ ಆಗುವವರೆಗೆ, ನಾನು ಅರಿತಿರುವ ಸಾಪೇಕ್ಷ ಸತ್ಯವನ್ನೇ ನಂಬಬೇಕು. ಅಲ್ಲಿಯವರೆಗೆ ಈ ಸಾಪೇಕ್ಷ ಸತ್ಯವೇ ನನ್ನ ದಾರಿ ದೀಪ, ಗುರಾಣಿ ಮತ್ತು ವಜ್ರಕವಚ."[1]

ಜೀವನದ ಅನುಭವಗಳಿಂದ ದೊರಕುವ ಸಾಪೇಕ್ಷ ಸತ್ಯದ ಆಧಾರ ದಿಂದಲೇ ಪರಮ ಸತ್ಯದ ಕಡೆಗೆ ನಿಶ್ಚಲ ನಂಬಿಕೆಯಿಂದ ನಡೆದರು ಗಾಂಧೀಜಿ. ಮಹತ್ತರ ಸಮಸ್ಯೆಗಳು ಇದಿರಿಗೆ ನಿಂತಾಗ—ವೈಯಕ್ತಿಕ ಜೀವನದಲ್ಲಾಗಲೀ, ಸಾರ್ವಜನಿಕ ಜೀವನದಲ್ಲಾಗಲೀ—ಈ ಸಾಪೇಕ್ಷ ಸತ್ಯ ತಮ್ಮನ್ನು ಪರಮ ಸತ್ಯದೆಡೆಗೆ ಒಯ್ಯುತ್ತದೆಂಬ ಶ್ರದ್ಧೆ, ನಿಷ್ಠೆ ಅವರಲ್ಲಿತ್ತು. ಸಾಪೇಕ್ಷ ಸತ್ಯ ಸಾಧನೆ ಅವರ ಭಾಗದ ನಿರಂತರ ತಪಸ್ಸೇ ಆಗಿತ್ತು. ಅದರ ಒಂದು ರೂಪ ವಾದ ವಾಕ್ ಶುದ್ಧವಾದಷ್ಟೂ, ಪ್ರಾಮಾಣಿಕವಾದಷ್ಟೂ, ಋಜುವಾದಷ್ಟೂ, ಸಾಕ್ಷೀಭೂತವಾದಷ್ಟೂ ತಾವು ಪರಮ ಸತ್ಯದೆಡೆಗೆ ಗಮಿಸಿದಂತೆ ಎಂದು ಅವರು ನಂಬಿದ್ದರು. ಆದುದರಿಂದ ಕಾಯೇನ ವಾಚಾ, ಮನಸಾ ಅವರು ಸತ್ಯನಿಷ್ಠರೇ ಆಗಿದ್ದರು. ಅಹಿಂಸಾ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರ ಶ್ರಮ, ಅಸ್ವಾದ ಈ ನಿಯಮಗಳ ಪರಿಪಾಲನೆ ಸತ್ಯಸಾಕ್ಷಾತ್ಕಾರಕ್ಕೆ ಅವರಿಗೆ ನೆರವಾಗಿ ದ್ದುವು. ಈ ಸಾಧನಪಥದಲ್ಲಿ ಮಾತು, ಬರೆಹ, ವಾಙ್ಮಯ ಅವರಿಗೆ ಒಂದು ಪ್ರಧಾನ ಅಂಶವಾಗಿತ್ತು. ಅದು ಉದ್ವೇಗರಹಿತವಾಗಿತ್ತು, ನಿಜವನ್ನೇ ಅವಲಂಬಿಸಿತ್ತು, ಪ್ರಿಯವಾಗಿ ಹಿತಕರವಾಗಿತ್ತು. ಅವರ ಬದುಕಿನಲ್ಲಿ, ಅವರು ಸಂಪರ್ಕ ಹೊಂದಿದ್ದು, ಸದಾ ಉತ್ತಮಪಡಿಸಲು ಪ್ರಯತ್ನಿಸುತ್ತಿದ್ದ ಸಮಾಜ ದಲ್ಲಿ, ಮಾನವೀಯ ಸಂಬಂಧಗಳಲ್ಲಿ, ಈ ಎಲ್ಲದರಲ್ಲಿಯೂ ಇದೇ ಮಾತಿನ ತಪಸ್ಸು ಸಾಗಿತ್ತು. ಅವರು ಮಾತನಾಡಿದುದು, ಬರೆದುದು, ಯಾವುದೂ ಕೇವಲ ಮಾತಿಗಾಗಿ, ಬರೆಹಕ್ಕಾಗಿ ಆಗಿರಲಿಲ್ಲ. ಆದುದರಿಂದ ಅವರ ಮಾತಿಗೆ, ಬರೆಹಕ್ಕೆ ಮಂತ್ರಶಕ್ತಿ ಬಂದಿತು.

---

1. ಆತ್ಮಕಥೆ: ಪುಟ ೫.

ಸದಾ ಸರ್ವಭಾವಗಳಲ್ಲಿಯೂ ಸತ್ಯವನ್ನೇ ಅರಸಿ, ಕಾಣಲು ಹವಣಿಸಿದ ಗಾಂಧೀಜಿಗೆ ಸತ್ಯದ ಸೊಗಸು-ಸತ್ವ ಇವುಗಳನ್ನು ವ್ಯಕ್ತಪಡಿಸುವುದೇ ಉದ್ದೇಶವಾಗಿರುತ್ತಿತ್ತು. ಅದು ಮಾತಿನ ಕಲೆಯ ರೂಪವನ್ನು ಪಡೆಯ ದಿದ್ದರೂ, ಕಲೆಯ ಸೌಂದರ್ಯ ಸಹಜವಾಗಿಯೇ ಅದರಲ್ಲಿ ಮೂಡಿಬರುತ್ತಿತ್ತು ; ಪರಿಶ್ರಮ, ಕೃತಕತೆ ಇವುಗಳಿಂದ ಅದು ದೂರವಿರುತ್ತಿತ್ತು. 'ನುಡಿದೊಡೆ ಲಿಂಗ ಮೆಚ್ಚಿ ಅಹುದೆನಬೇಕು' ಎಂಬ ಬಸವೇಶ್ವರರ ವಚನದ ಸತ್ಯವನ್ನು ಅವರ ಮಾತಿನಲ್ಲಿ ಕಂಡು ಅನುಭವಿಸಬಹುದು.

ಮಾತು 'ನಾರಿಕೇಳಪಾಕ'ವಾಗುವುದುಂಟು ; 'ದ್ರಾಕ್ಷಾಪಾಕ' ವಾಗುವುದುಂಟು. ನಾರಿಕೇಳಪಾಕ ಅದರ ಹೆಸರೇ ಸೂಚಿಸುವಂತೆ ಗಡಸು ; ಅನುಭವಿಸಲು ಪ್ರಯಾಸಬೇಕು. ದ್ರಾಕ್ಷಾಪಾಕ ಹಾಗಲ್ಲ; ಅದು ದ್ರಾಕ್ಷಿ ಯಂತೆ ನೇರವಾಗಿ, ಪ್ರಯಾಸವಿಲ್ಲದೆ, ಸ್ವಾದವನ್ನು ಅನುಭವಿಸಲು ಯೋಗ್ಯ ವಾದುದು. ಗಾಂಧೀಜಿಯ ಮಾತು ದಾಕ್ಷಾಪಾಕದಂಥದು. ಭಾರತದ ಕೋಟ್ಯಂತರ ಶ್ರೀ ಸಾಮಾನ್ಯರ ಹೃದಯ ಪ್ರವೇಶಮಾಡಿ, ಅಲ್ಲಿ ಪರಿವರ್ತನೆ ತರಬೇಕೆಂಬುದು, ಅರಿವನ್ನು ಮೂಡಿಸಬೇಕೆಂಬುದು, ಅವರ ಪ್ರತ್ಯಕ್ಷ ಗುರಿ ಯಾಗಿತ್ತು. ವೇಷಭೂಷಣದಲ್ಲಿ, ಆಹಾರದಲ್ಲಿ ಭಾರತದ 'ದರಿದ್ರ ನಾರಾ ಯಣರ' ಪ್ರತಿನಿಧಿಯಾಗಬೇಕೆಂದೂ, ಅವರ ಜೀವನ-ಭಾವನೆ ಇವುಗಳಲ್ಲಿ ಸಮರಸರಾಗಬೇಕೆಂದೂ ಬಯಸಿದರು ಗಾಂಧೀಜಿ. ದೀನ-ದುಃಖ-ದರಿದ್ರರ ಅಳಲು ಅವರ ಹೃದಯದಲ್ಲಿ ಸದಾ ಪ್ರತಿಧ್ವನಿಸುತ್ತಿತ್ತು ; ಅವರ ಕಣ್ಣೆದುರಿಗೆ ನಿರ್ಭಾಗ್ಯ, ಹತಾಶ, ತೇಜೋಹೀನ, ಮೂಕಪಶುವಿನಂತಹ ಮುಗ್ಧ ಜನ ಸ್ತೋಮದ ಚಿತ್ರವೇ ಸದಾ ನಿಂತಿರುತ್ತಿತ್ತು. ಅವರು ಹಗಲಿರುಳು ಪ್ರಾರ್ಥನೆ ಯಲ್ಲಿ ಹೇಳುತ್ತಿದ್ದ—'ನತ್ವಹಂ ಕಾಮಯೇ ರಾಜ್ಯಂ ನಸ್ಸ್ವರ್ಗಂ ನಾಪುನ ರ್ಭವಂ | ಕಾಮಯೇ ದುಃಖ ತಪ್ತಾನಾಂ ಪ್ರಾಣಿನಾಂ ಆರ್ತಿನಾಶನಂ || (ನಾನು ರಾಜ್ಯವನ್ನು ಬಯಸೆ, ಸ್ವರ್ಗವನ್ನು ಬಯಸೆ, ಮರುಹುಟ್ಟೂ ಇಲ್ಲ ದಿರುವ ಸ್ಥಿತಿಯನ್ನೂ ನಾನು ಬಯಸೆ, ದುಃಖತಪ್ತರಿಗೂ, ಆರ್ತತೆಗೆ ತುತ್ತಾದ ಪ್ರಾಣಿಮಾತ್ರಕ್ಕೂ ಸಾಂತ್ವನ ನೀಡುವುದನ್ನು ಮಾತ್ರ ಬಯಸುತ್ತೇನೆ) ಎಂಬ ಭಾವವೇ ಅವರ ಎಲ್ಲ ಕಾಲದ ಎಲ್ಲ ಕ್ರಿಯೆಗಳಲ್ಲೂ ತುಂಬಿರುತ್ತಿತ್ತು. ಒಮ್ಮೆ ಹೀಗೆ ಹೇಳಿದರು : 'ಹನುಮಾನ್ ತನ್ನೆದೆಯಲ್ಲಿ ರಾಮಚಂದ್ರನಲ್ಲದೆ ಬೇರೆ

ಏನೂ ಇಲ್ಲವೆಂದು ತೋರಿಸಲು ಅದನ್ನು ಸೀಳಿದ. ಹನುಮಾನ್‌ನಲ್ಲಿ ಇದ್ದಂಥ ಆ ಬಗೆಯ ಹೃದಯವನ್ನು ಸೀಳಿ ತೋರಿಸುವ ಶಕ್ತಿ ನನ್ನಲ್ಲಿಲ್ಲ; ಆದರೆ ನಿಮ್ಮಲ್ಲಿ ಯಾರಾದರೂ ಆ ರೀತಿ ಮಾಡಬೇಕೆಂದು ಅಪೇಕ್ಷಿಸಿದರೆ, ಅಲ್ಲಿ ಹಸಿವಿನಿಂದ ತೊಳಲುವ ಭಾರತದ ಲಕ್ಷಾಂತರ ಮುಖಗಳಲ್ಲಿ ನಾನು ಪ್ರತ್ಯಕ್ಷ ಕಾಣುವ ರಾಮಚಂದ್ರನ ಬಗೆಗೆ ಪ್ರೇಮವಲ್ಲದೆ ಬೇರೆ ಏನನ್ನೂ ನೀವು ಕಾಣಲಾರಿರಿ ಎಂದು ಭರವಸೆ ಕೊಡುತ್ತೇನೆ.'[1]

ಈ ಮಾತಿನಲ್ಲಿರುವ ಶಕ್ತಿ ಎಂಥದು? ಹೃದಯವನ್ನು ಹಿಂಡಿ, ಜನತಾ ಜನಾರ್ದನನ ಪಾದತಳದಲ್ಲಿ ಕರುಣಾರ್ದ್ರತೆಯನ್ನು ಅರ್ಪಿಸಿದಂತಿದೆ. ಇಂಥ ಮಾತು ವಾಙ್ಮಯ ತಪಸ್ಸಿನ ಫಲವಲ್ಲದೆ ಬೇರೆ ಏನಿದ್ದೀತು? ಯಾವ ಮಾತಿನ ನಿಪುಣ ಇಂಥದನ್ನು ವ್ಯಕ್ತಪಡಿಸಲು ಸಾಧ್ಯ? ಬದುಕಿನ ಸಮರಸ ಭಾವ, ಜೀವದ ದುಃಖ-ದುಮ್ಮಾನ-ದುಗುಡಗಳಲ್ಲಿ ಸಮಪಾಲುಗೊಳ್ಳಬೇಕೆಂಬ ಉತ್ಕಟ ಇಚ್ಛೆ, ಅವುಗಳಿಗೆ ಅನುಗುಣವಾದ ಮಾತು, ಬರೆಹ, ಕ್ರಿಯೆ ಇವು ಗಾಂಧೀಜಿಯ ಸತತ ಸತ್ಯಾನ್ವೇಷಣೆಯ ಕ್ರತುವಿನ ವ್ಯಕ್ತ ಸ್ವರೂಪಗಳಾಗಿದ್ದುವು. ಇಂಥದರಿಂದ ಹೊಮ್ಮಿಬಂದುದು ಗಾಂಧೀ ಸಾಹಿತ್ಯ. ಇದರ ವೈಶಿಷ್ಟ್ಯಗಳನ್ನೂ ಶಕ್ತಿ ಮತ್ತು ಪ್ರಭಾವಗಳನ್ನೂ ಮುಂದೆ ನೋಡೋಣ.

ಈ ಬಗೆಯ ಸತತ ಸತ್ಯಾನ್ವೇಷಣೆಗೆ ಯುಕ್ತ ಪಥವನ್ನು ಅಹಿಂಸೆ ಅಥವಾ ಪ್ರೇಮದಲ್ಲಿ ಕಂಡುಕೊಂಡರು ಗಾಂಧೀಜಿ. ಸತ್ಯ-ಅಹಿಂಸೆ ಇವು ಅವರ ಜೀವದ ಉಸಿರಾಗಿದ್ದುವು. ಅಹಿಂಸೆಯಿಲ್ಲದೆ ಸತ್ಯಸಾಕ್ಷಾತ್ಕಾರ ಅಸಾಧ್ಯವೆಂದು ಅವರು ನಂಬಿದ್ದರು. ಇವೆರಡೂ ಬೇರೆ ಬೇರೆಯಲ್ಲ. ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ; ಪರಸ್ಪರ ಬಿಡಿಸಲಾಗದ ಸಂಬಂಧವುಳ್ಳವು; ಅನ್ಯೋನ್ಯ ಆಶ್ರಯವುಳ್ಳವು. ಜೀವನವನ್ನು ಸತ್ಯಶೋಧನೆಗೆ ಈಡು ಮಾಡಿದಾಗ ಜಗತ್ತು, ಮಾನವ, ಜೀವ ಎಲ್ಲದರಲ್ಲಿಯೂ ಅವರು ಸ್ಫೂರ್ತಿಯನ್ನು ಕಾಣಲು ಬಯಸಿದರು. ಆ ಸ್ಫೂರ್ತಿ ಅಹಿಂಸೆಯಿಂದ-ಪ್ರೇಮದಿಂದ ಉದ್ಭವಿಸಿದುದಾಗಿತ್ತು. ಮನಸ್ಸಿನಲ್ಲಿ, ಮಾತಿನಲ್ಲಿ, ಕೃತಿಯಲ್ಲಿ ಹಿಂಸಾ

---

1. ಯಂಗ್ ಇಂಡಿಯಾ: ೨೪-೩-೨೭; ಪು. ೯೩.

ವಿಮುಖತೆಯೂ ಅದರ ಜತೆಜತೆಗೆ ಪ್ರೇಮವನ್ನು ಬೆಳಸಿ, ವಿಸ್ತರಿಸುವುದೂ ಅವರ ಸಕಲ ಕಾರ್ಯಗಳ ಹಿಂದಿನ ಉದ್ದೇಶವಾಗಿರುತ್ತಿತ್ತು. ಈ ಬಗೆಯ ಜೀವನ ದರ್ಶನದಿಂದ, ಜೀವನತತ್ವದಿಂದ ಅವರು ಸದಾ ಪ್ರೇರಣೆ ಪಡೆದು, ವಿಶಾಲ ಬದುಕಿನ ಪಥದಲ್ಲಿ ಎಂದಿಗೂ ಯಾವುದಕ್ಕೂ ಆಶಾಭಗ್ನರಾಗದೆ ಮುಂದೆ ಮುಂದೆ ಸಾಗುತ್ತಿದ್ದರು. ಸೋಲು-ವಿಫಲತೆ ಕಣ್ಣೆದುರಿಗೆ ನಿಂತಾಗಲೂ ಅಧೀರರಾಗದೆ ಏಕಾಂಗಿಯಾದರೂ ತಮ್ಮ ನಿಶ್ಚಿತ ಮಾರ್ಗಕ್ರಮಣ ಮಾಡುವ ಚೈತನ್ಯ ಅವರಲ್ಲಿ ಮೂಡಿಬರುತ್ತಿತ್ತು. ಮಾತು, ಬರೆಹ ಅವರ ಹೃದಯಾಂತರಾಳದ ಭಾವ-ಅನುಭಾವಗಳಿಗೆ ಸಾಕಾರ ರೂಪ ಕೊಡುತ್ತಿತ್ತು. ಇದು ಅವರನ್ನು ಪ್ರತ್ಯಕ್ಷ ನೋಡದವರ ಮೇಲೂ ಪ್ರಭಾವ ಬೀರುತ್ತಿತ್ತು. ಫ್ರಾನ್ಸಿನ ಸಂತ-ವಿಚಾರಜ್ಞ, ರೋಮೇ ರೋಲಾ ಇಂಥ ಪ್ರಭಾವಕ್ಕೆ ಒಳಗಾಗಿದ್ದರು. ೧೯೨೪ರಷ್ಟು ಹಿಂದೆಯೇ ಅವರು ಫ್ರೆಂಚ್ ಭಾಷೆಯಲ್ಲಿ ಗಾಂಧೀ ಕುರಿತು ಬರೆದ ಗ್ರಂಥ ಒಂದು ನಿದರ್ಶನ. ಲಿಯೋ ಬ್ಲಂ ಎಂಬಾತ ಫ್ರಾನ್ಸಿನ ಪ್ರಧಾನಿಯಾಗಿದ್ದ. ಗಾಂಧೀಜಿ ಮರಣಹೊಂದಿದ ಕಾಲದಲ್ಲಿ ಆತ ನುಡಿದ ಈ ಮಾತು ಗಾಂಧೀಜಿಯ ಪ್ರಭಾವವನ್ನು ತೋರಿಸುತ್ತದೆ. "ನಾನು ಗಾಂಧಿಯನ್ನು ನೋಡಿಯೇ ಇರಲಿಲ್ಲ; ಅವರ ಭಾಷೆಯೂ ನನಗೆ ಗೊತ್ತಿಲ್ಲ. ಅವರ ದೇಶಕ್ಕೆ ನಾನೆಂದೂ ಹೋಗಿದ್ದವನಲ್ಲ, ಆದರೂ ನನಗೆ ಅತ್ಯಂತ ಸಮೀಪದವರೂ ಅತ್ಯಂತ ಪ್ರೀತಿಪಾತ್ರರೂ ಆದವರನ್ನು ಕಳೆದುಕೊಂಡಂತೆ ಭಾಸವಾಗುತ್ತದೆ. ಈ ಮಹಾ ವ್ಯಕ್ತಿಯ ಮರಣದಿಂದ ಇಡಿಯ ಜಗತ್ತು ಶೋಕಸಾಗರದಲ್ಲಿ ಮುಳುಗಿದೆ."[1]

ಗಾಂಧೀಜಿ ತಮ್ಮ ಸತ್ಯ ನಿಷ್ಠೆ ಮತ್ತು ಪ್ರೇಮ ಹಾಗೂ ಅಹಿಂಸಾ ಅಥವಾ ಜೀವಕಾರುಣ್ಯ ಇವುಗಳಿಂದ ಆಧುನಿಕ ಕಾಲದಲ್ಲಿ ಜಗತ್ತಿನ ಮೇಲೆ ತಮ್ಮ ವ್ಯಕ್ತಿತ್ವದ, ಆತ್ಮಶಕ್ತಿಯ ಅಸ್ಖಲಿತ ಮುದ್ರೆಯನ್ನು ಒತ್ತಿದ್ದರು. ಇದನ್ನು ಮಹಾವೇದಾಂತಿ ಡಾ. ರಾಧಾಕೃಷ್ಣನ್ ಅವರು ವ್ಯಕ್ತಪಡಿಸಿರುವುದಕ್ಕಿಂತ ಹೆಚ್ಚು ಉತ್ತಮವಾಗಿ ವ್ಯಕ್ತಪಡಿಸುವುದು ಸುಲಭವಲ್ಲ: "ಮಾನವ ಸ್ವಭಾವಕ್ಕೆ ಸಾಧ್ಯವಾಗುವ ಸರ್ವೋತ್ಕೃಷ್ಟ ಆದರ್ಶಗಳನ್ನು ಹೊಂದಿ, ಅವು

---

1. Mahatma Gandhi : Descriptive Bibliography; p : xiv.

ಗಳಿಂದ ಸ್ಫೂರ್ತಿ ಪಡೆದು, ತಾವು ಕಂಡ ಸತ್ಯವನ್ನು ನಿರ್ಭೀತರಾಗಿ ಬೋಧಿಸುತ್ತಾ ಆಚರಿಸುತ್ತಾ, ಎಲ್ಲಿ ಭರವಸೆಗಳೂ ಅಳಿದವೋ ಎನ್ನುವಂತಿದ್ದರೂ, ದುರಾಶೆ ಮತ್ತು ಮೌಢ್ಯ ಇವುಗಳ ಅಭೇದ್ಯ ನೆಲೆಗಳ ಮೇಲೆ ಏಕಾಂಗಿಯಾಗಿಯೇ ಸೆಣಸುತ್ತಾ, ವಿಡಂಬನೆ ಮತ್ತು ಅಪಾಯಗಳಿಗೆ ಸ್ವಲ್ಪವೂ ಸೋಲದೆ, ಮಹಾ ವಿಪತ್ತುಗಳನ್ನು ಸ್ಥಿರವಾಗಿ ಎದುರಿಸಿದ ಗಾಂಧೀಜಿ, ಈ ಸಂಶಯಗ್ರಸ್ಥ ಜಗತ್ತಿಗೆ, ಮಾನವನ ಆತ್ಮದ ಪರಮ ಘನತೆಯನ್ನು ಸಾದೃಶ್ಯಗೊಳಿಸಿದರು."[1] ಈ ಮಹೋನ್ನತ ಕಾರ್ಯ ಸಾಧಿಸುವುದಕ್ಕೆ ಗಾಂಧೀಜಿಯ ಮಾತು ಮತ್ತು ಬರೆಹ ಇವುಗಳ ಪಾತ್ರ ಕಡಿಮೆಯೇನಲ್ಲ.

---

1. Mahatma Gandhi ; Descriptive Bibliography; pages: xiii-xiv.

೨

ಗಾಂಧೀ ಸಾಹಿತ್ಯ–ಒಂದು ವಿವರಣೆ

ಮಹಾಸಂತ, ಮಹಾತ್ಮಾ ಎಂದು ಲೋಕಪ್ರಸಿದ್ಧರಾದ ಗಾಂಧೀಜಿ ಸಾಹಿತಿಗಳೇ? ಅವರದೆನ್ನುವ ಸಾಹಿತ್ಯವುಂಟೆ? 'ಗಾಂಧೀ ಸಾಹಿತ್ಯ'ವೆಂದಾಗ, ಈ ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ಇದಕ್ಕೆ ಉತ್ತರ, 'ಸಾಹಿತ್ಯ' ಎಂಬುದರ ವಿವರಣೆಯನ್ನು ಅವಲಂಬಿಸಿದೆ.

ವಿಶಾಲವಾದ ಅರ್ಥದಲ್ಲಿ 'ಸಾಹಿತ್ಯ' ಎಂದರೆ ಒಂದು ಭಾಷೆಯಲ್ಲಿ ದೊರಕುವ ವಿವಿಧ ಗ್ರಂಥ ಸಮೂಹವೆಂದು ಹೇಳಬಹುದು; ಹಾಗೆಯೇ ಪರಿಮಿತವಾದ ಅರ್ಥದಲ್ಲಿ ನಾನಾ ಶಾಸ್ತ್ರಗಳಿಂದ ಭಿನ್ನವಾದ, ರಸವತ್ತಾದ, ಮನೋರಂಜಕವಾದ, ಮಿಗಿಲಾಗಿ ಆತ್ಮೋತ್ಕರ್ಷಕವಾದ ಕಥೆ, ಕಾದಂಬರಿ, ನಾಟಕ, ಕಾವ್ಯ ಇವುಗಳಿಂದ ಕೂಡಿದ ಗ್ರಂಥ ಸಮೂಹವನ್ನು ಸಾಹಿತ್ಯ ಎನ್ನುವುದು ವಾಡಿಕೆ. ಅದನ್ನು ರಚಿಸಿದವರು ಸಾಹಿತಿಗಳು, ಅವರ ಕೃತಿಗಳು ಸಾಹಿತ್ಯ ಕೃತಿಗಳು. ಅವು ರಸಕೃತಿಗಳು; ಅವು ಅನುಭವಕ್ಕೆ ಬಂದ ಸೌಂದರ್ಯವನ್ನು ಮಾತಿನ ಮೂಲಕ ವ್ಯಕ್ತಪಡಿಸುತ್ತವೆ.

ಇವುಗಳಲ್ಲಿ ಮೊದಲನೆಯ ದೃಷ್ಟಿಯಿಂದ ನೋಡಿದಾಗ, ಗಾಂಧೀಜಿ ಯಾವ ಶಾಸ್ತ್ರ ಗ್ರಂಥವನ್ನೂ ರಚಿಸಿದವರಲ್ಲ. ಎರಡನೆಯ ದೃಷ್ಟಿಯಿಂದ ನೋಡಿದಾಗಲೂ ಅವರು ರಸಪ್ರಧಾನವಾದ, ಮನೋರಂಜಕವಾದ ಯಾವು

ದೊಂದು ಕೃತಿಯನ್ನೂ ರಚಿಸಿದವರಲ್ಲ. ಆದುದರಿಂದ 'ಗಾಂಧೀ ಸಾಹಿತ್ಯ' ಎಂಬ ಮಾತು ಹೇಗೆ ಸಲ್ಲುತ್ತದೆ? ಇದಕ್ಕೆ ವಿವರಣೆ ಅಗತ್ಯ.

ಶಾಸ್ತ್ರಸಾಹಿತಿ ಜೀವನದ ಬಹಿರಂಗ ವಿಷಯಗಳನ್ನು ಕುರಿತು ವಿಶ್ಲೇಷಿಸುತ್ತಾನೆ. ಕಾರ್ಯ, ಕಾರಣ ಕುರಿತು ವಿವೇಚಿಸಿ ವಿವರಿಸುತ್ತಾನೆ. ರಸಸಾಹಿತಿ ಜೀವನದ ಅಂತರಂಗ ವ್ಯಾಪಾರದ, ಪ್ರಧಾನವಾಗಿ ಮಾನವ ಹೃದಯದ ಪ್ರತಿಕ್ರಿಯೆಗಳನ್ನು ತನ್ನ ಕೃತಿಗಳಲ್ಲಿ ಸೆರೆಹಿಡಿದು ತೋರಿಸುತ್ತಾನೆ. ಶಾಸ್ತ್ರ ಸಾಹಿತಿಯಾದರೋ ಬುದ್ಧಿ, ಮನಸ್ಸು, ವಿಚಾರಪರತೆ ಇವುಗಳನ್ನು ಕೆರಳಿಸುತ್ತಾನೆ; ಅವುಗಳಿಂದ ಜೀವನದ ಅರ್ಥವನ್ನು ಅರಿತುಕೊಳ್ಳಲು ನೆರವಾಗುತ್ತಾನೆ.

ಗಾಂಧೀಜಿ ವ್ಯಕ್ತಿ ಜೀವನದ ಹಾಗೂ ಸಾಮಾಜಿಕ ಜೀವನದ ಬಹಿರಂಗ-ಅಂತರಂಗ ಜೀವನಗಳೆರಡರ ಬಗೆಗೂ ಆಸಕ್ತಿಯುಳ್ಳವರಾಗಿದ್ದರು; ತಮ್ಮ ಜೀವನವನ್ನೇ ಎರಡೂ ಬಗೆಯ ಜೀವನಗಳ ಪ್ರಯೋಗ ವೇದಿಕೆಯನ್ನಾಗಿ ಮಾಡಿಕೊಂಡರು. ಅವರು ಬಾಹ್ಯ ಜೀವನವನ್ನು ತಿರಸ್ಕರಿಸಲಿಲ್ಲ; ತ್ಯಜಿಸಲಿಲ್ಲ. ಅದು ಸಮೃದ್ಧವಾಗಬೇಕು; ಶಾಂತಿ ಪುಷ್ಟಿ-ತುಷ್ಟಿಗಳು ಅದರಲ್ಲಿ ತುಂಬಿ ತುಳುಕಬೇಕು; ಆದರೆ ಅದು ಅಂತರಂಗ ಜೀವನದ ಮೌಲ್ಯಗಳ ಬೆಳವಣಿಗೆಗೆ ಅಡಚಣೆಯಾಗದೆ ಸಹಾಯಕವಾಗಬೇಕು, ಎಂಬುದು ಅವರ ವಿಚಾರ ಹಾಗೂ ಕ್ರಿಯೆಯ ತಿರುಳಾಗಿತ್ತು. ಆದುದರಿಂದ ಗಾಂಧೀ ವಿಚಾರ ಜೀವನದ ಸಮಗ್ರ ಬೆಳವಣಿಗೆಗೆ ಅಗತ್ಯವೆನಿಸುವ ಎಲ್ಲ ಅಂಶಗಳನ್ನೂ ಒಳಗೊಂಡಿತ್ತು. ಅವರು ಸಂತ ಮನೋಧರ್ಮದವರಾಗಿದ್ದರೂ ರಾಜಕಾರಣದಲ್ಲಿ ಕ್ರಿಯಾತ್ಮಕ-ಕ್ರಾಂತಿಕಾರಕ ಪಾತ್ರ ವಹಿಸಿದರು. ಅರ್ಥವ್ಯವಸ್ಥೆಯ ಬಗೆಗೆ ಯೋಚನೆ ಮಾಡಿದರು. ನೈತಿಕ ಹಾಗೂ ಆಧ್ಯಾತ್ಮಿಕ ವಿಕಾಸಕ್ಕೆ ಅಗತ್ಯವಾದ ವಿಷಯಗಳನ್ನು ಎಲ್ಲ ಕ್ರಿಯೆಗಳ ಭದ್ರ ತಳಪಾಯವೆಂದು ವ್ಯವಸ್ಥೆ ಮಾಡಿದರು. ಸಾಮಾಜಿಕ ನ್ಯೂನತೆಗಳನ್ನು ಪರಿಹರಿಸಲು ಕಾರ್ಯೋಪಾಯಗಳನ್ನು ಸಿದ್ಧಗೊಳಿಸಿದರು. ಈ ಕಾರಣಗಳಿಂದ ರಾಜ್ಯಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ಸಮಾಜ ಶಾಸ್ತ್ರಜ್ಞ, ಧಾರ್ಮಿಕ-ನೀತಿ ಶಾಸ್ತ್ರಜ್ಞ, ಶಿಕ್ಷಣ ಶಾಸ್ತ್ರಜ್ಞ ಇವರೆಲ್ಲರೂ, ಗಾಂಧೀ ವಿಚಾರದಲ್ಲಿ—ಅವರ ಜೀವನದಲ್ಲಿ ವ್ಯಕ್ತಪಟ್ಟಂತೆ (ಅವರ ಜೀವನದಲ್ಲಿ ವ್ಯಕ್ತಪಡೆದುದು ಯಾವುದೂ ಮಾತಿನಲ್ಲಿ ಬರಲಿಲ್ಲ)—ತಮ್ಮ

ತಮ್ಮ ಶಾಸ್ತ್ರಗಳಿಗೆ ಮೂಲ ವಿಚಾರಗಳನ್ನು ಕಂಡರು. ಈ ದೃಷ್ಟಿಯಿಂದಲೇ ಗಾಂಧೀಜಿಯವರ ಬರೆವಣಿಗೆಗಳನ್ನು ಪರಿಶೀಲಿಸಿ, ಸಿದ್ಧಾಂತಗಳನ್ನು ರೂಪಿಸಲು ಯತ್ನಿಸಿದ್ದಾರೆ.

ಸತ್ಯ, ಅಹಿಂಸೆಗಳ ಮೂಲ ವೇದಿಕೆಯ ಮೇಲೆ ಜೀವನದ ಸಮಗ್ರ ಸಮತೂಕದ ಚೌಕವೊಂದನ್ನು ಗಾಂಧೀಜಿ ದೃಷ್ಟಿಸಿದರು. ಅವರು ಅದನ್ನು 'ಸ್ವರಾಜ್ಯದ ಚೌಕ' (The Square of Swaraj) ಎನ್ನುತ್ತಿದ್ದರು. ಆತ್ಮ ಸಾಕ್ಷಾತ್ಕಾರಕ್ಕೂ ಆದರ್ಶ ಸಮಾಜಕ್ಕೂ ಅಗತ್ಯವಾದ ಪ್ರೇಮ, ಬಲ, ಜ್ಞಾನ, ಅನ್ನ ಇವುಗಳ ಸುತ್ತ ಸಮಾಜ ಶಾಸ್ತ್ರ, ಶರೀರ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಅರ್ಥಶಾಸ್ತ್ರ ಇವೆಲ್ಲ ಅಲ್ಲಿ ಕಾರ್ಯಕಾರಣ ರೂಪದಿಂದ ಗೋಚರಿಸುತ್ತವೆ. ಗಾಂಧೀಜಿ ರೂಪಿಸಿದ ನಿರ್ಮಾಣ ಕಾರ್ಯಕ್ರಮಗಳು ಇವುಗಳ ವಿವಿಧ ಅಂಗಗಳು. ಸಾಮಾಜಿಕ ಸಂಬಂಧಗಳು ಪ್ರೇಮಾಧಾರಿತವಾಗಿರಬೇಕು. ಆದುದರಿಂದ ಅಸ್ಪೃಶ್ಯತಾ ನಿವಾರಣೆ, ಸರ್ವಧರ್ಮ ಸಮಭಾವ, ಸತ್ಯಾಗ್ರಹ, ಗ್ರಾಮ ಸ್ವರಾಜ್ಯ, ಮಹಿಳೆಯರ ಮೇಲ್ಮೆ ಮತ್ತು ಆದಿವಾಸಿಗಳ-ಗಿರಿವಾಸಿಗಳ ಉದ್ಧಾರ ಇವು ಕಾರ್ಯಕ್ರಮಗಳಾದವು. ಹೀಗೆಯೇ ಅನ್ನೋತ್ಪಾದನೆ, ಅದರ ಉಪಭೋಗ, ಹಂಚಿಕೆ ಇವು ಪ್ರಧಾನವಾದ ಅರ್ಥಶಾಸ್ತ್ರಕ್ಕೆ ಆರ್ಥಿಕ ಸಮತೆ, ಗ್ರಾಮೋದ್ಯೋಗಗಳು, ಸ್ವದೇಶಿ, ಕಾರ್ಮಿಕರ ಮೇಲ್ಮೆ, ಆರ್ಥಿಕ ಧರ್ಮದರ್ಶಿತ್ವ ಇವು ಕಾರ್ಯಕ್ರಮಗಳಾದವು. ಜ್ಞಾನಪ್ರಧಾನವಾದ ಶಿಕ್ಷಣ ಶಾಸ್ತ್ರಕ್ಕೆ ವಯಸ್ಕರ ಶಿಕ್ಷಣ, ವಿದ್ಯಾರ್ಥಿ ಸೇವೆ, ಮೂಲ ಶಿಕ್ಷಣ, ರಾಷ್ಟ್ರೀಯ ಭಾಷೆ, ಪ್ರಾಂತೀಯ ಭಾಷೆಗಳ ಅಭಿವೃದ್ಧಿ ಇವುಗಳೂ ವ್ಯಕ್ತಿಯ ಹಾಗೂ ಸಮಾಜದ ಗುಣೋತ್ಕರ್ಷಕ್ಕೆ ಏಕಾದಶ ವ್ರತಗಳಿಂದ ಕೂಡಿದ ಆಶ್ರಮ ಜೀವನವೂ ಕಾರ್ಯಕ್ರಮಗಳಾದವು. ಬಲವರ್ಧಕವಾದ ಶರೀರ ಶಾಸ್ತ್ರಕ್ಕೆ ಪ್ರಕೃತಿ ಚಿಕಿತ್ಸೆ, ಅನ್ನಕಾಯಕ ಅಥವಾ ಶರೀರಶ್ರಮ, ಮದ್ಯಪಾನ ನಿಷೇಧ, ವೈಯಕ್ತಿಕ ಸ್ವಚ್ಛತೆ, ಗ್ರಾಮ ನೈರ್ಮಲ್ಯ ಇವು ಕಾರ್ಯಕ್ರಮಗಳಾದವು, ಹೀಗೆ ಬದುಕಿನ ಎಲ್ಲ ವೃತ್ತಗಳನ್ನೂ ಕಳಕಳಿಯಿಂದ ಸ್ಪರ್ಶಿಸಿದ ಸತ್ವಯುತ ಕಾರ್ಯಕ್ರಮವನ್ನು ನೀಡಿದ ಗಾಂಧೀ ವಿಚಾರ ಪ್ರಧಾನ ಶಾಸ್ತ್ರ ವಿಚಾರಗಳಿಂದ ತುಂಬಿರುವುದರಿಂದ ಅದನ್ನು ಶಾಸ್ತ್ರ ಸಾಹಿತ್ಯವೆಂದು ಪರಿಗಣಿಸಲು ಅಡ್ಡಿಯೇನು ? ಇದು ಗಾಂಧೀ ಸಾಹಿತ್ಯದ ಒಂದು ಮುಖ.

ಗಾಂಧೀಜಿ ವ್ಯಕ್ತಿ ಜೀವನವನ್ನ, ಸಮಾಜ ಜೀವನವನ್ನ ಒಂದು ಸುಂದರ ಕಲೆಯಂತೆ ವಿಕಾಸಗೊಳಿಸಬೇಕೆಂಬ ಆದರ್ಶದಿಂದ ಕೂಡಿದ್ದರು. ರಸಸಾಹಿತ್ಯಕ್ಕೆ ಮೂಲಾಧಾರವಾದ ಈ ಜೀವನವೇ ರಸಭರಿತವಾಗಬೇಕೆಂದೂ ಅದು ಶುಷ್ಕವಾಗಬಾರದೆಂದೂ, ನೋವು-ತಾಪ-ದಾರಿದ್ರ್ಯ-ಅನ್ಯಾಯ, ಅಸಮತೆ, ಅಜ್ಞಾನ ಇವುಗಳ ಬಗೆಗೆ ಪ್ರತಿಕ್ರಿಯೆ ತೋರಿಸಿ, ಮಾರ್ದವ-ಅನುಕಂಪ-ಉದಾತ್ತತೆ-ತ್ಯಾಗ-ಶಾಂತಿ, ಈ ಭಾವಗಳ ಅಭಿವ್ಯಕ್ತಿ ನಿಜವಾದ ಜೀವನ ಕಲೆಯೆಂದೂ ಅವರು ನಂಬಿದ್ದರು. ಮಾನವನಿಂದ ಮಾನವನಿಗೆ ಆದ ಅನ್ಯಾಯ, ಸಂಘ ಸಂಸ್ಥೆಗಳಿಂದ, ರಾಷ್ಟ್ರಗಳಿಂದ, ಜನಾಂಗಗಳಿಂದ ಜನಾಂಗಗಳಿಗೆ ಆದ ಅನ್ಯಾಯ, ದಬ್ಬಾಳಿಕೆ, ಶೋಷಣೆ, ಇವುಗಳ ಬಗೆಗೆ ಸ್ಪಂದನವಾಗುವ, ಅದಕ್ಕೆ ಅನುಗುಣವಾಗಿ ಕಾರ್ಯೋನ್ಮುಖವಾಗಲು ಪ್ರೇರಣೆ ನೀಡುವ ಬಾಳನ್ನು ಉಪಯುಕ್ತ ಹಾಗೂ ನಿರ್ದುಷ್ಟ ಚೆಲುವಿನ, ಆನಂದದ ಆಗರವನ್ನಾಗಿ ಮಾಡುವ ಸಾಹಿತ್ಯವು ರಸಸಾಹಿತ್ಯವೆಂದು ಅವರು ಪರಿಗಣಿಸಿದ್ದರು. ರಸಸಾಹಿತ್ಯವೆನ್ನುವುದು ಮಾನವನ ಹೃದಯಾಂತರಾಳವನ್ನು ಹೊಕ್ಕು ಅಲ್ಲಿ ಅಂತರ್ಗತವಾಗಿರುವ ಪರಮೋತ್ಕೃಷ್ಟ ಭಾವಗಳನ್ನು ಎಚ್ಚರಗೊಳಿಸುವಂಥದಾಗಬೇಕೆಂದು ಅವರು ಭಾವಿಸಿದ್ದರು.

ಕರ್ಮದ ಮರ್ಮ ಅನಾಸಕ್ತಿಯೆಂದು ಬೋಧಿಸಿದ ಗಾಂಧೀಜಿ ರಾಗದಲ್ಲಿ ವಿರಾಗವನ್ನು ಕಾಣಲು ಹೆಣಗಿದರು. ಬದುಕು ರಸಪೂರ್ಣವಾಗುವಂತೆ, ಎಲ್ಲ ರಸಗಳ ಅಂತಿಮವಾದ ಶಾಂತಿ ರಸದಲ್ಲಿ ಪರ್ಯವಸಾನವಾಗುವಂತೆ ಶ್ರಮಿಸಿದರು. ಜಗದ ಸಾಪೇಕ್ಷ ಸೌಂದರ್ಯ ಅಪ್ರಾಕೃತ ಸೌಂದರ್ಯವನ್ನು ಹೊಂದುವಂತಾಗಬೇಕೆಂದು ಶ್ರಮಿಸಿದರು. ಕವಿ ಸೌಂದರ್ಯವನ್ನು ಕಾಣಲು ಬಯಸಿದರೆ, ಸತ್ಯಾನ್ವೇಷಕ ಗಾಂಧೀ ಸೌಂದರ್ಯದಲ್ಲಿ ಸತ್ಯವನ್ನು ಅರಸಿದರು. ಚೆಲುವು, ಆನಂದ ಸತ್ಯವನ್ನು ಪ್ರತಿಬಿಂಬಿಸದೆ ಇದ್ದರೆ ಅವರಿಗೆ ಅಂಥ ಚೆಲುವು, ಆನಂದ ತ್ಯಾಜ್ಯವೇ ಆಗಿದ್ದಿತು. ಇರವು ಅಥವಾ ಬದುಕು ಸತ್ಯಮಯವಾದರೆ, ಅದು ಸುಂದರ ಹಾಗೂ ಆನಂದದಾಯಕ. ಅದು ಸತ್ಯದಿಂದ ದೂರವಾದರೆ, ಸತ್ಯಬಾಹಿರವಾದರೆ, ವಿಕಾರವೇ ; ಆನಂದವಿಹೀನವೇ. ಕೀಟ್ಸ್ ಕವಿ ಹೇಳಿದ—'ಸುಂದರ ವಸ್ತು ಶಾಶ್ವತ ಆನಂದದ ಆಗರವಾಗಬೇಕು' ಎಂದು. ಅದು ಹೇಗೆ ಶಾಶ್ವತ ಆನಂದದ ಆಗರವಾಗುತ್ತದೆ? ಅದು ಸತ್ ಚಿತ್

ಆನಂದವಾದಾಗ ತಾನೇ? ಎಂದರೆ ಚಿತ್ ಆನಂದ ಈ ಎರಡೂ ಸತ್ಯದ ಆಲಂಬನೆಯನ್ನು, ಆಧಾರವನ್ನು ಹೊಂದಿದಾಗ ಮಾತ್ರ ಎಂದು ಅವರ ವಿಶ್ವಾಸ ವಾಗಿತ್ತು. ಆ ನಿಶ್ಚಲ ವಿಶ್ವಾಸದಿಂದಲೇ ಅವರ ಮಾತು ಹೊಮ್ಮಿ ಬರುತ್ತಿತ್ತು. ಒಂದು ವೇಳೆ ಅದು ಆ ರೀತಿ ಆಗಲಿಲ್ಲವೆಂದು ಅವರಿಗೆ ಗೋಚರವಾದಾಗ ಅವರು ತಮ್ಮ ತಪ್ಪನ್ನು ಬಯಲಿಗೆ ತಂದು, ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡುದುಂಟು. ಇಂಥ ಸಚ್ಚಿದಾನಂದ ಭಾವನೆಯಿಂದ ಕೂಡಿದ ಸಾಹಿತ್ಯ ರಸಸಾಹಿತ್ಯವಲ್ಲವೆ? ಹಾಗೆ ಅನಿಸದೆ?

ಇಲ್ಲಿಯವರೆಗೆ ಸಾಹಿತ್ಯ ಎನ್ನುವುದರ ಎರಡು ದೃಷ್ಟಿಗಳಿಂದ ಗಾಂಧೀ ಜಿಯ ಬರಹ ವಿಚಾರವನ್ನು ಪರಿಶೀಲಿಸಿ, 'ಗಾಂಧೀ ಸಾಹಿತ್ಯ' ಎನಿಸಿಕೊಳ್ಳಲು ಹೇಗೆ ಅದು ಅರ್ಹವಾದೀತು ಎಂಬುದನ್ನು ಪರಿಶೀಲಿಸಲಾಯಿತು. ಈಗ ಇನ್ನೊಂದು ದೃಷ್ಟಿಯಿಂದ ನೋಡೋಣ.

ಗಾಂಧೀಜಿ ಬರೆದುದೆಲ್ಲ ಗದ್ಯರೂಪದ್ದು. ಜನಜೀವನ ಹೇಳಿಕೇಳಿ ಗದ್ಯ ಮಯವೇ. ಆಗಾಗ ಅದು ಕಾವ್ಯಮಯವಾಗಬಹುದು, ಶಾಸ್ತ್ರಮಯವೂ ಆಗಬಹುದು. ಕಾವ್ಯ-ಶಾಸ್ತ್ರ ಬದುಕಿಗೆ ಬೇಕೆನಿಸಿದರೂ ಕೋಟಿ ಕೋಟಿ ಜನಕ್ಕೆ ಅವರಿಗೆ ಅರ್ಥವಾಗುವ ಗದ್ಯವೇ ಹೆಚ್ಚು ಪ್ರಿಯ. ಬದುಕಿನ ಎಲ್ಲ ವ್ಯಾಪಾರಗಳೂ ಸಂಭಾಷಣೆ, ಪತ್ರವ್ಯವಹಾರ, ಪತ್ರಲೇಖನ, ವಿಚಾರ ವಿಮರ್ಶೆ, ವಿವರಣೆ, ಸುಖದುಃಖ ನಿರೂಪಣೆ ಈ ಎಲ್ಲ ಗದ್ಯರೂಪದಲ್ಲೇ ಸಾಗಬೇಕು. ಅದರಲ್ಲಿಯೂ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಿದವರಿಗೂ ಜೀವನಾದರ್ಶ ಉಳ್ಳವರಿಗೂ ಆ ಆದರ್ಶಗಳನ್ನು ಕಾರ್ಯರೂಪಕ್ಕೆ ಇಳಿಸಲು ಉತ್ಕಟವಾಗಿ ಇಚ್ಛಿಸಿ, ಕ್ರಿಯಾಪರರಾದವರಿಗೂ ಈ ಎಲ್ಲ ಸಹಜವೇ. ಗಾಂಧೀಜಿಯ ಸಾರ್ವಜನಿಕ ಜೀವನ ಸುಮಾರು ಆರು ದಶಕಗಳ ಕಾಲ ಏಕ ಪ್ರಕಾರವಾಗಿ ಸಾಗಿತು. ಅವರು ತಮ್ಮ ೨೪ನೆಯ ವಯಸ್ಸಿನಲ್ಲಿ (೧೮೯೩) ದಕ್ಷಿಣ ಆಫ್ರಿಕಾಕ್ಕೆ ಹೋದರು. ಅದೊಂದು ಆಕಸ್ಮಿಕ ಘಟನೆ. ಅವರು ಅಲ್ಲಿ ೨೨ ವರ್ಷಗಳ ಕಾಲ ಇದ್ದು, ಅಲ್ಲಿನ ಬಿಳಿಯರ ಸರಕಾರದ ವರ್ಣಭೇದ ನೀತಿಯ ವಿರುದ್ಧ ಹೋರಾಡಬೇಕಾಯಿತು. ಈ ಕಾಲ ಗಾಂಧೀಜಿಯ ಜೀವನದ ಮತ್ತು ವ್ಯಕ್ತಿತ್ವದ ರಚನೆಯ ಕಾಲ. ಅವರು ಅಲ್ಲಿ ಪಡೆದುಕೊಂಡ ಬಾಳಿನ ಅನುಭವಗಳು, ನಡೆಸಿದ ಹೋರಾಟದ ಪರಿ, ಅವರನ್ನು ಒಬ್ಬ

ಧೀರೋದಾತ್ತ ನಾಯಕನ ಅಂತಸ್ತಿಗೆ ಏರಿಸಿದುದಲ್ಲದೆ, ಅವರು ಒಂದು ನೂತನ ಸಭ್ಯತೆ ಮತ್ತು ನಾಗರಿಕತೆಯನ್ನೂ ಹಾಗೂ ಜೀವನ ವಿಧಾನವನ್ನೂ ಪ್ರತಿಪಾದಿಸುವ ಪ್ರವಾದಿಯೆಂದು ಯೂರೋಪು ಮತ್ತು ಏಷ್ಯಾ ಖಂಡಗಳಲ್ಲಿ ಪ್ರಸಿದ್ಧರಾದರು. ಈ ಕಾಲದಲ್ಲಿಯೇ ಅವರ ಧಾರ್ಮಿಕ-ನೈತಿಕ, ಆರ್ಥಿಕ-ರಾಜಕೀಯ ಮತ್ತು ಸಾಮಾಜಿಕ ಭಾವನೆಗಳು ರೂಪುಗೊಂಡವು. ಅನಂತರ ೧೯೧೫ರಲ್ಲಿ ಅವರು ಭಾರತಕ್ಕೆ ಹಿಂದಿರುಗಿ ಬಂದರು; ೧೯೧೯ರಲ್ಲಿ ನಡೆದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಪರಿಣಾಮವಾಗಿ ಸಮಗ್ರ ಭಾರತ ಉಪಖಂಡದ ಭಾರತೀಯ ಸ್ವಾತಂತ್ರ್ಯ ಹೋರಾಟದ ಅದ್ವಿತೀಯ ಮುಖಂಡ ರಾದರು. ಅಲ್ಲಿಂದ ಮುಂದೆ ೧೯೪೮ರ ಜನವರಿ ೩೦ರಂದು ಅವರ ದುರಂತ ಅವಸಾನ ಆಗುವವರೆಗೂ ಅವಿಶ್ರಾಂತ ಕರ್ಮಯೋಗಿಯಾದರು. ವಿಶ್ವಕ್ಕೆ ಶಾಂತಿಪಥ ತೋರಿಸುವ ಮಹಾವ್ಯಕ್ತಿಯೆಂದೂ, ಪ್ರೇಮ ಕರುಣೆಗಳ ಮೂರ್ತಿ ಯೆಂದೂ ಹೆಸರು ಪಡೆದರು. ಆ ಕಾಲದಲ್ಲಿ ಅವರು ಅಹಿಂಸಕ ಸಮರದ ಸೇನಾನಿಯಾಗಿ ಭಾರತದ ಸ್ವಾತಂತ್ರ್ಯ ಹೋರಾಟವನ್ನು ನಡೆಸಿದ ಅದ್ಭುತ ಕೆಲಸವೊಂದೇ ಸಾಕು, ಅವರು ಭಾರತದ ಹಾಗೂ ಜಗತ್ತಿನ ಇತಿಹಾಸದಲ್ಲಿ ಚಿರಂತನ ಸ್ಥಾನ ಪಡೆದುಕೊಳ್ಳಲು. ಅವರು ಕೈಗೊಂಡ ಕಾರ್ಯಗಳು—ರಾಷ್ಟ್ರ ನಿರ್ಮಾಣ ಕಾರ್ಯಗಳು-ಬಹುಮುಖ, ಅಸಂಖ್ಯಾತ, ಇವೆಲ್ಲವುಗಳ ಬಗೆಗೂ ಅವರು ತಮ್ಮ ವಿಚಾರಸರಣಿಯನ್ನು ಜನತೆಯ ಮುಂದೆ ಮಂಡಿಸ ಬೇಕಾಗಿತ್ತಲ್ಲದೆ, ವಿವಿಧ ಕ್ಷೇತ್ರಗಳಿಂದ ಬಂದ ಆಕ್ಷೇಪಗಳಿಗೆ ಉತ್ತರವೀಯ ಬೇಕಾಗಿತ್ತು. ಕಾರ್ಯಗಳನ್ನು ಕೈಗೊಂಡ ಕಾರ್ಯಕರ್ತರಲ್ಲಿ ಸ್ಫೂರ್ತಿ-ಶ್ರದ್ಧೆಗಳನ್ನು ಮೂಡಿಸಬೇಕಾಗಿತ್ತು. ಈ ಎಲ್ಲ ವಿರಾಟ್ ಸ್ವರೂಪದ ಕಾರ್ಯ ಗಳನ್ನು ನಡೆಸುವ ಬಗೆಗೆ ಸಂದೇಹವುಳ್ಳವರಲ್ಲಿ ವಿಶ್ವಾಸವನ್ನು ಹುಟ್ಟಿಸಬೇಕಾ ಗಿತ್ತು. ಕಾರ್ಯನಿರತರಾದವರು ನಿರಾಶರಾಗದೆ, ಉತ್ಸಾಹಭರಿತರಾಗಿ ಯಶಸ್ಸಿನೆಡೆಗೆ ಸಾಗುವಂತೆ ಮಾಡಬೇಕಾಗಿತ್ತು. ಇವುಗಳ ಪರಿಣಾಮವಾಗಿ ಅವರ ಲೇಖನಿ, ನಾಲಗೆ ಎರಡೂ ಪರಸ್ಪರ ಸ್ಪರ್ಧೆಯಿಂದ ಸೇವೆ ಸಲ್ಲಿಸ ಬೇಕಾಗಿತ್ತು. ಇದರಿಂದಲೇ ಎಣೆಯಿಲ್ಲದ ಸಾಹಿತ್ಯ ಸೃಷ್ಟಿಯಾಯಿತು. ಈ ಸಾಹಿತ್ಯವೇ ಗಾಂಧೀ ಸಾಹಿತ್ಯ.

ಗಾಂಧೀ ಸಾಹಿತ್ಯ ಪ್ರಕಾರ-ಪ್ರಮಾಣ ಎರಡರಲ್ಲಿಯೂ ಅಸಾಧಾರಣ

ವಾಗಿದೆ. ಗಾಂಧೀಜಿ ಗುಜರಾತೀ, ಹಿಂದೀ, ಇಂಗ್ಲಿಷ್ ಈ ಭಾಷೆಗಳಲ್ಲಿ ಬರೆಯುತ್ತಿದ್ದರು, ಮಾತನಾಡಬಲ್ಲವರಾಗಿದ್ದರು. ಭಾರತದ ಇತರ ಬಹುತೇಕ ಪ್ರಾಂತೀಯ ಭಾಷೆಗಳನ್ನೂ ಅವರು ಕಲಿಯುತ್ತಿದ್ದರು. ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳನ್ನೂ ಅವರು ಅರಿತಿದ್ದರು.

ಮೊದಲು ಗಾಂಧೀ ಸಾಹಿತ್ಯದ ಪ್ರಕಾರಗಳ ಬಗೆಗೆ ನೋಡೋಣ. ಇದನ್ನು ಎರಡು ಬಗೆಗಳಲ್ಲಿ ವಿಂಗಡಿಸಬಹುದು: (ಅ) ಗಾಂಧೀಜಿಯೇ ಆಡಿದವು ಮತ್ತು ಬರೆದವು ಮತ್ತು (ಆ) ಗಾಂಧೀಜಿಯ ಜೀವನ ಮತ್ತು ವಿಚಾರಗಳನ್ನು ಕುರಿತು ಇತರರು ಬರೆದವು.

(ಅ) ಗಾಂಧೀಜಿಯೇ ಬರೆದವು, ಆಡಿದವು ಎಂದರೆ ಅವರೇ ಲೇಖನ ರೂಪದಲ್ಲಿ ಪತ್ರಗಳ ರೂಪದಲ್ಲಿ ಬರೆದವು ಮತ್ತು ಇವುಗಳ ಜತೆಗೆ ಅವರು ತಮ್ಮ ಬದುಕಿನಾದ್ಯಂತ ಭಿನ್ನ ಭಿನ್ನ ಸಂದರ್ಭಗಳಲ್ಲಿ ಭಾಷಣಮಾಡಿ, ಮಹನೀಯರೊಂದಿಗೆ ಸಂಭಾಷಣೆ ಮಾಡಿ, ಹೇಳಿಕೆ ನೀಡಿ ಸಂಕಲಿತ ರೂಪಕ್ಕೆ ಬಂದುವು ; ಹಾಗೂ ಅವರು ಕಾಲಕಾಲಕ್ಕೆ ಸಂಪಾದಕರಾಗಿ ನಡೆಸಿದ ಪತ್ರಿಕೆಗಳಲ್ಲಿ ಸಮಯೋಚಿತವಾಗಿ ವಿಷಯಗಳು ಮತ್ತು ರಾಷ್ಟ್ರದ ಸಮಸ್ಯೆಗಳ ಬಗೆಗೆ ಬರೆದವು. ಇದಲ್ಲದೆ ಮಿತ್ರರಿಗೆ, ಮಹನೀಯರಿಗೆ, ಸಹಕಾರ್ಯಕರ್ತರಿಗೆ, ಪುಟಾಣಿ ಮಕ್ಕಳಿಗೆ ಬರೆದ ಅಸಂಖ್ಯಾತ ಪತ್ರಗಳು ಇವುಗಳೆಲ್ಲ ಬರುತ್ತವೆ.

(ಆ) ಗಾಂಧೀಜಿಯ ಬಗೆಗೆ ಇತರರು ಬರೆದವು ಎಂದರೆ, ದೇಶವಿದೇಶಗಳ ಭಾಷೆಗಳಲ್ಲಿ ಗಾಂಧೀಜಿಯ ಜೀವನ ಚರಿತ್ರೆ ಮತ್ತು ಅವರ ವಿಚಾರಧಾರೆ ಇವುಗಳನ್ನು ಕುರಿತು ಬರೆದವು. ಗಾಂಧೀ ವ್ಯಕ್ತಿತ್ವ, ಬೋಧೆ ಇವುಗಳಮೇಲೆ ಬೆಳಕು ಚೆಲ್ಲುವ ಕಥಾವಳಿಗಳು ಮತ್ತು ವಿಶಿಷ್ಟರೂಪದ ಘಟನೆಗಳ ನಿರೂಪಣೆ ಕವನ–ಕಾವ್ಯ, ಪ್ರಬಂಧಗಳು, ದೇಶೀಯ ಭಾಷೆಗಳ ನಾಟಕಗಳು, ಕಾದಂಬರಿಗಳು ಇವುಗಳಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಬರುವ ಪಾತ್ರ ಸೃಷ್ಟಿ, ಭಾವಪ್ರಕಾಶ, ಇತ್ಯಾದಿಗಳೆಲ್ಲ ಸೇರುತ್ತವೆ.

ಈ ಎರಡೂ ಬಗೆಗಿನ ಬರಹಗಳು ಕೂಡಿ ಅಗಾಧ ಸಾಹಿತ್ಯರಾಶಿಯೇ ಸೃಷ್ಟಿಯಾಗಿದೆ. ಗಾಂಧೀಜಿ ಬದುಕಿದ್ದಾಗಲೇ ಇದು ದೊಡ್ಡ ಪ್ರಮಾಣದ್ದಾಗಿತ್ತು. ಬಹುಶಃ ಒಬ್ಬ ಭಾರತೀಯನ ಬಗೆಗೆ ಇಷ್ಟೊಂದು ಸಾಹಿತ್ಯ ಅಪರೂಪವೆಂದೇ ಹೇಳಿದರೆ, ಅತಿಶಯೋಕ್ತಿಯಾಗಲಾರದು. ಷೇಕ್ಸ್‌ಪಿಯರ್

ಮಹಾಕವಿಯ ಬಗೆಗೆ ಬಂದಿರುವ ಸಾಹಿತ್ಯ 'ಷೇಕ್ಸ್‌ಪಿರಿಯಾನಾ' ಎಂದು ಹೆಸರಾಗಿರುವಂತೆ, ಗಾಂಧೀ ಸಾಹಿತ್ಯ 'ಗಾಂಧಿಯಾನಾ' ಎಂದು ಹೆಸರನ್ನು ಪಡೆದಿದೆ. ಗಾಂಧೀಜಿ ಕಾಲವಾದ ತರುವಾಯ, ಈ ಎರಡು ದಶಕಗಳಲ್ಲಿಯೂ ಮತ್ತು ಅವರ ಜನ್ಮ ಶತಾಬ್ದಿಯ ವಿಶೇಷ ಸಂದರ್ಭದಲ್ಲಿಯೂ ಸಣ್ಣ-ದೊಡ್ಡ ಕೃತಿಗಳು, ಲೇಖನಗಳು ಮತ್ತು ವಿವಿಧ ರೀತಿಯ ಬರೆಹಗಳು ಭಾರತದ ವಿವಿಧ ಭಾಷೆಗಳಲ್ಲಿಯೂ ಮತ್ತು ಜಗತ್ತಿನ ವಿವಿಧ ರಾಷ್ಟ್ರಭಾಷೆಗಳಲ್ಲಿಯೂ ಸೃಷ್ಟಿಯಾಗಿವೆ. ಏಕೆಂದರೆ, ತಮ್ಮ ವಿಶಿಷ್ಟರೀತಿಯ ಜೀವನದಿಂದ, ವಿಚಾರ ಸರಣಿಯಿಂದ, ಮಾನವೀಯ ಸಂಬಂಧಗಳಿಂದ ಎಲ್ಲಕ್ಕಿಂತ ಮಿಗಿಲಾಗಿ ನಾಗರಿಕ ಜಗತ್ತನ್ನೇ ಸ್ತಂಭೀಭೂತಗೊಳಿಸಿದ ದುರಂತ ಅವಸಾನದ ರೀತಿಯಿಂದ ಮಾನವ ಕೋಟಿಯ ಹೃನ್ಮನಗಳನ್ನು ಸೂರೆಗೊಂಡ ಇನ್ನೊಬ್ಬ ವ್ಯಕ್ತಿ ಈ ಶತಮಾನದ ಇತಿಹಾಸದಲ್ಲಿ ಕಂಡುಬರುವುದು ವಿರಳ. ವಿನ್‌ಸ್ಟನ್ ಚರ್ಚಿಲ್ ಹಿಂಸಾ ರೀತಿಯ ಯುದ್ಧದ ಅಪ್ರತಿಮ ವೀರನೆನಿಸಿದರೆ, ಗಾಂಧೀಜಿ ಅಹಿಂಸಕ ರೀತಿಯ ಯುದ್ಧದ ಅದ್ವಿತೀಯ ಧೀರ. ಚರ್ಚಿಲ್ ಬರೆದಿರುವ 'ಯುದ್ಧ ನೆನಪುಗಳು' (War Memoirs) ಅಗಾಧ ಸಾಹಿತ್ಯವಾದರೆ, ಗಾಂಧೀಜಿಯದೂ ಅಗಾಧ ಸಾಹಿತ್ಯವೇ. ಅದರಲ್ಲಿಯೂ ಧನ, ಅಧಿಕಾರ, ಮೇಧಾಶಕ್ತಿ ಇತ್ಯಾದಿ ಯಾವುದೂ ಇಲ್ಲದೆ ಕೇವಲ ನೈತಿಕ-ಆಧ್ಯಾತ್ಮಿಕ-ಸಾತ್ವಿಕ ತೇಜಸ್ಸಿನಿಂದಲೇ ಲೋಕದ ಮೆಚ್ಚುಗೆಗೆ, ಗೌರವಾದರಣೆಗೆ ಪಾತ್ರನಾದ ಇನ್ನೊಬ್ಬ ವ್ಯಕ್ತಿಯುಂಟೆ ಎಂಬ ಪ್ರಶ್ನೆ ಬಹುತೇಕ ಉದ್ಭವಿಸೀತು. ಇದಕ್ಕೆ ಉತ್ತರವಾಗಿ ಡಾ|| ಆಲ್ಬರ್ಟ್ ಐನ್‌ಸ್ಟೀನ್ ನುಡಿದ ಈ ಮಾತು—"ತಲೆಮರೆಗಳು ಕಳೆದ ತರುವಾಯ, ಇಂಥ ವ್ಯಕ್ತಿ ಜೀವಂತನಾಗಿ ಬದುಕಿದ್ದನೇ ಎಂದು ಲೋಕ ಅಚ್ಚರಿಪಟ್ಟೀತು" ಎಂಬ ಮಾತೊಂದೇ ಸಾಕೆನಿಸುತ್ತದೆ. ಇಂಥ ಮಾನವಮೇರು ಸದೃಶ ವ್ಯಕ್ತಿಯ ಬಗೆಗೆ ವಿಪುಲ ಸಾಹಿತ್ಯ ರಚಿತವಾಗಿರುವುದು ಸಹಜವೇ.

೩

ಮೂಲ ಸಾಹಿತ್ಯ (Basic Literature)

ಹಿಂದಿನ ಅಧ್ಯಾಯಗಳಲ್ಲಿ ಗಾಂಧೀಜಿ ಏತಕ್ಕೆ ಬರೆದರು, ಮತ್ತು ಅವರ ಬಗೆಗಿನ ಸಾಹಿತ್ಯ ಹೇಗೆ ಸೃಷ್ಟಿಯಾಯಿತು ಎಂಬುದನ್ನು ಸೂಕ್ಷ್ಮವಾಗಿ ತಿಳಿಸಲಾಗಿದೆ. ಇಲ್ಲಿ ಗಾಂಧೀಜಿಯೇ ಬರೆದುವು ಯಾವುವು ಅವುಗಳ ಆಕರ ಯಾವುದು ಎಂಬುದನ್ನೂ ಆ ಬರೆಹಗಳ ಸೂಕ್ಷ್ಮ ಪರಿಚಯವನ್ನೂ (ಮೂಲ ಸಾಹಿತ್ಯ) ಪರಿಚಯ ಮಾಡಿಕೊಳ್ಳಲು ಯತ್ನಿಸಲಾಗಿದೆ.

ಸಾಮಾನ್ಯವಾಗಿ ಗಾಂಧೀ ಸಾಹಿತ್ಯಕ್ಕೆಲ್ಲ ಪ್ರಧಾನ ಆಕರಗಳೆಂದರೆ, ಅವರು ಕಾಲಕಾಲಕ್ಕೆ ಸ್ಥಾಪಿಸಿ, ಸಂಪಾದಿಸಿದ ಪತ್ರಿಕೆಗಳು ಎನ್ನಬಹುದು. ಆ ಪತ್ರಿಕೆಗಳು ಈ ರೀತಿ ಇವೆ: ಇಂಡಿಯನ್ ಒಪಿನಿಯನ್, ಯಂಗ್ ಇಂಡಿಯಾ, ನವಜೀವನ (ಹಿಂದೀ) ಮತ್ತು ಹರಿಜನ.

ಇಂಡಿಯನ್ ಒಪಿನಿಯನ್ : ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ ನಡೆಸಿದ ವಾರಪತ್ರಿಕೆಯಿದು. ಇದು ೧೯೦೪ರಲ್ಲಿ ಆರಂಭವಾಗಿ, ಇಂಗ್ಲಿಷ್–ಗುಜರಾತೀ–ಹಿಂದೀ–ತಮಿಳು ಈ ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ಸ್ವಲ್ಪ ಕಾಲದ ಮೇಲೆ ತಮಿಳು ಮತ್ತು ಹಿಂದೀ ಆವೃತ್ತಿಗಳು ನಿಂತುಹೋದವು. ಈ ಪತ್ರಿಕೆಯ ಮೂಲ ಉದ್ದೇಶ ಹೀಗಿತ್ತು : “ಎಡ್ವರ್ಡ್ ದೊರೆಯ ಐರೋಪ್ಯ ಮತ್ತು ಭಾರತೀಯ ಪ್ರಜೆಗಳ ನಡುವೆ ಸೌಹಾರ್ದವೇರ್ಪಡಿಸುವುದು ; ಲೋಕಮತವನ್ನು ರೂಢಿಸುವುದು ; ತಪ್ಪಭಿಪ್ರಾಯಗಳನ್ನು ಹೋಗಲಾಡಿಸು

ವುದು; ಭಾರತೀಯರಿಗೆ ಅವರ ನ್ಯೂನತೆಗಳನ್ನು ತೋರಿಸಿಕೊಡುವುದು; ಅವರು ತಮ್ಮ ಹಕ್ಕುಬಾಧ್ಯತೆಗಳನ್ನು ಒತ್ತಾಯಪಡಿಸುವಂತೆ ಮಾಡುವುದು; ಅವರಿಗೆ ಕರ್ತವ್ಯ ಪಥವನ್ನು ತೋರಿಸುವುದು.' ಈ ಪತ್ರಿಕೆ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿ ಬರುವವರೆಗೂ, ಎಂದರೆ ೧೯೧೪ರ ವರೆಗೂ ತಪ್ಪದೆ ನಡೆಯಿತು. ಇದರ ಪ್ರಭಾವವನ್ನು ಕುರಿತು ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ: "ಇಂಡಿಯನ್ ಒಪಿನಿಯನ್ ಪತ್ರಿಕೆ ಇಲ್ಲದಿದ್ದರೆ, ಬಹುಶಃ ಸತ್ಯಾಗ್ರಹ ಸಾಧ್ಯವಾಗುತ್ತಿರಲಿಲ್ಲವೇನೋ?" ಇದು ಆ ಕಾಲದ ಗಾಂಧೀ ಸಾಹಿತ್ಯದ ಮೂಲಾಧಾರ. ಮುಂದೆ ಪುಸ್ತಕ ರೂಪಗಳಲ್ಲಿ ಅಚ್ಚಾದ ಎಷ್ಟೋ ವಿಷಯಗಳು ಇದರಲ್ಲಿ ಲೇಖನ ರೂಪದಲ್ಲಿ ಪ್ರಕಟವಾದುವು.

ಯಂಗ್ ಇಂಡಿಯಾ ಮತ್ತು ನವಜೀವನ: ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿ ಬಂದ ಮೇಲೆ, ಭಾರತದ ರಾಜಕಾರಣ ಮತ್ತು ರಾಷ್ಟ್ರಜೀವನದಲ್ಲಿ ಮಹತ್‌ಶಕ್ತಿಯಾದ ಮೇಲೆ, ೧೯೧೯ ರಿಂದ ಅವರ ಅವಸಾನದ ವರೆಗೂ, ಕಾಲಕಾಲಕ್ಕೆ ಮೂರು ಭಿನ್ನ ಭಿನ್ನ ಪತ್ರಿಕೆಗಳನ್ನು ನಡೆಸಿದರು. ಅವುಗಳಲ್ಲಿ ನವಜೀವನ ಮತ್ತು ಯಂಗ್ ಇಂಡಿಯಾ ಏಕಕಾಲದಲ್ಲಿ ಆರಂಭವಾದುವು. ಯಂಗ್ ಇಂಡಿಯಾ ಇಂಗ್ಲಿಷ್‌ನಲ್ಲಿಯೂ ನವಜೀವನ ಹಿಂದಿಯಲ್ಲಿಯೂ ಪ್ರಕಟವಾಗುತ್ತಿದ್ದವು. ಅವು ೧೯೩೩ ರವರೆಗೂ ಗಾಂಧೀ ಸಾಹಿತ್ಯದ ಪ್ರಧಾನ ಆಧಾರ. ಇವುಗಳ ಉದ್ದೇಶವಾದರೂ ಸತ್ಯಾಗ್ರಹ ಅಥವಾ ಅಹಿಂಸಕ ಪ್ರತೀಕಾರ ಮತ್ತು ಖಾದಿ ಹಾಗೂ ಪಾನ ನಿಷೇಧ ಇತ್ಯಾದಿ ಕಾರ್ಯಕ್ರಮಗಳ ಬಗೆಗೆ, ರಾಷ್ಟ್ರಕ್ಕೆ ಶಿಕ್ಷಣ ಕೊಡುವುದೇ ಆಗಿದ್ದಿತು.

ಹರಿಜನ: ೧೯೩೩ ರಲ್ಲಿ ಗಾಂಧೀಜಿ 'ಹರಿಜನ' ಎಂಬ ಆಂಗ್ಲ ಭಾಷೆಯ ವಾರಪತ್ರಿಕೆಯನ್ನು ಸ್ಥಾಪಿಸಿದರು. ಅದು ಅವರ ಅವಸಾನದ ವರೆಗೂ (ಜನವರಿ ೩೦, ೧೯೪೮) ಅವರ ಸಂಪಾದಕತ್ವದಲ್ಲೇ ನಡೆಯಿತು. ಇದೇ ಕಾಲದಲ್ಲಿ ಅವರು 'ಹರಿಜನ ಸೇವಕ' ಎಂಬ ಹಿಂದೀ ವಾರಪತ್ರಿಕೆಯನ್ನೂ ಮತ್ತು 'ಹರಿಜನ ಬಂಧು' ಎಂಬ ಗುಜರಾತೀ ಪತ್ರಿಕೆಯನ್ನೂ ನಡೆಸುತ್ತಿದ್ದರು.

ಈ ಪತ್ರಿಕೆಗಳ ಪೈಕಿ 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆಗಳು ದೇಶವಿದೇಶಗಳಲ್ಲಿ ಪ್ರಸಿದ್ಧವಾಗಿದ್ದು ಗಾಂಧೀ ವಿಚಾರದ ಕೈದೀವಿಗೆಗಳಾಗಿದ್ದುವು. ಇವು ಜನಪ್ರಿಯ ಪತ್ರಿಕೆಗಳಾಗದಿದ್ದರೂ, ವಿಚಾರ ಪ್ರಚಾರಕ್ಕೆ ಮೀಸಲಾದ ಪತ್ರಿಕೆಗಳಾಗಿದ್ದವು. ಇವುಗಳಲ್ಲಿ 'ಜಾಹಿರಾತಿ'ನ (Advertisement) ಅಂಶವೇ ಇರುತ್ತಿರಲಿಲ್ಲ. ಗಾಂಧೀಜಿಯ ಸತ್ಯಾನ್ವೇಷಣೆಯ ಮತ್ತು ಅವರ ಹೃದಯಾಂತರಾಳದ ಭಾವಗಳ ಪ್ರಕಾಶನ ಸಾಧನವಾಗಿದ್ದುವು.

ಗಾಂಧೀಜಿ ಪುಸ್ತಕ ರೂಪದಲ್ಲಿ ಬರೆದುದು ಇಲ್ಲವೆಂದೇ ಹೇಳಬಹುದು. ಆದರೂ ಅವರ ಹೆಸರಿನಲ್ಲಿ ಪುಸ್ತಕರೂಪದಲ್ಲಿ ದೊರೆಯುವ ಬರೆಹಗಳು ಈ ಕೆಳಗಿನಂತಿವೆ. ಇವುಗಳೂ ಮೂಲತಃ ಅವರ ಪತ್ರಿಕೆಗಳಲ್ಲಿ ವಾರವಾರವೂ ಅಚ್ಚಾಗಿ ಬಂದವು. (೧) ಹಿಂದ್ ಸ್ವರಾಜ್ಯ; (೨) ಸರ್ವೋದಯ; (೩) ನೀತಿಧರ್ಮ; (೪) ಆರೋಗ್ಯಮಾರ್ಗದರ್ಶಿನೀ; (೫) ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ; (೬) ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ; (೭) ಅನಾಸಕ್ತಿಯೋಗ; (೮) ಮಂಗಳ ಪ್ರಭಾತ; (೯) ನಿರ್ಮಾಣ ಕಾರ್ಯಕ್ರಮ.

ಇವು ಗ್ರಂಥ ರೂಪದಲ್ಲಿ ದೊರಕುವ ಗಾಂಧೀ ವಿಚಾರದ ಮೂಲ ಸಾಹಿತ್ಯವೆನ್ನಬಹುದು. ಬಹುತೇಕ ಎಲ್ಲ ವಿಚಾರಗಳು ಇವುಗಳಲ್ಲಿ ಬೀಜ ರೂಪವಾಗಿ ಬಂದಿವೆ. ಇವುಗಳೂ ಒಳಗೊಂಡಂತೆ ೧೮೮೮ರಿಂದ ಗಾಂಧೀಜಿಯ ಅವಸಾನದವರೆಗೂ ಅವರಿಂದ ಮೂಡಿಬಂದ ವಾಙ್ಮಯವೆಲ್ಲವನ್ನೂ ಭಾರತ ಸರ್ಕಾರದ ಪ್ರಕಟನ ವಿಭಾಗ ೮೦ ಬೃಹತ್ ಸಂಕಲನ ಸಂಪುಟಗಳಲ್ಲಿ ಹೊರ ತರುತ್ತಿದೆ. ಇದರ ಸಾರಭೂತ ಅಂಶವನ್ನು ಅಹಮದಾಬಾದಿನ ನವಜೀವನ ಸಂಸ್ಥೆಯವರು ಆರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಭಾರತದ ವಿವಿಧ ಪ್ರಾಂತೀಯ ಭಾಷೆಗಳಲ್ಲಿಯೂ ಈ ಸಾರಭೂತ ಅನುವಾದಗಳನ್ನು ಹೊರ ತರಲು ಗಾಂಧೀ ಸ್ಮಾರಕ ನಿಧಿ ನೆರವನ್ನಿತ್ತಿದೆ. ಹೀಗೆ ನೆರವನ್ನು ಪಡೆದ ಕರ್ಣಾಟಕ ಗಾಂಧೀ ಸ್ಮಾರಕ ನಿಧಿಯೂ ಸುಮಾರು ೬೦೦೦ ಪುಟಗಳಲ್ಲಿ, ವಿವಿಧ ಶೀರ್ಷಿಕೆಗಳ ೨೦ ಸಂಪುಟಗಳಲ್ಲಿ ಗಾಂಧೀ ಬರೆಹಗಳ ಸಾರಸರ್ವಸ್ವವನ್ನು ಒದಗಿಸಿದೆ.

ಮೇಲೆ ಪುಸ್ತಕ ರೂಪದಲ್ಲಿ ಸೂಚಿಸಿರುವ ಶೀರ್ಷಿಕೆಗಳು ಪ್ರಧಾನವಾಗಿ ಗಾಂಧೀ ಸಾಹಿತ್ಯದ ವಿಷಯ ವೈಶಿಷ್ಟ್ಯವನ್ನು ಮಾತ್ರ ತೋರಿಸುತ್ತವೆ. ಇವುಗಳಲ್ಲಿ ಒಂದಾಗಿರುವ 'ಹಿಂದ್ ಸ್ವರಾಜ್ಯ' ಗಾಂಧೀ ವಿಚಾರಕ್ಕೆ ಸೂತ್ರ ಗ್ರಂಥ ಎನ್ನಬಹುದು. ೧೯೦೯ರಲ್ಲಿ ಗಾಂಧೀಜಿ ಲಂಡನ್ನಿನಿಂದ ದಕ್ಷಿಣ ಆಫ್ರಿಕಾಕ್ಕೆ ಹಿಂದಿರುಗುವಾಗ ನವೆಂಬರ್ ೧೩ ರಿಂದ ೨೨ರವರೆಗೆ, ಹಗಲು-ರಾತ್ರಿ ಹಡಗಿನಲ್ಲಿ ಕುಳಿತು ಬರೆದ ಪುಸ್ತಕ. ಇದರ ಕರಡು ಪ್ರತಿಯ ಕೆಲವು ಪುಟಗಳನ್ನು ಅವರು ಎಡಗೈಯಲ್ಲೂ ಬರೆದರು. ಈ ಪುಸ್ತಕ ಆಧುನಿಕ ನಾಗರಿಕತೆಯ ತೀವ್ರ ಖಂಡನೆ. ಇದು ಸಂವಾದ ರೂಪದಲ್ಲಿದೆ. ಹಿಂದೂಸ್ತಾನದಲ್ಲಿ ಅಂದು ಹೆಚ್ಚುತ್ತಿದ್ದ ಹಿಂಸಾವಾದಕ್ಕೆ ಉತ್ತರ. ಅದು ಹೀಗಿತ್ತು : "ಹಿಂಸಾಮಾರ್ಗ ಹಿಡಿದರೆ ಆಧುನಿಕ ನಾಗರಿಕತೆಯನ್ನು ಒಪ್ಪಿಕೊಳ್ಳದೆ ತಪ್ಪದು. ಇದೇ ಸರ್ವನಾಶಕಾರಿ ಸ್ಪರ್ಧೆ. ಇದರಿಂದ ಪ್ರೀತಿಯ ಗ್ಲಾನಿ."[1] ಹಿಂದ್ ಸ್ವರಾಜ್ಯ ಕಲಿಸುವ ಪಾಠವೇನು ಎಂದು ಪ್ರಶ್ನಿಸಿಕೊಂಡು ಹೀಗೆ ಉತ್ತರವಿತ್ತಿದ್ದಾರೆ : "ಇದು ದ್ವೇಷಕ್ಕೆ ಬದಲು ಆತ್ಮತ್ಯಾಗವನ್ನು ಕಲಿಸುತ್ತದೆ. ಪಶುಬಲಕ್ಕೆ ಇದಿರಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ."[2] ಇದರಲ್ಲಿ ಗಾಂಧೀ ಜೀವನದ ಸಾರವನ್ನು ತಿಳಿಸಿದ್ದಾರೆ. ಈ ಪುಸ್ತಕವನ್ನು ಅವರು ಮೊದಲು ಗುಜರಾತೀ ಭಾಷೆಯಲ್ಲಿ ಬರೆದರು. ಅನಂತರ ಇಂಗ್ಲಿಷಿಗೆ ಭಾಷಾಂತರವಾಯಿತು.

ಹಿಂದ್ ಸ್ವರಾಜ್ಯವನ್ನು ಓದಿದವರು 'ಬರಿ ಪಿತ್ತವಿಕಾರ' ಎಂದವರುಂಟು. ಗೋಖಲೆಯಂಥವರು 'ಗಾಂಧೀ ಹಿಂದೂಸ್ತಾನಕ್ಕೆ ಬಂದು ಒಂದು ವರ್ಷ ಕಾಲ ಇದ್ದರೆ ತಾವೇ ಇದನ್ನು ಸುಟ್ಟುಹಾಕಿಯಾರು' ಎಂದಿದ್ದರು. ಸರ್. ಶಂಕರನ್ ನಾಯರ್ ಎನ್ನುವವರು ಗಾಂಧೀಜಿಯನ್ನು ಮಹಾ 'ಅರಾಜಿಕವಾದಿ' (The Great Anarchist) ಎಂದು ಕರೆದು ಒಂದು ಸಣ್ಣ ನಿಬಂಧವನ್ನೇ ಬರೆದಿದ್ದರು. ಆದರೆ ಗಾಂಧೀಜಿ ೧೯೩೮ರಲ್ಲಿ ಈ ಪುಸ್ತಕದ ಒಂದು ಆವೃತ್ತಿಗೆ ಮುನ್ನುಡಿ ಬರೆಯುತ್ತಾ, "ಇದರಲ್ಲಿ ಒಂದು ಪದವನ್ನಾದರೂ ಬದಲಿಸಲಾರೆ ; ಒಂದೇ ಒಂದನ್ನು ಒಬ್ಬ ಗೆಳತಿಯ ತೃಪ್ತಿ

1. ಹಿಂದ್ ಸ್ವರಾಜ್ಯ—ಪುಟ : iv.
2. ಅದೇ—ಪುಟ : ೧೧

ಗಾಗಿ ತೆಗೆದುಹಾಕಿದೇನೆ"[1] ಎಂದರು. ಹಾಗೆಯೇ—"ಆದರೆ ಇದರಲ್ಲಿ ಹೇಳಿರುವ ಸ್ವರಾಜ್ಯವನ್ನು ನಾನಿಂದು ಕೇಳುತ್ತಿಲ್ಲ. ಹಿಂದೂಸ್ತಾನ ಅದಕ್ಕೆ ಸಾಕಷ್ಟು ಮಾಗಿ ಬಂದಿಲ್ಲ. ಇದರಲ್ಲಿ ಹೇಳಿರುವ ಸ್ವರಾಜ್ಯಕ್ಕಾಗಿ 'ವ್ಯಕ್ತಿಶಃ' ನಾನು ಯತ್ನಿಸುತ್ತೇನೆ. ನನ್ನ ಸಾಮೂಹಿಕ ಪ್ರಯತ್ನವೇನೋ ಭಾರತೀಯರ ಅಭಿಮತದಂತೆ ಶಾಸನ ಸಮ್ಮತ ಪ್ರಜಾಪ್ರಭುತ್ವಕ್ಕಾಗಿ ನಡೆದಿದೆ"[2] ಎಂದು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಹಿಂದ್ ಸ್ವರಾಜ್ಯವನ್ನು ಓದಿದವರು, ಗಾಂಧೀಜಿ ರೈಲು, ಆಸ್ಪತ್ರೆ, ನ್ಯಾಯಾಲಯಗಳು, ಗಿರಣಿ ಮತ್ತು ಕಾರಖಾನೆ, ಸಂಸದಾತ್ಮಕ ಪ್ರಜಾ ಪ್ರಭುತ್ವ ಇವುಗಳ ವಿರೋಧಿ ಎಂದು ಭಾವಿಸುವುದುಂಟು. ಇವುಗಳ ಬಗೆಗೂ ೧೯೩೮ರಲ್ಲಿ ಅವರು ಹೀಗೆ ಹೇಳಿದ್ದಾರೆ: "ರೈಲನ್ನಾಗಲೀ ಆಸ್ಪತ್ರೆಯನ್ನಾ ಗಲೀ ನಾಶಮಾಡುವ ಪ್ರಯತ್ನ ನನಗಿಲ್ಲ. ತಾವಾಗಿಯೇ ಅವು ನಾಶವಾದರೆ ಆಗಲಿ ಎಂದು ಬಯಸುತ್ತೇನೆ. ರೈಲಾಗಲೀ ಆಸ್ಪತ್ರೆಯಾಗಲೀ ಶುದ್ಧ, ಉತ್ತಮ ನಾಗರಿಕತೆಯ ಲಕ್ಷಣವೇನಲ್ಲ. ಏನೋ ಅನಿವಾರ್ಯ ದುರ್ಲಕ್ಷಣ ಎಂದೇನು. ರಾಷ್ಟ್ರದ ಗೌರವಕ್ಕೆ ಎಳ್ಳುಕಾಳಿನಷ್ಟಾದರೂ ಸಹಾಯವಲ್ಲ ಇವು ಎರಡೂ. ನ್ಯಾಯಾಲಯಗಳನ್ನು ಶಾಶ್ವತವಾಗಿ ಕಿತ್ತುಹಾಕುವ ಮನಸ್ಸಿದ್ದರೂ ಈಗ ಅದು ನನ್ನ ಗುರಿಯಲ್ಲ. ಎಲ್ಲ ಯಂತ್ರಗಳನ್ನೂ, ಗಿರಣಿ–ಕಾರ್ಖಾನೆ ಗಳನ್ನೂ ನಾಶಮಾಡುವುದಿಲ್ಲ. ಹಾಗೆ ಮಾಡಲು ರಾಷ್ಟ್ರ ಇನ್ನೂ ಹೆಚ್ಚಿನ ತ್ಯಾಗಕ್ಕೆ, ಸರಳತೆಗೆ ಸಿದ್ಧವಾಗಿರಬೇಕು."[3] ಈ ಮಾತುಗಳು ಗಾಂಧೀಜಿಯ ಬಗೆಗೆ ಪ್ರಚಲಿತವಿರುವ ಹಲವಾರು ತಪ್ಪು ಭಾವನೆಗಳಿಗೆ ತಕ್ಕ ಉತ್ತರ ಆದೀತು. ಅವರು ಅತ್ಯಂತ ಆದರ್ಶವಾದಿಯಾದರೂ ಅವರ ಆದರ್ಶ ವ್ಯಾವ ಹಾರಿಕ ಆದರ್ಶವೆಂದು ಇದರಿಂದ ಗೊತ್ತಾಗುತ್ತದೆ. ಅವರು ತಮ್ಮನ್ನು 'ವ್ಯಾವಹಾರಿಕ ಆದರ್ಶವಾದಿ' (Practical Idealist) ಎಂದು ಕರೆದು ಕೊಂಡಿದ್ದರು. ಬ್ರಿಟನ್ನಿನ ಲಾರ್ಡ್ ಲೋದಿಯನ್ ೧೯೩೮ರಲ್ಲಿ ಸೇವಾ

---

1. ಹಿಂದ್ ಸ್ವರಾಜ್ಯ—ಪುಟ: ೧೧–೧೨
2. ಅದೇ—ಪುಟ: ೧೧
3. ಅದೇ—ಪುಟ: ೧೩

ಗ್ರಾಮಕ್ಕೆ ಬಂದಿದ್ದಾಗ, 'ಹಿಂದ್ ಸ್ವರಾಜ್ಯದ ಪ್ರತಿ ಇದ್ದರೆ ಕೊಡಿ. ಈಗ ಗಾಂಧೀಜಿ ಹೇಳುವುದೆಲ್ಲ ಅದರಲ್ಲಿ ಬೀಜರೂಪದಲ್ಲಿದೆ. ಗಾಂಧೀಜಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಈ ಚಿಕ್ಕ ಪುಸ್ತಕವನ್ನು ಎಷ್ಟು ಸಲ ಓದಿದರೂ ಸಾಲದು"[1] ಎಂಬ ಮಾತಿಗಿಂತ ಇನ್ನೇನು ಬೇಕು ಅದರ ಮಹತ್ವವನ್ನು ಅರಿಯಲು.

ಹಿಂದ್ ಸ್ವರಾಜ್ಯವನ್ನು ಬಿಟ್ಟರೆ, ಅದರ ತೂಕಕ್ಕೆ ನಿಲ್ಲುವ ಇನ್ನೊಂದು ಆಧಾರ ಗ್ರಂಥ 'ಸರ್ವೋದಯ.' ಈ ಹೆಸರನ್ನು ಗಾಂಧೀಜಿಯೇ ಇಟ್ಟರು, ಜಾನ್‌ರಸ್ಕಿನ್ನರ 'ಅಂಟು ದಿಸ್ ಲಾಸ್ಟ್' ಎಂಬ ಗ್ರಂಥವನ್ನು ಓದಿ, ಅವರೇ ಬರೆದ ಅದರ ಗುಜರಾತೀ ಅನುವಾದಕ್ಕೆ. ಈ ಪುಸ್ತಕದ ಬಗೆಗೆ ಗಾಂಧೀಜಿ ತಮ್ಮ ಆತ್ಮ ಕಥೆಯ ಭಾಗ ೪, ಅಧ್ಯಾಯ ೧೮ರಲ್ಲಿ ಉಲ್ಲೇಖಿಸಿದ್ದಾರೆ. ಅವರು ಜೋಹಾನ್ಸ್‌ಬರ್ಗಿನಿಂದ ದರ್ಬಾನಿಗೆ ೨೪ ಘಂಟೆಗಳ ರೈಲ್ವೆ ಪ್ರಯಾಣ ಮಾಡುತ್ತಿದ್ದರು. ಅವರ ಆಂಗ್ಲ ಸ್ನೇಹಿತ ಮಿ. ಎಚ್. ಎಸ್. ಎಲ್. ಪೋಲಕ್ ಪುಸ್ತಕವನ್ನು (ಅಂಟು ದಿಸ್ ಲಾಸ್ಟ್) ಅವರ ಕೈಗಿತ್ತು 'ಇದು ನಿಜವಾಗಿ ನಿಮಗೆ ಇಷ್ಟವಾಗುತ್ತದೆ' ಎಂದು ಹೇಳಿದರು. ಗಾಂಧೀಜಿ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಡಲು ಸಾಧ್ಯವೇ ಆಗಲಿಲ್ಲ. ಓದಿ ಮುಗಿಸಿದರು. ಆ ಗ್ರಂಥದಲ್ಲಿ ಅವರ ಕೆಲವು ಆಳವಾದ ನಂಬಿಕೆಗಳು ಪ್ರತಿಬಿಂಬಿತವಾಗಿದ್ದುದನ್ನು ಕಂಡರು. ಅದು ಅವರ ಜೀವನವನ್ನೇ ಪರಿವರ್ತಿಸಿಬಿಟ್ಟಿತು. ಅದು ಒಂದು ಅದ್ಭುತ ಮೋಡಿಯನ್ನೇ ಅವರ ಮೇಲೆ ಬೀರಿತು. ಅದರ ಸಿದ್ಧಾಂತಗಳನ್ನು ಅವರು ಗ್ರಹಿಸಿದ ಪರಿ ಹೀಗೆ:

೧. ವ್ಯಕ್ತಿಯ ಒಳಿತು ಸಮಾಜದ ಒಳಿತಿನಲ್ಲಿ ಅಡಗಿದೆ.

೨. ನ್ಯಾಯವಾದಿಯ ಕೆಲಸ, ನಾಯಿಂದನ ಕೆಲಸ ಎರಡಕ್ಕೂ ಸಮಾನ ಬೆಲೆ; ಏಕೆಂದರೆ ಇಬ್ಬರಿಗೂ ತಮ್ಮ ಕೆಲಸದಿಂದ ಉದರಂಭರಣ ಮಾಡುವ ಸಮಾನ ಹಕ್ಕಿದೆ.

೩. ಶ್ರಮ ಜೀವಿಯ, ಎಂದರೆ, ಕೃಷಿಕನ ಮತ್ತು ಕೈಕಸಬುದಾರನ ಜೀವನವೇ ಯೋಗ್ಯ ಜೀವನ.

---

1. ಹಿಂದ್ ಸ್ವರಾಜ್ಯ—ಪುಟ: ೧೩

ಈ ಮೂರು ಸಿದ್ಧಾಂತಗಳು ಗಾಂಧೀ ಜೀವನದ ಭವಿಷ್ಯ ದಿಕ್ಸೂಚಿ ಯಾಸವು. ಇವುಗಳ ಆಧಾರದ ಮೇಲೆ ಅವರ ಮುಂದಿನ ಎಲ್ಲ ಕ್ರಿಯೆಗಳೂ (ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ) ರೂಪಿತವಾದವು. ಅಂದಿನಿಂದ ಅವರ ಜೀವಿತದ ಕಡೆಯ ದಿನದವರೆಗೂ ಅವರು ಶ್ರಮಿಸಿದುದು ಸರ್ವೋದಯಕ್ಕಾಗಿ, ಅದಕ್ಕೆ ಅನುಗುಣವಾದ ಸಮಾಜರಚನೆಗಾಗಿ. ಈ ಸಿದ್ಧಾಂತಗಳಲ್ಲಿ ಒಂದನೆಯದು 'ಆತ್ಮವತ್ ಸರ್ವಭೂತೇಷು' ಎಂಬುದರ ರೂಪಾಂತರ; ಇದು ಆಧ್ಯಾತ್ಮಿಕ ತತ್ವ; ತ್ಯಾಗತತ್ವ. ಎರಡನೆಯದು ಆರ್ಥಿಕತತ್ವ; ಆರ್ಥಿಕಸಮಾನತೆಯ ತತ್ವ. ಮೂರನೆಯದು ಶ್ರಮಗೌರವ, ಶ್ರಮನಿಷ್ಠೆ; ಇದರ ಮೂಲದ ಮೇಲೆ ನಿಂತರೇನೇ ಸಮಾಜಕ್ಕೆ ಸುಖ; ಪರಸ್ಪರ ಸೌಹಾರ್ದ. ಜೀವನೋಪಾಯದ ಕೆಲಸ ಯಾವುದಾದರೂ ಎಲ್ಲಕ್ಕೂ ಸಮಾನ ಬೆಲೆ, ಸಮಾನ ಗೌರವ ಎಂದ ಕೂಡಲೇ, ಸಮಾಜದಲ್ಲಿ, ವ್ಯಕ್ತಿ–ವ್ಯಕ್ತಿಗಳ ಸಂಬಂಧದಲ್ಲಿ ಎಂಥ ಕ್ರಾಂತಿಕಾರಕ ಬದಲಾವಣೆಯಾದೀತು. ಯಾರನ್ನು ಕಂಡು ಯಾರಿಗೆ ಅಸೂಯೆ ಇದ್ದೀತು. ಎಲ್ಲರೂ ಶ್ರಮ ಮಾಡಿಯೇ ಅನ್ನದ ಹಕ್ಕಿಗೆ ಯೋಗ್ಯತೆ ಪಡೆದಾರು. ಇಂಥ ಆಧ್ಯಾತ್ಮಿಕ, ಆರ್ಥಿಕ ಸಮಾನತೆಯುಳ್ಳ ಸಮಾಜವನ್ನು ರಚಿಸಬೇಕೆಂಬುದೇ ಗಾಂಧೀಜಿಯ ಕನಸಾಗಿತ್ತು. ಕೇವಲ ಆರ್ಥಿಕ ಸಮಾಜವಾದವಾಗಲೀ, ಸಮತಾವಾದವಾಗಲೀ ಅವರ ಆದರ್ಶವಾಗಿರಲಿಲ್ಲ. ಕೇವಲ ರಾಜಕೀಯ ಪ್ರಜಾತಂತ್ರವೂ ಅವರ ಉದ್ದೇಶವಾಗಿರಲಿಲ್ಲ. ಆಧ್ಯಾತ್ಮದ ತಳಹದಿಯ ಮೇಲೆ ನಿಂತು ನಿಜವಾದ ಸಮಾಜವಾದವನ್ನೂ ಸಮತಾವಾದವನ್ನೂ ಪ್ರಜಾತಂತ್ರವನ್ನೂ ರೂಪಿಸಿ, ಸ್ವಾತಂತ್ರ್ಯ ಸಮತೆ–ಭ್ರಾತೃಭಾವ–ನ್ಯಾಯ ಇವುಗಳೆಲ್ಲ ಸಮಾಜದಲ್ಲಿ ಸಾಕಾರ ರೂಪ ತಾಳಬೇಕೆಂಬುದು ಅವರ ಎಲ್ಲ ಕರ್ಮಗಳ ಮೂಲ ಗುರಿಯಾಗಿತ್ತು. ನೀತಿಗೂ–ಸತ್ಯಕ್ಕೂ ಅನುಗುಣವಾದ ಅರ್ಥವ್ಯವಸ್ಥೆಯೇ ಮಾನವನಿಗೆ ನಿಜಸುಖಕೊಡುವುದೆಂದೂ ಮಾನವ ಜೀವನವೇ ನಿಜವಾದ ಸಂಪತ್ತೆಂದೂ, ಸಮಾಜದ ಸರ್ವಸುಖಕ್ಕೆ ಸಕಲ ವೃತ್ತಿಗಳವರೂ ತ್ಯಾಗ ಮಾಡುವುದರಿಂದಲೇ ಲೋಕಹಿತ ಸಾಧಿತವಾಗುವುದೆಂದೂ ಗಾಂಧೀಜಿ ಘೋಷಿಸಿದರು.

ಸರ್ವೋದಯದ ಈ ತತ್ವಗಳನ್ನು ಅನುಸರಿಸಿ, ಭಾರತಕ್ಕೆ ದೊರಕ

ಬೇಕಾದ ಸ್ವಾತಂತ್ರ್ಯ ಎಂಥದು ಎಂಬುದನ್ನು ಗಾಂಧೀಜಿ ಹೀಗೆ ವಿವರಿಸಿದರು : "ಭಾರತಕ್ಕೆ ಸ್ವರಾಜ್ಯ ಸಿಗಲೆಂಬುದೇ ಸಮಸ್ತ ಭಾರತೀಯರ ಕೂಗು. ಇದು ಉಚಿತವೇ. ಆದರೆ ಸ್ವರಾಜ್ಯ ನಮಗೆ ನೀತಿ ಮಾರ್ಗದಿಂದ ಸಿಗಬೇಕು. ಅದು ನಾಮಸೂತ್ರದ ಸ್ವರಾಜ್ಯವಾಗಿರದೆ, ವಾಸ್ತವಿಕ ಸ್ವರಾಜ್ಯವಾಗಿರಬೇಕು. ಅಂಥ ಸ್ವರಾಜ್ಯ ವಿನಾಶೀ ಮಾರ್ಗಗಳಿಂದ ಸಿಗದು. ಉದ್ಯೋಗ ಬೇಕು. ಆದರೆ ಅದು ಸರಿಯಾದ ಮಾರ್ಗದಲ್ಲಿ ಸಿಗಬೇಕು. ಭಾರತೀಯರು ಬಂಗಾರದಂಥ ಜನರಾಗಿದ್ದರು ; ಎಂದೇ ಭಾರತಭೂಮಿ ಒಮ್ಮೆ ಸ್ವರ್ಣಭೂಮಿ ಎನಿಸಿಕೊಂಡಿತ್ತು. ಭೂಮಿಯಾದರೋ ಅದೇ. ಜನ ಮಾತ್ರ ಬದಲಾಗಿದಾರೆ. ಅಂತೆಲೇ ಈ ಭೂಮಿ ಹಾಳಾಗಿ ಹೋಗಿದೆ. ಇದನ್ನು ಪುನಃ ಸ್ವರ್ಣಭೂಮಿ ಮಾಡಲು ನಮ್ಮ ಸದ್ಗುಣಗಳ ಮೂಲಕ ನಾವು ಸುವರ್ಣರೂಪಿಗಳಾಗಬೇಕು. ನಮ್ಮನ್ನು ಸುವರ್ಣರೂಪಿಗಳನ್ನಾಗಿಸಬಲ್ಲ ಪರುಸಗಲ್ಲು ಎರಡು ಅಕ್ಷರಗಳಲ್ಲಿ ಅಡಗಿದೆ. ಅದು 'ಸತ್ಯ'. ಆದಕಾರಣ ಪ್ರತಿಯೊಬ್ಬ ಭಾರತೀಯನೂ ಸತ್ಯಕ್ಕೆ ಆಗ್ರಹ ತೊಡುವುದಾದರೆ ಭಾರತಕ್ಕೆ ಕುಳಿತಲ್ಲೇ ಸ್ವರಾಜ್ಯ ಸಿಕ್ಕೀತು."[1]

ಗಾಂಧೀಜಿಯ ಕನಸಿನ ಇಂಥ ಸ್ವರಾಜ್ಯ ದೊರೆತಿದೆಯೇ ನಮಗೆ? ಸ್ವಾತಂತ್ರ್ಯವೆಂಬುದು ಬಂದಮೇಲೆ 'ಸತ್ಯ' ಎಲ್ಲಿ ಹೋಯಿತು? ರಾಷ್ಟ್ರ ಜೀವನದಲ್ಲಿ ಅದಕ್ಕೇನಾದರೂ ಸ್ಥಾನವಿದೆಯೆ? 'ಸತ್ಯಮೇವ ಜಯತೆ' ಎಂದೇನೋ ಉದ್ಘೋಷಿಸಲಾಗಿದೆ. ಆದರೆ, ಬಸವೇಶ್ವರರ ಒಂದು ವಚನ ಇಂಥ ಸ್ಥಿತಿಯನ್ನು ಕಂಡು ನುಡಿದುದೋ ಏನೋ ಅನ್ನಿಸುತ್ತದೆ :

" ಆನೆಯನೇರಿಕೊಂಡು ಹೋದಿರಿ ನೀವು
ಕುದುರೆಯನೇರಿಕೊಂಡು ಹೋದಿರಿ ನೀವು
ಕುಂಕುಮ ಕೇಸರಿಯ ಪೂಸಿಕೊಂಡು ಹೋದಿರಿ ಅಣ್ಣಾ,
'ಸತ್ಯ'ದ ನೆಲೆಯನರಿಯದೆ ಹೋದಿರಲ್ಲಾ !"

---

1. ಕನ್ನಡ ಗಾಂಧೀ ಗ್ರಂಥಮಾಲೆಯ 'ಅರ್ಥ ವಿಚಾರ' ಸಂಪುಟ: ಪುಟ ೩೧-೩೨.

'ನೀತಿ ಧರ್ಮ' ಅದರ ಹೆಸರು ಸೂಚಿಸುವಂತೆಯೇ ಧರ್ಮದ ನಿಜವಾದ ಸ್ವರೂಪವನ್ನು ತೋರಿಸುವ ಒಂದು ಹೊತ್ತಗೆ. ನೈತಿಕ ಜೀವನವೇ ಧಾರ್ಮಿಕ ಜೀವನದ ತಿರುಳು. ನೀತಿಯೆಂದರೆ, ಆಚಾರ, ಸದಾಚಾರ; ಅದಿಲ್ಲದೆಡೆ ಧರ್ಮಸಾಧನೆ ಹೇಗಾದೀತು? "ನಮ್ಮ ಬಾಳನ್ನು ನೀತಿ ಸೂತ್ರಗಳ ಪ್ರಕಾರ ನಡೆಸಿದರೆ, ಅದರ ಪ್ರಯೋಜನ. ನಡೆಸಲಾರದ ನಿಯಮ ವ್ಯರ್ಥ. ಎಷ್ಟೋ ಜನ ನೀತಿಸೂತ್ರಗಳನ್ನು ಬಾಯಿಪಾಠಮಾಡಿ, ಅದನ್ನು ಕುರಿತು ದೊಡ್ಡದಾಗಿ ಉಪನ್ಯಾಸ ಮಾಡುತ್ತಾರೆ; ಅದರಂತೆ ನಡೆಯುವ ಯೋಚನೆ ಎಳ್ಳಷ್ಟೂ ಇಲ್ಲ. ಇನ್ನು ಕೆಲವರು ಇದಾರೆ; ಅವರ ಪಾಲಿಗೆ ನೀತಿ ಸೂತ್ರಗಳೆಂದರೆ ಪರಲೋಕದಲ್ಲಿ ಆಚರಿಸಬೇಕಾದ ಧರ್ಮ. ನಿಜವಾಗಿ ನೋಡಿದರೆ, ನೀತಿ ನಿಯಮಗಳಿಗೆ ವಿಧೇಯನಾಗಿ ನಡೆಯದವನು ಪೂರ್ಣಾರ್ಥದಲ್ಲಿ ಮನುಷ್ಯನೇ ಅಲ್ಲ. ಎಷ್ಟೇ ಕಷ್ಟಬರಲಿ, ನಷ್ಟವಾಗಲಿ ಸತ್ಯಶೀಲಗಳಲ್ಲೇ ಸುಖವನ್ನು ಅನುಭವಿಸುವಂತೆ ಆಗಬೇಕು."[1]

ವೈಯಕ್ತಿಕ ಜೀವನದಲ್ಲಿ, ವೃತ್ತಿಜೀವನದಲ್ಲಿ, ಸಾರ್ವಜನಿಕ ಜೀವನದಲ್ಲಿ ಎಲ್ಲದರಲ್ಲಿಯೂ ನೀತಿನೆಲೆ ನಿಂತರೇನೇ ಧರ್ಮ ಸಾಧನೆಯಾದೀತು. ನೀತಿಯ ಅನುಸರಣೆಯಿಂದ ಸ್ವಹಿತವೂ ಲೋಕಹಿತವೂ ಎರಡೂ ಏಕಕಾಲದಲ್ಲಿ ಆಗಲು ಸಾಧ್ಯ. ಗಾಂಧೀಜಿಯ ಈ ಮಾತು ಎಷ್ಟು ಸ್ಪಷ್ಟ ಹಾಗೂ ಸಂದಿಗ್ಧರಹಿತ: "ಮನುಷ್ಯರ ಕೆಲಸವನ್ನು ಪರಿಶೀಲಿಸಿ ಬೆಲೆಗಟ್ಟಬೇಕಾದರೆ ಲೋಕಹಿತಕ್ಕೆ ಅದು ಸಾಧನವೇ ಅಲ್ಲವೇ ಎಂದು ನೋಡಬೇಕು; ಅದು ಒರೆಗಲ್ಲು. ಗಿರಾಕಿಗಳನ್ನು ಹಿಂಡಿಹಾಕಿ ವರ್ತಕ ಲಾಭ ಸೆಳೆಯಬಾರದು. ತಮ್ಮ ಸಂಪಾದನೆಗಿಂತ ಕಕ್ಷಿಗಾರರ ಹಿತವೇ ಮುಖ್ಯವಾಗಬೇಕು ವಕೀಲರಿಗೆ, ವೈದ್ಯರಿಗೆ. ದುರಭಿಮಾನದಿಂದ ಮಿಥ್ಯಾ ವ್ಯಾಮೋಹದಿಂದ ಮಗು ಬಾಧೆ ಪಡದಂತೆ ತಾಯಿ ನೋಡಿಕೊಳ್ಳಬೇಕು. ಅನ್ಯಾಯಮಾಡಿ ಹಣ ಸಂಪಾದಿಸಿದ ಬುದ್ಧಿವಂತ ವಕೀಲ, ವೈದ್ಯ ಇವರಿಗಿಂತ ನಿರಕ್ಷರಕುಕ್ಷಿಯಾದ ಸಾಮಾನ್ಯ ಕೆಲಸ

---

1. ಕನ್ನಡ ಗಾಂಧೀ ಗ್ರಂಥ ಮಾಲೆಯ 'ಧರ್ಮ–ನೀತಿ' ಸಂಪುಟ: ಪುಟ ೧೫೧

ಗಾರನೇ ಶ್ರೇಷ್ಠ. ಈ ಸೂತ್ರಗಳನ್ನು ನಮ್ಮ ನಮ್ಮ ಬಾಳಿನಲ್ಲಿ ಅನುಸರಿಸಲು ನಮ್ಮಲ್ಲಿ ಕ್ಷುದ್ರಾತಿಕ್ಷುದ್ರರಿಗೂ ಸಾಧ್ಯವೆಂಬುದನ್ನು ಮರೆಯಬಾರದು."[1]

ಇನ್ನುಳಿದ ಗ್ರಂಥಗಳಲ್ಲಿ, 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ', ದಕ್ಷಿಣ ಆಫ್ರಿಕಾದಲ್ಲಿ ನಡೆದ ಸತ್ಯಾಗ್ರಹದ ಇತಿಹಾಸ. ಟಾಲ್‌ಸ್ಟಾಯಿ ಮತ್ತು ಥೋರೋ ಇವರುಗಳ ಗ್ರಂಥ ವ್ಯಾಸಂಗವೂ ಗಾಂಧೀಜಿಯ ಮೇಲೆ ಪ್ರಭಾವ ಬೀರಿದ್ದವು. ಟಾಲ್‌ಸ್ಟಾಯಿ ಗಾಂಧೀಜಿಗೆ ಪೂಜ್ಯರಾಗಿದ್ದರು. ಅವರ 'ದೇವರ ರಾಜ್ಯ ನಿನ್ನಲ್ಲಿಯೇ ಇದೆ' (The Kingdom of God is within you) ಎಂಬ ಗ್ರಂಥವೂ 'ಕಲೆಯೆಂದರೇನು?' (What is Art?) ಎಂಬ ಗ್ರಂಥವೂ ರಸ್ಕಿನ್ನನ ಗ್ರಂಥದಂತೆಯೇ ಪ್ರಭಾವ ಬೀರಿದ್ದುವು. ಥೋರೋನ 'ಸವಿನಯ ಶಾಸನೋಲ್ಲಂಘನ' (Civil Disobedience) ಎಂಬ ಗ್ರಂಥವನ್ನು ದಕ್ಷಿಣ ಆಫ್ರಿಕಾದಲ್ಲಿ ಸೆರೆಮನೆಯಲ್ಲಿದ್ದಾಗ ಅವರು ಓದಿದ್ದರು. ತಾವು ಕೈಗೊಂಡಿದ್ದ 'ಸವಿನಯ ಪ್ರತೀಕಾರ'ದ (Passive Resistance) ಹೋರಾಟ ವಿಧಾನವು ಅನ್ಯಾಯ-ದಬ್ಬಾಳಿಕೆಗಳನ್ನು ಇದಿರಿಸಲು, ದುಷ್ಟಪದ್ಧತಿಯನ್ನು ಪರಿಹರಿಸಲು ನೀತಿಗೂ ಧರ್ಮಕ್ಕೂ ಸಮ್ಮತವಾದುದೆಂದು ಅವರು ಮನಗಂಡಿದ್ದರು. ಎದುರಾಳಿಕೊಡುವ ಕಿರುಕುಳವನ್ನು ಹರ್ಷದಿಂದಲೇ ಸ್ವಾಗತಿಸಿ, ಅವನನ್ನೂ ಪರಿವರ್ತಿಸಬೇಕೆಂಬುದು ಸತ್ಯಾಗ್ರಹದ ವೈಶಿಷ್ಟ್ಯ. ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ, ನೂರಾರು ಸ್ತ್ರೀಯರು–ಪುರುಷರು-ಮಕ್ಕಳು ಭಾಗವಹಿಸಿದ್ದರು; ಶಾಸನೋಲ್ಲಂಘನ ಮಾಡಿ ಸೆರೆಮನೆವಾಸ ಅನುಭವಿಸಿದರು. ಅಂತಿಮ ಜಯ ಧರ್ಮಕ್ಕೆ, ಪ್ರೇಮಕ್ಕೆ, ಸತ್ಯಕ್ಕೆ ಎಂಬುದಕ್ಕೆ ಅದು ನಿದರ್ಶನ. ಪ್ರಧಾನಿ ಜನರಲ್ ಸ್ಮಟ್ಸ್ ಸತ್ಯಾಗ್ರಹದ ಸತ್ಯವನ್ನು, ಆತ್ಮಶಕ್ತಿಯ ಪ್ರಭಾವವನ್ನು ಒಪ್ಪಿಕೊಂಡನು. ಅದಕ್ಕೆ ಮಣಿದನು. ಇದರಿಂದ, ಮುಂದೆ ಗಾಂಧೀಜಿ ಭಾರತದ ಕೋಟಿ ಕೋಟಿ ಜನರ ಭವಿಷ್ಯ ನಿರ್ಧರಿಸಲು, ಸ್ವಾತಂತ್ರ್ಯ-ಸ್ವರಾಜ್ಯ ಸಂಪಾದಿಸಲು, ಅಹಿಂಸಕ ಸಮರವನ್ನು ಹೂಡಿ ನಡೆಸಲು ನಂಬಿಕೆ ಮತ್ತು ನಿಶ್ಚಲ ಭಾವವನ್ನು ಪಡೆದುಕೊಂಡರು.

'ಆರೋಗ್ಯ ಮಾರ್ಗದರ್ಶಿನೀ': ಸ್ತ್ರೀಪುರುಷರು ಆರೋಗ್ಯವನ್ನು

---

1. ಕನ್ನಡ ಗಾಂಧೀ ಗ್ರಂಥ ಮಾಲೆಯ 'ಧರ್ಮ-ನೀತಿ' ಸಂಪುಟ: ಪುಟ ೧೬೪

ಕಾಪಾಡಿಕೊಂಡು, ಆರೋಗದೃಢಕಾಯರಾಗಿ ಬಾಳಲು ಅನುಸರಿಸಬೇಕಾದ ನಿಯಮಗಳನ್ನು ಈ ಪುಸ್ತಕ ತಿಳಿಸುತ್ತದೆ. ಇವು ಗಾಂಧೀಜಿ ಸ್ವತಃ ಮಾಡಿದ ಪ್ರಯೋಗಗಳ ಫಲ. ಮಾನವ ವ್ಯಕ್ತಿ, ಗಾಳಿ, ಬೆಳಕು, ನೀರು, ಮೃತ್ತಿಕೆ ಇತ್ಯಾದಿ ಪಂಚಭೂತಗಳ—ಪ್ರಕೃತಿಯ-ಉಪಯೋಗದಿಂದಲೇ ರೋಗಗಳಿಂದ ಪಾರಾಗಬಹುದೆಂದು ಅರಿತುಕೊಳ್ಳಬಹುದು. ಪ್ರಕೃತಿಯಿಂದ ದೂರವಾಗಿ ಕೃತಕ ಜೀವನ ನಡೆಸಿದಂತೆಲ್ಲ ರೋಗರುಜಿನಗಳು ಹೆಚ್ಚುವುದು ಸಹಜ. ಇದಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಮಾಡಿದ ಪ್ರಯೋಗಗಳ ಅನುಭವ ಅಮೂಲ್ಯವಾದುದು. ಈ ಅನುಭವಸಾರವನ್ನು ಅವರು ಈ ಪುಟ್ಟ ಪುಸ್ತಕದಲ್ಲಿ ಕೊಟ್ಟಿದ್ದಾರೆ.

'ಮಂಗಳ ಪ್ರಭಾತ': ಇದು ಆಶ್ರಮ ವ್ರತಗಳ ವಿವರಣೆಯನ್ನು ಕೊಡುತ್ತದೆ. ಅಹಿಂಸಾ ಇತ್ಯಾದಿ ಏಕಾದಶ ವ್ರತಗಳನ್ನು ವ್ಯಕ್ತಿ ನಮ್ರತೆಯಿಂದ ಆಚರಿಸಿದರೆ, ಸಮಾಜಕ್ಕೆ ಮಂಗಳವಾಗುತ್ತದೆಂದು ಇದರ ತಾತ್ಪರ್ಯ. ಇದನ್ನು ಎಲ್ಲ ನಿರ್ಮಾಣ ಕಾರ್ಯಕರ್ತರೂ ಜೀವನ ನಿಯಮಗಳನ್ನಾಗಿ ನಿಷ್ಠೆಯಿಂದ ಆಚರಿಸಬೇಕೆಂದು ಗಾಂಧೀಜಿಯ ಆಶಯವಾಗಿತ್ತು.

ಗಾಂಧೀಜಿ ೧೯೩೦ರಲ್ಲಿ ಯರವಾಡಾ ಸೆರೆಮನೆಯಲ್ಲಿದ್ದಾಗ, ಪ್ರತಿವಾರವೂ ಸಾಬರಮತಿಯ ಸತ್ಯಾಗ್ರಹಾಶ್ರಮದ ಕಾರ್ಯಕರ್ತರಿಗೆ ಆಶ್ರಮದ ವ್ರತಗಳ ಬಗೆಗೆ ಗುಜರಾತೀ ಭಾಷೆಯಲ್ಲಿ ಪತ್ರಗಳನ್ನು ಬರೆಯುತ್ತಿದ್ದರು. ವಾಲ್ಜೀ ಗೋವಿಂದಜೀ ದೇಸಾಯಿ ಎನ್ನುವವರು ಇದನ್ನು ಇಂಗ್ಲಿಷಿಗೆ ಭಾಷಾಂತರಿಸಿದರು. (Ashram Observances in Action) ಈ ಪತ್ರಗಳ ಸಂಕಲನವೇ ಮಂಗಳ ಪ್ರಭಾತ. ಇದು ಕಾರ್ಯಕರ್ತರಿಗೆ ಒಂದು ಕೈಪಿಡಿಯಂತಿದೆ ಎನ್ನಬಹುದು. ಇದರಲ್ಲಿ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಆಸ್ವಾದ, ಅಸ್ತೇಯ, ಅಪರಿಗ್ರಹ, ಅಭಯ, ಅಸ್ಪೃಶ್ಯತಾ ನಿವಾರಣೆ, ಶರೀರಶ್ರಮ, ಸರ್ವಧರ್ಮ ಸಮಭಾವ, ಸ್ವದೇಶೀ ನಮ್ರತೆ ಇವುಗಳ ಬಗೆಗೂ, "ವ್ರತಗಳ ಆವಶ್ಯಕತೆ" ಮತ್ತು 'ಯಜ್ಞ' ಇವುಗಳ ಬಗೆಗೂ ಸರಳವಾದ ವ್ಯಾಖ್ಯಾನವಿದೆ. ಒಂದೊಂದು ವಿಷಯಕ್ಕೂ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ವೈಚಾರಿಕ ದೃಷ್ಟಿಯಿಂದ ವಿವರಿಸಲಾಗಿದೆ. ಈ ವಿವರಣೆ ವ್ಯವಹಾರ ಜೀವನಕ್ಕೆ ಅನ್ವಯಿಸುವಂತೆ ಇದೆ. ಈ ವ್ರತಗಳ ಶ್ಲೋಕವನ್ನು ದಿನವೂ

ಬೈಗು-ಬೆಳಗು ಆಶ್ರಮದ ಕಾರ್ಯಕರ್ತರು ಪ್ರಾರ್ಥನಾ ಸಮಯದಲ್ಲಿ ಸ್ಮರಣೆ ಮಾಡುವ ರೂಢಿಯಿತ್ತು. ಆ ಶ್ಲೋಕ ಈ ರೀತಿ ಇದೆ:

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹ |
ಶರೀರಶ್ರಮ ಅಸ್ವಾದ ಸರ್ವತ್ರ ಭಯವರ್ಜನ ||
ಸರ್ವಧರ್ಮೀ ಸಮಾನತ್ವ ಸ್ವದೇಶೀ ಸ್ಪರ್ಶಭಾವನಾ |
ಹೀ ಏಕಾದಶ ಸೇವಾವೀ ನಮ್ರತ್ವೇ ವ್ರತನಿಶ್ಚಯೇ ||

ಈ ವ್ರತಗಳಲ್ಲಿ ಅಹಿಂಸಾ, ಅಸ್ತೇಯ, ಅಸಂಗ್ರಹ, ಅಸ್ವಾದ ಇವು ನಿಷೇಧಾರ್ಥಕ ರೂಪದಲ್ಲಿವೆ. ಆದರೂ ಅವೆಲ್ಲ ಪ್ರವೃತ್ತಿಯ ರೂಪವನ್ನೇ ಹೊಂದಿರುತ್ತವೆ. ಅವೆಲ್ಲ ಸಕ್ರಿಯ ರೂಪದಿಂದ ಕೂಡಿವೆ. ಅಹಿಂಸೆಯೆಂದರೆ ದುಃಖವನ್ನು ಸೈರಿಸಬೇಕಾದ ಶಕ್ತಿ; ಇದಕ್ಕಾಗಿ ಕೊನೆಯಿಲ್ಲದ ತಾಳ್ಮೆಯನ್ನು ಅಭ್ಯಸಿಸಬೇಕು. ಗಾಂಧೀಜಿ ಇದನ್ನು 'ಪರಮ ಪ್ರೇಮ' (Largest Love) ಎಂದು ವಿವರಿಸಿದ್ದಾರೆ.

ಸ್ವಾದವೆಂದರೆ ರುಚಿ. ಅದನ್ನು ಭೋಗಿಸದಿರುವುದೇ ಅಸ್ವಾದ. 'ಬರಿಯ ರುಚಿಗಾಗಿ ಏನನ್ನಾದರೂ ಸವಿಯುವುದು ವ್ರತಭಂಗ.' ಇದು ಔಷಧಿಯಂತೆ. ಅದನ್ನು ಸೇವಿಸುವಾಗ ರುಚಿ ನೋಡುತ್ತೇವೆಯೆ? 'ನಾಲಗೆ ನಂಬಿ ನರ ಕೆಟ್ಟ; ಹೊಟ್ಟೆ ನಿನ್ನಿಂದ ನಾ ಕೆಟ್ಟೆ' ಎಂಬ ಗಾದೆಗಳ ಅರ್ಥವೇ ಇದು.

ಅಸ್ತೇಯವೆಂದರೆ ಕದಿಯದಿರುವುದು. ಅನೇಕ ಕಳ್ಳತನಗಳಿಗೆ ಭವಿಷ್ಯದ ಆಸೆಯೇ ಮೂಲವೆನ್ನಬಹುದು. ವಸ್ತುಗಳ ಕಳ್ಳತನವಿದ್ದಂತೆ ವಿಚಾರಗಳ ಕಳ್ಳತನವೂ ಆಗಬಹುದು. ಈ ವ್ರತವನ್ನು ಪಾಲಿಸುವವರು 'ಬಹಳ ನಮ್ರ, ಬಹಳ ವಿಚಾರಶೀಲ, ಬಹಳ ಸಾವಧಾನಿ, ಬಹಳ ಸರಳ ಆಗಿರಬೇಕು' ಎನ್ನುತ್ತಾರೆ ಗಾಂಧೀಜಿ.

ಅಸಂಗ್ರಹ, ಅಪರಿಗ್ರಹ ಈ ಎರಡೂ ಒಂದೇ. 'ಪರಿಗ್ರಹ' ಎಂದರೆ ನಾಳಿನ ಯೋಚನೆಯಿಂದ ಕೂಡಿಡುವುದು. ಈ ಯೋಚನೆಯಿಂದಲೇ, ಇದಕ್ಕನುಗುಣವಾದ ಕ್ರಿಯೆಯಿಂದಲೇ ಅಭಾವವುಂಟಾಗಿ ಜನತೆಗೆ ದುಃಖಕ್ಕೆ ಕಾರಣವಾಗುತ್ತದೆ. 'ಪ್ರತಿಯೊಬ್ಬನೂ ತನಗೆಷ್ಟು ಬೇಕೋ ಅಷ್ಟನ್ನೇ

ಸಂಗ್ರಹಿಸಿದರೆ ಯಾರಿಗೂ ಕೊರತೆಯಾಗದು.' ಈ ವ್ರತವನ್ನು ಅನುಸರಿಸ ಬೇಕಾದವನು ಶ್ರೀಮಂತ. ಅವನು ವಿಚಾರಪೂರ್ವಕವಾಗಿ, ಇಚ್ಛಾ ಪೂರ್ವಕವಾಗಿ, ಅಗತ್ಯಗಳನ್ನು ತಗ್ಗಿಸಿಕೊಳ್ಳಬೇಕು. 'ಅನಾವಶ್ಯಕ ಸಂಗ್ರಹ ದಿಂದ ನಮ್ಮ ನೆರೆಹೊರೆಯವರಿಗೆ ಕಳ್ಳತನ ಮಾಡುವ ಬುದ್ಧಿಯನ್ನು ಹುಟ್ಟಿಸು ತ್ತೇವೆ. ಅಭ್ಯಾಸದಿಂದ ಮನುಷ್ಯ ತನ್ನ ಅಗತ್ಯಗಳನ್ನು ತಗ್ಗಿಸಬಲ್ಲ; ತಗ್ಗಿಸಿ ದಷ್ಟೂ ಆವನಿಗೆ ಸುಖ-ಶಾಂತಿ ಲಭಿಸುತ್ತದೆ.' ಈ ತತ್ವವೇ ಗಾಂಧೀಜಿಯ ಧರ್ಮದರ್ಶೀ ಸಿದ್ಧಾಂತ. ಇದನ್ನು ಮುಂದೆ ವಿವರಿಸಲಾಗಿದೆ.

ಇನ್ನುಳಿದ ವ್ರತಗಳಾದ ಬ್ರಹ್ಮಚರ್ಯ, ಶರೀರಶ್ರಮ, ನಿರ್ಭಯತೆ, ಸರ್ವಧರ್ಮ ಸಮಭಾವ, ಸ್ವದೇಶಿ, ಅಸ್ಪೃಶ್ಯತಾ ನಿವಾರಣೆ, ಇತ್ಯಾದಿ ಗಳನ್ನೂ ಸತ್ಯವ್ರತಿಯಾದವನು ಪಾಲಿಸಲೇಬೇಕು.

ವ್ಯಕ್ತಿ ಈ ವ್ರತಗಳನ್ನು ತನ್ನ ಜೀವನದಲ್ಲಿ ನಿಷ್ಠೆಯಿಂದ ಪಾಲಿಸ ಬೇಕಲ್ಲದೆ, ಸಾಮಾಜಿಕ ವ್ರತಗಳನ್ನಾಗಿಯೂ ಸ್ವೀಕರಿಸಬೇಕು.

ಗಾಂಧೀಜಿ ತಮ್ಮ ಜೀವನವನ್ನು ಸತ್ಯಶೋಧನೆಗೆ ನಿವೇದಿಸಿಕೊಂಡುದು ಮತ್ತು ಅದಕ್ಕೆ ಅನುಗುಣವಾಗಿ ವಿಜ್ಞಾನಿಯಂತೆ ಪ್ರಯೋಗ ಪರೀಕ್ಷೆಗಳನ್ನು ನಡೆಸಿದುದೂ ಅವರ 'ಆತ್ಮಕಥೆ'ಯಲ್ಲಿ ನಿರೂಪಿತವಾಗಿದೆ. 'ನನ್ನನ್ನು ಪರೀಕ್ಷಿಸಿಕೊಳ್ಳುವಾಗ ಸತ್ಯದಷ್ಟೇ ನಿಷ್ಠುರವಾಗಿರಲು ಯತ್ನಿಸುತ್ತೇನೆ. ಇತರರೂ ಹಾಗೆಯೇ ನಡೆಯಬೇಕೆಂದು ಆಶಿಸುತ್ತೇನೆ' ಎಂಬ ಅವರ ಮಾತು ಅತ್ಯಂತ ಮುಖ್ಯವಾದುದು. ಸತ್ಯವು ವಜ್ರಕ್ಕಿಂತ ಕಠಿಣ ಕುಸುಮಕ್ಕಿಂತ ಮೃದು ಅಲ್ಲವೆ? ಆತ್ಮಕಥೆ ಗಾಂಧೀಜಿಯ ಜೀವನದ ತೆರದಿಟ್ಟ ಪುಸ್ತಕ ದಂತಿದೆ. ಅವರು ತಮ್ಮ ನ್ಯೂನತೆಗಳನ್ನು ಮುಸುಕಿನಲ್ಲಿ, ಮುಚ್ಚುಮರೆಯಲ್ಲಿ ಬಚ್ಚಿಡುವ ಪ್ರಯತ್ನ ಮಾಡದೆ, ಎಲ್ಲವನ್ನೂ ಕಠೋರ ಸತ್ಯದ ಬೆಳಕಿನಲ್ಲಿ ಪ್ರಾಮಾಣಿಕ ವಿಮರ್ಶೆಗೆ ಗುರಿಪಡಿಸಿಕೊಂಡಿದ್ದಾರೆ.

ಗಾಂಧೀಜಿಯ ಬದುಕು ಸಾತ್ವಿಕ ಸಂತನ ಬದುಕು. ಅವರು—"ನಾನು ರಾಜಕಾರಣಿಯಲ್ಲ, ಒಬ್ಬ ಮುಮುಕ್ಷು, ಈಶ್ವರ ಸಾನ್ನಿಧ್ಯವೆಂಬ ಮೋಕ್ಷ ವನ್ನು ಅರಸುವ ಪ್ರಯತ್ನದಲ್ಲಿ ರಾಜಕೀಯಕ್ಕೂ ಇಳಿಯಬೇಕಾಯಿತು"[1]

---

1. ಆತ್ಮಕಥೆ: ಮುನ್ನುಡಿ.

ಎಂದಿದ್ದಾರೆ. ತಮ್ಮ ಪ್ರಯೋಗಗಳನ್ನು ವಿಜ್ಞಾನಿಯೊಬ್ಬನ ಪ್ರಯೋಗಗಳಿಗೆ ಹೋಲಿಸಿಕೊಂಡಿದ್ದಾರೆ. ಯಾವ ರೀತಿಯಲ್ಲಿಯೂ ಯಾವುದೂ ಎಂದಿಗೂ ಪೂರ್ಣವೆಂದು ಹೇಳಿಕೊಳ್ಳುವ ಅಹಂಭಾವ ಅವರಲ್ಲಿ ಇರಲಿಲ್ಲ. "ವಿಜ್ಞಾನಿಯೊಬ್ಬ ತನ್ನ ಪ್ರಯೋಗಗಳ ವಿಷಯದಲ್ಲಿ ಹೇಳುವುದಕ್ಕಿಂತ ಹೆಚ್ಚಾಗಿ ನಾನೂ ನನ್ನ ಪ್ರಯೋಗಗಳ ವಿಷಯದಲ್ಲಿ ಏನನ್ನೂ ಹೇಳಿಕೊಳ್ಳಲಾರೆ. ಅವನು ತನ್ನ ಪ್ರಯೋಗಗಳನ್ನು ಅತ್ಯಂತ ಎಚ್ಚರಿಕೆಯಿಂದ, ಮುಂದಾಲೋಚನೆ ಮತ್ತು ಸೂಕ್ಷ್ಮ ವಿಧಾನಗಳಿಂದ ನಡೆಸಿದರೂ ತನ್ನ ತೀರ್ಮಾನಗಳೇ ಕೊನೆಯ ನಿರ್ಧಾರಗಳೆಂದು ಎಂದಿಗೂ ಹೇಳದೆ, ಅವುಗಳ ವಿಷಯದಲ್ಲಿ ತೆರೆದ ಮನಸ್ಸುಳ್ಳವನಾಗಿರುತ್ತಾನೆ. ನಾನು ತೀವ್ರವಾದ ಆತ್ಮಶೋಧನೆಯನ್ನು ಮಾಡಿಕೊಂಡಿದ್ದೇನೆ; ಪ್ರತಿಯೊಂದು ಮಾನಸಿಕ ಪರಿಸ್ಥಿತಿಯನ್ನೂ ಪರೀಕ್ಷಿಸಿ ವಿಮರ್ಶೆ ಮಾಡಿದ್ದೇನೆ. ಆದರೂ ಸಹ ನನ್ನ ಪ್ರಯೋಗಗಳು ಕೊನೆಯ ತೀರ್ಮಾನಗಳೆಂದಾಗಲೀ ನಿರ್ದೋಷವಾದುವೆಂದಾಗಲೀ ನಾನು ಹೇಳುವುದಿಲ್ಲ. ಒಂದು ವಿಷಯವನ್ನು ಮಾತ್ರ ಹೇಳಬಯಸುತ್ತೇನೆ. ನನ್ನ ಮಟ್ಟಿಗೆ ಅವು ಕೇವಲ ಸರಿಯೆಂದು ತೋರುತ್ತಿವೆ. ತಾತ್ಕಾಲಿಕವಾಗಿ ಅಂತ್ಯ ನಿರ್ಧಾರಗಳಾಗಿಯೂ ಕಾಣುತ್ತಿವೆ. ಅವು ಆ ರೀತಿ ಇರದಿದ್ದರೆ ನಾನು ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಆದರೆ ಹೆಜ್ಜೆಹೆಜ್ಜೆಗೂ ಯಾವುದು ಗ್ರಾಹ್ಯ, ಯಾವುದು ತ್ಯಾಜ್ಯ ಎಂದು ಪರೀಕ್ಷೆ ಮಾಡಿ ಅದಕ್ಕನುಸಾರವಾಗಿ ನಡೆಯುತ್ತಿದ್ದೇನೆ."[1]

ಆತ್ಮಕಥೆ ಈ ಬಗೆಯ ಗುಣಗಳಿಂದ ಕೂಡಿದ್ದುದರಿಂದ, ಜಗತ್ತಿನ ಅತ್ಯಂತ ಶ್ರೇಷ್ಠ ಆತ್ಮಕಥೆಗಳ ಶ್ರೇಣಿಯಲ್ಲಿ ಅದು ಸ್ಥಾನ ಗಳಿಸಿಕೊಂಡಿದೆ. ಟಾಲ್‌ಸ್ಟಾಯಿ ಮತ್ತು ರೂಸೋ ಇವರುಗಳ ಆತ್ಮಕಥೆಗಳಂತೆ ಗಣ್ಯ ಸಾಹಿತ್ಯವೆನಿಸಿಕೊಂಡಿದೆ.

ಗಾಂಧೀಜಿ ಆತ್ಮಕಥೆಯನ್ನು ನವಜೀವನ ಪತ್ರಿಕೆಯಲ್ಲಿ ಪ್ರತಿವಾರವೂ ಧಾರಾವಾಹಿಯಾಗಿ ಬರೆದರು. ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹವನ್ನು

---

1. ಆತ್ಮಕಥೆ: ಮುನ್ನುಡಿ.

ಬರೆದು ಮುಗಿಸಿದ ತರುವಾಯ ಇದನ್ನು ಆರಂಭಮಾಡಿದರು, ಕೆಲವರು ಗೆಳೆಯರ ಒತ್ತಾಯಕ್ಕೆ ಮಣಿದು. ತಮ್ಮ ಜೀವನದ ಬಗೆಗೇ ಅವರು ಹೇಳಿ ಕೊಳ್ಳಬೇಕಾಗಿದ್ದುದರಿಂದ, ದೋಷಗಳನ್ನು ಮುಚ್ಚಿಡದೆ, ಎಲ್ಲವನ್ನೂ ಯಥಾವತ್ತಾಗಿ ಚಿತ್ರಿಸಿದರು. "ನನ್ನಂಥ ನೂರಾರು ಜನ ನಾಶವಾಗಲಿ. ಆದರೆ ಸತ್ಯಮಾತ್ರ ನಿಲ್ಲಲಿ. ತಪ್ಪು ಮಾಡಬಹುದಾದ ನನ್ನಂಥ ಮರ್ತ್ಯರನ್ನು ಅಳೆಯುವಾಗ ಸತ್ಯದ ಆದರ್ಶವನ್ನು ಕೂದಲೆಳೆಯಷ್ಟೂ ತಗ್ಗಿಸುವುದು ಬೇಡ."[1] ಇಂಥ ಮನೋವೃತ್ತಿಯಿಂದ ಅವರು ತಮ್ಮ ಆತ್ಮಕಥೆಯನ್ನು ಬರೆದರು. ಅದು ಗಾಂಧೀಜಿಯ ಬರೆಹಗಳ ಪೈಕಿ ಎಂದೆಂದಿಗೂ ಶಿಖರ ಪ್ರಾಯವಾಗಿ ನಿಲ್ಲುವಂಥದು. ಜಗತ್ತಿನ ರಸಸಾಹಿತ್ಯ ಕ್ಷೇತ್ರದಲ್ಲಿ ಅದಕ್ಕೊಂದು ಶಾಶ್ವತ ಸ್ಥಾನ ಮೀಸಲಿದೆಯೆಂದರೆ, ಸಾಹಿತ್ಯಜ್ಞರು ಅಂಗೀಕರಿಸುವ ಮಾತು. ಗಾಂಧೀಜಿಯಂತೆಯೇ ಹಂತಕನ ಗುಂಡಿಗೆ ಬಲಿಯಾದ ಅಮೆರಿಕಾದ ಸಂಯುಕ್ತ ಸಂಸ್ಥಾನಗಳ 'ನೀಗ್ರೋ ಗಾಂಧೀ' ಎನಿಸಿಕೊಂಡ ಮಾರ್ಟಿನ್ ಲೂದರ್ ಕಿಂಗ್ ಈ ಆತ್ಮಕಥೆ ಓದಿ, ಸ್ಫೂರ್ತಿ ಗಳಿಸಿಕೊಂಡೆನೆಂದು ಹೇಳಿ ಕೊಂಡಿದ್ದಾನೆ. ಈ ಗ್ರಂಥ ಹೀಗೆಯೇ ಇನ್ನೆಷ್ಟು ಮಂದಿಗೆ ಸ್ಫೂರ್ತಿ ನೀಡಿದೆಯೋ !

'ಅನಾಸಕ್ತಿಯೋಗ' ಭಗವದ್ಗೀತೆಯ ಬಗೆಗೆ ಗಾಂಧೀಜಿ ಬರೆದ ಸರಳ, ಸುಂದರ ವ್ಯಾಖ್ಯಾನ. ಮಾನವನು ಮಾಡುವ ಸಮಸ್ತ ಕರ್ಮಗಳೂ ಸಮಾಜಾರ್ಪಣೆಯ ಬುದ್ಧಿಯಿಂದ, ಈಶ್ವರಾರ್ಪಣೆಯ ಬುದ್ಧಿಯಿಂದ ಮಾಡಲ್ಪಡಬೇಕೆಂದು ಇದರ ತಾತ್ಪರ್ಯ; ಫಲದ ವಿಷಯಕ್ಕೇ ಸದಾ ಹಂಬಲಿಸಬಾರದು. 'ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬುದು ಭಗವಂತನ ವಾಣಿ. ಗಾಂಧೀಜಿ ಈ ದೃಷ್ಟಿಯಿಂದಲೇ ಸಕಲ ಕರ್ಮಗಳನ್ನೂ ಮಾಡಿದರು. ರಾಷ್ಟ್ರಕಾರ್ಯಗಳೂ ಈ ಮನೋಧರ್ಮ ದಿಂದಲೇ ನಡೆಯುವುದು ಅಗತ್ಯವೆಂದು ಅವರ ನೆಚ್ಚುಗೆಯಾಗಿತ್ತು. ಗಾಂಧೀ ಜಿಯ ಇಡಿಯ ಬಾಳು 'ಗೀತೆಯ ಮೇಲಿನ ಜೀವಂತ ವ್ಯಾಖ್ಯಾನ'ದಂತಿದೆ.

1. ಆತ್ಮಕಥೆ: ಮುನ್ನುಡಿ

ಅವರು ಗೀತೆಯನ್ನು 'ಗೀತಾಮಾತೆ' ಎಂದು ಕರೆದರು. ಆ ಕರುಣಾಳು ತಾಯಿಯ ಕೃಪೆಯಿಂದಲೇ ಅವರು ದಿನದಿನಕ್ಕೂ ಸತ್ಯದ ಗುರಿಯೆಡೆಗೆ ಸಾಗಿದರು. ಅವರ ಜೀವನದಲ್ಲಿ ಮಹಾ ಸಮಸ್ಯೆಗಳು ಇದಿರಿಗೆ ಬಂದಾಗ, ಗೀತಾಮಾತೆ ಅವರಿಗೆ ಹಡೆದ ತಾಯಿಗಿಂತ ಹೆಚ್ಚಾಗಿ ಸಾಂತ್ವನ ನೀಡುತ್ತಿದ್ದಳು. ಅವರಿಗೆ ಮನಸ್ಸಿನ ಸಮಾಧಾನ ದೊರಕುತ್ತಿತ್ತು.

'ಅನಾಸಕ್ತಿ'ಗೆ ಇನ್ನೊಂದು ಹೆಸರು 'ಫಲತ್ಯಾಗ'; ಎಂದರೆ, ಫಲದ ಬಗೆಗೆ ಹಂಬಲದ ತ್ಯಾಗ. ಇದರ ಬಗೆಗೆ ಗಾಂಧೀಜಿಯ ಮಾತುಗಳು ಸದಾ ವಿಚಾರಾರ್ಹ: "ಸಾಮಾನ್ಯವಾಗಿ ಜನರಿಗೆ ಧರ್ಮ–ಅರ್ಥಗಳು ಪರಸ್ಪರ ವಿರುದ್ಧ ವಸ್ತುಗಳು. ವ್ಯಾಪಾರಾದಿ ಲೌಕಿಕ ವ್ಯವಹಾರಗಳಲ್ಲಿ ಧರ್ಮವನ್ನು ಕಾಪಾಡಿಕೊಳ್ಳಲು ಆಗುವುದಿಲ್ಲ, ಅಲ್ಲಿ ಧರ್ಮಕ್ಕೆ ಸ್ಥಾನವೇ ಇಲ್ಲ; ಧರ್ಮ ಕೇವಲ ಮೋಕ್ಷಕ್ಕಾಗಿ; ಧರ್ಮದ ಸ್ಥಾನದಲ್ಲಿ ಧರ್ಮ, ಅರ್ಥದ ಸ್ಥಾನದಲ್ಲಿ ಅರ್ಥ, ಶೋಭಿಸುತ್ತದೆ ಎಂಬ ಭಾವನೆ. ಗೀತಾಕಾರ ಈ ಭ್ರಮೆಯನ್ನು ನಿವಾರಿಸಿದಾನೆಂದು ನನ್ನ ಅಭಿಪ್ರಾಯ. ಮೋಕ್ಷಕ್ಕೂ ವ್ಯವಹಾರಕ್ಕೂ ಯಾವ ಭೇದವನ್ನೂ ಆತ ತೋರಿಸಿಲ್ಲ. ಅದಕ್ಕೆ ಬದಲು ಧರ್ಮವನ್ನೇ ವ್ಯವಹಾರದಲ್ಲಿ ಸೇರಿಸಿದ್ದಾನೆ. ವ್ಯವಹಾರದಲ್ಲಿ ಉಪಯೋಗಕ್ಕೆ ಬಾರದ ಧರ್ಮ ಧರ್ಮವೇ ಅಲ್ಲ ಎಂದು ಗೀತೆಯ ಅಭಿಪ್ರಾಯ; ಹೀಗೆ ನಾನು ತಿಳಿದಿದೇನೆ. ಆದುದರಿಂದ ಗೀತೆಯ ಅಭಿಪ್ರಾಯಾನುಸಾರ ಆಸಕ್ತಿಯಿಲ್ಲದೆ ಯಾವ ಕರ್ಮಗಳನ್ನು ಮಾಡಲು ಶಕ್ಯವಿಲ್ಲವೋ ಅವೆಲ್ಲವೂ ತ್ಯಾಜ್ಯಕರ್ಮ. ಈ ಬಗೆಯ ಸುವರ್ಣನಿಯಮ ಮನುಷ್ಯನನ್ನು ಅನೇಕ ಧರ್ಮಸಂಕಟಗಳಿಂದ ಪಾರುಮಾಡುತ್ತದೆ. ಈ ಅಭಿಪ್ರಾಯದಂತೆ ಕೊಲೆ, ಅಸತ್ಯ, ವ್ಯಭಿಚಾರ ಮುಂತಾದ ಕರ್ಮ ಸಹಜವಾಗಿಯೇ ತ್ಯಾಜ್ಯವಾಗುತ್ತದೆ. ಫಲತ್ಯಾಗದಿಂದ ಮನುಷ್ಯನ ಜೀವನ ಕ್ರಮ ಸರಳವಾಗುತ್ತದೆ. ಸರಳತೆಯಿಂದ ಶಾಂತಿ ಹುಟ್ಟುತ್ತದೆ. ಫಲತ್ಯಾಗವೆಂದರೆ, ಪರಿಣಾಮದ ಉಪೇಕ್ಷೆಯೆಂದಲ್ಲ ಅರ್ಥ. ಪರಿಣಾಮ–ಸಾಧನ ವಿಚಾರ, ಅದರ ಜ್ಞಾನ—ಅತ್ಯಂತ ಆವಶ್ಯಕ. ಇಷ್ಟನ್ನು ಮಾಡಿದನಂತರ ಯಾವ ಮನುಷ್ಯ ಪರಿಣಾಮವನ್ನು ಇಚ್ಛಿಸದೆ, ಚಿಂತಿಸದೆ, ಸಾಧನೆಯಲ್ಲಿ ಮಗ್ನನೋ ಅವನೇ ಫಲ

ತ್ಯಾಗಿ."[1] ಹೀಗೆ ಗೀತೆಯ ಬೋಧೆ ಗಾಂಧೀಜಿಯನ್ನು ನಿಷ್ಕಾಮಕರ್ಮ ಯೋಗಿಯನ್ನಾಗಿ ಮಾಡಿತು. ಲೋಕಮಾನ್ಯ ತಿಲಕರು, ಅರವಿಂದಘೋಷ್ ಮೊದಲಾದ ಅಂದಿನ ರಾಷ್ಟ್ರನಾಯಕರಂತೆ ಗಾಂಧೀಜಿಯೂ ತಮ್ಮ ಬಾಳಿನ, ಕರ್ಮದ ಸ್ಫೂರ್ತಿಗೆ ಗೀತೆಯನ್ನೇ ಆಶ್ರಯಿಸಿದುದು ಸಹಜವಾಗಿಯೇ ಇದೆ. 'ಗೀತೆ ನನ್ನ ಆಧ್ಯಾತ್ಮ ಕೋಶ' ಎಂಬ ಅವರ ಮಾತು, ಗೀತೆಯ ಬಗೆಗೆ ಅವರು ಹೊಂದಿದ್ದ ಮನೋಧರ್ಮವನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಗೀತೆ ನೀಡಿದ ಬೆಳಕಿನಲ್ಲಿ ಗಾಂಧೀಜಿ ನಡೆದು ಲೋಕವಂದ್ಯರೆನಿಸಿದರು.

ಗಾಂಧೀಜಿ ಗೀತೆಯ ಪ್ರಥಮ ಪರಿಚಯವನ್ನು ಹೊಂದಿದ್ದು, ಇಂಗ್ಲೆಂಡಿನಲ್ಲಿದ್ದಾಗ, ಎಡ್ವಿನ್ ಆರ್ನಾಲ್ಡನ 'ದಿವ್ಯಗೀತೆ' (The Song Celestieal) ಎಂಬ ಇಂಗ್ಲಿಷ್ ಭಾಷಾಂತರ ರೂಪದ ಗ್ರಂಥವನ್ನು ಓದುವುದರ ಮೂಲಕ ಎಂಬುದು ಕುತೂಹಲದ ಸಂಗತಿ; ಅದೂ ಇಬ್ಬರು ಥಿಯಾಸಫಿಸ್ಟ್ ಗೆಳೆಯರ ಅಪೇಕ್ಷೆಯಂತೆ. ಈ ಪುಸ್ತಕವನ್ನು ಓದಿ, ಭಾರತೀಯ ಗ್ರಂಥಗಳ ಬಗೆಗೆ ಅವರ ಆಸಕ್ತಿ ಹೆಚ್ಚಿತು. ಅವರು ಗೀತೆಯ ಮೇಲೆ ಇತರರು ಬರೆದ ಗ್ರಂಥಗಳನ್ನೂ ಹಾಗೂ ಹಿಂದೂಧರ್ಮದ ಮೇಲಿನ ಬೇರೆ ಬೇರೆ ಗ್ರಂಥಗಳನ್ನೂ ಓದಲು ಉತ್ಸಾಹ ಹೆಚ್ಚಿತು. ಗೀತೆಯ ಶ್ಲೋಕಗಳನ್ನು ಕಂಠಪಾಠ ಮಾಡಲು ಅವರು ಅನುಸರಿಸಿದ ಮಾರ್ಗವೂ ವಿಲಕ್ಷಣವೇ. ದಿನವೂ ಬೆಳಗ್ಗೆ ದಂತಧಾವನ ಮಾಡುವಾಗ ಅವರಿಗೆ ಅರ್ಧ ಘಂಟೆ ಕಾಲ ಹಿಡಿಯುತ್ತಿತ್ತು. ಆ ಸಮಯವನ್ನು ಅವರು ಈ ಕಂಠಪಾಠ ಕಾರ್ಯಕ್ಕೆ ಉಪಯೋಗಿಸಿಕೊಂಡರು. ದಂತಧಾವನ ಕಾರ್ಯ ಆರಂಭಮಾಡುವುದಕ್ಕೆ ಮುಂಚೆ ಒಂದು ಕಾಗದದ ಮೇಲೆ ಕೆಲವು ಶ್ಲೋಕಗಳನ್ನು ಬರೆದು, ಎದುರಿಗೆ ಕಣ್ಣಿಗೆ ಕಾಣುವಂತೆ ಅದನ್ನು ಗೋಡೆಗೆ ಅಂಟಿಸಿ, ಶ್ಲೋಕಗಳನ್ನು ಪುನಶ್ಚರಣೆ ಮಾಡುತ್ತಾ ದಂತಧಾವನ ಕಾರ್ಯವನ್ನು ಸಾಗಿಸುತ್ತಿದ್ದರು. ಈ ಕಾರ್ಯ ಮುಗಿಯುವ ವೇಳೆಗೆ ಆ ಶ್ಲೋಕ ಅವರಿಗೆ ಬಾಯಿಪಾಠವಾಗುತ್ತಿತ್ತು. ಈ ರೀತಿಯಲ್ಲಿ ಗೀತೆಯ ೧೮ ಅಧ್ಯಾಯಗಳ ಪೈಕಿ ೧೩-೧೪ ಅಧ್ಯಾಯಗಳನ್ನು ಬಾಯಿಪಾಠ ಮಾಡಿದುದಾಗಿ ತಮ್ಮ ಆತ್ಮಕಥೆಯಲ್ಲಿ ಅವರು ಹೇಳಿಕೊಂಡಿದ್ದಾರೆ.

---

1. ಅನಾಸಕ್ತಿಯೋಗ: ಮುನ್ನುಡಿ.

ಗಾಂಧೀಜಿ ಗೀತೆಯನ್ನು ಒಂದು ಐತಿಹಾಸಿಕ ಗ್ರಂಥವಾಗಿ ಒಪ್ಪಲಿಲ್ಲ. ಅವರು ಗ್ರಹಿಸಿದ ಗೀತೆಯ ಅರ್ಥವನ್ನು ಈ ರೀತಿ ಹೇಳಿದ್ದಾರೆ: "೧೮೮೮-೮೯ರಲ್ಲಿ ನನಗೆ ಮೊಟ್ಟಮೊದಲು ಗೀತೆಯ ದರ್ಶನವಾದಾಗಲೇ ಗೀತೆ ಐತಿಹಾಸಿಕ ಗ್ರಂಥವಲ್ಲ; ಅದರಲ್ಲಿನ ಭೌತಿಕ ಯುದ್ಧ ಒಂದು ನಿಮಿತ್ತ, ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ನಿರಂತರವೂ ನಡೆಯುತ್ತಿರುವ ದ್ವಂದ್ವ ಯುದ್ಧದ ವರ್ಣನೆ ಇದು; ಹೃದಯಗತ ಯುದ್ಧವನ್ನು ಮನೋರಂಜಕವಾಗಿಸಲು ಬಂದಿದೆ ಮಾನವ ಯೋಧರ ಕಲ್ಪನೆ ಎನಿಸಿತು. ಧರ್ಮದ ಬಗೆಗೆ, ಗೀತೆಯ ಬಗೆಗೆ ಹೆಚ್ಚು ಹೆಚ್ಚು ವಿಚಾರ ಮಾಡಿದಂತೆಲ್ಲ ಈ ಪ್ರಥಮ ಸ್ಫೂರ್ತಿ ಮತ್ತಷ್ಟು ದೃಢವಾಯಿತು. ಮಹಾಭಾರತವನ್ನು ಓದಿದ ಮೇಲಂತೂ ಈ ವಿಚಾರ ಮತ್ತಷ್ಟು ಪುಷ್ಟಗೊಂಡಿತು. ಈಗಿನ ಅರ್ಥದಂತೆ ಮಹಾಭಾರತವನ್ನು ಒಂದು ಇತಿಹಾಸವೆಂದು ನಾನು ಭಾವಿಸಲಾರೆ. ಇದಕ್ಕೆ ಪ್ರಬಲ ಪ್ರಮಾಣಗಳು ಆದಿಪರ್ವದಲ್ಲಿಯೇ ಇವೆ. ಪಾತ್ರಗಳ ಮಾನುಷ-ಅಮಾನುಷ ಉತ್ಪತ್ತಿಯ ವರ್ಣನೆ ಮಾಡಿ, ವ್ಯಾಸಭಗವಾನರು ರಾಜಪ್ರಜೆಗಳ ಇತಿಹಾಸವನ್ನು ನಿರ್ಮೂಲಗೊಳಿಸಿದ್ದಾರೆ. ಮಹಾಭಾರತದಲ್ಲಿ ವರ್ಣಿಸಿದ ಪಾತ್ರಗಳು ಮೂಲತಃ ಐತಿಹಾಸಿಕವಿರಬಹುದು. ಆದರೆ ವ್ಯಾಸಭಗವಾನರು ಧರ್ಮದರ್ಶನ ಮಾಡಿಸಲೆಂದು ಮಹಾಭಾರತದಲ್ಲಿ ಆ ಪಾತ್ರಗಳನ್ನು ಉಪಯೋಗಿಸಿದ್ದಾರೆ."[1]

ಗೀತೆ ಗಾಂಧೀಜಿಗೆ ಒಂದು ಮಹಾ 'ಧರ್ಮಕಾವ್ಯ'ವಾಯಿತು. ಅದನ್ನು ಆಳವಾಗಿ ಅಧ್ಯಯನ ಮಾಡಿದಷ್ಟೂ ಅವರು 'ನವೀನ', 'ಸುಂದರ' ಅರ್ಥವನ್ನು ಕಂಡರು.

ಗಾಂಧೀಜಿ ಕೇವಲ ಭಾವುಕತೆಯಿಂದ ಪ್ರೇರಿತರಾದವರಲ್ಲ. ಅವರು ಎಷ್ಟು ವಸ್ತುನಿಷ್ಠರಾಗಿದ್ದರು ಎಂಬುದು ಈ ಮಾತುಗಳಿಂದ ಗೋಚರಿಸುತ್ತದೆ: "ನನ್ನ ಕಾರ್ಯದಿಂದ ನನ್ನ ತರ್ಕಶಕ್ತಿಯನ್ನು ಮತ್ತು ಹೃದಯಕ್ಕೆ

---

1. ಅನಾಸಕ್ತಿಯೋಗ: ಮುನ್ನುಡಿ.

ಸಮಾಧಾನವುಂಟಾಗುವವರೆಗೆ ನಾನು ನನ್ನ ಮೂಲನಿರ್ಣಯಕ್ಕೆ ಬದ್ಧನಾಗಿ ನಡೆಯಲೇಬೇಕು."[1]

ಗಾಂಧೀಜಿ ಪ್ರಾಮಾಣಿಕ ಸಾಧಕರಾಗಿದ್ದರು. ಅದು ಈ ಮಾತಿನಿಂದ ವ್ಯಕ್ತವಾಗುತ್ತದೆ: "ನನಗೆ ತೋರಿದ ಬೆಳಕಿಗೆ ಅನುಗುಣವಾಗಿ ನಾನು ಮುಂದುವರಿಯುತ್ತಿದ್ದೇನೆ. ಈ ಮಾರ್ಗ ಕ್ರಮಣದಲ್ಲಿ ಅನೇಕವೇಳೆ ಪರಮಾತ್ಮನೆಂಬ ಆ ಪರಮಸತ್ಯದ ಕಿರುನೋಟ ನನಗೆ ಲಭಿಸಿದೆ. ಅವನೊಬ್ಬನೇ ಶಾಶ್ವತ, ಉಳಿದುದೆಲ್ಲ ಅಶಾಶ್ವತ ಎಂಬ ನಂಬಿಕೆ ನನ್ನಲ್ಲಿ ದಿನದಿನಕ್ಕೆ ಹೆಚ್ಚಾಗಿ ಬೆಳೆಯುತ್ತಿದೆ- ಈ ನಂಬಿಕೆ ನನ್ನಲ್ಲಿ ಹೇಗೆ ಮೂಡಿತೆಂಬುದನ್ನು ಇಷ್ಟವುಳ್ಳವರು ಅರಿಯಲಿ. ಅವರು ನನ್ನ ಪ್ರಯೋಗಗಳಲ್ಲಿಯೂ ಸಾಧ್ಯವಾದರೆ ನನ್ನ ನಂಬಿಕೆಗಳಲ್ಲಿಯೂ ಭಾಗವಹಿಸಲಿ. ನನಗೆ ಯಾವುದು ಸಾಧ್ಯವೋ ಅದು ಒಂದು ಸಣ್ಣ ಮಗುವಿಗೂ ಸಾಧ್ಯ ಎಂಬ ನಂಬಿಕೆಯೂ ನನ್ನಲ್ಲಿ ಬೆಳೆಯುತ್ತಿದೆ."[2]

ಇಂಥ ನಂಬಿಕೆಗೆ ಪರಮ ನಮ್ರತೆಯೇ ಅಗತ್ಯ. "ಸತ್ಯಶೋಧಕ ಧೂಳಿನ ಕಣಕ್ಕಿಂತ ಹೆಚ್ಚು ನಮ್ರನಾಗಿರಬೇಕು. ಲೋಕವು ಧೂಳಿನ ಕಣವನ್ನು ಕಾಲಿನ ಕೆಳಗೆ ತುಳಿಯುತ್ತಿದೆ. ಆದರೆ ಸತ್ಯಶೋಧಕ ಆ ಧೂಳಿನ ಕಣದಿಂದಲೂ ತುಳಿಸಿಕೊಳ್ಳುವಷ್ಟು ನಮ್ರನಾಗಿರಬೇಕು. ಆಗಮಾತ್ರ—ಅಲ್ಲಿಯವರೆಗೆ ಅಲ್ಲ—ಅವನಿಗೆ ಸತ್ಯದ ಕಿರುನೋಟ ಲಭಿಸೀತು."[3] ಸತ್ಯದ ಕಿರುನೋಟವನ್ನು ಕಂಡು, ದ್ರಷ್ಟಾರ ಋಷಿಯಂತೆ ಅದನ್ನು ಮಾತು-ಬರೆಹ ಇವುಗಳಲ್ಲಿ ವ್ಯಕ್ತಪಡಿಸಿದ ಗಾಂಧೀಜಿ ತಮ್ಮ ಬಾಳನ್ನೂ ಲೋಕವನ್ನೂ ಪಾವನಗೊಳಿಸಿದರು. ಇದರ ಪ್ರತಿಫಲವೇ ಗಾಂಧೀ ಸಾಹಿತ್ಯ.

'ನಿರ್ಮಾಣ ಕಾರ್ಯಕ್ರಮ' ಗಾಂಧೀಜಿ ಕಾಲಕಾಲಕ್ಕೆ ನಿರೂಪಿಸಿದ ೧೮ ಬಗೆಯ ರಚನಾತ್ಮಕ ಕಾರ್ಯಕ್ರಮಗಳನ್ನು ವಿವರಣೆಗಳೊಂದಿಗೆ ಸೂಚಿಸುತ್ತದೆ. 'ಪೂರ್ಣ ಸ್ವರಾಜ್ಯ'ದ ಪ್ರಾಪ್ತಿ ಈ ಕಾರ್ಯಕ್ರಮದ

---

1. ಆತ್ಮಕಥೆ: ಮುನ್ನುಡಿ.
2. ಅದೇ : ಮುನ್ನುಡಿ.
3. ಅದೇ : ಮುನ್ನುಡಿ.

ಅನುಷ್ಠಾನದಿಂದ ಆಗುವಂಥದು. ಇದೊಂದು ಸಮಗ್ರ ಕಾರ್ಯಕ್ರಮ. ಇದು ಆರ್ಥಿಕ, ಸಾಮಾಜಿಕ, ನೈತಿಕ ಮತ್ತು ಶೈಕ್ಷಣಿಕ ಅಂಶಗಳನ್ನು ಒಳಗೊಂಡಿದೆ. ಭಾರತೀಯ ಸಮಾಜದ ಸಮಸ್ಯೆಗಳಿಗೆ ಸತ್ಯ–ಅಹಿಂಸಾ ವಿಧಾನಗಳಲ್ಲಿ ಗಾಂಧೀಜಿ ಸೂಚಿಸಿದ ಪರಿಹಾರಗಳಿವು.

ಈ ಕಾರ್ಯಕ್ರಮದ ವಿವಿಧ ಅಂಶಗಳು ಕಾಲಕಾಲಕ್ಕೆ ರೂಪುಗೊಂಡವು. ಆದರೆ, ೧೯೪೧ರಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮತ್ತು ಅಹಿಂಸಕ ರಾಷ್ಟ್ರೀಯ ಭಾವನೆಯುಳ್ಳ ಕಾರ್ಯಕರ್ತರ ಸ್ಪಷ್ಟ ತಿಳಿವಳಿಕೆಗಾಗಿ ಇದನ್ನು ಪುಟ್ಟ ಪುಸ್ತಕ ರೂಪದಲ್ಲಿ ಗಾಂಧೀಜಿ ಪ್ರಚುರಪಡಿಸಿದರು. ಈ ಕಾರ್ಯಕ್ರಮ ಈ ಕೆಳಗೆ ಕಂಡಂತೆ ಇದೆ: ಖಾದೀ, ಗ್ರಾಮೋದ್ಯೋಗಗಳು, ಕೋಮುವಾರು ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ, ರಾಷ್ಟ್ರಭಾಷಾ (ಹಿಂದೂಸ್ತಾನೀ) ಪ್ರಚಾರ, ಮಾತೃಭಾಷಾ ಪ್ರಚಾರ, ಗೋಸೇವಾ, ಸ್ತ್ರೀಜನೋದ್ಧಾರ, ಮಹಾರೋಗಿ ಸೇವಾ, ಆದಿವಾಸಿಗಳ ಉದ್ಧಾರ, ರೈತ ಸಂಘಟನೆ, ವಿದ್ಯಾರ್ಥಿ ಸಂಘಟನೆ, ನಿಸರ್ಗೋಪಚಾರ, ಆರ್ಥಿಕ ಸಮತೆ, ಸರ್ವಧರ್ಮ ಸಮಭಾವ, ಕಾರ್ಮಿಕ ಸಂಘಟನೆ, ಜೀವನ ಶಿಕ್ಷಣ.

ಈ ಕಾರ್ಯಕ್ರಮದಲ್ಲಿ ಕೆಲವು ಆಶ್ರಮ ವ್ರತಗಳಲ್ಲಿ ಸೇರಿರುವುದನ್ನು ಕಾಣಬಹುದು. ಈ ಕಾರ್ಯಕ್ರಮದ ಉದ್ದೇಶ ಸರ್ವೋದಯ ಸಮಾಜ ರಚನೆ, ಎಂದರೆ, ವರ್ಗರಹಿತ, ಜಾತ್ಯತೀತ, ಶೋಷಣಮುಕ್ತ ಸಮಾಜ ರಚನೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ 'ವಿಧಾಯಕ ಕಾರ್ಯಕ್ರಮ'ವೆಂದು ಪ್ರಸಿದ್ಧಿ ಪಡೆದಿತ್ತು. ಇದಕ್ಕಾಗಿಯೇ ಪೂರ್ಣಕಾಲದ ಸೇವಕರು, ಆಯಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರೆ, ಕಾಂಗ್ರೆಸ್ ಕಾರ್ಯಕರ್ತರು ಇವುಗಳಲ್ಲಿ ಕೆಲವನ್ನಾದರೂ ತಮ್ಮ ರಾಷ್ಟ್ರಸೇವೆಗೆ ಸಕ್ರಿಯ ಕಾರ್ಯಗಳನ್ನಾಗಿ ಆರಿಸಿಕೊಂಡು ನಡೆಸಬೇಕಾಗಿತ್ತು. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆದರೆ, ರಾಷ್ಟ್ರದ ಆಂತರಿಕ ಸಂಘಟನೆ, ಆರ್ಥಿಕ ಅಭಿವೃದ್ಧಿ, ಜನತೆಯ ನೈತಿಕ ನಿಷ್ಠೆ, ಮಾನವೀಯ ಭಾವ ವೃದ್ಧಿಯಾಗುವುದೆಂಬ ಭರವಸೆಯಿತ್ತು. ಬ್ರಿಟಿಷ್ ಸರ್ಕಾರದ ಮೇಲೆ ನೇರವಾದ ಸವಿನಯ ಶಾಸನೋಲ್ಲಂಘನ, ಅಸಹಕಾರ, ಕರನಿರಾಕರಣೆ ಇತ್ಯಾದಿ ಸತ್ಯಾಗ್ರಹ ಹೋರಾಟಗಳು ನಡೆದರೆ, ರಚನಾತ್ಮಕ ಕಾರ್ಯಕ್ರಮ ಈ ಹೋರಾಟವನ್ನು ನಡೆಸುವ ಯೋಧರಿಗೆ

ಆವಶ್ಯಕವಾದ ದೈಹಿಕ, ಮಾನಸಿಕ ಮತ್ತು ನೈತಿಕ ಶಕ್ತಿಯನ್ನು ಕೊಡುತ್ತಿತ್ತು. ಶ್ರಮನಿಷ್ಠೆ, ಕ್ಲೇಶಾನುಭವ, ಇವುಗಳಿಗೆ ಕಾರ್ಯಕರ್ತರನ್ನು ಸಿದ್ಧ ಮಾಡುತ್ತಿತ್ತು. ಯಾವುದೇ ತತ್ವಕ್ಕೆ ಅನುಗುಣವಾದ ಕಾರ್ಯಕ್ರಮ ಆಚಾರ ರೂಪವಾಗಿ ಆವಶ್ಯಕ. ಸತ್ಯ ಅಹಿಂಸೆಗಳಿಗೆ ಅನುಗುಣವಾಗಿ ಇಂಥ ರಾಷ್ಟ್ರವ್ಯಾಪಕ ಕಾರ್ಯಕ್ರಮವನ್ನು ರೂಪಿಸಿಕೊಟ್ಟ ಮಹಾಜಾಣ್ಮೆ ಗಾಂಧೀಜಿಯದು.

೪

ಗಾಂಧೀ ಸಾಹಿತ್ಯ ವಸ್ತು ವಿಸ್ತಾರ

೧. ಸಮಗ್ರ ಸ್ವರೂಪ

ಇದುವರೆಗೆ ಪರಿಶೀಲಿಸಿದ ಗಾಂಧೀ ಸಾಹಿತ್ಯದ ಮೂಲ ಆಧಾರ ರೂಪದ ಹೊತ್ತಗೆಗಳಲ್ಲಿ ಬರುವ ವಿಚಾರಗಳ ಮೇಲೆ ಗಾಂಧೀಜಿ ಕಾಲಕಾಲಕ್ಕೆ ಬರೆದ ವಿಷಯಗಳು. ಎಂದರೆ, ಅನುಷ್ಠಾನ ರೂಪದ ವ್ಯಾಖ್ಯಾನ ವಿಪುಲ ವಾಗಿವೆ. ಹಾಗೆಯೇ ಕಾಲಕಾಲಕ್ಕೆ ಅವರು ಎದುರಿಸಿ ಪರಿಹರಿಸಬೇಕಾದ ಸಮಸ್ಯೆಗಳ ಬಗೆಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಮಾತು ಮತ್ತು ಬರೆಹ ಇವುಗಳೂ ಅತ್ಯಂತ ದೊಡ್ಡ ಪ್ರಮಾಣದಲ್ಲಿವೆ. ಇವು ಸಹಸ್ರಾರು ಪುಟಗಳಲ್ಲಿ—ಇಂಡಿಯನ್ ಒಪಿನಿಯನ್, ಯಂಗ್ ಇಂಡಿಯಾ, ನವಜೀವನ ಮತ್ತು ಹರಿಜನ ಪತ್ರಿಕೆಗಳು ಹಾಗೂ ಒಂದು ಲಕ್ಷಕ್ಕೆ ಮೇಲ್ಪಟ್ಟ ಪತ್ರಗಳು —ಅಡಗಿವೆ. ಇದೊಂದು ಮಹಾ ಸಾಗರವೇ ಸರಿ. ಇವುಗಳನ್ನು ಅಧ್ಯಯನ ಮಾಡಿ, ಸೂಕ್ತ ಶೀರ್ಷಿಕೆಗಳಲ್ಲಿ ವಿಂಗಡಿಸಿಕೊಡುವ ಪ್ರಯತ್ನ ವಿವಿಧ ಮೂಲ ಗಳಿಂದ ನಡೆದಿದೆಯೆಂದು ಹಿಂದೆ ಒಂದೆಡೆ ಹೇಳಿದೆ. ಈ ಸಮಗ್ರ ವಸ್ತು ವಿಸ್ತಾರವನ್ನು ಈ ಅಧ್ಯಾಯದಲ್ಲಿ ಪರಿಶೀಲಿಸೋಣ. ಅವುಗಳನ್ನು ಈ ರೀತಿ ವಿಂಗಡಿಸಬಹುದು : ಸತ್ಯ-ಅಹಿಂಸೆ ; ಧರ್ಮ-ನೀತಿ ; ಸಮಾಜ ಧರ್ಮ ; ಮಹಿಳೆಯರು ; ಅರ್ಥವಿಚಾರ ; ರಾಜಕಾರಣ ; ಮೂಲ ಶಿಕ್ಷಣ; ಹಾಗೆಯೇ,

ಸಮಾಜ ಧರ್ಮದಲ್ಲಿ ವ್ಯಕ್ತಿ ಮತ್ತು ಸಮಾಜದ ಸಮಸ್ಯೆಗಳನ್ನೂ, ಅರ್ಥ ವಿಚಾರದಲ್ಲಿ ಧರ್ಮದರ್ಶೀ ಸಿದ್ಧಾಂತವನ್ನೂ, ರಾಜಕಾರಣದಲ್ಲಿ ಸತ್ಯಾಗ್ರಹದ ವಿಷಯವನ್ನೂ ಅವವುಗಳಲ್ಲಿ ಸೇರಿಸಿ ವಿವೇಚಿಸಲಾಗಿದೆ.

ಇನ್ನೊಂದು ದೃಕ್ಕೋಣದಿಂದ ನೋಡಿದರೆ, ಇವೆಲ್ಲವನ್ನೂ ಎರಡು ಪ್ರಧಾನ ಶೀರ್ಷಿಕೆಗಳಲ್ಲಿ ವಿಂಗಡಿಸಬಹುದು : ಸರ್ವೋದಯ ಮತ್ತು ಸತ್ಯಾಗ್ರಹ. ಸರ್ವೋದಯ ಗುರಿಯಾದರೆ, ಸತ್ಯಾಗ್ರಹ ಮಾರ್ಗವಾಗಿತ್ತು ಗಾಂಧೀಜಿಗೆ. ಅವರು ತಮ್ಮ ಸರ್ವಕರ್ಮಗಳಿಂದಲೂ ಸಾಧಿಸಬಯಸಿದುದು ಸರ್ವೋದಯ. ಅದಕ್ಕೆ ಅವರು ಆರಿಸಿಕೊಂಡ ಮಾರ್ಗ ಸತ್ಯಾಗ್ರಹ; ಅದು ಸತ್ಯ–ಅಹಿಂಸೆಗಳ ಮಾರ್ಗ. ಸಮಸ್ತ ವಿಶ್ವದಲ್ಲಿ ಅಂತರ್ಯಾಮಿಯಾಗಿ ಅಡಗಿರುವ ಪರಸತ್ಯದ ಸಾಕ್ಷಾತ್ಕಾರ; ಅದು ಪ್ರೇಮ ಅಹಿಂಸಾಭರಿತವಾದ ಸಾಪೇಕ್ಷ ಸತ್ಯದ ಮೂಲಕವೇ ಸಾಧಿಸಬೇಕಾದುದು. ಅದು ಕೇವಲ ಮನುಜ ವರ್ಗಕ್ಕೆ ಮಾತ್ರ ಸೀಮಿತವಾದುದಲ್ಲ. ಮಾನವನಿಂದ ಭಿನ್ನವಾದ ತಿರ್ಯಗ್ಜಂತುವೂ ಸಸ್ಯವರ್ಗವೂ ಅದರ ವಿಸ್ತಾರ ವಲಯದಲ್ಲಿ ಸೇರಿರುತ್ತದೆ. ಮಾನವನಿಗೇ ಅನ್ವಯಿಸಿದಾಗ ಅದು ಕೇವಲ ಭೌತಿಕ ಉದಯವಲ್ಲ; ಅದರಲ್ಲಿ ನೈತಿಕ ಹಾಗೂ ಆಧ್ಯಾತ್ಮಿಕ ಉದಯವೂ ಸೇರಿರುತ್ತದೆ. ಇಷ್ಟು ವ್ಯಾಪಕವಾದ, ಇಡಿಯ ಬ್ರಹ್ಮಾಂಡವನ್ನೇ ತನ್ನಲ್ಲಿ ಒಳಗೊಳ್ಳುವ ವಿಚಾರ ಗಾಂಧೀಜಿಯದು; ಅವರ ಸಾಧನೆಯೂ ಅದಕ್ಕೆ ಅನುಗುಣವಾದುದು. ಅವರ ಸಾಹಿತ್ಯ ಇವುಗಳನ್ನೆಲ್ಲ ಒಳಗೊಂಡಿರುವುದರಿಂದ ಅದು ಬದುಕಿನಷ್ಟೇ ವಿರಾಡ್ರೂಪವುಳ್ಳದು.

ಗಾಂಧೀಜಿ ಇದನ್ನು ಸಾಧಿಸಲು ಮನುಜಕುಲದ—ಭಾರತದ ವಿನಮ್ರ ಸೇವಕರಾಗಿದ್ದರು. ಆ ಸೇವೆಯನ್ನು ಸಲ್ಲಿಸುತ್ತಲೇ ಅಸುವನ್ನು ಬಿಡಬೇಕೆಂಬುದು ಅವರ ಉತ್ಕಟ ಇಚ್ಛೆಯಾಗಿತ್ತು. ಈಶ್ವರೇಚ್ಛೆಯೂ ಅದೇ ಆಗಿದ್ದಿತೇನೋ ! "ನಾನಾವ ಹೊಸ ಸತ್ಯವನ್ನೂ ಪ್ರತಿಪಾದಿಸುತ್ತಿಲ್ಲ. ನಾನು ಕಂಡ ಸತ್ಯವನ್ನು ಅರಸಿ, ಸಾಧಿಸುತ್ತಿದ್ದೇನೆ"[1] ಎಂಬುದು ಅವರ ವಿನಯ ಭಾವವಾಗಿತ್ತು.

---

1. ಯಂಗ್ ಇಂಡಿಯಾ : ಆಗಸ್ಟ್ ೨೫, ೧೯೨೧.

ಗಾಂಧೀಜಿಯ ಬೋಧೆ ಕೇವಲ ಭಾವನಾ ಪ್ರಧಾನವಾದುದೆಂದೂ, ಅವ್ಯವಹಾರ್ಯವಾದುದೆಂದೂ ಕೆಲವರ ಅಭಿಪ್ರಾಯ. ಆದರೆ ತಾವು ಮಹಿಮಾ ಪುರುಷರಲ್ಲವೆಂದೂ, ಮಾನವ ಸಹಜವಾದ ಗುಣದೋಷಗಳಿಗೆ ಹೊರತಾಗಿಲ್ಲ ವೆಂದೂ ಅವರು ಸಾರಿ ಹೇಳುತ್ತಿದ್ದರು. ತಾವು ಆಚರಿಸಿದುದನ್ನು ಎಲ್ಲರೂ ಆಚರಿಸಲು ಸಾಧ್ಯವೆಂದೂ ಅವರು ನಂಬಿದ್ದರು.

ಸತ್ಯಸಾಕ್ಷಾತ್ಕಾರ, ಭಾರತದ ಸ್ವಾತಂತ್ರ್ಯ, ವಿಶ್ವಶಾಂತಿ ಈ ಮೂರು ಅಂಶಗಳು ಗಾಂಧೀಜಿಯ ಜೀವನದ ಗುರಿಗಳಾಗಿದ್ದುವೆನ್ನಬಹುದು. ಅವರ ಮಾತು ಇಷ್ಟೊಂದು ಸ್ಪಷ್ಟವಾಗಿತ್ತು : "ಭಾರತದ ಸ್ವಾತಂತ್ರ್ಯ ಸಾಧನೆಯೇ ನನ್ನ ಜೀವಿತೋದ್ದೇಶ. ಅದಕ್ಕಾಗಿ ನಾನು ಸಾಯಲು ಕೂಡ ಸಿದ್ಧ. ಏಕೆಂದರೆ ಭಾರತದ ಸ್ವಾತಂತ್ರ್ಯ ಸತ್ಯದ ಒಂದು ಅಂಶ. ಬಂಧಮುಕ್ತವಾದಾಗಲೇ ಭರತಖಂಡ ಸತ್ಯಸ್ವರೂಪನಾದ ಭಗವಂತನನ್ನು ಪೂಜಿಸಬಲ್ಲುದು."[1] ವಿಶ್ವ ಪ್ರೇಮ, ಸೃಷ್ಟಿಯಲ್ಲಿ ಎಲ್ಲವನ್ನೂ ಪ್ರೇಮದಿಂದ ಕಾಣುವುದು, ಪರಮಾತ್ಮ ನಲ್ಲಿ ಅವಿಚಲ ನಂಬಿಕೆ, ಅನನ್ಯಭಕ್ತಿ ಇವು ಅವರ ಸತತ ಕರ್ಮಗಳಾಗಿದ್ದವು. ನಮಗೆ ಗೋಚರಿಸುವ ಸಕಲವೂ ಸತ್ಯಸ್ವರೂಪನಾದ ಭಗವಂತನಿಂದ ತುಂಬಿದೆಯೆಂದು ಅವರ ಪೂರ್ಣ ನಂಬಿಕೆಯಾಗಿತ್ತು. ಸಮಸ್ತ ಜೀವಗಳ ಜೀವಾಳ ಭಗವಂತನೆಂದೇ ಅವರು ನಂಬಿದ್ದರು. ಎಲ್ಲ ಜೀವಿಗಳೂ ಏಕತ್ರ ವೆಂದು ಅವರು ಭಾವಿಸಿದ್ದರು. "ನನ್ನದೆನ್ನುವುದು ಯಾವುದೂ ಇಲ್ಲ. ಎಲ್ಲವೂ 'ಅವನದೇ'. ಇದರಿಂದ ನಮ್ಮ ಬಾಳು ಅವನಿಗೆ ಮುಡಿಪು. 'ಅವನ' ಸೇವೆ ಯೆಂದರೆ, ಸಮಸ್ತ ಜೀವರಾಶಿಯ ಸೇವೆ."[2] ಈ ಭಾವನೆಯೇ ಅವರನ್ನು ಮಾನವಸೇವೆಯಲ್ಲಿ, ಸಕಲ ಜೀವರಾಶಿಯ ಸೇವೆಯಲ್ಲಿ. ಭಗವಂತನ ಸೇವೆ ಯನ್ನು ಕಾಣಲು ನೆರವಾದುದು.

ಭಗವಂತನ ಇರವಿನಲ್ಲಿ ಗಾಂಧೀಜಿಯ ನಂಬಿಕೆ ಅವಿಚ್ಛಿನ್ನವಾಗಿತ್ತು. ಮಾತಿಗೂ ಮನಸ್ಸಿಗೂ ಗೋಚರವಾಗದವನು ಅವನು. ನಂಬಿಕೆ ಮತ್ತು ಪ್ರಾರ್ಥನೆಗಳ ಮೂಲಕವೇ ಅವನ ಸಾಕ್ಷಾತ್ಕಾರ ಸಾಧ್ಯ. ಈ ನಂಬಿಕೆ

---

1. ಆತ್ಮಕಥೆ: ಮುನ್ನುಡಿ.
2. ಹರಿಜನ: ೩೦–೧–೧೯೩೭.

ಅವರಿಗೆ ಒಂದು 'ಆಸ್ತಿಕ' ಭಾವವಾಗಿತ್ತು. ಈ ಆಸ್ತಿಕ ಭಾವದ ರೀತಿ ಅನನ್ಯ ರೀತಿಯದು: 'ನನ್ನ ನೇತ್ರಗಳನ್ನು ನಾಶಮಾಡಿದರೆ ನನ್ನನ್ನು ಕೊಂದಂತೆ ಆಗುವುದಿಲ್ಲ. ನನ್ನ ಮೂಗನ್ನು ಕೊಯ್ದುಹಾಕಿದರೆ, ನನ್ನನ್ನು ಕೊಂದಂತೆ ಆಗುವುದಿಲ್ಲ. ಯಾವಾಗ ನಾಸ್ತಿಕತೆ ನನ್ನಲ್ಲಿ ಹುಟ್ಟುವುದೋ ಆಗ ನನ್ನ ಸಾವು."[1] ಅಷ್ಟು ಉತ್ಕಟ ರೀತಿ ಅದು. ಅವರು ಸತ್ಯ ಸ್ವರೂಪನಾದ ಭಗವಂತನ ವಿವರಣೆ ಕೊಟ್ಟಿರುವುದು ಹೀಗಿದೆ: "ಸತ್ಯವಿದ್ದೆಡೆ ಜ್ಞಾನವಿರುತ್ತದೆ. ಎಲ್ಲಿ ಸತ್ಯವಿಲ್ಲವೋ ಅಲ್ಲಿ ಪೂರ್ಣ ಜ್ಞಾನವಿಲ್ಲ. ಆದ್ದರಿಂದಲೇ 'ಚಿತ್' ಶಬ್ದವು ದೇವರಿಗೆ ಸಲ್ಲುತ್ತದೆ. 'ಚಿತ್' ಎಂದರೆ ಜ್ಞಾನ. ಎಲ್ಲಿ ನಿಜವಾದ ಜ್ಞಾನವಿರುತ್ತದೋ ಅಲ್ಲಿ ಆನಂದ ಇದ್ದೇ ಇರುತ್ತದೆ. ಅಲ್ಲಿ ದುಃಖ ಲೇಶವಿಲ್ಲ, ಶಾಶ್ವತವಾದ ಸತ್ಯದಿಂದ ಪೂರ್ಣಜ್ಞಾನ ಮತ್ತು ಆನಂದ ಲಭಿಸುತ್ತವೆ. ಇದರಿಂದ ಸಚ್ಚಿದಾನಂದ—ಸತ್, ಚಿತ್, ಆನಂದ ಈ ಮೂರರ ಸಮನ್ವಯವೇ ಭಗವಂತನ ಸ್ವರೂಪವೆನಿಸುತ್ತದೆ."[2] ಹೀಗೆ ಸತ್ಯಕ್ಕೆ ಗಾಂಧೀಜಿ ಕೊಟ್ಟ ಪ್ರಾಧಾನ್ಯತೆಯ ದೃಷ್ಟಿಯಿಂದ, ಮತ್ತು ಅವರು ಸತ್ಯವನ್ನೇ ತಮ್ಮ ಆರಾಧ್ಯದೈವವನ್ನಾಗಿ ಮಾಡಿಕೊಂಡಿದ್ದುದರಿಂದ, ತಮ್ಮನ್ನು 'ಸಾಂಪ್ರದಾಯಿಕ ಸನಾತನೀ ಹಿಂದೂ' ಎಂದು ಕರೆದುಕೊಂಡರು. ಜಗತ್ತಿನ ಸಾಧುಸತ್ಪುರುಷರ ಅನುಭಾವ ಸಂಪತ್ತಿನಲ್ಲಿ ದ್ವಂದ್ವಾತೀತನಾದ ಸ್ಥಿತಪ್ರಜ್ಞನನ್ನು ಅವರು ಕಂಡರು. ತಾವೂ ಅಂಥ ಸ್ಥಿತಪ್ರಜ್ಞ, ಪ್ರಿಯಭಕ್ತ, ಪುರುಷೋತ್ತಮ ಆಗಬೇಕೆಂದು ಅವರು ಶ್ರಮಿಸಿದರು. ಆತ್ಮಸ್ವಾತಂತ್ರ್ಯವುಳ್ಳ ಮಾನವ ಆದರ ಹಾದಿಯಲ್ಲಿ ನಡೆಯುವಾಗ ತಪ್ಪಿ, ಎಡವಿ, ನಡೆದರೂ ಅವುಗಳನ್ನು ಸರಿಪಡಿಸಿಕೊಂಡೇ ನಡೆಯಬೇಕೆಂಬುದು ಅವರ ವಿಚಾರವಾಗಿತ್ತು. ಇದಕ್ಕೆ ಅಹಿಂಸೆ ಅಥವಾ ಪ್ರೇಮ ಒಂದೇ ಮಾರ್ಗವೆಂದು ಅವರ ಗ್ರಹಿಕೆಯಾಗಿತ್ತು.

ಸತ್ಯದರ್ಶನ ದೃಷ್ಟಿ ಭೇದದಿಂದ ಒಬ್ಬೊಬ್ಬರಿಗೆ ಒಂದೊಂದು ಬಗೆಯಲ್ಲಿ ಆದೀತು. ಆದುದರಿಂದ ಪರಸ್ಪರ ಸಹನೆಯೇ ಸಕಲ ಆಚರಣೆಗಳ ಮೂಲ

---

1. ಹರಿಜನ: ೧೪-೫-೧೯೩೮.
2. ಯರವಾಡಾ ಮಂದಿರ: ಪುಟ ೧೭.

ವಾಗಬೇಕು. ಕಾರ್ಯದಲ್ಲಿ ಬಲಾತ್ಕಾರ, ನಿರ್ಬಂಧ ಸಲ್ಲ. ಈ ಭಾವನೆಯಿಂದ ಗಾಂಧೀಜಿ 'ಅಹಿಂಸಾ ಪರಮೋ ಧರ್ಮಃ' ಎಂಬುದನ್ನು ಒಪ್ಪಿದ್ದರು. ಮಾನವ ಅಹಿಂಸಾಮಯನಾದರೆ, ಅಥವಾ ಪ್ರೇಮಮಯನಾದರೆ, ಅಥವಾ ಕರುಣಾಮಯನಾದರೆ ಆಗಲೇ ನಿಜಮಾನವನಾದಂತೆ. ಇದಿಲ್ಲದೆ ಅಜ್ಞಾನ, ಅಹಂಭಾವಗಳಿಂದ ಕೂಡಿದ ಮಾನವ ಪಶುವಿಗೆ ಸಮಾನ. 'ಮುಯ್ಯಿಗೆ ಮುಯ್ಯಿ', ಸೇಡಿಗೆ ಸೇಡು' ಎನ್ನುವುದು ಜನಿಸುವುದು ಈ ಪಶುಭಾವನೆ ಯಿಂದಲೇ. ಬದುಕು ಹಿಂಸಾಮೂಲವೇ ಎಂಬುದರ ಬಗೆಗೆ ಅವರು ಯೋಚಿಸಿ, ಬದುಕಿನಲ್ಲಿ ಹಿಂಸೆ ಕಂಡುಬಂದರೂ ಹಿಂಸಾನಿರೋಧ, ಸಂಯಮ ಇವುಗಳಿಂದ ಮಾನವ ತನ್ನ ಬಾಳನ್ನು ಹಸನಾಗಿ ಮಾಡಿಕೊಳ್ಳಬೇಕೆಂದು ಅವರು ನಂಬಿದ್ದರು. ಹೀಗೆ ಅವರ ವಾದಸರಣಿ: "ಜಗತ್ತೆಲ್ಲ ಹಿಂಸಾಮಯ ವಾಗಿದೆ. ಆಗಾಗ ಪ್ರಕೃತಿಮಾತೆ ಕರಾಳಸ್ವರೂಪದ ರಕ್ಕಸಿಯ ಹಾಗೆ ಕಂಡುಬರುತ್ತಾಳೆ. ಎಲ್ಲಿ ನೋಡಿದರೂ ರಕ್ತಪಾತ; ಪ್ರಾಣನಾಶ. ಸೃಷ್ಟಿ ಯಲ್ಲಿ ಮೃಗಕ್ಕಿಂತಲೂ ಮಾನವನು ಉತ್ತಮನೆಂಬ ಭಾವನೆ ನಮ್ಮ ಮನಸ್ಸಿ ನಲ್ಲಿ ಮೊಳೆತರೆ ಆಗ ಮಾನವನು ಪ್ರಕೃತಿಗಿಂತ ಉತ್ತಮನೇ ಆದಾನು. ಯಥಾಯೋಗ್ಯವಾದ ದೈವಸಂಕಲ್ಪವನ್ನು ಈಡೇರಿಸಬೇಕಾದರೆ, ಅಹಿಂಸೆಯೇ ಮಾನವನಿಗೆ ಮಾರ್ಗ. ಪೂರ್ಣ ಹಿಂಸೆಯಿಂದ ಪರಿವೃತವಾದ ಜಗತ್ತಿನ ಮಧ್ಯೆ ನಿಂತು, ಮನಸ್ಸಿನ ಅಂತರಾಳದಲ್ಲಿ ಶೋಧನೆಮಾಡಿ ನಿರ್ಧರಿಸಿಕೊಂಡು, ಅಹಿಂಸಾ ಪ್ರವೃತ್ತಿಯಿಂದ ನಡೆಯುವುದೇ ತನ್ನ ಕರ್ತವ್ಯವೆಂದು ಘೋಷಿಸ ಬೇಕು. ತಾನು ಕೇವಲ ಶರೀರವಲ್ಲವೆಂದೂ ಅವಿನಾಶಿ–ನಿರ್ವಿಕಾರಿ ಆತ್ಮ ನೆಂದೂ ದೇಹವು ಆತ್ಮಪರಿಪೂರ್ಣತೆಯ ಸಾಧನವೆಂದೂ ಅರಿತುಕೊಂಡು ಅರಿಷಡ್ವರ್ಗಗಳನ್ನು ಜಯಿಸುವ ವೀರನಾಗಬೇಕು. ಆತ್ಮಸಾಕ್ಷಾತ್ಕಾರದ ಧ್ಯೇಯದಿಂದ ಆಶೆ, ಕೋಪ, ಅಜ್ಞಾನ, ಅಸೂಯೆ ಇವೇ ಮೊದಲಾದ ರಾಗ ಗಳನ್ನು ದಮನಮಾಡಿದರೆ ಬಾಳಿನ ಲಕ್ಷ್ಯದೆಡೆಗೊಯ್ಯಲು ಸಾಧ್ಯವಾಗುತ್ತದೆ. ಈ ಬಗೆಯ 'ದಾಮ್ಯತಾ' ಭಾವದಲ್ಲಿಯೇ ಆಯಾಯ ಮನೋಧರ್ಮಕ್ಕೆ ತಕ್ಕಂತೆ ಆತ್ಮಪರಿಪೂರ್ಣತೆಯಾಗುತ್ತದೆ. ರಾಗದ್ವೇಷಗಳನ್ನು ಜಯಿಸುವುದು ಮಾನವಾತೀತ ಕಾರ್ಯವಲ್ಲ. ಅದು ಮನುಷ್ಯತ್ವದ ಸಾಧನೆ. ಅಹಿಂಸಾ

ಪಥದಲ್ಲಿ ಪ್ರಗತಿಹೊಂದುವುದು ಅತ್ಯಂತ ಧೈರ್ಯದ ಕೃತ್ಯ. ಅವರಲ್ಲಿ ದುರ್ಬಲತೆಗಾಗಲೀ ಹೇಡಿತನಕ್ಕಾಗಲೀ ಸ್ಥಾನವಿಲ್ಲ."[1]

ಅಹಿಂಸೆಯಲ್ಲಿ ಮಹಾಶಕ್ತಿ ಅಡಗಿದ್ದುದನ್ನು ಕಂಡರು ಗಾಂಧೀಜಿ. 'ಅಹಿಂಸಾ ಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗಃ' ಎಂಬ ಋಷಿವಾಣಿ ಅವರಿಗೆ ಸಾಕಾರ ಸ್ವರೂಪದ್ದಾಗಿತ್ತು. ಉಪನಿಷತ್ತುಗಳು ಹೇಳುವ ಧೀರರೇ ಅವರಾದರು. ರಾಷ್ಟ್ರವನ್ನು ಧೀರತನದತ್ತ ಒಯ್ಯಲು ಯತ್ನಿಸಿದರು. ಮಾನವ ಇತಿಹಾಸಕ್ಕೆ ಹೊಸ ಅರ್ಥವನ್ನು ಕೊಟ್ಟರು. ಅವರು ಕೇವಲ ಭೌತಿಕ ಅರ್ಥವನ್ನು (Materialistic interpretation) ಒಪ್ಪದೆ ಅದಕ್ಕೆ ಆಧ್ಯಾತ್ಮಿಕ ಅರ್ಥವನ್ನು ಕೊಟ್ಟರು. "ಮಾನವ ಕುಲದ ಶಕ್ತಿಸರ್ವಸ್ವ ಪರಿಣಾಮದಲ್ಲಿ ನಮ್ಮನ್ನು ಕೆಳಕ್ಕೆ ತಳ್ಳಬಯಸುವುದಿಲ್ಲ, ಮೇಲೆ ಎತ್ತ ಬಯಸುತ್ತದೆ. ಪ್ರೇಮ ನಿಯಮದ ನಿರ್ದಿಷ್ಟ ಪರಿಣಾಮವೇ ಇದು. ಅದು ಅರಿವಾಗದೆ ಸುಪ್ತವಾಗಿರುವುದು."[2]

"ನಾವು ಪ್ರಗತಿ ಹೊಂದಲು ಇತಿಹಾಸದ ಪುನರಾವೃತ್ತಿ ಆವಶ್ಯಕವಿಲ್ಲ. ಹೊಸ ಇತಿಹಾಸವನ್ನು ಸೃಷ್ಟಿಸಬೇಕು. ನಮ್ಮ ಪೂರ್ವಜರು ಬಿಟ್ಟಿರುವ ಕುಲಧನವನ್ನು ವೃದ್ಧಿಪಡಿಸಬೇಕು. ಭೌತ ಜಗತ್ತಿನಲ್ಲಿ ಹೊಸ ಸಂಶೋಧನೆಯ ಆವಿಷ್ಕಾರವನ್ನು ಮಾಡಿಕೊಳ್ಳಬೇಕಾದರೆ, ಅಧ್ಯಾತ್ಮ ಪ್ರಪಂಚದಲ್ಲಿ ನಾವೇಕೆ ದಿವಾಳಿತನವನ್ನು ಸಾರಬೇಕು? ಅಪರೂಪವಾಗಿರುವ ಅನೇಕ ಸಂಗತಿಗಳನ್ನು ಹೆಚ್ಚುಮಾಡಿ, ಅವು ಸಹಜವಾಗುವಂತೆ ಮಾಡಬಾರದೆ? ಮನುಷ್ಯ ಎಂದೆಂದಿಗೂ ಮೃಗಸ್ವಭಾವವನ್ನೇ ಹೊಂದಿದ್ದು ಆಮೇಲೆ ಆದೂ ಅಪರೂಪವಾಗಿ ಮನುಷ್ಯನಾಗುವಂತಿರಬೇಕೆ?"[3]

"ಪಶುರೂಪಿಯಾದಾಗ ಮಾನವ ಹಿಂಸಕ. ವಿವೇಕ ಉದಯಿಸಿದಾಗ ಅಹಿಂಸಕ. ತನ್ನೊಳಗಿನ ಚೇತನಶಕ್ತಿಗೆ ತಾನು ಎಚ್ಚೆತ್ತ ಕೂಡಲೇ ಮಾನವ ಹಿಂಸಕನಾಗಿ ಉಳಿಯಲಾರ. ಅಹಿಂಸೆಯತ್ತ ಮುಂದುವರಿಯದಿದ್ದರೆ

---

1. ಯಂಗ್ ಇಂಡಿಯಾ: ೨೪-೬-೧೯೨೬.
೨. ಮಂಗಳ ಪ್ರಭಾತ
೩. ಯಂಗ್ ಇಂಡಿಯಾ: ೨-೩-೨೪.

ಮಾನವ ವಿನಾಶದತ್ತಲೇ ಸಾಗುತ್ತಾನೆ. ಅಂತೆಲೇ ಮಹಾ ಪ್ರವಾದಿಗಳೂ, ಅವತಾರಪುರುಷರೂ ಅಹಿಂಸೆಯ ಲಕ್ಷಣಗಳಾದ ಸತ್ಯ, ಸಾಮರಸ್ಯ, ಬಂಧುಭಾವ ಇವುಗಳನ್ನೇ ಬೋಧಿಸಿದ್ದಾರೆ.

"ವಿನಾಶದ ನಡುವೆಯೂ ಜೀವವೇ ಉಳಿದಿರುವುದನ್ನು ನಾನು ಕಾಣುತ್ತೇನೆ. ಆದುದರಿಂದ ವಿನಾಶಕ್ಕಿಂತ ಉನ್ನತವಾದ ನಿಯಮವೊಂದು ಸೃಷ್ಟಿಯಲ್ಲಿ ಇರಲೇಬೇಕು. ಅಂಥ ನಿಯಮದ ಪ್ರಕಾರವೇ ಸುವ್ಯವಸ್ಥಿತ ಸಮಾಜದ ಅರಿವು ಉಂಟಾಗುವುದು ಸಾಧ್ಯ. ಆಗ ಬದುಕು ಸಾರ್ಥಕವೆನಿಸೀತು."[1]

ಹೀಗೆ ಸತ್ಯ-ಅಹಿಂಸೆಗಳಲ್ಲಿ ಲೋಕ, ಬದುಕು ಇವನ್ನೆಲ್ಲ ವೀಕ್ಷಿಸಿದ ಗಾಂಧೀಜಿ, ಅವುಗಳೇ ಹಿಂದೂ ಧರ್ಮದ ಸಾರವೆಂದು ನುಡಿದರು. ಹಿಂದೂ ಧರ್ಮದ ಸಾರವೇನೆಂದು ಯಾರಾದರೂ ನನ್ನನ್ನು ಪ್ರಶ್ನಿಸಿದರೆ, 'ಅಹಿಂಸಾ ಮಾರ್ಗದಲ್ಲಿ ಸತ್ಯಾನ್ವೇಷಣೆ ಎಂಬುದೇ ನನ್ನ ಉತ್ತರ' ಎಂದು ಹೇಳಿ, ನಾಸ್ತಿಕನೂ ಸತ್ಯಾರಾಧಕನಾದರೆ ಹಿಂದೂವಾಗಿರಬಹುದೆಂದು ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಹಿಂದೂ ಧರ್ಮದ ಇಂದಿನ ಹೀನಸ್ಥಿತಿಯನ್ನೂ, ನಿಸ್ತೇಜ ಸ್ವರೂಪವನ್ನೂ ಕಂಡು, ಅದಕ್ಕೆ ನಾವೇ ಕಾರಣರೆಂದೂ, 'ನಾವು ವೀರ್ಯವಂತರಾದರೆ, ತೇಜೋಶಾಲಿಗಳಾದರೆ, ಹಿಂದೂ ಧರ್ಮ ವಿಸ್ಮಯಜನಕ ಪ್ರಭೆಯಿಂದ ಬೆಳಗಬಲ್ಲದು' ಎಂದರು.

ಧರ್ಮ-ನೀತಿಗಳ ಪ್ರತೀಕದಂತೆ ಲೋಕಕ್ಕೆ ಕಂಡು ಬಂದ ಗಾಂಧೀಜಿ, ಆರಂಭದಲ್ಲಿ ಅವುಗಳ ಬಗೆಗೆ ಆಸಕ್ತಿಯನ್ನು ಕಳೆದುಕೊಂಡು ನಾಸ್ತಿಕರಾಗುವ ಮಟ್ಟಿಗೂ ಹೋದದ್ದುಂಟು. ಆದರೆ ಅವರು ಇಂಗ್ಲೆಂಡಿಗೆ ಹೋಗುವ ಮುನ್ನ ತಮ್ಮ ತಾಯಿಗೆ ಕೊಟ್ಟ ವಚನ, ವಿವಿಧ ಧರ್ಮಗ್ರಂಥಗಳ ತುಲನಾತ್ಮಕ ವ್ಯಾಸಂಗ-ಪ್ರಧಾನವಾಗಿ-ಭಗವದ್ಗೀತೆಯ ವ್ಯಾಸಂಗ, ಮತ್ತು ಬೈಬಲ್ಲಿನ 'ಗಿರಿಯ ಮೇಲಿನ ಬೋಧೆ', ಟಾಲ್‌ಸ್ಟಾಯಿಯವರ 'ದೇವರ ರಾಜ್ಯ ನಿನ್ನಲ್ಲಿಯೇ ಇದೆ' ಎಂಬ ಗ್ರಂಥದ ವ್ಯಾಸಂಗ, ಇವುಗಳ ಜತೆಗೆ ತಾವು ಪೂಜ್ಯಭಾವ ಹೊಂದಿದ್ದ ರಾಯಚಂದಭಾಯಿ ಎನ್ನುವವರಿಂದ ತಮ್ಮ ಸಂದೇಹನಿವೃತ್ತಿಗಾಗಿ ಆಗಾಗ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಿದ್ದುದು,

---

1. ಯಂಗ್ ಇಂಡಿಯಾ: ೪–೧೨–೧೯೨೬.

ಇತ್ಯಾದಿಗಳಿಂದ ಅವರ ಧಾರ್ಮಿಕ ಪ್ರಜ್ಞೆ ಅಳಿಯದೆ ಉಳಿದು, ಕಡೆಗೆ ಸ್ವಾನುಭವದಿಂದ, ಬಾಳಿನ ಕಡೆಯವರೆಗೂ ಧರ್ಮನೀತಿಗಳ ರಸಘಟ್ಟಿಯಾಗಿ ಉಳಿಯಿತೆಂದು ಅವರ ಆತ್ಮಕಥೆಯನ್ನು ಓದಿದವರಿಗೆ ಅರಿವಾಗುತ್ತದೆ. ೧೮೯೩ರಲ್ಲಿ ಅವರು ದಕ್ಷಿಣ ಆಫ್ರಿಕಾದಲ್ಲಿದ್ದರು. ಮುಸ್ಲಿಂ ಮತ್ತು ಕ್ರೈಸ್ತ ಗೆಳೆಯರು ಅವರನ್ನು ಮತಾಂತರ ಹೊಂದಲು ಪ್ರೇರಿಸುತ್ತಿದ್ದರು. ಆಗ ಅವರಿಗೆ ೨೪ ವರ್ಷ ವಯಸ್ಸು. ಧಾರ್ಮಿಕ ಸಮಸ್ಯೆಗಳು ಅವರ ಮನಸ್ಸಿನಲ್ಲಿ ಅಂದು ವಿಪ್ಲವಗೈದಿದ್ದವೆಂದು ಗೋಚರವಾಗುತ್ತದೆ. ಅವರು ತಮ್ಮ ಮನಸ್ಸಿನಲ್ಲಿ ಕೊರೆಯುತ್ತಿದ್ದ ಪ್ರಶ್ನಾವಳಿಯನ್ನು ರಾಯಚಂದಭಾಯಿಯವರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಸೂಚಿಸಿದ್ದರು :

"ಆತ್ಮವೆಂದರೇನು ? ಅದು ಕ್ರಿಯೆ ಮಾಡಬಲ್ಲುದೆ ? ಪೂರ್ವಾರ್ಜಿತ ಕರ್ಮ ಆತ್ಮವಿಕಾಸಕ್ಕೆ ಅಡ್ಡಿಯೆ ಹೇಗೆ ?

'ದೇವರೆಂದರೇನು ? ಅವನು ವಿಶ್ವದ ಸೃಷ್ಟಿಕರ್ತನೆ ?

'ಮೋಕ್ಷವೆಂದರೇನು ? ವ್ಯಕ್ತಿ ಜೀವಂತನಾಗಿರುವಾಗಲೇ ಮೋಕ್ಷ ಗಳಿಸಲು ಸಾಧ್ಯವೆ ? ಅಥವಾ ಇಲ್ಲವೆ ? ಇದನ್ನು ಸ್ಪಷ್ಟವಾಗಿ ತಿಳಿಯಲು ಸಾಧ್ಯವೆ ?

'ಮಾನವ ವ್ಯಕ್ತಿ ತನ್ನ ಕರ್ಮಕ್ಕೆ ತಕ್ಕಂತೆ ಪ್ರಾಣಿಯಾಗಿಯೋ, ವೃಕ್ಷ ವಾಗಿಯೋ ಕಡೆಗೆ ಶಿಲೆಯಾಗಿಯೋ ಹುಟ್ಟುವನೆಂದು ಹೇಳಲಾಗುತ್ತಿದೆ. ಇದು ನಿಜವೆ ?

'ಆರ್ಯಧರ್ಮವೆಂದರೇನು ? ಭಾರತದ ಎಲ್ಲ ಧರ್ಮಗಳೂ ವೇದಗಳ ಮೂಲದಿಂದಲೇ ಬಂದವೆ ?

'ವೇದಗಳನ್ನು ರಚಿಸಿದವರು ಯಾರು ? ಅವು ಅನಾದಿಯೆ ? ಹಾಗಾದರೆ ಅನಾದಿಯೆನ್ನುವುದರ ಅರ್ಥವೇನು ?

'ಬುದ್ಧನೂ ಮೋಕ್ಷವನ್ನು ಪಡೆಯಲಿಲ್ಲವೆಂದು ಹೇಗೆ ಹೇಳುತ್ತೀರಿ ? ಈ ಮಾತಿಗೆ ಪ್ರಮಾಣವೇನು ?

'ಈ ಲೋಕದ ಅಂತಿಮವೇನು ? ಮುಂದೆ ಎಂದಾದರೂ ಜಗತ್ತು ಉತ್ತಮವಾದೀತೆ ? ಈ ಲೋಕದ ಪೂರ್ಣ ಪ್ರಳಯ ಎನ್ನುವುದುಂಟೆ ? ನಿರಕ್ಷರಸ್ಥನೊಬ್ಬ ಕೇವಲ ಭಕ್ತಿಯಿಂದಲೇ ಮೋಕ್ಷ ಪಡೆಯುಲು ಸಾಧ್ಯವೆ ?

'ರಾಮ, ಕೃಷ್ಣ ಇವರನ್ನು ಭಗವಂತನ ಅವತಾರಗಳೆಂದು ವರ್ಣಿಸಲಾಗಿದೆ. ಇವರ ಅರ್ಥವೇನು? ಅವರು ಭಗವಂತನೇ ಆಗಿದ್ದರೆ? ಅಥವಾ ಅವನ ಅಂಶದಿಂದ ಕೂಡಿದ್ದರೆ? ಅವರಲ್ಲಿ ನಂಬಿಕೆಯಿಟ್ಟು ಮೋಕ್ಷ ಪಡೆಯಲು ಸಾಧ್ಯವೇ?

'ಬ್ರಹ್ಮ, ವಿಷ್ಣು, ಶಿವ ಎಂದರೆ ಯಾರು?

'ಒಂದು ಸರ್ಪ ನನ್ನನ್ನು ಕಚ್ಚುವ ಸಂದರ್ಭವಿದ್ದರೆ, ಅದರಿಂದ ನಾನು ಕಡಿಸಿಕೊಳ್ಳಬೇಕೆ? ಅಥವಾ ನನ್ನ ಜೀವವನ್ನು ಉಳಿಸಿಕೊಳ್ಳಲು ಅದನ್ನು ಕೊಲ್ಲುವುದೊಂದೇ ಮಾರ್ಗವಾಗಿದ್ದರೆ ಆ ರೀತಿ ಮಾಡಬೇಕೆ?"[1]

ಈ ಪ್ರಶ್ನಾವಳಿಯ ಸ್ವರೂಪ ವ್ಯಾಪಕತೆ ಇವುಗಳನ್ನು ನೋಡಿದರೆ, ಇವೆಲ್ಲ ಇಂದಿನ ಯುವಕರ ಮನಸ್ಸಿನಲ್ಲಿ ಕಾಡುತ್ತಿರುವ, ಅಥವಾ ಬಹುತೇಕ ವಿಚಾರವಂತರ ಮನಸ್ಸಿನಲ್ಲಿ ಕೊರೆಯುತ್ತಿರುವ ಪ್ರಶ್ನೆಗಳೇ ಎನ್ನಲಡ್ಡಿಯೇನು? ದೇವರು, ಧರ್ಮ, ನೀತಿ, ಮೋಕ್ಷ ಇತ್ಯಾದಿಗಳ ಬಗೆಗೆ ಈ ರೀತಿಯ ಪ್ರಶ್ನೆಗಳು ಅವರ ಮನಸ್ಸಿನಲ್ಲಿ ಸಂಶಯ ಮೂಡಿಸಿದ್ದರಿಂದಲೇ ಸತ್ಯಾನ್ವೇಷಕನ ಸ್ವಭಾವಕ್ಕೆ ತಕ್ಕಂತೆ ಅವರು ಉತ್ತರಗಳನ್ನು ಕಂಡುಕೊಳ್ಳಲು ಯತ್ನಿಸಿದರು. ಇಂಥ ಸಾಧನಪಥದಲ್ಲಿ ಅವರು ಅವಿಶ್ರಾಂತರಾಗಿ ಜೀವನದ ಕಡೆಯವರೆಗೂ ಸಾಗಿದರು. ದಿನದಿನಕ್ಕೂ ಅನುಭವದಿಂದ, ವಿಚಾರದಿಂದ ಮುಂದುವರಿದರು. ಅವರ ಮನಸ್ಸು ಸದಾ ತೆರೆದುದಾಗಿತ್ತು. ಋಗ್ವೇದದ 'ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ' (ಜಗತ್ತಿನ ಎಲ್ಲ ಕಡೆಗಳಿಂದಲೂ ಶುಭವಾದುದು, ಮಂಗಳವಾದುದು ಬರಲಿ) ಎಂಬ ಪರಮ ಸೊಲ್ಲು ಅವರ ಆತ್ಮವಿಕಾಸದ ಪರಿಯಾಗಿತ್ತು. ನೀತಿ, ಸಂಯಮ, ಇವುಗಳ ಸಾಧನದಿಂದ ಧರ್ಮಸಿದ್ಧಿಯನ್ನೂ, ಪರಮ ಸತ್ಯಸಾಕ್ಷಾತ್ಕಾರವನ್ನೂ ಪಡೆಯಲು ಉಜ್ಜುಗಿಸಿದರು. ಇವುಗಳಿಗೆಲ್ಲ ಅನ್ವಯಿಸುವಂತೆ ಅವರು ತಮ್ಮ ವಿಚಾರ ನಿಧಿಯನ್ನು ಬಿಟ್ಟುಹೋಗಿದ್ದಾರೆ. ಪ್ರಾಚೀನ ಸತ್ಯಗಳ ಮೇಲೆ ಅವರು ಹೊಸ ಬೆಳಕನ್ನು ಚೆಲ್ಲಿದ್ದಾರೆ. ಅವರನ್ನು ಆಧುನಿಕ ಸ್ಮೃತಿಕಾರ ಎಂದು

---

1. The Collected Works of Gandhiji: Vol. I; Page 90-91.

ಕರೆದವರುಂಟು. ಯುಗಧರ್ಮಕ್ಕೆ ಅನುಗುಣವಾಗಿ ತಮ್ಮ ಬಾಳನ್ನು ರೂಪಿಸಿಕೊಳ್ಳಲು ಹೆಣಗಿದರಲ್ಲದೆ ಸತ್ಯ, ಯಜ್ಞ, ಕರ್ಮ ಇತ್ಯಾದಿ ಶಬ್ದಗಳ ಅರ್ಥವನ್ನು ವಿಸ್ತರಿಸಿದರು. ಉದಾಹರಣೆಗೆ 'ದೇವರು' ಎಂಬ ಶಬ್ದದ ಬಗೆಗೆ ಅವರ ವ್ಯಾಖ್ಯಾನವನ್ನೇ ನೋಡೋಣ: 'ಮಾನವನ ಭಾಷೆಯಲ್ಲಿ ದೇವರನ್ನು ಪೂರ್ಣವಾಗಿ ವರ್ಣಿಸಲು ಸಾಧ್ಯವಾಗುವುದಾದರೆ, ಅದು 'ದೇವರು ಸತ್ಯಸ್ವರೂಪ' ಎಂಬುದೇ ನನ್ನ ಮತ. ಎರಡು ವರ್ಷಗಳ ಹಿಂದೆ, ನಾನೊಂದು ಹೆಜ್ಜೆ ಮುಂದೆ ಹೋಗಿ 'ಸತ್ಯವೇ ದೇವರು' ಎಂಬುದಾಗಿ ಹೇಳಿದ್ದೆ. ಈ ಎರಡರ ಸೂಕ್ಷ್ಮ ವ್ಯತ್ಯಾಸ ಅರಿವಾದೀತು.

"ಸತ್ಯದ ಶಕ್ತಿಗೆ, ಸತ್ಯದ ಪ್ರಭಾವಕ್ಕೆ ನಾಸ್ತಿಕರೂ ಮರುಮಾತಿಲ್ಲದೆ ಕುಣಿಯುತ್ತಾರೆ. ಆದರೆ ಸತ್ಯಸ್ಥಾಪನೆ ಮಾಡಬೇಕೆಂಬ ತೀವ್ರಾಕಾಂಕ್ಷೆಯಲ್ಲಿ ದೇವರ ಅಸ್ತಿತ್ವವನ್ನು ಅವರು ಒಪ್ಪುವುದಿಲ್ಲ. ಇದು ಅವರಿಗೆ ಸಹಜವೇ. ಈ ತಾರ್ಕಿಕ ದೃಷ್ಟಿಯಿಂದ 'ದೇವರು ಸತ್ಯಸ್ವರೂಪ' ಎಂದು ಹೇಳುವುದಕ್ಕಿಂತಲೂ 'ಸತ್ಯವೇ ದೇವರು' ಎಂದು ನಾನು ಹೇಳಬಯಸುತ್ತೇನೆ. ಅವರ ತರ್ಕಕ್ಕೆ ಆಧಾರವಿಷ್ಟೆ. ಸರ್ವಕರುಣಾಳುವಾದ ಭಗವಂತ ನಾಸ್ತಿಕರನ್ನು ತನ್ನ ಪ್ರೇಮದಿಂದ ಪ್ರತ್ಯೇಕಿಸುವನೆ? ಅವನ ಕರುಣೆಯ ಪ್ರಭಾವದಿಂದಲೇ ಅವರೂ ಜೀವಿಸಿದ್ದಾರೆ. ಆದುದರಿಂದ ಅಪರಿಪೂರ್ಣ ಮಾನವ 'ಸತ್ಯದ ಗುತ್ತಿಗೆ ತನ್ನದೇ ಎಂದು ಅಹಂಕಾರವೇಕೆ ಪಡಬೇಕು?"[1] ಗಾಂಧೀಜಿಯ ಅಪಾರ ಪ್ರೇಮಸಾಗರದಲ್ಲಿ ಸ್ಥಾನಪಡೆಯದೇ ಇದ್ದುದು ಇಲ್ಲವೆನ್ನಬೇಕು. ಅದು ಮಾನವ ಕಾರುಣ್ಯದ, ಅವ್ಯಾಜ ವಾತ್ಸಲ್ಯದ ಸ್ವರೂಪವೇ ಆಗಿದ್ದಿತು. ಇಂಥ ಧರ್ಮ ಮತ್ತು ನೀತಿಗಳಿಂದ ಕೂಡಿದ್ದ ಗಾಂಧೀಜಿ, ಇವು ವ್ಯಕ್ತಿ ಜೀವನದಲ್ಲಿ ರೂಪುಗೊಂಡಂತೆ, ಸಮಾಜದಲ್ಲಿಯೂ ಪ್ರತಿಷ್ಠಿತವಾಗಬೇಕೆಂದು ಹಿರಿ ಬಯಸಿದರು. ವ್ಯವಹಾರದಲ್ಲಿ, ಸಾಮಾಜಿಕ ಜೀವನದಲ್ಲಿ ರೂಪುಗೊಳ್ಳದ ಧರ್ಮ-ನೀತಿ ಒಂದು ರೀತಿಯಲ್ಲಿ ಪಂಗುವಾದಂತೆ. ಅವು ಸಮಾಜದಲ್ಲಿ ರೂಪುಗೊಂಡರೇನೇ ನಿಜ ಧರ್ಮ-ನಿಜ ನೀತಿ.

---

1. ಯಂಗ್ ಇಂಡಿಯಾ: ೩೧-೧೧-೧೯೨೧.

ಇದರಿಂದ ಗಾಂಧೀಜಿಯ ಸಾಮಾಜಿಕ ಅಭಿಪ್ರಾಯಗಳ ಬಗೆಗೆ ಸಹಜ ವಿಚಾರ ಉತ್ಪನ್ನವಾಗುತ್ತದೆ. ಅವರು ಸಾಮಾಜಿಕ ಎಂದರೆ, ಸಮಾಜದ ಸಂಬಂಧಗಳುಳ್ಳ ರಾಜಕೀಯ, ಆರ್ಥಿಕ, ಶೈಕ್ಷಣಿಕ ಈ ಎಲ್ಲ ಕ್ಷೇತ್ರಗಳ ಜೀವನದಲ್ಲೂ ಸಹಜವಾಗಿಯೇ ಪಾಲುಗೊಂಡರು. ಇವೆಲ್ಲವೂ ಏಕಮೂಲ ಸೂತ್ರದಿಂದ ಬಂಧಿತವೆಂದು ಅವರು ನಂಬಿದ್ದರು. ಯಾವುದೇ ಕ್ಷೇತ್ರದಲ್ಲಿ ಒಳ್ಳೆಯ ಗುರಿಯನ್ನು ಸಾಧಿಸಬೇಕಾದರೂ ಅದು ಒಳ್ಳೆಯ ಮಾರ್ಗದಿಂದಲೇ ಆಗಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಒಳ್ಳೆಯದು ಎಂದರೆ, 'ನೈತಿಕ' ಎಂದು ಅವರ ಅರ್ಥವಾಗಿತ್ತು. ನೀತಿಗೆ ಬಾಹಿರವಾದುದು ಧರ್ಮಕ್ಕೂ ಬಾಹಿರ ಎಂದು ಅವರ ನಂಬಿಕೆಯಾಗಿತ್ತು. ಸಮಾಜದಲ್ಲಿ ವ್ಯಕ್ತಿ-ವ್ಯಕ್ತಿಗಳ, ವಿವಿಧ ಪಂಗಡಗಳ, ವಿವಿಧ ಸಂಬಂಧಗಳು, ರಾಜಕಾರಣ, ಅರ್ಥೋತ್ಪನ್ನ, ಉಪಭೋಗ, ವಿತರಣೆ, ಶಿಕ್ಷಣ ಇವುಗಳೆಲ್ಲ ನೀತಿಸೂತ್ರಕ್ಕೆ ಅನ್ವಯಿಸಿದಂತಿರಬೇಕು.

ಸಾಮಾಜಿಕ ಸಂಬಂಧಗಳಲ್ಲಿ ಸಮಾಜ ಮತ್ತು ವ್ಯಕ್ತಿ ಇವುಗಳ ಪರಸ್ಪರ ಸಂಬಂಧ ಅತ್ಯಂತ ಮುಖ್ಯವಾದುದು. ಇವು ಪರಸ್ಪರ ವಿರೋಧ ವಾದುವೆಂದು ಭಾವಿಸಿ, ಸಮಾಜದ ಬಗೆಗೆ ತೀವ್ರ ಪ್ರಾಮುಖ್ಯತೆಯೋ ಅಥವಾ ವ್ಯಕ್ತಿಯ ಬಗೆಗೆ ತೀವ್ರ ಪ್ರಾಮುಖ್ಯತೆಯೋ ಆಗುವುದುಂಟು. ಇದ ರಿಂದ ಜೀವನದ ಸಮತೋಲ ಸ್ಥಿತಿ ತಪ್ಪುವುದು ಸ್ವಾಭಾವಿಕ. ಆದುದರಿಂದ ಈ ಎರಡೂ ಪರಸ್ಪರ ಪೂರಕವೆಂದೂ ಅನ್ಯೋನ್ಯ ಆಶ್ರಯ ಉಳ್ಳವೆಂದೂ ಗಾಂಧೀಜಿ ಪರಿಗಣಿಸಿದರು. ಕಾರ್ಯದ ಅಭಿಕ್ರಮ (Initiative) ವ್ಯಕ್ತಿಯ ದೆಂದೂ ಅದರ ಫಲ ಸಮಾಜದ್ದೆಂದೂ, ಅಂದರೆ, ಅದನ್ನು ಉಳಿಸಿ-ಬೆಳೆಸು ವುದೆಂದೂ ಅವರು ಭಾವಿಸಿದ್ದರು. ಸಮಾಜದ ಮೇಲ್ಮೆಗಾಗಿ ವ್ಯಕ್ತಿ, ಸ್ವಯಂ ಪ್ರೇರಣೆಯಿಂದ ತನ್ನನ್ನು ಬಲಿಕೊಡಲು ಸಿದ್ಧನಿರಬೇಕೆಂಬುದು ಅವರ ಅಭಿ ಪ್ರಾಯವಾಗಿತ್ತು. ಅಹಿಂಸೆಯ ಆಧಾರದ ಮೇಲೆ ರಚಿಸಿದ ಸಮಾಜದಲ್ಲಿ ವ್ಯಕ್ತಿಯೇ ಪರಮಗಣ್ಯ. "ವ್ಯಕ್ತಿಗೆ ಗಣನೆಯಿಲ್ಲದೆ ಹೋದರೆ ಸಮಾಜದಲ್ಲಿ ಉಳಿಯುವುದಾದರೂ ಏನು? ಮಾನವ ತನ್ನನ್ನು ಆತ್ಮಸಂತೋಷದಿಂದ ಸಮಾಜಸೇವೆಗೆ ಪೂರ್ಣವಾಗಿ ಅರ್ಪಿಸಿಕೊಳ್ಳುವಂತೆ ಮಾಡುವುದು ವ್ಯಕ್ತಿ ಸ್ವಾತಂತ್ರ್ಯವೊಂದೇ. ಅವನನ್ನು ಬಲಾತ್ಕಾರವಾಗಿ ಈ ಕಾರ್ಯಕ್ಕೆ ತೊಡಗಿಸಿ

ದರೆ, ಅವನು ಯಂತ್ರದಂತೆ ಆದಾನು ; ಸಮಾಜ ನಾಶವಾದೀತು. ವ್ಯಕ್ತಿ ಸ್ವಾತಂತ್ರ್ಯದ ನಿರಾಕರಣೆಯ ಆಧಾರದ ಮೇಲೆ ಯಾವ ಸಮಾಜವನ್ನೂ ನಿರ್ಮಿಸುವುದು ಅಸಾಧ್ಯ. ಅದು ಮಾನವ ಸ್ವಭಾವಕ್ಕೆ ವಿರುದ್ಧ. ಮನುಷ್ಯನಿಗೆ ಕೋಡು ಅಥವಾ ಬಾಲ ಹೇಗೆ ಮೂಡಲಾರದೋ ಹಾಗೆಯೇ ತನ್ನಧೀನದ ಮನವಿಲ್ಲದಿದ್ದರೆ, ಆತ ಮಾನವನಾಗಿ ಉಳಿಯಲಾರ ; ಬಾಳಲಾರ. ವಾಸ್ತವವಾಗಿ ವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆಯಿಲ್ಲದವರೂ ತಮ್ಮ ಸ್ವಾತಂತ್ರ್ಯವನ್ನು ಮಾತ್ರ ನಂಬಿಯೇ ಇರುತ್ತಾರೆ. ಚೆಂಘಿಸ್ ಖಾನನಂಥ ಆಧುನಿಕರು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡೇ ಇರುತ್ತಾರೆ.

"ಮನುಷ್ಯ ತನಗೆ ತಾನು ಕಡುವೈರಿಯೂ ಆಗಬಲ್ಲ ; ಅತ್ಯಂತ ಗೆಳೆಯನೂ ಆಗಬಲ್ಲ—ಎಂದು ಎಲ್ಲ ಸಂತರೂ ಎಲ್ಲರಿಗೂ ಅರಿವಾಗುವಂತೆ ಸಾರಿದ್ದಾರೆ. ಸ್ವತಂತ್ರನಾಗಿರುವುದೂ, ಗುಲಾಮನಾಗಿರುವುದೂ ಅವನ ಕೈಯಲ್ಲೇ ಇದೆ. ವ್ಯಕ್ತಿಗೆ ನಿಜವಾದುದು ಸಮಾಜಕ್ಕೂ ನಿಜ.

"ಕಲ್ಮಷರಹಿತ ಅಹಿಂಸಾ ರಾಜ್ಯದಲ್ಲಿ ಮಾತ್ರವೇ ವ್ಯಕ್ತಿಸ್ವಾತಂತ್ರ್ಯಕ್ಕೆ ಪರಿಪೂರ್ಣ ಅವಕಾಶ."[1]

"ಕೇವಲ ವ್ಯಕ್ತಿಯೊಬ್ಬನ ಮೇಲ್ಮೆಯನ್ನೇ ಗುರಿಯಾಗುಳ್ಳ ಯಾವ ಒಂದು ಧರ್ಮವೂ ಇಲ್ಲ. ಹಾಗೆಯೇ ಅಪರಾಧ ಮಾಡಿದ ವ್ಯಕ್ತಿಯೊಬ್ಬನನ್ನೇ ಅಲ್ಲದೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅನೇಕ ಮಂದಿಯ ಮೇಲೆ ಪರಿಣಾಮ ಮಾಡದೆ ಇರುವ ಯಾವ ಒಂದು ನೈತಿಕ ಅಪರಾಧವೂ ಇಲ್ಲ. ಆದುದರಿಂದ ಒಬ್ಬ ವ್ಯಕ್ತಿ ಒಳ್ಳೆಯವನೋ ಕೆಟ್ಟವನೋ ಎನ್ನುವುದು ಅವನೊಬ್ಬನಿಗೇ ಸಂಬಂಧಿಸಿದುದಲ್ಲ ; ಅದು ನಿಜವಾಗಿ ಜನಸಮುದಾಯಕ್ಕೆ ಸಂಬಂಧಿಸಿದುದು ; ಅಷ್ಟೇ ಅಲ್ಲ. ಇಡಿಯ ಪ್ರಪಂಚಕ್ಕೇ ಸಂಬಂಧಿಸಿದುದು."[2]

ಗಾಂಧೀಜಿ ಈ ಮಾತುಗಳನ್ನು ಹೇಳುವಾಗ ಮಾನವ ಸಮಾಜಜೀವಿ ಎಂಬುದನ್ನು ಪೂರ್ಣವಾಗಿ ಗಮನದಲ್ಲಿಟ್ಟುಕೊಂಡಿದ್ದರು. ಸಮಾಜದಿಂದ ವಿವಿಕ್ತನಾದ ವ್ಯಕ್ತಿ ಗರ್ವಿಯೂ ದುರಭಿಮಾನಿಯೂ ಆಗಲು ಸಾಧ್ಯ. 'ಯಥಾ ಪಿಂಡೇ ತಥಾ ಬ್ರಹ್ಮಾಂಡೇ' ಎಂಬುದು ಅವರ ನಂಬಿಕೆಯಾಗಿತ್ತು.

---

1. ಹರಿಜನ : ೨೯–೫–೩೯
2. ಕನ್ನಡ ಗಾಂಧೀ ಗ್ರಂಥಮಾಲೆ—ಧರ್ಮನೀತಿ ಸಂಪುಟ : ಪುಟ ೫೫.

ಇತಿಹಾಸ ಕಾಲದಿಂದ ವಿಕಾಸ ಪಥದಲ್ಲಿ ನಡೆದುಬಂದಿರುವ ಮಾನವ ಸಮಾಜದಲ್ಲೇ ಬೆಳೆದು ಬಂದಿದ್ದಾನೆ, ಅವನು ಗ್ರಾಮ, ಪಟ್ಟಣ, ನಗರ ರಚಿಸಿ, ಕುಟುಂಬಿಯಾಗಿ ನಾಗರಿಕ ಸ್ಥಿತಿ ಬೆಳೆಸುತ್ತಾ ಬಂದಿದ್ದಾನೆ. ಹಾಗೆಯೇ ಜನಸಮುದಾಯದ, ರಾಷ್ಟ್ರದ ಸದಸ್ಯನಾಗಿದ್ದಾನೆ. ಅಂತರ-ರಾಷ್ಟ್ರೀಯ ಸಮಾಜ ರಚಿಸಿದ್ದಾನೆ. ಇದಕ್ಕೇನು ಕಾರಣ? ಹಿಂಸೆಯ ಲಕ್ಷಣ ಕಡಿಮೆಯಾಗಿ ಅಹಿಂಸೆಯ ಲಕ್ಷಣಗಳು ವೃದ್ಧಿಯಾಗುತ್ತಿವೆ. ಇದನ್ನು ಗಾಂಧೀಜಿ 'ಗತಿಶೀಲ ಅಹಿಂಸೆ' (Progressive Non-Violence) ಎಂದು ಕರೆದಿದ್ದಾರೆ.

ಸಮಾಜ ಜೀವನವನ್ನು ಬಿಟ್ಟು ಆತ್ಮಸಾಕ್ಷಾತ್ಕಾರ ಸಾಧ್ಯವಿಲ್ಲವೆಂದು ನಂಬಿದ್ದ ಗಾಂಧೀಜಿ, ವ್ಯಕ್ತಿ ಸಮಾಜಸೇವೆಗೆ ಸಿದ್ಧನಾಗಿರುವುದು ಕರ್ತವ್ಯ ವೆಂದು ನಂಬಿದ್ದರು. ಬಲಿಷ್ಠರು ದುರ್ಬಲರ ಸೇವೆಯನ್ನೂ, ಧನಿಕರು ಬಡವರ ಸೇವೆಯನ್ನೂ, ವಿದ್ಯಾವಂತರು ಅಕ್ಷರಹೀನರ ಸೇವೆಯನ್ನೂ ಮಾಡಲೇಬೇಕಾದುದು ಸಹಜ ಕರ್ತವ್ಯ; ಸಾಮಾಜಿಕ ಹೊಣೆ. ಇದು ಆಗದೆ ಹೋದರೆ ಸಮಾಜ ದೃಢವಾಗಿ, ಸುರಕ್ಷಿತವಾಗಿ, ಶಾಂತವಾಗಿ ನಿಲ್ಲ ಲಾರದು. ಈ ವಿಚಾರದಿಂದ ಕೂಡಿದ ಗಾಂಧೀಜಿ ಹಿಂದೂ ಸಮಾಜದಲ್ಲಿ, ಭಾರತದ ಜನಜೀವನದಲ್ಲಿ ಕಂಡುಬಂದ ಅಸ್ಪೃಶ್ಯತೆ, ಮದ್ಯಪಾನ, ಮಾದಕ ವಸ್ತುಗಳ ಸೇವನೆ, ದ್ಯೂತ, ಬಾಲ್ಯ ವಿವಾಹ, ದೇವದಾಸೀ ಪದ್ಧತಿ ಇತ್ಯಾದಿ ಗಳನ್ನು ನಿಷೇಧಿಸುವ ಬಗೆಗೆ, ಬದುಕನ್ನು ಶುದ್ಧಗೊಳಿಸುವ ಬಗೆಗೆ ತೀವ್ರ ಆಸಕ್ತಿಯುಳ್ಳವರಾಗಿದ್ದರು. ಈ ದುರ್ವ್ಯಸನಗಳು ಸಮಾಜ ಜೀವನದಿಂದ ದೂರವಾದ ಹೊರತು ಸುಖ-ಕ್ಷೇಮ, ನಿಜ ಪ್ರಗತಿ ಇವು ಕನಸಿನ ಮಾತೆಂದು ಅವರು ನಂಬಿದ್ದರು. ಮಾನವ ವ್ಯಕ್ತಿ ತನಗೆ ಸ್ಪಷ್ಟವಾಗಿ ಅಹಿತ ವಾದುದನ್ನೇ ಪ್ರಿಯಕಾರಿಯೆಂದು ನಂಬಿ ಕುಳಿತಿರುವುದು ಸೋಜಿಗವೇ! ಅವುಗಳ ಆಕರ್ಷಣೆ ಅಷ್ಟು ಪ್ರಬಲ. ಇವುಗಳನ್ನು ಶಾಸನಮಾಡಿ ನಿರೋಧಿ ಸುವುದರ ಜತೆಗೆ, ಸಾರ್ವಜನಿಕ ಜೀವನದಲ್ಲಿ ಸ್ವಚ್ಛ ವಿಚಾರ ಪ್ರಚಾರ ಹಾಗೂ ಅದಕ್ಕೆ ಅನುಗುಣವಾದ ನಡೆವಳಿಕೆ ಸಮಾಜ ಮುಖಂಡರ ಆದ್ಯಕರ್ತವ್ಯ ವೆಂದು ಅವರು ಅರುಹಿದರು.

ಯಾವುದೇ ಸಮಾಜ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ, ಸ್ತ್ರೀ-ಪುರುಷರಿಬ್ಬರೂ ಕಾರಣರು. 'ಅಬಲೆಯರು' ಎಂದು ಲೋಕಪ್ರಚಲಿತವಾಗಿರುವ ಮಹಿಳೆಯರ ಉದ್ಧಾರದ ಬಗೆಗೆ ಗಾಂಧೀಜಿ ವಿಶೇಷ ಗಮನವನ್ನು ಕೊಟ್ಟರು. ಮಹಿಳೆಯರ ಹೃದಯಾಂತರಾಳವನ್ನು ಹೊಕ್ಕು, ಅವರ ನಿಲುವನ್ನೇ ತಳೆದು, ಅವರಲ್ಲಿ, ತಾದಾತ್ಮ್ಯಭಾವ ಹೊಂದಿದ್ದ ಹಿರಿಮೆ ಅವರದು. ಆಂಗ್ಲ ಮಹಿಳೆ ಶ್ರೀಮತಿ ಎಚ್. ಎಸ್. ಎಲ್. ಪೋಲಕ್ ಎಂಬಾಕೆ, (ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯ ಜತೆಜತೆಗೆ ಕೆಲಸ ಮಾಡಿದ ಶ್ರೀ ಪೋಲಕ್ ಅವರ ಪತ್ನಿ) 'ಗಾಂಧಿಯವರೊಡನೆ ಮಾತನಾಡುವಾಗ ನಾವು ಒಬ್ಬ ಪರಪುರುಷನೊಡನೆ ಮಾತನಾಡುತ್ತಿದ್ದೇವೆ ಎಂಬ ಭಾವನೆಯೇ ಉತ್ಪನ್ನವಾಗದು' ಎಂದು ನುಡಿದಿರುವ ಮಾತು ಇದಕ್ಕೆ ನಿದರ್ಶನ.

ಗಾಂಧೀಜಿ ತಮ್ಮ ಸಾನ್ನಿಧ್ಯಕ್ಕೆ ಬಂದ ಮಹಿಳೆಯರನ್ನು 'ಸಬಲೆ'ಯರನ್ನಾಗಿ ಮಾಡಿದರು. ಈ ಸಬಲತೆ ದೈಹಿಕ ಅಲ್ಲ; ಆತ್ಮದ ಬಲ, ಶೀಲದ ಬಲ. ಸಮಾಜಕ್ಕೆ ಮಾತೃಸ್ಥಾನದಲ್ಲಿರುವ ಸ್ತ್ರೀಯ ಸ್ಥಿತಿ ದಯನೀಯವಾಗಿದ್ದುದನ್ನು, 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ನುಡಿಗೆ ಅನುಗುಣವಾಗಿದ್ದುದನ್ನು ಕಂಡು ಅವರು ಮರುಗಿದರು. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ' ಎಂಬ ಉಕ್ತಿಗೆ ಅನುಗುಣವಾಗಿ, ಪ್ರಾಚೀನ ಭಾರತೀಯ ಸಂಸ್ಕೃತಿಗೆ ಅನುಸಾರವಾಗಿಯೂ ಆಧುನಿಕ ಕಾಲದ ಆವಶ್ಯಕತೆಗಳಿಗೆ ತಕ್ಕಂತೆಯೂ ಅವರಿಗೆ ಆದರ್ಶ-ಪ್ರೋತ್ಸಾಹಗಳನ್ನಿತ್ತು ಅವರಿಂದ ಅಮೋಘ ಕಾರ್ಯಗಳನ್ನು ಮಾಡಿಸಿದರು. ಸ್ತ್ರೀ ಸ್ವಾತಂತ್ರ್ಯ ಸ್ವೈರಾಚಾರವಲ್ಲವೆಂದೂ, ಆತ್ಮೋತ್ಕರ್ಷಕ್ಕೆ ಅನುಸಾರವಾಗಿ ಅದು ಇರಬೇಕೆಂದೂ, ಆಕೆ ತನ್ನ ಎಲ್ಲ ಸಹಜ ಕರ್ತವ್ಯಗಳನ್ನೂ—ತಾಯಿ, ಮಗಳು, ಸೋದರಿ, ಪತ್ನಿ, ದೇವತೆ ಇತ್ಯಾದಿ ಎಲ್ಲವನ್ನೂ—ಆಯಾ ಕಾಲಕ್ಕೆ ತಕ್ಕಂತೆ ನಿರ್ವಹಿಸಲು ಸಾಧ್ಯವಾಗುವಂತೆಯೂ ಅವರು ಪ್ರೋತ್ಸಾಹವಿತ್ತರು; ಸ್ತ್ರೀಪುರುಷರ ಸಮಾನತೆಯನ್ನು ಹೀಗೆ ವರ್ಣಿಸಿದರು: "ಸ್ತ್ರೀಪುರುಷರಿಬ್ಬರೂ ಸಮಾನ ಸ್ಥಾನವುಳ್ಳವರಾದರೂ ಸಮಗ್ರಸಮರೆನಿಸಲಾರರು. ಅವರು ಪರಸ್ಪರ ಪೂರಕವಾದ, ಎಣೆಯಿಲ್ಲದಂಥ ಜೋಡಿ; ಒಬ್ಬರಿಂದ ಮತ್ತೊಬ್ಬರಿಗೆ ಸಹಾಯವಾಗುತ್ತದೆ; ಒಬ್ಬರಿಲ್ಲದೆ ಮತ್ತೊಬ್ಬರನ್ನು ಯೋಚಿಸುವುದೂ ಅಸಾಧ್ಯ. ಆದುದರಿಂದ

ಈ ಇಬ್ಬರ ಸ್ಥಾನದಲ್ಲಿ ಯಾರೊಬ್ಬರ ಸ್ಥಾನಕ್ಕೆ ಕುಂದುಕವುಂಟಾದರೂ ಅದು ಇಬ್ಬರ ನಾಶಕ್ಕೂ ಸಮಾನವಾಗಿ ಕಾರಣವಾಗುತ್ತದೆ."[1]

'ಸ್ತ್ರೀಪುರುಷರ ಸಮಾನತೆಯೆಂದರೆ, ಇಬ್ಬರ ಉದ್ಯೋಗಗಳೂ ಒಂದೇ ಇರಬೇಕೆಂದು ಅರ್ಥವಲ್ಲ. ಸ್ತ್ರೀಯರು ಬೇಟೆಯಾಡಲು ಅಥವಾ ಭರ್ಜಿಯನ್ನು ಉಪಯೋಗಿಸಲು ಶಾಸನರೂಪವಾದ ಅಡ್ಡಿಯಿಲ್ಲದಿರಬಹುದು. ಆದರೆ ಪುರುಷನಿಗೇ ಸಂಬಂಧಿಸಿದ ಕೆಲವು ಉದ್ಯೋಗಗಳ ಬಗೆಗೆ ಆಕೆ ಸ್ವಾಭಾವಿಕವಾಗಿಯೇ ಹೇವರಿಸುತ್ತಾಳೆ. ಪರಸ್ಪರ ಪೂರಕವಾಗಲೆಂದು ಪ್ರಕೃತಿ ಲಿಂಗಭೇದವನ್ನು ಸೃಷ್ಟಿಸಿದೆ. ಸ್ವರೂಪಕ್ಕೆ ತಕ್ಕಂತೆ ಅವುಗಳ ಕರ್ಮಗಳೂ ನಿರ್ಣಯಿಸಲ್ಪಟ್ಟಿವೆ."[2]

ಬಾಲ್ಯವಿವಾಹ, ಬಾಲ್ಯ ವೈಧವ್ಯ, ವೇಶ್ಯಾವೃತ್ತಿ ಅವಿವಾಹಿತ ಕನ್ಯೆಯರ ಅಧಃಪತನ ಇವುಗಳನ್ನು ಗಾಂಧೀಜಿ ಸಹಿಸಲಿಲ್ಲ. ಅದಕ್ಕಾಗಿ ಸುಧಾರಣೆಯನ್ನು ಅವರು ಬೆಂಬಲಿಸಿದರು.

ಪತಿ-ಪತ್ನಿಯರ ಆದರ್ಶ ಸಂಬಂಧದಲ್ಲಿ ಅವರ ವಿಚಾರ ಮನನ ಯೋಗ್ಯ. ಅವರ ಸ್ವಂತ ಜೀವನದಲ್ಲಿಯೇ ಕಸ್ತೂರ ಬಾ ಅವರೊಡನೆ ಹೊಂದಿದ್ದ ಸಂಬಂಧದಿಂದಲೇ ಅದನ್ನು ತಿಳಿಯಬಹುದು. ಬಾ ಮತ್ತು ಅವರು ಇಬ್ಬರೂ ಸರಿಸುಮಾರು ಒಂದೇ ವಯಸ್ಸಿನವರಾಗಿದ್ದರು. ಅವರ ವಿವಾಹ ಒಂದು 'ಬಾಲ್ಯ ವಿವಾಹ'ವೇ ಆಗಿದ್ದಿತು. ಇಬ್ಬರಿಗೂ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ಮಾನಸಿಕ-ಬೌದ್ಧಿಕ ಅಂತರವಿದ್ದರೂ ಪರಸ್ಪರ ಪ್ರೇಮ ಅಚಲವಾದ ಪ್ರೇಮವಾಗಿತ್ತು. ಇಬ್ಬರೂ ಪರಸ್ಪರ ಒಪ್ಪಿಗೆಯ ಮೇಲೆ ಬ್ರಹ್ಮಚರ್ಯ ಜೀವನವನ್ನು ನಡೆಸಲಾರಂಭಿಸಿ, ಇಡಿಯ ಬಾಳನ್ನು ದೇಶಸೇವೆಗೆ ಅರ್ಪಿಸಿದ ಮೇಲೆ, ಆ ಪ್ರೇಮಬಾಂಧವ್ಯ ಕಲ್ಮಷರಹಿತವಾಗಿ ಚೊಕ್ಕಬಂಗಾರವಾಯಿತು. ಈ ಆದರ್ಶವನ್ನು ಈ ಮಾತುಗಳಲ್ಲಿ ಕಾಣಬಹುದು: "ನನ್ನ ಆದರ್ಶ ಸತಿ ಸೀತೆ; ಆದರ್ಶಪತಿ ರಾಮಚಂದ್ರ. ಆದರೆ ಸೀತೆ ರಾಮನಿಗೆ ಗುಲಾಮಳಾಗಿರಲಿಲ್ಲ. ರಾಮ ಸೀತೆಗೆ ಯಾವಾಗಲೂ

---

1. ಬೊಂಬಾಯಿಯ ಒಂದು ಭಾಷಣದಿಂದ: ೨೦-೨-೧೯೧೮.
2. ಹರಿಜನ: ೨-೧೨-೧೯೩೯.

4213
VIJAYA EVENING COLLEGE LIBRARY
BANGALORE-4.

ದಾಕ್ಷಿಣ್ಯಪರನಾಗಿದ್ದನು. ನೈಜಪ್ರೇಮವಿರುವೆಡೆ, ಅನೈಕ್ಯದ ಪ್ರಶ್ನೆಯೇ ಇರದು. ಎಲ್ಲಿ ನೈಜಪ್ರೇಮವಿಲ್ಲವೋ ಅಲ್ಲಿ ಐಕ್ಯತೆ ಎಂದಿಗೂ ಇರುವುದಿಲ್ಲ."[1]

ಅನೇಕ ಮಂದಿ ಸ್ತ್ರೀಯರೂ ಮತ್ತು ಅನೇಕ ಮಂದಿ ಪುರುಷರೂ ತಮ್ಮ ತಮ್ಮ ದಾಂಪತ್ಯ ಜೀವನಕ್ಕೆ ಸಂಬಂಧಿಸಿದಂತೆ ಉದ್ಭವಿಸಿದ ಸಮಸ್ಯೆಗಳಿಗೆ ಪರಿಹಾರವನ್ನು ಗಾಂಧೀಜಿಯಿಂದ ಪಡೆಯುತ್ತಿದ್ದರು. ಒಬ್ಬಾತನಿಗೆ ಹೀಗೆ ಬರೆದರು: "ನಿಮ್ಮ ಪ್ರೇಮ, ನಿಮ್ಮ ಮಾರ್ಗದರ್ಶನ ಇದರಿಂದಲೇ ನಿಮ್ಮ ಪತ್ನಿ ನ್ಯಾಯವಾದುದನ್ನು ಆಚರಿಸುವಂತೆ ಮಾಡಬೇಕು. ನೀವು ಎಷ್ಟರಮಟ್ಟಿಗೆ ನಿಮ್ಮ ಹೆಂಡತಿಯ ವಸ್ತುವಲ್ಲವೋ ನಿಮ್ಮ ಹೆಂಡತಿಯೂ ಅಷ್ಟರಮಟ್ಟಿಗೆ ನಿಮ್ಮ ವಸ್ತುವಲ್ಲವೆಂಬುದನ್ನು ನೆನಪಿನಲ್ಲಿ ಇಡಿ. ಆಕೆ ನಿಮ್ಮ ಅರ್ಧಾಂಗಿ. ಆ ರೀತಿಯೇ ಆಕೆಯನ್ನು ಕಾಣಿರಿ; ವರ್ತಿಸಿರಿ. ಈ ಪ್ರಯೋಗಕ್ಕೆ ನೀವು ದುಃಖಪಡಬೇಕಾದುದಿಲ್ಲ."[2]

ಸ್ತ್ರೀಯರು ತಮ್ಮ ಸ್ತ್ರೀತ್ವದ ವಿಶಿಷ್ಟವಾದ ಸಮಸ್ಯೆಗಳ ಬಗೆಗೂ ಗಾಂಧೀಜಿಯನ್ನು ಪ್ರಶ್ನಿಸುತ್ತಿದ್ದುದುಂಟು. ಒಬ್ಬಾಕೆಗೆ ಅವರು ಕೊಟ್ಟ ಉತ್ತರವಿದು: "ಜನನೇಂದ್ರಿಯ ವಿಷಯಭೋಗಕ್ಕಾಗಿ ಅಲ್ಲವೇ ಅಲ್ಲ. ಈ ಮಾತು ಸ್ಪಷ್ಟವಾಗಿ ತಿಳಿದರೆ, ಇಡಿಯ ದೃಷ್ಟಿಯೇ ಬದಲಾಯಿಸುತ್ತದೆ. ರತ್ನವೆಂದು ಭ್ರಾಂತಿಯಿಂದ ಕೈಗೆ ತೆಗೆದುಕೊಂಡದ್ದು ರತ್ನವಲ್ಲ; ಕ್ಷಯರೋಗಿ ಉಗುಳಿದ ರಕ್ತಖಂಡವೆಂದು ತಿಳಿದಾಗ ಶಾಂತರಾಗಬೇಕು. ಜನನೇಂದ್ರಿಯದ ಉಪಯೋಗದ ವಿಷಯದಲ್ಲಿಯೂ ಹೀಗೆಯೇ. ಹಿಂದೆ ಎಂದೂ ಈ ಮಾತು ಸ್ಪಷ್ಟವಾಗಿರಲಿಲ್ಲ. ಈಗಿನ ಶಿಕ್ಷಣವಂತೂ ಇದಕ್ಕೆ ಪೂರಾ ವಿರೋಧಿ. ಹೀಗಿದೆ ಪರಿಸ್ಥಿತಿ. ಮಿತಭೋಗವು ಸದ್ಗುಣ; ಅದು ಅಗತ್ಯವೆಂದು ಹೊಸ ಶಿಕ್ಷಣ ಕಲಿಸುತ್ತದೆ."[3]

ಮಹಿಳೆಯರಿಗೆ ತಂದೆಯಾಗಿ, ಅಣ್ಣನಾಗಿ, ಪೂಜ್ಯನಾಗಿ, ಹಿತೈಷಿಯಾಗಿ ಅವರನ್ನು ಬೆಳಸಿ, ವಿಕಾಸ ಹೊಂದಲು ನೆರವಾದರು ಗಾಂಧೀಜಿ.

---

1. ಕನ್ನಡ ಗಾಂಧೀ ಗ್ರಂಥಮಾಲೆಯ 'ಮಹಿಳೆಯರು' ಸಂಪುಟದಿಂದ.
2. ಅದೇ ಸಂಪುಟದಿಂದ.
3. ಅದೇ ಸಂಪುಟದಿಂದ.

ಪುರುಷ ಶೋಷಕನಾಗಿ, ಸ್ತ್ರೀಶೋಷ್ಯ ವಸ್ತುವಾಗಿ ಅಥವಾ ಕೇವಲ ಭೋಗದ ಆಟಿಕೆಯಾಗಿ ಇರುವುದನ್ನು ಅವರು ಈರ್ವರ ಪ್ರೇಯಸ್ಸಿಗೂ ಶ್ರೇಯಸ್ಸಿಗೂ ಆತಂಕವೆಂದು ಭಾವಿಸಿದ್ದುದಲ್ಲದೆ, ಅಂತೆಯೇ ಮಹಿಳೆಯರ ಏಳ್ಗಿಗೆ ದುಡಿದರು. ಮಹಿಳೆಯರಿಗೆ ಭಾರತೀಯ ಸಮಾಜದಲ್ಲಿ, ರಾಷ್ಟ್ರದಲ್ಲಿ ಇಂದು ದೊರಕಿರುವ ಸ್ಥಾನಮಾನಗಳಿಗೆ ಗಾಂಧೀಜಿಯ ಪ್ರಭಾವ ಅತ್ಯಂತ ದೊಡ್ಡದು.

ಆರ್ಥಿಕ ಕ್ಷೇತ್ರದಲ್ಲಿ, ಪ್ರಧಾನವಾಗಿ, ಕೋಟ್ಯಂತರ ಬಡವರನ್ನು ಮೇಲಕ್ಕೆ ಎತ್ತುವುದಕ್ಕಾಗಿ ಖಾದೀ, ಗ್ರಾಮೋದ್ಯೋಗಗಳು ಕೃಷಿ ಮತ್ತು ರಾಜ್ಯಾಧೀನದ ಕೆಲವು ದೊಡ್ಡ ಕೈಗಾರಿಕೋದ್ಯಮಗಳು ಇವುಗಳನ್ನು ಅವರು ಪ್ರತಿಪಾದಿಸಿದರು. ಗ್ರಾಮ ಸ್ವಾವಲಂಬನ ಮತ್ತು ವಿಕೇಂದ್ರೀಕರಣ ಇವು ಅವುಗಳ ನೀತಿಯಾಗಿದ್ದವು. ಎಲ್ಲ ಬಗೆಯ ಶೋಷಣೆಗಳಿಗೆ ಅವರು ವಿರೋಧಿಯಾಗಿದ್ದರು. ಕೇಂದ್ರೀಕೃತ ದೊಡ್ಡ ಪ್ರಮಾಣದ ಕೈಗಾರಿಕೆಗಳು ನಿರುದ್ಯೋಗಕ್ಕೂ ಕಾರ್ಮಿಕರ ಸಮಸ್ಯೆಗಳಿಗೂ, ಅಶಾಂತಿಗೂ, ಜೀವನದ ಅಸ್ತವ್ಯಸ್ತತೆಗೂ ಕಾರಣವಾಗುತ್ತದೆಂದು ಅವರು ನಂಬಿದ್ದರು.

ಅರ್ಥ ಸಂಪಾದನೆಯ ಮಾರ್ಗ ಅನೀತಿಯುತವಾಗಿರಬಾರದೆಂದು ಅವರ ವಿಚಾರವಾಗಿತ್ತು. ಮಾನವಕಲ್ಯಾಣ, ಲೋಕಹಿತ, ಅರ್ಥದ ಗುರಿಯಾಗಿರಬೇಕೇ ಹೊರತು ಕೇವಲ ಧನಸಂಪಾದನೆಯೇ ಅದರ ಗುರಿಯಾಗಿರಬಾರದೆಂದೂ, ಮಾನವ ಜೀವನ ಕೇವಲ ಅರ್ಥಸಂಪಾದನೆಯನ್ನೇ ಅವಲಂಬಿಸಿರಬಾರದೆಂದೂ ಅವರು ಭಾವಿಸಿದ್ದರು. ಜಡದ ಅಥವಾ ಕೇವಲ ವಸ್ತುವಿನ ಬೆಂಬತ್ತಿ ಹೋಗುವುದು ಮಾನವನ ಆತ್ಮಕಲ್ಯಾಣಕ್ಕೆ ಸದಾ ಮುಳುವೇ. ಜಡದ ಆಧಾರಭೂತವಾದ ಚೇತನದ ವಿಕಾಸಕ್ಕೆ ನೆರವಾಗುವ ಆರ್ಥಿಕೋದ್ಯಮವನ್ನು ಮಾತ್ರ ಅವರು ಪ್ರೋತ್ಸಾಹಿಸಿದರು. ನಿಜ ಅರ್ಥ ವಿಚಾರ ಯಾವುದು ಎಂಬುದರ ಬಗೆಗೆ ಅವರು ಹೀಗೆ ನುಡಿದರು: "ನನ್ನ ಪ್ರಕಾರ, ಭಾರತದ ಅಷ್ಟೇ ಅಲ್ಲ ಜಗತ್ತಿನ ಆರ್ಥಿಕ ರಚನೆ—ಅದರಡಿ ಇರುವ ಯಾರೊಬ್ಬನೂ ಅನ್ನ-ಅರಿವೆ ಕಾಣದೆ ಬವಣೆಪಡಬೇಕಿಲ್ಲದಂತಿರಬೇಕು. ಅರ್ಥಾತ್ ಪ್ರತಿಯೊಬ್ಬನಿಗೂ ತನ್ನ ಚರಿತಾರ್ಥ ನಡೆಸಿಕೊಳ್ಳಲು ಸಾಕಾಗುವಷ್ಟು ಕೆಲಸ ಸಿಗುವಂತಿರಬೇಕು. ಜೀವನದ ಮುಖ್ಯ ಅಗತ್ಯಗಳ ಉತ್ಪಾದನ ಸಾಧನಗಳು ಜನಸಮೂಹದ ಹಿಡಿತದಲ್ಲಿ ಇದ್ದರೇ ಈ ಆದರ್ಶದ ಸಾರ್ವತ್ರಿಕ

ಸಾಧನೆ ಸಾಧ್ಯ. ದೇವರು ಕೊಟ್ಟಿರುವ ಗಾಳಿ-ನೀರು ಇರುವಂತೆ ಅಥವಾ ಇರಬೇಕಾದಂತೆ ಇವು ಎಲ್ಲರಿಗೂ ಮುಕ್ತವಾಗಿ ಸಿಗಬೇಕು ; ಇತರರ ಶೋಷಣೆಗೆ ಮಾಧ್ಯಮವಾಗತಕ್ಕದ್ದಲ್ಲ. ಯಾವುದೇ ದೇಶ, ರಾಷ್ಟ್ರ ಅಥವಾ ಗುಂಪಿಗೆ ಇವುಗಳ ಸರ್ವಸ್ವಾಮ್ಯ ಅನ್ಯಾಯ. ಈ ಸರಳ ತತ್ವವನ್ನು ಕಡೆಗಣಿಸಿರುವುದೇ ಈ ನಿರ್ಭಾಗ್ಯ ನಾಡಿನಲ್ಲಷ್ಟೇ ಅಲ್ಲ, ಜಗತ್ತಿನ ಇತರ ಭಾಗಗಳಲ್ಲೂ ಇರುವ ದಾರಿದ್ರ್ಯಕ್ಕೆ ಕಾರಣ."[1] ಹೀಗೆಯೇ ಈ ಕೆಳಗಿನ ಮಾತುಗಳು ಅರ್ಥಶಾಸ್ತ್ರಕ್ಕೂ ನೀತಿ ಶಾಸ್ತ್ರಕ್ಕೂ ಇರುವ ನಿಕಟ ಸಂಬಂಧವನ್ನು ತೋರಿಸುತ್ತದೆ: "ನಿಜವಾದ ಅರ್ಥವಿಚಾರ ಅತ್ಯುನ್ನತ ನೀತಿ ಮಟ್ಟಕ್ಕೆ ಎಂದೂ ವಿರುದ್ಧ ಅಲ್ಲ. ಎಲ್ಲ ನಿಜವಾದ ನೀತಿಶಾಸ್ತ್ರವೂ ನಿಜವೆನಿಸಬೇಕಾದರೆ, ಸರಿಯಾದ ಅರ್ಥ ಶಾಸ್ತ್ರವೇ ಆಗಿರಬೇಕು. ಧನೇಶ್ವರ ಪೂಜೆಯನ್ನು ಪ್ರತಿಪಾದಿಸಿ, ದುರ್ಬಲರನ್ನು ಬಲಿಗೊಟ್ಟು ಬಲಿಷ್ಠರು ಸಂಪತ್ತನ್ನು ಸಂಗ್ರಹಿಸಗೊಡುವಂಥ ಅರ್ಥಶಾಸ್ತ್ರ, ಸುಳ್ಳು ಹಾಗೂ ದಾರುಣ ಶಾಸ್ತ್ರ. ಅದು:ಮಾರಕ. ತದ್ವಿರುದ್ಧ ಅರ್ಥಶಾಸ್ತ್ರವಾದರೋ ಸಾಮಾಜಿಕ ನ್ಯಾಯಪರ ; ಅತ್ಯಂತ ದುರ್ಬಲರನ್ನು ಒಳಗೊಂಡು ಎಲ್ಲರ ಏಕರೀತಿಯ ಒಳಿತನ್ನೂ ಅದು ವರ್ಧಿಸುತ್ತದೆ."[2] ಕೇವಲ ಹಣಸಂಚಯ ಮಾಡುವುದು ದುರಿತ ಸಂಚಯವೆಂದೇ ಅವರ ಭಾವನೆಯಾಗಿತ್ತು.

ಅರ್ಥಸಂಪಾದನೆ ನೀತಿಯುತವಾಗಿರುವಂತೆಯೇ ಧರ್ಮಸಮ್ಮತವೂ ಆಗಿರಬೇಕು. ಪ್ರಾಚೀನ ಭಾರತದಲ್ಲಿ ಬದುಕಿನ ನಾಲ್ಕು ಪುರುಷಾರ್ಥಗಳನ್ನು ವಿಂಗಡಿಸಲಾಗಿತ್ತು : ಧರ್ಮ, ಅರ್ಥ, ಕಾಮ, ಮೋಕ್ಷ ಇವೇ ಅವುಗಳು. ಅರ್ಥ ಮತ್ತು ಕಾಮ ತಾವಾಗಿಯೇ ಕೆಟ್ಟವೇನಲ್ಲ. ಅವುಗಳ ಆಧಾರ ಧರ್ಮವಾಗಬೇಕು ; ಎಂದರೆ, ಧರ್ಮಕ್ಕೆ ಅನುಗುಣವಾದ ವಿರೋಧವಲ್ಲದ ರೀತಿಯಲ್ಲಿ ಅರ್ಥ, ಕಾಮ ಸಾಗಬೇಕು. ಇವುಗಳ ಅಂತಿಮ ಗುರಿ ಮೋಕ್ಷ. ಯಾವ ಸಮಾಜದಲ್ಲಿ ಅರ್ಥ-ಕಾಮಗಳ ಚಟುವಟಿಕೆ ಈ ಪುರುಷಾರ್ಥಗಳಿಗೆ

---

1. ಕನ್ನಡ ಗಾಂಧೀ ಗ್ರಂಥಮಾಲೆ—ಅರ್ಥ ವಿಚಾರ ಸಂಪುಟ: ಪುಟ ೪೦–೪೧.
2. ಹರಿಜನ : ೯–೧೦–೧೯೩೭.

ಅನುಗುಣವಾಗಿರುವುದೋ ಅಲ್ಲಿ ಸಮಾಜ ಜೀವನ ಸುಖಮಯವಾಗಿರಲು ಸಾಧ್ಯ.

ಈ ದೃಷ್ಟಿಯಿಂದ ವಿಚಾರ ಮಾಡಿದಾಗ ಗಾಂಧೀಜಿ ಎರಡು ಪ್ರಧಾನ ಪ್ರಾಚೀನ ತತ್ವಗಳನ್ನು ಅನುಷ್ಠಾನದಲ್ಲಿಟ್ಟುಕೊಂಡು, ಕಾಮ ಮತ್ತು ಅರ್ಥ ಗಳನ್ನು ಅಂಕೆಯಲ್ಲಿಟ್ಟುಕೊಂಡು ಜೀವನ ನಡೆಸಿದುದಲ್ಲದೆ, ಅದರ ಆಧಾರದ ಮೇಲೆ ರಾಷ್ಟ್ರಗಳ ಮತ್ತು ಜನಾಂಗಗಳ ಅರ್ಥಜೀವನವನ್ನು ವ್ಯವಸ್ಥೆ ಮಾಡ ಬೇಕೆಂದು ಯತ್ನಿಸಿದರು. ಆ ತತ್ವಗಳು 'ಅಸ್ತೇಯ' ಮತ್ತು 'ಅಪರಿಗ್ರಹ'. ಇದನ್ನು ಅವರು ಅರಿತುಕೊಂಡುದು ಈಶಾವಸ್ಯ ಉಪನಿಷತ್ತಿನ ಒಂದು ಮಂತ್ರದಿಂದ. ಆ ಮಂತ್ರ ಹೀಗಿದೆ: "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ | ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯಸ್ವಿತ್ ಧನಂ || (ಜಗತ್ತಿನಲ್ಲಿರುವುದೆಲ್ಲವೂ ಈಶನ ಆವಾಸಸ್ಥಾನ. ಎಲ್ಲೆ ಲ್ಲಿಯೂ ಎಲ್ಲ ವಸ್ತುಗಳಲ್ಲಿಯೂ ಅವನೇ ತುಂಬಿಕೊಂಡಿದ್ದಾನೆ. ಜೀವನಕ್ಕೆ ಆವಶ್ಯಕವಾದುದನ್ನು ಸ್ವೀಕರಿಸುವಾಗ ತ್ಯಾಗಬುದ್ಧಿಯನ್ನಿಟ್ಟುಕೊಂಡು, ಅದು ಈಶನ ಪ್ರಸಾದವೆಂದು ಭಾವಿಸಬೇಕು. ಪರರ ಧನಕ್ಕೆ ಆಶಿಸಬಾರದು.) ಇದರ ತಾತ್ಪರ್ಯ, ಯಾವ ವಸ್ತುವೇ ನಮಗೆ ಲಭಿಸಿದರೂ ಅದು ಈಶ ನಿಂದಲೇ ಅವನ ಕೃಪೆಯಿಂದಲೇ ಲಭಿಸಿದುದು ಎಂದು ಭಾವಿಸಿ, ಅವನ ಪ್ರಸಾದವೆಂದು ಸ್ವೀಕರಿಸಬೇಕು. ವಸ್ತು ಮತ್ತು ಧನದ ಉತ್ಪನ್ನ ಮೂಲವಾದ ಭೂಮಿ ಮತ್ತು ಸಂಪತ್ತುಗಳ ಬಗೆಗೆ ಅವರ ಅಭಿಪ್ರಾಯ ಹೀಗಿತ್ತು: 'ಸಬೈ ಭೂಮಿಗೋಪಾಲಕೀ' (ಎಲ್ಲ ಭೂಮಿಯೂ ಗೋಪಾಲ ನದು); 'ಸಂಪತಿ ಸಬ್ ರಘುಪತಿ ಕಿ ಆಹಿ' (ಸಂಪತ್ತೆಲ್ಲ ರಘುಪತಿಯದು); ಎಂದರೆ, ಯಾವುದಕ್ಕೂ ತಾನು ಒಡೆಯನಲ್ಲ, ನಿಜ ಒಡೆಯ ಭಗವಂತನೇ. ಅವನ ಪರವಾಗಿ ಎಲ್ಲ ಸಂಪತ್ತನ್ನೂ ನೈತಿಕ ಧರ್ಮದರ್ಶಿಯಂತೆ (Moral Trustee) ಅನುಭವಿಸಬೇಕೆಂಬುದು ಅವರ ವಿಚಾರವಾಗಿತ್ತು. ಇದನ್ನು ಅವರು 'ಧರ್ಮದರ್ಶೀ ಸಿದ್ಧಾಂತ'ವೆಂದು ಕರೆದರು. ಶ್ರೀ ಪ್ಯಾರೇಲಾಲ್ ಅದರ ಸ್ವರೂಪವನ್ನು ಹೀಗೆ ವರ್ಣಿಸಿದ್ದಾರೆ:

(ಅ) ಧರ್ಮದರ್ಶೀ ಸಿದ್ಧಾಂತವು ಇಂದಿನ ಬಂಡವಾಳಶಾಹೀ ಸಮಾಜ ಪದ್ಧತಿಯನ್ನು ಸಮತಾ ಸಮಾಜಕ್ಕೆ ಪರಿವರ್ತಿಸಲು ಒಂದು ಸಾಧನ. ಇದು

ಬಂಡವಾಳಶಾಹಿಗೆ ರಕ್ಷಣೆಯನ್ನು ಕೊಡುವುದಿಲ್ಲ, ಆದರೆ ಇಂದಿನ ಬಂಡವಾಳ ಶಾಹೀ ವರ್ಗ ತನ್ನನ್ನು ಸುಧಾರಿಸಿಕೊಳ್ಳಲು ಒಂದು ಅವಕಾಶವನ್ನು ಕೊಡುತ್ತದೆ. ಮಾನವ ಸ್ವಭಾವ ಎಂದಿಗೂ ವಿಮೋಚನೆ ಹೊಂದಿರುವಂಥದಲ್ಲ ಎಂಬ ನಂಬಿಕೆ ಇದರ ಆಧಾರ.

(ಆ) ಅದು ಸಮಾಜದಿಂದ ಅದರ ಅಭ್ಯುದಯಕ್ಕೆ ಅನುಮತಿ ಕೊಡುವಷ್ಟಲ್ಲದೆ ಉಳಿದ ಯಾವ ಖಾಸಗೀ ಸೊತ್ತಿನ ಹಕ್ಕನ್ನೂ ಮಾನ್ಯ ಮಾಡುವುದಿಲ್ಲ.

(ಇ) ಸಂಪತ್ತಿನ ಒಡೆತನ ಹಾಗೂ ಉಪಯೋಗವನ್ನು ಶಾಸನದಿಂದ ನಿಯಮನಗೊಳಿಸುವುದನ್ನು ಅದು ಬಹಿಷ್ಕರಿಸದು.

(ಈ) ಹೀಗೆ ರಾಜ್ಯನಿಯಮಿತ ಧರ್ಮದರ್ಶಿತ್ವದ ಅಡಿಯಲ್ಲಿ ವ್ಯಕ್ತಿ ತನ್ನ ಸ್ವಾರ್ಥಪ್ರಾಪ್ತಿಗಾಗಿ ಅಥವಾ ಸಮಾಜದ ಹಿತವನ್ನು ದುರ್ಲಕ್ಷಿಸಿ ಐಶ್ವರ್ಯ ಹೊಂದಿರಲು, ಬೆಳಸಲು ಸ್ವತಂತ್ರನಾಗಿರಲಾರ.

(ಉ) ನ್ಯಾಯೋಚಿತವಾದ ಕನಿಷ್ಠ ಜೀವನ ವೇತನವನ್ನು ಗೊತ್ತುಪಡಿಸುವ ಸೂಚನೆಯಂತೆಯೇ ಸಮಾಜದಲ್ಲಿ ಯಾವನೇ ವ್ಯಕ್ತಿಗೆ ಬಿಡಬಹುದಾದ ಗರಿಷ್ಠ ಆದಾಯದ ಮಿತಿಯನ್ನೂ ಗೊತ್ತುಮಾಡಬೇಕು. ಅಂಥ ಕನಿಷ್ಠ ಮತ್ತು ಗರಿಷ್ಠ ಆದಾಯಗಳ ಅಂತರ ತರ್ಕಬದ್ಧವಾಗಿರಬೇಕು ; ನ್ಯಾಯಬದ್ಧವಿರಬೇಕು. ಕಾಲಕಾಲಕ್ಕೆ ಬದಲಾಗುವಂಥದಿರಬೇಕು. ಹೀಗಾಗಿ ಆ ಅಂತರ ಅಳಿಸಿಹಾಕುವ ಕಡೆಗೇ ಪ್ರವೃತ್ತಿ ಇರಬೇಕು.

(ಊ) ಗಾಂಧೀ ದೃಷ್ಟಿಯ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯ ಸ್ವರೂಪವನ್ನು ಸಾಮಾಜಿಕ ಆವಶ್ಯಕತೆ ನಿರ್ಧರಿಸೀತು, ವ್ಯಕ್ತಿಯ ಖುಷಿ ಅಥವಾ ಲೋಭವಲ್ಲ."[1]

ಈ ನೈತಿಕ ಧರ್ಮದರ್ಶೀ ಸಿದ್ಧಾಂತಕ್ಕೆ ಈಶಾವಾಸ್ಯ ಉಪನಿಷತ್ತಿನ ತಾತ್ಪರ್ಯವೇ ಆಧಾರ. ಇದಕ್ಕೆ ಈಶ್ವರನಲ್ಲಿ ಅವನ ಪರಮ ಪ್ರಸಾದ ಭಾವದಲ್ಲಿ ನಂಬಿಕೆ ಅಗತ್ಯ. "ಈ ಸೂತ್ರ ಕಮ್ಯೂನಿಷ್ಟರ, ಸೋಷಲಿಷ್ಟರ, ಹಾಗೂ

1. ಹರಿಜನ: ೨೫-೧೦-೧೯೫೨.

ವೇದಾಂತಿಯ ಮತ್ತು ಅರ್ಥಶಾಸ್ತ್ರಜ್ಞರ ಬಯಕೆಗಳನ್ನೆಲ್ಲ ಈಡೇರಿಸೀತು ಎಂದು ನನ್ನ ನಂಬಿಕೆ" ಎಂದಿದ್ದರು ಗಾಂಧೀಜಿ. "ಬಡವರ ಆಳ್ವಿಕೆಯ ದಿನ ಬರುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಆ ಆಳ್ವಿಕೆ ಶಸ್ತ್ರಬಲದಿಂದಲೋ ಅಹಿಂಸೆಯಿಂದಲೋ ಬಂದೇ ಬಂದೀತು. ಪಾಶವೀಶಕ್ತಿ ನಶ್ವರವೆಂಬುದು ನೆನಪಿರಲಿ, ಈ ಶರೀರವೂ ನಶ್ವರವಿದ್ದಂತೆ. ಆದರೆ ಆತ್ಮಬಲ ಶಾಶ್ವತ ಆತ್ಮನೂ ಶಾಶ್ವತ ಇದ್ದಂತೆ."[1] ಇಂಥ ಅರ್ಥವ್ಯವಸ್ಥೆಯಿಂದ ಜಗತ್ತು ನಿಜಕ್ಕೂ ದಿವ್ಯ ಪ್ರಪಂಚವಾದೀತು ಎಂಬುದು ಗಾಂಧೀಜಿಯ ನಂಬಿಕೆಯಾಗಿತ್ತು.

ಗಾಂಧೀಜಿಯ ಅರ್ಥವಿಚಾರ ಓಬೀರಾಯನ ಕಾಲಕ್ಕೆ ಹೊಂದುವಂಥದಾಗಿತ್ತೆಂದೂ ಇಂದಿನ ಯಂತ್ರಪ್ರಧಾನ ನಾಗರಿಕತೆಗೆ ಹೊಂದುವುದಿಲ್ಲವೆಂದೂ ಭಾವಿಸುವ ಜನವೇ ಹೆಚ್ಚು. ಗಾಂಧೀಜಿ ಯಂತ್ರವಿರೋಧಿಯಾಗಿರಲಿಲ್ಲ. ಅವರು ಅದರಿಂದ ಉಂಟಾಗುವ ಮಾನವೀಭಾವಶೂನ್ಯತೆಯನ್ನು, ಹೃದಯಹೀನತೆಯನ್ನು, ಶೋಷಣೆಯನ್ನು ವಿರೋಧಿಸಿದರು: "ನನ್ನ ವಿರೋಧವಿರುವುದು ಯಂತ್ರದ ಬಗೆಗೆ ಇರುವ ಹುಚ್ಚು ಕಲ್ಪನೆಯ ವಿಷಯಕ್ಕೆ; ಯಂತ್ರದ ಬಗೆಗೇ ಅಲ್ಲ, ಈ ಹುಚ್ಚು ಕಲ್ಪನೆ, ಶ್ರಮ ಉಳಿತಾಯ ಮಾಡುವ ಯಂತ್ರದಲ್ಲಿ ಕಂಡುಬರುತ್ತದೆ. ಮಾನವರು ಶ್ರಮ ಉಳಿತಾಯಮಾಡುತ್ತಾ ಹೋದರೆ, ಕಡೆಗೆ ಸಹಸ್ರಾರು ಮಂದಿ ಉದ್ಯೋಗವಿಲ್ಲದವರಾಗುತ್ತಾರೆ; ಇದರಿಂದ ಅವರು ಬೀದಿ ಬೀದಿ ಅಲೆಯುವಂತಾಗಿ ಹೊಟ್ಟೆಗಿಲ್ಲದೆ ಸಾಯುತ್ತಾರೆ. ನಾನು ಕೆಲವೇ ಮಂದಿಗಾಗಿ ಕಾಲ ಮತ್ತು ಶ್ರಮದ ಉಳಿತಾಯವನ್ನು ಅಪೇಕ್ಷಿಸುವುದಿಲ್ಲ; ಅದು ಎಲ್ಲರಿಗೂ ದೊರಕಬೇಕು; ಐಶ್ವರ್ಯದ ಕೇಂದ್ರೀಕರಣವು ಕೆಲವೇ ಜನರಲ್ಲಿ ಆಗದೆ ಎಲ್ಲರಿಗೂ ಆಗಲೆಂಬುದು ನನ್ನ ಆಶಯ. ಇಂದು ಯಂತ್ರದಿಂದ, ಕೆಲವೇ ಮಂದಿ ಲಕ್ಷಾಂತರ ಬೆನ್ನಮೇಲೆ ಸವಾರಿ ಹೊಡೆಯುವ ಸಾಧನವಾಗಿದೆ. ಯಂತ್ರದ ಹಿಂದಿರುವ ಉದ್ದೇಶ ಔದಾರ್ಯವಲ್ಲ, ಅತಿ ಆಸೆ. ಇಂಥ ಪರಿಸ್ಥಿತಿಯ ವಿರುದ್ಧವಾಗಿಯೇ ನಾನು ನನ್ನ ಸರ್ವಶಕ್ತಿಯಿಂದ ಹೋರಾಡುತ್ತಿರುವುದು."[2]

---

1. ಹರಿಜನ: ೧-೨-೧೯೪೨.
2. ಯಂಗ್ ಇಂಡಿಯಾ: ೧೩-೧೧-೧೯೨೪.

ಇನ್ನು ಗಾಂಧೀ ರಾಜಕಾರಣವನ್ನು ಕುರಿತು ನೋಡೋಣ. ಇಂದಿನ ರಾಜಕಾರಣ ಸತ್ತೆ, ಧನ ಮತ್ತು ಸೈನ್ಯಗಳ ಆಧಾರದ ಮೇಲೆ ನಿಂತಿದೆ. ಸತ್ತೆ ಕೆಲವೇ ಜನರದಾಗದೆ ಲೋಕಸತ್ತೆಯಾಗಿ ಪರಿಣಮಿಸಬೇಕು. ಅದು ಧನದ ಆಧಾರದ ಮೇಲೆ ನಿಂತಿರದೆ ಸಚ್ಚಾರಿತ್ರ್ಯದ ಆಧಾರದ ಮೇಲೆ ನಿಲ್ಲಬೇಕು. ಅದು ಸೈನ್ಯದ ಆಧಾರದ ಮೇಲೆ ನಿಂತಿತೋ ಹಿಂಸೆಯೇ ಆಗಿ ಪರಿಣಮಿಸಿ ಬಿಡುತ್ತದೆ. ಅದು ಒಬ್ಬ ವ್ಯಕ್ತಿಯದಾಗಬಹುದು, ಬಹುಮತದ್ದಾಗಬಹುದು. ಕೇಂದ್ರೀಕರಣ ಇವುಗಳನ್ನು ಪೋಷಿಸುತ್ತದೆ. ಆಡಳಿತದ, ಅಧಿಕಾರದ ವಿಕೇಂದ್ರೀಕರಣವೊಂದೇ ಇದಕ್ಕೆ ತಕ್ಕ ಪರಿಹಾರ; ಆರ್ಥಿಕ ವಿಕೇಂದ್ರೀಕರಣ ದಂತೆ. "ನಿಜವಾದ ಪ್ರಜಾಸತ್ತೆ ದೆಹಲಿಯಲ್ಲಿ ಕುಳಿತ ಕೇವಲ ಇಪ್ಪತ್ತು ಮಂದಿಯಿಂದ ನಡೆಯಲಾರದು"—ಎಂದಿದ್ದರು ಅವರು. ಅದು ಪ್ರತಿ ಗ್ರಾಮದ ಜನರಿಂದಲೇ ನಡೆಸಲ್ಪಡಬೇಕು. ಇದನ್ನು 'ಪಂಚಾಯತಿ ರಾಜ್ಯ' ಎನ್ನುತ್ತಿದ್ದರು. ಪ್ರತಿಯೊಂದು ಗ್ರಾ . ಆರ್ಥಿಕವಾಗಿಯೂ ಆಡಳಿತ ದೃಷ್ಟಿಯಿಂದಲೂ ಸ್ವಾವಲಂಬೀ, ಸ್ವಪರಿಪೂರ್ಣ ಪ್ರಜಾಸತ್ತೆಯೇ (Self-reliant, Self-sufficient Republic) ಆಗಿರಬೇಕೆಂದು ಅವರ ಕಲ್ಪನೆಯಾಗಿತ್ತು.

ಪಕ್ಷ ರಾಜಕಾರಣ (Party Politics) ಸಂಸದಾತ್ಮಕ ಪ್ರಜಾಪ್ರಭುತ್ವ (Parliamentary Democracy) ಹೇಗೆ ಪಕ್ಷದ ಸರ್ವಾಧಿಕಾರಕ್ಕೆ ಅವಕಾಶ ಕೊಡುತ್ತದೆಂಬುದನ್ನು ಅವರು ಮನಗಂಡಿದ್ದರು. 'ಪಾರ್ಲಿಮೆಂಟಿನ ಜನನಿ'ಯೆಂದು (Mother of Parliaments) ಪ್ರಸಿದ್ಧವಾದ ಬ್ರಿಟನ್ನಿನ ಪಾರ್ಲಿಮೆಂಟನ್ನು ಅವರು 'ಕೇವಲ ಬಂಜೆ, ವೇಶ್ಯೆ' (Sterile Women and a Prostitute) ಎಂದು ಕರೆದರು. "ಈ ರಡೂ ಶಬ್ದ ಬಹಳ ಕಠೋರ. ಆದರೆ ಎರಡೂ ಸರಿಯಾಗಿ ಹೊಂದುತ್ತವೆ. ಇ ವರೆಗೂ ಪಾರ್ಲಿಮೆಂಟ್ ತಾನಾಗಿ ಒಂದಾದರೂ ಒಳ್ಳೆಯ ಕೆಲಸವನ್ನು ಾಡಲಿಲ್ಲ. ಆದ್ದರಿಂದ ಅದನ್ನು ಬಂಜೆ ಎನ್ನುತ್ತೇನೆ. ಹೊರಗಿನಿಂದ ಒ ್ತಾಯ ಬಾರದೆ ಅದು ಏನೂ ಮಾಡುವಂತಿಲ್ಲ; ಅದರ ಸ್ವಭಾವವೇ ಹಾಗೆ. ಪದೇ ಪದೇ ಬದಲಾಗುವ ಮಂತ್ರಿಗಳು ಅದರ ನಾಯಕರು ಅದರಿಂದ ವೇಶ್ಯೆ.

---

1. ಹಿಂದ್ ಸ್ವರಾಜ್ಯ—ಪುಟ: ೧೪.

ಪಾರ್ಲಿಮೆಂಟಿನ ಸದಸ್ಯರು, ಅವರ ಕಾರ್ಯಕಲಾಪ, ಇವುಗಳ ಬಗೆಗಿನ ಈ ಮಾತು ಎಷ್ಟು ಸತ್ಯಾಂಶವಾಗಿದೆ. ಮೇಲೆ ಉದಾಹರಿಸಿರುವ ಮಾತು ಹಿಂದ್ ಸ್ವರಾಜ್ಯ ಗ್ರಂಥದ್ದು. ಮುಂದಿನ ಮಾತುಗಳೂ ಅದರದೇ: "ಪಾರ್ಲಿಮೆಂಟಿನ ಸದಸ್ಯರು ಸ್ವಾರ್ಥಿಗಳು, ಕಪಟಿಗಳು ಎಂದು ಎಲ್ಲರೂ ಹೇಳುತ್ತಾರೆ. ಪ್ರತಿಯೊಬ್ಬನಿಗೂ ತನ್ನ ಕ್ಷುದ್ರಸ್ವಾರ್ಥದ್ದೇ ಚಿಂತೆ. ಪಾರ್ಲಿಮೆಂಟಿನ ಕೆಲಸಕ್ಕೆ ಭಯವೇ ಮೂಲ ಕಾರಣ. ಇವತ್ತು ಮಾಡಿದುದನ್ನು ನಾಳೆ ಅಳಿಸಬಹುದು. ಇಂಥ ಒಂದು ಕೆಲಸವನ್ನು ಪಾರ್ಲಿಮೆಂಟ್ ಕೊನೆಗಾಣಿಸಿತು ಎನ್ನುವ ಹಾಗಿಲ್ಲ. ಮಹತ್ತಾದ ಪ್ರಶ್ನೆಗಳ ಚರ್ಚೆ ನಡೆಯುವಾಗ ಸದಸ್ಯರು ತೂಕಡಿಸುತ್ತಿರುತ್ತಾರೆ. ಒಂದೊಂದು ಸಲ ಕೇಳುವವರಿಗೆ ಬೇಸರ ಬರುವಷ್ಟು ಬರೀ ಮಾತನಾಡುತ್ತಾರೆ. ಪಾರ್ಲಿಮೆಂಟನ್ನು 'ಜಗತ್ತಿನ ಮಾತಿನ ಅಂಗಡಿ' ಎಂದು ವರ್ಣಿಸಿದ್ದಾನೆ ಕಾರ್‌ಲೈಲ್. ಸದಸ್ಯರೂ ಏನೂ ಯೋಚಿಸದೆ ಕಣ್ಣುಮುಚ್ಚಿ ತಮ್ಮ ಪಕ್ಷದ ಕಡೆ ಓಟು ಮಾಡುತ್ತಾರೆ. ಅವರ ಪಕ್ಷದ ಶಿಸ್ತು ಅದು. ಒಂದು ವೇಳೆ ಒಬ್ಬ ಸದಸ್ಯ ಸ್ವತಂತ್ರಿಸಿ ಓಟು ಕೊಟ್ಟನೋ ಅವನು ದ್ರೋಹಿ ಎನಿಸುತ್ತಾನೆ. ಪಾರ್ಲಿಮೆಂಟಿಗಾಗಿ ಆಗುವ ಕಾಲವ್ಯಯ ಧನವ್ಯಯವನ್ನು ಕೆಲವರೇ ಸಜ್ಜನರಿಗೆ ವಹಿಸಿದರೂ ಇಂಗ್ಲಿಷ್ ಜನಾಂಗ ಇಂದಿಗಿಂತ ಉತ್ತಮ ಸ್ಥಿತಿಯಲ್ಲಿರುತ್ತಿತ್ತು. ಇವತ್ತು ಅದು ಜನತೆಗೆ ಒಂದು ವಿನೋದ, ಬಹಳ ತುಟ್ಟಿಯಾದ ಆಟದ ಸಾಮುಗ್ರಿ."[1]

೭೦೦ ವರ್ಷಗಳ ಇತಿಹಾಸ ಹೊಂದಿದ ಬ್ರಿಟಿಷ್ ಪಾರ್ಲಿಮೆಂಟನ್ನು ಕುರಿತು ಗಾಂಧೀಜಿ ಮೇಲಿನಂತೆ ವರ್ಣಿಸಿದರು. ಇದೇ ಬಗೆಯ ಸಂಸದಾತ್ಮಕ ಪ್ರಜಾಪ್ರಭುತ್ವವನ್ನು ೨೫ ವರ್ಷಗಳಿಂದ ಪ್ರಯೋಗಿಸಿರುವ ನಮ್ಮ ರಾಷ್ಟ್ರದ ಅನುಭವವೇನು ? ಅದೇ ವರ್ಣನೆಗಿಂತ ಭಿನ್ನವಾಗಿದೆಯೇ ? ಇದು ಗಹನ ವಿಚಾರದ ಸಾಮುಗ್ರಿ. ನಮ್ಮ ರಾಷ್ಟ್ರದಲ್ಲಿ ರಾಜಕೀಯ ಪಕ್ಷ ಪದ್ಧತಿ, ಚುನಾವಣೆಯ ವಿಧಾನ ಇವುಗಳಿಂದ ಉತ್ಪನ್ನವಾಗಿರುವ ಸಮಸ್ಯೆಗಳು ಜನಜನಿತವಾಗಿಲ್ಲವೇ ? ಭಾಷಾಂಧತೆ, ಮತಾಂಧತೆ ಪ್ರಾಂತೀಯತೆ ಇವುಗಳ ಪಿಡುಗು, ಜಾತಿಮತಗಳ ವೈಷಮ್ಯ, ವರ್ಗಸಂಘರ್ಷ ಆಡಳಿತದಲ್ಲಿ ಭ್ರಷ್ಟಾ

---

1. ಹಿಂದ್ ಸ್ವರಾಜ್ಯ—ಪುಟ : ೧೪-೧೫

ಚಾರ, ಸಮಾಜದ ದುರ್ಬಲ ವರ್ಗಗಳ ಅಸಂತುಷ್ಟಿ, ಶ್ರೀಮಂತ ಶ್ರೀಮಂತನೇ ಆಗುವ ಅವಕಾಶ, ಹಾಗೆಯೇ ಬಡವ ಬಡವನೇ ಆಗುವ ಪರಿಸ್ಥಿತಿ ಇವೆಲ್ಲ ಕಣ್ಣನ್ನು ಇರಿವ ಚಿತ್ರಗಳಲ್ಲವೆ? ಇಂಥ ಚಿತ್ರವನ್ನು ಬದಲಾಯಿಸಿ, ನಿಜವಾದ ಸ್ವರಾಜ್ಯವನ್ನು ಸ್ವಾತಂತ್ರ್ಯವನ್ನು ಅಹಿಂಸಕ ವಿಧಾನಗಳಿಂದಲೇ ಗಳಿಸಬೇಕೆಂಬುದು ಗಾಂಧೀಜಿಯ ಆಶಯವಾಗಿತ್ತು. ಇಂಥ ವಿಧಾನವನ್ನು ಗಾಂಧೀಜಿ 'ಸತ್ಯಾಗ್ರಹ'ವೆಂದು ಕರೆದರು. ಸತ್ಯವನ್ನು ಗ್ರಹಿಸಿ, ಅದನ್ನು ಬಿಡದೆ ಆತ್ಯಂತಿಕವಾಗಿ ಸಾಧಿಸಲು ಶ್ರಮಿಸುವುದೇ ಸತ್ಯಾಗ್ರಹ.

ಸತ್ಯಾಗ್ರಹ ಹಿಂಸಾತ್ಮಕ ಯುದ್ಧ ವಿಧಾನಕ್ಕೆ ವಿರುದ್ಧವಾದ ಅಹಿಂಸಕ ಯುದ್ಧ ವಿಧಾನವಾಗಿತ್ತು. ಅದು ಆರಂಭದಿಂದ ಕಡೆಯವರೆಗೂ ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯನ್ನೇ ಅವಲಂಬಿಸಿರುವುದರಿಂದ ಅದಕ್ಕೆ 'ಯುದ್ಧದ ನೈತಿಕ ಪ್ರತಿರೂಪ' (Moral equivalent of War) ಎಂಬ ಹೆಸರು ಪ್ರಸಿದ್ಧವಾಗಿದೆ.

ಸತ್ಯಾನ್ವೇಷಕ ಸತ್ಯಾಗ್ರಹಿಯೇ. ಅವನು ಸತ್ಯವನ್ನೇ ಅರಸಬೇಕು, ಆಶ್ರಯಿಸಬೇಕು; ಸತ್ಯವ್ರತಿಯಾಗಿ, ಸತ್ಯಸಂಧನಾಗಿ ಸತ್ಯವೀರನೂ ಆಗಬೇಕು. ಸತ್ಯದ ಬಗೆಗೆ ಅವನಲ್ಲಿ ಶಂಕೆ ಮೂಡಿದಾಗ ಅವನು ಪ್ರೇಮದ, ಆತ್ಮಕ್ಲೇಶಾನುಭವದ, ಅಹಿಂಸೆಯ ಪಥವನ್ನೇ ಹಿಡಿಯಬೇಕು. ಅಪರಿಪೂರ್ಣನಾದ ಮಾನವ ಸತ್ಯವನ್ನು ಸಮಗ್ರವಾಗಿ ಗ್ರಹಿಸಲಾರದವನಾದುದರಿಂದ ಈ ಮಾರ್ಗವನ್ನು ಅನುಸರಿಸಿ, ಎದುರಾಳಿಯ ಬಗೆಗೆ ಪ್ರೇಮಭರಿತನಾಗಿಯೇ ಇದ್ದು, ತಾನೇ ಎಲ್ಲ ಕ್ಲೇಶಕಷ್ಟಗಳನ್ನೂ ಅನುಭವಿಸುತ್ತಾ, ತನ್ನ ತಪ್ಪು ಕಂಡುಬಂದಾಗ ಅದನ್ನು ತಿದ್ದಿಕೊಳ್ಳುವುದೇ, ಅದಕ್ಕೆ ಸಿದ್ಧನಿರುವುದೇ ಅಹಿಂಸಾ ಮಾರ್ಗ. ತನ್ನ ತಪ್ಪನ್ನು ತಿದ್ದಿಕೊಳ್ಳಬೇಕಾದರೆ ಮೊದಲು ಚಿತ್ತಶುದ್ಧನಾಗಬೇಕು. ಹಾಗೆಯೇ ಸತ್ಯಾಗ್ರಹಿ ದಿನದಿನಕ್ಕೂ ಚಿತ್ತಶುದ್ಧಿಯನ್ನು ಪಡೆದುಕೊಳ್ಳಬೇಕು.

ಕುಟುಂಬವೊಂದರಲ್ಲಿ ಯಾರಾದರೂ ತಪ್ಪು ಮಾಡಿದರೆ ಅವರನ್ನು ಪರಿವರ್ತಿಸಲು ನಾವು ಪ್ರಯತ್ನಿಸುವುದಿಲ್ಲವೇ? ಅದೇ ರೀತಿ ಸಾಮಾಜಿಕವಾಗಿ ಅನ್ಯಾಯ ಮಾಡಿದವರಿಗೂ ಅನ್ವಯಿಸಬೇಕು. ಗಾಂಧೀಜಿಯ ಸತ್ಯಾಗ್ರಹತತ್ವ ಕುಟುಂಬದಿಂದಲೇ ಆರಂಭವಾಯಿತು. 'ಕಸ್ತೂರ ಬಾ ನನಗೆ

ಸತ್ಯಾಗ್ರಹದ ಗುರು' ಎನ್ನುತ್ತಿದ್ದರು ಗಾಂಧೀಜಿ. ಸಾಮಾಜಿಕ ಅನ್ಯಾಯ, ದಬ್ಬಾಳಿಕೆ, ಸ್ವಾತಂತ್ರ್ಯಹರಣ ಇತ್ಯಾದಿಗಳ ಬಗೆಗೂ ಇದೇ ಕುಟುಂಬದ ನಿಯಮವೇ ಸಲ್ಲುವಂಥದು. ಸತ್ಯಾಗ್ರಹಿ ತನ್ನ ರಕ್ತ ಸಂಬಂಧಿಗಳು ಮಾತ್ರ ತನ್ನ ಕುಟುಂಬದವರೆಂದು ಭಾವಿಸುವುದಿಲ್ಲ. ಇಡಿಯ ವಿಶ್ವವೇ ಅವನ ಕುಟುಂಬ. ಕೆಡುಕನ್ನು ಹೋಗಲಾಡಿಸಬೇಕೆಂಬುದು ಅವನ ಇಚ್ಛೆಯೇ ಹೊರತು ಕೆಡುಕಿಯನ್ನಲ್ಲ. ಸತ್ಯಾಗ್ರಹಿ ತನ್ನ ವರ್ತನೆಯಿಂದ ತನ್ನನ್ನು ವಿರೋಧಿಯೆಂದು ಭಾವಿಸುವವನ ಹೃದಯದಲ್ಲೂ ಸದ್ಭಾವನೆ ಜನಿಸುವಂತೆ ಮಾಡಬೇಕು. ವಿರೋಧಿಯ ಮನಸ್ಸಿನ ಪರಿವರ್ತನೆಯೇ ಅವನ ಗುರಿ. ಸಾಧು ಸಂತರು ಯಾವ ತತ್ವವನ್ನು ವೈಯಕ್ತಿಕ ಜೀವನದಲ್ಲಿ ಉಪಯೋಗಿಸುತ್ತಿದ್ದರೋ ಅದನ್ನು ಗಾಂಧೀಜಿ ಜೀವನದ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸಲು ಸಾಧ್ಯವೆಂದು ತೋರಿಸಿದರು.

ಸತ್ಯಾಗ್ರಹಿಯಲ್ಲಿ ಆತ್ಮಸಂಯಮ, ಆತ್ಮಶಿಕ್ಷಣ, ಆತ್ಮಶುದ್ಧಿ ಇರಬೇಕು. "ಸತ್ಯಾಗ್ರಹಿ ಕೆಡುಕಿಗೂ ಕೆಡುಕು ಮಾಡುವವನಿಗೂ ಇರುವ ವ್ಯತ್ಯಾಸವನ್ನು ತಿಳಿದುಕೊಂಡಿರಬೇಕು. ಕೆಡುಕಿನ ವಿಷಯದಲ್ಲಿ ಪ್ರತಿಭಟನೆ ಇರಬೇಕೇ ಹೊರತು ಕೆಡುಕಿಯ ವಿಷಯದಲ್ಲಲ್ಲ. ಎಷ್ಟು ಕೆಟ್ಟದನ್ನು ಮಾಡಿದರೂ ದುರ್ಭಾಷೆಯನ್ನು ಉಪಯೋಗಿಸಬಾರದು. ಪ್ರೇಮದಿಂದ ಪರಿವರ್ತನೆ ಹೊಂದದೆ ಇರುವವರು ಯಾರೂ ಇಲ್ಲವೆಂಬ ನಂಬಿಕೆ ಇರಬೇಕು. ಕೆಡುಕನ್ನು ಒಳ್ಳೆಯದರಿಂದಲೂ, ಕ್ರೋಧವನ್ನು ಪ್ರೇಮದಿಂದಲೂ ಅಸತ್ಯವನ್ನು ಸತ್ಯದಿಂದಲೂ ಜಯಿಸುವುದನ್ನು ಸತ್ಯಾಗ್ರಹಿ ಅರಿತಿರಬೇಕು. ಇದು ವಿನಾ ಜಗತ್ತನ್ನು ಕೆಡುಕಿನಿಂದ ಬಿಡಿಸುವ ಮಾರ್ಗವಿಲ್ಲ. ಸತ್ಯಾಗ್ರಹಿಯಾದವನು ಆತ್ಮಶೋಧನೆ, ಆತ್ಮಪರೀಕ್ಷೆ ಇವುಗಳಿಂದ ಕೂಡಿದವನಾಗಿ, ಯಾವಾಗಲೂ ಪವಿತ್ರ ಮನಸ್ಸಿನಿಂದ ಕೂಡಿದವನಾಗಿ ಇರಲು ಯತ್ನಿಸಬೇಕು. ಅದೇ ಅವನ ವಿಜಯ. ಅವನ ಜೀವನವು ಒಂದು ಯಜ್ಞದಂತಿರಬೇಕು. ಸಂಯಮದಿಂದ ಕೂಡಿದ ಬಾಳಿಗೆ ಸಮನಾದ ಬಾಳು ಇನ್ನಾವುದೂ ಇಲ್ಲ, ಎಂಬ ಅಚಲ ನಂಬಿಕೆ ಅವನಲ್ಲಿರಬೇಕು."[1]

---

1. ಯಂಗ್ ಇಂಡಿಯಾ : ೮-೮-೧೯೨೯.

ಸತ್ಯಾಗ್ರಹದ ರೂಪಗಳು ಭಿನ್ನ ಭಿನ್ನ; ಅಹಿಂಸಕ ಅಸಹಕಾರ, ಸವಿನಯ ಪ್ರತೀಕಾರ, ಸವಿನಯ ಶಾಸನೋಲ್ಲಂಘನ, ಪ್ರಾಯೋಪವೇಶ (ಉಪವಾಸ), ಅಸಹಕಾರವೆಂದರೆ, ಅದೊಂದು ಶುದ್ಧೀಕರಣದ ಮಾರ್ಗ. ನಮ್ಮಿಂದ ಭಿನ್ನರಾದವರನ್ನು ಶಾರೀರಕವಾಗಿ ಸ್ವಲ್ಪವೂ ನೋಯಿಸದೆ, ಮನಸ್ಸು ಮತ್ತು ಹೃದಯ ಪರಿವರ್ತಿಸಲು ಪ್ರಯತ್ನಿಸಬೇಕು. ಎಲ್ಲ ಧರ್ಮಗಳಲ್ಲಿಯೂ ದುಷ್ಟ ಜನ, ದುಷ್ಟಪ್ರಭು ಇವರೊಡನೆ ಅಸಹಕರಿಸಬೇಕೆಂದೂ ಸಾಧುಜನ, ಸನ್ಮಾರ್ಗದ ರಾಜರು ಇವರೊಡನೆ ಸಹಕರಿಸುವುದು ಕರ್ತವ್ಯವೆಂದೂ ಬೋಧಿಸಲಾಗಿದೆ. ಇದೇ ಮಾತು ಉಳಿದ ರೂಪದ ಸತ್ಯಾಗ್ರಹಿಗಳಿಗೂ ಅನ್ವಯಿಸುತ್ತದೆ. ಉಪವಾಸ ಕಟ್ಟಕಡೆಯ ಅಸ್ತ್ರ; ಅದನ್ನು ಎಂದಿಗೂ ಸ್ವಾರ್ಥಕ್ಕಾಗಿ ಬಳಸಬಾರದು. ಗಾಂಧೀಜಿ ಕೆಲವರನ್ನು ಆದರ್ಶ ಸತ್ಯಾಗ್ರಹಿಗಳೆಂದು ಯಾವಾಗಲೂ ಉದಾಹರಿಸುತ್ತಿದ್ದರು: "ಪ್ರಹ್ಲಾದ, ಹರಿಶ್ಚಂದ್ರ, ಮೀರಾಬಾಯಿ, ಸಾಧು ಹಸನ್ ಮತ್ತು ಹುಸೇನ್, ಸಾಕ್ರೆಟೀಸ್ ಇವರೆಲ್ಲರೂ ಇನ್ನೂ ಅನೇಕ ಮಹಾತ್ಮರು ಹಿರಿಯ ಸತ್ಯಾಗ್ರಹಿಗಳು. ಇವರ ದಿವ್ಯ ಚರಿತ್ರೆಗಳನ್ನು ಪಠನಮಾಡಿ, ಸತ್ಯಾಗ್ರಹಿ ಸ್ಫೂರ್ತಿಯನ್ನು ಗಳಿಸಿಕೊಳ್ಳಬೇಕು."

೧೯೨೦ರ ಯಂಗ್ ಇಂಡಿಯಾದಲ್ಲಿ ಗಾಂಧೀಜಿ ಬರೆದ ಸತ್ಯಾಗ್ರಹದ ಬಗೆಗಿನ ಈ ವ್ಯಾಖ್ಯಾನ ಎಂದೆಂದಿಗೂ ಸತ್ಯವಾದುದು: 'ಅಸಹಕಾರ ಮತ್ತು ಶಾಸನೋಲ್ಲಂಘನಗಳು ಸತ್ಯಾಗ್ರಹ ವೃಕ್ಷದ ಪ್ರತ್ಯೇಕ ಶಾಖೆಗಳು. ಸತ್ಯಾಗ್ರಹವು ನನ್ನ ಕಲ್ಪತರು; ಜೀವದ ಜೀವ. ಸತ್ಯಾಗ್ರಹವು ಸತ್ಯದ ಶೋಧನೆ. ದೇವರೇ ಆ ಸತ್ಯ. ಅಹಿಂಸೆಯ ಜ್ಯೋತಿ ನನಗೆ ಆ ದೇವರ ದರ್ಶನ ಮಾಡಿಸಬಲ್ಲದು.

"ಅನ್ಯಾಯಕ್ಕೆ ಸಹಕಾರವನ್ನು ಕೊಡದಿರುವುದು ಅಸಹಕಾರ. ಎಂಥ ಪ್ರಚಂಡ ದುರಳನೇ ಆಗಲೀ, ಬಲಪ್ರಯೋಗದಿಂದಾದರೂ ಸೋತವನ ಇಷ್ಟಕ್ಕೆ ವಿರುದ್ಧವಾಗಿ ಅವನನ್ನು ಆಳುವುದು ಕಷ್ಟ. ಬಹುಮಂದಿ ಗೆದ್ದವನ ಪಥ ಅನುಸರಿಸುವರೇ ವಿನಾ ಅವನನ್ನು ಪ್ರತಿಭಟಿಸಲು ಬಯಸುವುದಿಲ್ಲ. ದುರುಳ ದರ್ಪಿಷ್ಟನು ಭಯೋತ್ಪಾದನೆ ಮಾಡುತ್ತಾನೆ. ಈ ಭಯೋತ್ಪಾದನೆ ನಿರರ್ಥಕವೆಂಬುದನ್ನು ಇತಿಹಾಸ ತೋರಿಸುತ್ತದೆ......ಅಸಹಕಾರದಿಂದ

ಉಂಟಾಗುವ ಎಲ್ಲ ಬವಣೆಯನ್ನೂ ಸತ್ಯಾಗ್ರಹಿ ತಾನೇ ಆತ್ಮಸಂತೋಷದಿಂದ ಅನುಭವಿಸಬೇಕು."

"ತಂದೆಯು ಮಗನಿಗೆ ಅನ್ಯಾಯ ಮಾಡಿದರೆ ಮನೆಯನ್ನು ತ್ಯಜಿಸಿ ಹೋಗುವುದು ಮಗನ ಕರ್ತವ್ಯ—ಒಂದು ಶಾಲೆಯ ಮುಖ್ಯೋಪಾಧ್ಯಾಯರು ಶಾಲೆಯನ್ನು ಅನೀತಿಗೆ ಎಳೆದರೆ, ವಿದ್ಯಾರ್ಥಿ ಶಾಲೆಯನ್ನು ಬಿಟ್ಟುಬಿಡಬೇಕು. ಒಂದು ಜನ ಸಂಸ್ಥೆಯ ಅಧ್ಯಕ್ಷ ಕೈಯಾಸೆ ಮಾಡಿದರೆ, ಆ ಸಂಸ್ಥೆಯ ಸದಸ್ಯರು ಅದನ್ನು ತ್ಯಜಿಸಬೇಕು. ಹಾಗೆಯೇ ಒಂದು ರಾಜ್ಯದಲ್ಲಿ ರಾಜ, ಪ್ರಭುತ್ವ ಅನ್ಯಾಯಮಾಡಿದರೆ, ಪ್ರಜೆಗಳು ರಾಜನೂ ಪ್ರಭುತ್ವವೂ ನ್ಯಾಯ ಮಾರ್ಗಕ್ಕೆ ತಿರುಗುವಂತೆ ಮಾಡಲು ಸಾಕಷ್ಟು ಅಸಹಕಾರವನ್ನು ತೋರಿಸ ಬೇಕು. ಮೇಲೆ ಹೇಳಿದ ಎಲ್ಲ ನಿದರ್ಶನಗಳಲ್ಲೂ ಶಾರೀರಿಕವಾಗಿಯಾಗಲೀ, ಮಾನಸಿಕವಾಗಿಯಾಗಲೀ ಬವಣೆಗೆ ತುತ್ತಾಗಬೇಕು. ಈ ಬವಣೆ, ಕ್ಲೇಶ ಇಲ್ಲದೆ ಸ್ವಾತಂತ್ರ್ಯ ಅಲಭ್ಯ."[1]

ಹೀಗೆ ಸತ್ಯಾಗ್ರಹ ಆಚರಿಸುವವನು ಅದಕ್ಕೆ ಯುಕ್ತವಾದ ಗುಣಗಳಿಂದ, ಅರ್ಹತೆಗಳಿಂದ ಕೂಡಿರಬೇಕು. ಎಂದರೆ, ಸತ್ಯಾನ್ವೇಷಣೆ ಅವನ ಜೀವನದ ಪರಿಯಾಗಬೇಕು. ಎಂದರೆ, ಸತ್ಯಾಗ್ರಹ ಬಾಳಿನ ವಿಧಾನವೇ (a Way of Life) ಆಗಿರುತ್ತದೆ. ಇದರ ಅರ್ಥವೇನು? 'ಸತ್ಯಾಗ್ರಹ ಬದುಕಿನ ಬಗೆಗೆ ಒಂದು ವಿಶಿಷ್ಟ ರೀತಿಯ ಮನೋಧರ್ಮ; ಅಷ್ಟೇ ಅಲ್ಲ. ಬದುಕಿನ ಎಲ್ಲ ಅಂಶಗಳ ಬಗೆಗೂ ಒಂದು ಮನೋಧರ್ಮ. ಅದು ಕೇವಲ ಒಂದು ಕ್ರಿಯೆ ಯಲ್ಲ ಅಥವಾ ಕ್ರಿಯೆಗಳ ಸರಪಳಿಯಲ್ಲ. ಅದೊಂದು ಬದುಕಿನ ಆಂತರಿಕ ಸ್ಥಿತಿ. ಜೀವಪೋಷಣೆ, ಜೀವಧಾರಣೆ ಮಾಡುವ ಶಕ್ತಿಗಳನ್ನು ವೃದ್ಧಿಪಡಿಸುವ ಸಲುವಾಗಿ ಬದುಕನ್ನು ನಡೆಸುವ ರೀತಿ. ಇದರಿಂದ ಉತ್ಪನ್ನ, ಸೃಷ್ಟಿ ಎರಡೂ ಆಗಬೇಕು. ಈ ಮನೋಧರ್ಮದಿಂದ ಕೂಡಿದ ಸತ್ಯಾಗ್ರಹಿಯ ಕ್ರಿಯೆಯಿಂದ ಸತ್ಯಸ್ಥಾಪನೆಗೂ, ನ್ಯಾಯಸ್ಥಾಪನೆಗೂ ಅವಕಾಶವಾಗುತ್ತದೆ."[2]

---

1. ಸತ್ಯಾಗ್ರಹ ಪರಿಪತ್ರ: ಮೇ ೬, ೧೯೧೬.
2. ಸತ್ಯಾಗ್ರಹ: ಆರ್. ಆರ್. ದಿವಾಕರ—ಪುಟ: ೪೧.

ಇಂಥ ವಿಧಾನದ ಪರಿಣಾಮವಾಗಿ ಬದುಕು ಹಸನಾಗುತ್ತದೆ. ಕೆಡುಕು ದೂರವಾಗುತ್ತದೆ. ಇಂಥ ಸತ್ವ ನಿಜ ಸತ್ಯಾಗ್ರಹದಲ್ಲಿ ಅಡಗಿದೆ. ಭಾರತದಂಥ ಬೃಹದ್‌ರಾಷ್ಟ್ರದ ಸ್ವಾತಂತ್ರ್ಯಸಾಧನೆಗೆ ಗಾಂಧೀಜಿ ಈ ಅಸ್ತ್ರವನ್ನು ಉಪಯೋಗಿಸಿದರಷ್ಟೆ; ಇದನ್ನೊಂದು ತಂತ್ರವಾಗಿ ಬಳಸಿದರಷ್ಟೆ. 'ಅದು ದುರ್ಬಲರ ಅಹಿಂಸೆಯಾಗಿತ್ತು (Non-Violence of the Weak)' ಎಂದು ಅವರು ಕಡೆಗೆ ಉದ್ಘೋಷಿಸಿದುದು ಅವರ ಸತ್ಯನಿಷ್ಠೆಯ, ಸತ್ಯಾಗ್ರಹಿಯ ಸತ್ಯಗ್ರಹಣದ ರೀತಿಯನ್ನು ತೋರಿಸುತ್ತದೆ.

ಸಾಮಾನ್ಯವಾಗಿ ರಾಜಕಾರಣವೆಂದರೆ ಎಲ್ಲೆಲ್ಲೂ ಕುಟಿಲತೆಯೇ, ಮೋಸ-ದೌರ್ಜನ್ಯಗಳೇ ಅದರ ತಳಹದಿ. ಇದನ್ನು ಬದಲಾಯಿಸಿ, 'ರಾಮರಾಜ್ಯ' ವನ್ನು—Kingdom of God on Earth ಸ್ಥಾಪಿಸಬೇಕೆಂದು ಗಾಂಧೀಜಿ ಬಯಸಿದ್ದರು. ಆ ರಾಮರಾಜ್ಯದ ಚಿತ್ರವನ್ನು ಅವರು ಹೀಗೆ ಕೊಟ್ಟಿದ್ದಾರೆ: "ರಾಮರಾಜ್ಯದ ವಿಷಯದಲ್ಲಿ ಒಂದು ಮಾತು. ಧಾರ್ಮಿಕ ದೃಷ್ಟಿಯಲ್ಲಿ ಅದು ಭೂಮಿಯ ಮೇಲೆ ಪರಮಾತ್ಮನ ಅಧಿಕಾರವೆನಿಸುತ್ತದೆ. ರಾಜಕೀಯ ದೃಷ್ಟಿಯಲ್ಲಿ ಅದೊಂದು ಪೂರ್ಣಪ್ರಜಾಪ್ರಭುತ್ವ. ಜಾತಿ, ಮತ, ಕುಲ, ಲಿಂಗ, ವರ್ಣ ಇವೆಲ್ಲವುಗಳ ಅಸಮಾನತೆ ಅಲ್ಲಿರುವುದಿಲ್ಲ. ಸಮಗ್ರ ದೇಶವೂ, ರಾಷ್ಟ್ರವೂ ಪ್ರಜೆಗಳದು. ಸುಲಲಿತವಾಗಿ, ಸರಳವಾಗಿ ನ್ಯಾಯವು ದೊರೆಯುತ್ತದೆ. ಧಾರ್ಮಿಕ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ ಮತ್ತು ಪ್ರಕಟನ ಸ್ವಾತಂತ್ರ್ಯ ಇವೆಲ್ಲವೂ ನೀತಿಯ ಹಿನ್ನೆಲೆಯಲ್ಲಿ, ಬೆಳೆಯುವುದರಿಂದ ತಾವೇತಾವಾಗಿರುತ್ತವೆ. ಇಂಥ ರಾಷ್ಟ್ರವು ಸತ್ಯ ಅಹಿಂಸೆಗಳ ಬುನಾದಿಯ ಮೇಲೆ ರಚಿತವಾಗುವುದು. ಸ್ವಯಮಾಡಳಿತದಿಂದ, ಸ್ವಶಕ್ತಿಯಿಂದ ಸ್ವಪರಿಪೂರ್ಣತೆ ಪಡೆದು ಸುಖ ಪ್ರಗತಿಗಳನ್ನು ಅನುಭವಿಸುವ ಗ್ರಾಮವೂ, ಜನಸ್ತೋಮವೂ ಅಲ್ಲಿ ಕಂಗೊಳಿಸುತ್ತದೆ. ಇದೊಂದು 'ಕನಸು' ಎನ್ನುವವರುಂಟು. ನನ್ನ ಕನಸು ನನಸಾಗಲೆಂದೇ, ಕನಸಿನ ಸಾಮ್ರಾಜ್ಯದಲ್ಲಿ ದುಡಿದು ಸಾಯುವುದೇ ನನ್ನ ಯೋಗ್ಯ ಕರ್ಮ."[1]

---

1. ಪಂಚಾಗ್ನಿಯಿಂದ ಪತ್ರ: ೧೨–೬–೪೫

ಗಾಂಧೀಜಿ ರಾಮರಾಜ್ಯವೆಂದು ಕರೆದು, ಅದರ ಸಾಧನೆಗಾಗಿ ತಮ್ಮ ಸರ್ವಸಾಮರ್ಥ್ಯವನ್ನೂ ವಿನಿಯೋಗಿಸಿದರು. ಅಹಿಂಸೆಯ ಸಮಾಜವನ್ನು ಕಟ್ಟಲು ನಿಯೋಜಿಸಿದ ಕಾರ್ಯಗಳಲ್ಲಿ ಶಿಕ್ಷಣವೇ ಕಡೆಯದು. ಅದನ್ನು ಅವರು 'ಮೂಲ ಶಿಕ್ಷಣ', 'ಜೀವನ ಶಿಕ್ಷಣ', 'ಸತ್ಯಶಿಕ್ಷಣ' ಎಂದು ಕರೆದರು. ಭಾರತೀಯರ ಸರ್ವಾಂಗೀಣ ವಿಕಾಸಕ್ಕೆ ಶಿಕ್ಷಣವೊಂದರಿಂದಲೇ ಸಾಧ್ಯವಾಗುವುದೆಂದೂ, ಸತ್ಯಪರ ಅಹಿಂಸಕ ಮನೋವೃತ್ತಿ ಅದರಿಂದಲೇ ಜನಿಸುವಂತಾಗುವುದೆಂದೂ ಅವರು ಹಿರಿ ಬಯಸಿದರು. ವ್ಯಕ್ತಿ, ಸಮಾಜ ಸ್ವಸಾಮರ್ಥ್ಯದಿಂದ ಕೂಡಿರಬೇಕಾದರೆ, ಸ್ವಾವಲಂಬನೆಯಿಂದ ಕೂಡಿರಬೇಕಾದರೆ ಪೂರ್ಣ ಉದ್ಯೋಗ (total employment) ರಾಷ್ಟ್ರದ ಎಲ್ಲ ಆರೋಗ್ಯದೃಢಕಾಯರಾದ ಸ್ತ್ರೀಪುರುಷರಿಗೆ ದೊರಕಬೇಕಾದರೆ, ಅದು ಸ್ವಾವಲಂಬನೆಯ ಆಧಾರವುಳ್ಳ ಶಿಕ್ಷಣದಿಂದ ಮಾತ್ರ ಲಭ್ಯವಾದೀತೆಂದು ಅವರು ಕೃತನಿಶ್ಚಯರಾಗಿದ್ದರು.

ಈ ಶಿಕ್ಷಣದ ಮೂಲತತ್ವ ಹೀಗಿತ್ತು : "ನೂಲುವುದು ಇತ್ಯಾದಿ ಗ್ರಾಮ ಕೈಗಾರಿಕೆಗಳ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂಬ ನನ್ನ ಯೋಜನೆಯ ಮೂಲ ಉದ್ದೇಶ ಹೀಗಿದೆ; ಅದು ಪ್ರಚಂಡ ಪರಿಣಾಮಗಳಿಂದ ಕೂಡಿದ ಅಹಿಂಸಕ ಸಾಮಾಜಿಕ ಕ್ರಾಂತಿಯನ್ನು ತರುವ 'ಭರ್ಜಿಯ ನೂಕುತಲೆ' (Spearhead) ಆಗಬೇಕು. ಅದು ನಗರಕ್ಕೂ ಮತ್ತು ಗ್ರಾಮಕ್ಕೂ ಇರುವ ಸಂಬಂಧಕ್ಕೆ ಒಂದು ಆರೋಗ್ಯಕರ ಮತ್ತು ನೈತಿಕ ಆಧಾರವನ್ನು ಕಲ್ಪಿಸುತ್ತದೆ; ಅಲ್ಲದೆ, ಇಂದು ವರ್ಗಗಳ ನಡುವೆ ಇರುವ ಮಹಾ ಕೆಡುಕುಗಳೆನಿಸುವ ಸಾಮಾಜಿಕ ಅಭದ್ರತೆ ಮತ್ತು ವಿಷಪೂರಿತ ಸಂಬಂಧ ಇವುಗಳನ್ನು ತೊಡೆದುಹಾಕುವ ಬಗೆಗೆ ಬಹು ದೂರ ಹೋಗುತ್ತದೆ. ಅದು ಇಂದು ಗ್ರಾಮಗಳಲ್ಲಿ ಏಕಪ್ರಕಾರವಾಗಿ ಬೆಳೆಯುತ್ತಿರುವ ವಿನಾಶವನ್ನು ತಪ್ಪಿಸಿ, 'ಆಸ್ತಿಯುಳ್ಳವರು' (Haves) ಆಸ್ತಿಯಿಲ್ಲದವರು (Have-nots) ಎಂದು ಕಂಡುಬರುವ ಅಸಹಜ ಸಾಮಾಜಿಕ ಸ್ಥಿತಿ ಇಲ್ಲದಿರುವ ಮತ್ತು ಎಲ್ಲರಿಗೂ ಜೀವನಾಧಾರಕ್ಕೂ, ಸ್ವಾತಂತ್ರ್ಯದ ಹಕ್ಕಿಗೂ ಭರವಸೆ ನೀಡುವ ಹೆಚ್ಚು ನ್ಯಾಯಯುತವಾದ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ತಳಹದಿಯನ್ನು ಹಾಕುತ್ತದೆ."[1]

---

1. ಹರಿಜನ : ೯–೧೦–೧೯೩೭.

ಈ ಶಿಕ್ಷಣವೆಲ್ಲ ತಾಯ್ನುಡಿಯ ಮೂಲಕ ಒಂದು ಗ್ರಾಮೋದ್ಯೋಗದ ಆಧಾರದ ಮೇಲೆ ನಡೆಯಬೇಕು. ಶರೀರವು ಉಪಯುಕ್ತ, ಉತ್ಪಾದಕ ಕ್ರಿಯೆಯಲ್ಲಿ ತೊಡಗುತ್ತದೆ. ಬುದ್ಧಿ, ಮನಸ್ಸು ಇವುಗಳೂ ಚಾರಿತ್ರ್ಯವೂ ಚೆನ್ನಾಗಿ ವಿಕಸಿತವಾಗುವಂತೆ ಶಿಕ್ಷಣ ನಡೆಯುತ್ತದೆ. ಸ್ವಾವಲಂಬನೆಯ ಅಂಶ ಬೆಳೆಯುತ್ತದೆ. ಇಂಥ ಶಿಕ್ಷಣದಿಂದ, ಸಾಮಾಜಿಕ ಅಗತ್ಯತೆಗಳಿಗೆ ಮತ್ತು ಆದರ್ಶಗಳಿಗೆ ತಕ್ಕಂತೆ ತನ್ನ ಜೀವನವನ್ನು ಪರಿವರ್ತಿಸಿಕೊಂಡ ವ್ಯಕ್ತಿ ಸಮಾಜವನ್ನೂ ಪರಿವರ್ತಿಸಲು ಯತ್ನಿಸುತ್ತಾನೆ. ಅವನು, ತಾನೂ ಮತ್ತು ತನ್ನ ಬದುಕೂ ಸಮಾಜಕ್ಕೆ ಸಮಸ್ಯೆಯಾಗದಂತೆ, ಹೊರೆಯಾಗದಂತೆ ಬಾಳುವನು.

ಒಟ್ಟಾರೆ, ಶಿಕ್ಷಣದ ಫಲ ಎಂಥದಾಗಬೇಕು ಎಂಬುದನ್ನು ಗಾಂಧೀಜಿ ಹೀಗೆ ಹೇಳಿದ್ದಾರೆ: 'ತಮ್ಮ ಹಿಂದ್ ಸ್ವರಾಜ್ಯ ಹೊತ್ತಗೆಯಲ್ಲಿ; ಇದಕ್ಕೆ ಪ್ರೊ. ಹಕ್ಸ್‌ಲೇ ಅವರ ಮಾತನ್ನೇ ಉಪಯೋಗಿಸಿಕೊಂಡಿದ್ದಾರೆ: 'ತನ್ನ ದೇಹ ತನಗೆ ದಾಸನಾಗಿ, ಹೇಳಿದ ಕೆಲಸವನ್ನು ಸರಾಗವಾಗಿ, ಸಂತೋಷ ವಾಗಿ ಶಕ್ತಿಯಿದ್ದಷ್ಟು ಮಾಡುವಂತೆ ಯಾರಿಗೆ ತಾರುಣ್ಯದಲ್ಲಿ ಶಿಕ್ಷಣ ದೊರೆ ತಿದೆಯೋ; ಯಾರ ಬುದ್ಧಿ ಶಾಂತ, ಶುದ್ಧ, ನ್ಯಾಯದರ್ಶಿ ಆಗಿದೆಯೋ; ಯಾರ ಮನಸ್ಸು ಪ್ರಕೃತಿನಿಯಮಗಳ ಜ್ಞಾನದಿಂದ ಪೂರ್ಣವಾಗಿದೆಯೋ; ಯಾರ ಇಂದ್ರಿಯಗಳು ನಿಗ್ರಹಿಸಲ್ಪಟ್ಟಿವೆಯೋ; ಯಾರ ಅಂತರಾತ್ಮ ಪರಿಶುದ್ಧವೋ; ಯಾರಿಗೆ ನೀಚಕಾರ್ಯವೆಂದರೆ ಹೇಸಿಗೆಯೋ; ಯಾರು ತನ್ನಂತೆ ಪರರನ್ನು ಕಾಣುತ್ತಾನೋ; ಅವನು ನಿಜವಾಗಿ ಸುಶಿಕ್ಷಿತ. ಅವನು ಪ್ರಕೃತಿ ನಿಯಮ ದಂತೆ ನಡೆಯುತ್ತಾನೆ. ನಿಜವಾಗಿ ಅವನೇ ಸರಿಯಾದ ಶಿಕ್ಷಣ ಪಡೆದವನು. ಅವನು ಪ್ರಕೃತಿಯನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಂಡಾನು; ಪ್ರಕೃತಿಯೂ ಅವನನ್ನು ಉತ್ತಮರೀತಿಯಲ್ಲಿ ಉಪಯೋಗಿಸೀತು.' ಈ ಮಾತಿನ ಸಾರಾಂಶ ದೇಹ, ಮನಸ್ಸು, ಬುದ್ಧಿ, ಆತ್ಮ ಇವೆಲ್ಲವುಗಳೂ ಶಿಕ್ಷಣದ ಪರಿಣಾಮವಾಗಿ ವಿಕಾಸ ಹೊಂದಬೇಕು.

ಹೀಗೆ, ಸಾಮಾಜಿಕ – ಧಾರ್ಮಿಕ – ಆರ್ಥಿಕ – ರಾಜಕೀಯ ಮತ್ತು ಶೈಕ್ಷಣಿಕ ಅಭಿಪ್ರಾಯಗಳನ್ನು ಹೊಂದಿದ್ದ ಮತ್ತು ಅವುಗಳನ್ನು ಕಾರ್ಯ ರೂಪಕ್ಕೆ ತರಲು ಯತ್ನಿಸಿದ ಗಾಂಧೀಜಿ, ಭವಿಷ್ಯ ಸಮಾಜ ಹೇಗಿರಬೇಕೆಂದು

ಚಿತ್ರಿಸಿಕೊಂಡಿದ್ದರು ಎಂಬುದನ್ನು ತಿಳಿಸಿ ಈ ಅಧ್ಯಾಯವನ್ನು ಮುಗಿಸೋಣ. ೧೯೪೨ರಲ್ಲಿ 'ಬ್ರಿಟಿಷರೇ, ಭಾರತದಿಂದ ತೊಲಗಿ' ಆಂದೋಳನವನ್ನು ಆರಂಭ ಮಾಡುವ ಮುನ್ನ, ಇಂಗ್ಲೆಂಡಿನ 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಗೆ ಬರೆದ, ಈ ಕೆಳಗಿನ ಲೇಖನ ಭಾಗ ಜ್ವಲಂತವಾಗಿದೆ.

'........ ನಮ್ಮ ಈ ಜಗತ್ತು ಎಂದೆಂದಿಗೂ ಹಿಂಸಾಮಯ ವಾಗಿಯೇ ಇದ್ದೀತೆ ?

'ನಮ್ಮ ಲೋಕ, ಸಮಾಜ ಈಗಿದ್ದಂತೆಯೇ ಯಾವಾಗಲೂ ಇದ್ದೀತೇ?

'ಈ ಬಡತನ, ಈ ಉಪವಾಸ, ಈ ಘೋರತರ ಸಂಕಟ ಯಾವಾಗಲೂ ಇದ್ದೀತೆ? ಇದಕ್ಕೆ ಮದ್ದೇ ಇಲ್ಲವೇ? ನಾಶವೇ ಇಲ್ಲವೇ ?

'ಅಥವಾ ಕಟ್ಟಕಡೆಯ ರಣಭೇರಿ ತಣ್ಣಗಾಗಿ, ಕಹಳೆಯ ಧ್ವನಿ ಲಯ ವಾಗಿ, ಕತ್ತಿ ಕೆಳಗೆ ಬಿದ್ದು, ನಾಳಿನ ಜಗತ್ತು ಅಹಿಂಸಾಮಯವಾದೀತೇ ? ಎಲ್ಲರಿಗೂ ಅನ್ನ ದೊರೆತು, ಎಲ್ಲರಿಗೂ ಕೆಲಸವಿದ್ದು, ಎಲ್ಲರಿಗೂ ಸಮನಾಗಿ ನ್ಯಾಯ ದೊರಕೀತೆ?

'ದೈವಭಕ್ತಿ ಇಂದಿಗಿಂತ ನಾಳೆ ಹೆಚ್ಚಿ, ದೃಢವಾದ ವಿಶಾಲವಾದ ಧರ್ಮದಲ್ಲಿ, ನಂಬಿಕೆ ಇದ್ದೀತೋ ಅಥವಾ ದೇವರೇ ಇಲ್ಲದ ನಾಸ್ತಿಕ ಪ್ರಪಂಚವಾದೀತೋ ?'

ಈ ಪ್ರಶ್ನೆಗಳಿಗೆ ಗಾಂಧೀಜಿ ಕೊಟ್ಟ ಉತ್ತರ ಹೀಗಿತ್ತು :

'ಕೇವಲ ನಂಬಿಕೆಯಿಂದಲೇ ನಾನು ಹೇಳುತ್ತಿಲ್ಲ. ನಾನು ಮನಗಂಡು ನನಗೆ ಪ್ರಮಾಣವೆನಿಸಿದುದನ್ನು ಹೇಳುತ್ತೇನೆ. ನಾಳಿನ ಜಗತ್ತು ಇಂದಿನ ಜಗತ್ತು ಬಿಳುಪು ಕಪ್ಪಿನಷ್ಟೇ ವ್ಯತ್ಯಾಸವಾಗಿದ್ದಾವೆಂಬ ನಂಬಿಕೆಯಿಂದ ಹೇಳುತ್ತೇನೆ.

'ನನಗೆ ಕಾಣುವಂತೆ, ಬರಲಿರುವ ಮಾನವ ಸಮಾಜಕ್ಕೆ ಅಹಿಂಸೆಯೇ ತಳಹದಿಯಾಗಿದ್ದೀತು ; ಆಗಲೇಬೇಕು. ಇದೇ ಪ್ರಥಮ ನಿಯಮ. ಆ ಮಹಾ ನಿಯಮದಿಂದಲೇ ಉಳಿದೆಲ್ಲ ಶುಭಪ್ರಸಾದ ಹರಿದು ಬಂದಾವು. ಅಂತೆಯೇ ಅದು ಪ್ರಥಮ ನಿಯಮ.

'ಬರಲಿರುವ ಜಗತ್ತಿನ ದ್ವಿತೀಯ ಮಹಾ ನಿಯಮ ಸರ್ವಸಮ ವಿಭಾಗ ವೆಂದು ನಾನು ನಂಬಿದ್ದೇನೆ. ಇದು ಅಹಿಂಸೆಯ ಫಲ, ಅದರ ಪರಿಣಾಮ.

'ಸರ್ವಸಮ ವಿಭಾಗವೆಂದರೆ, ಜಗತ್ತಿನ ಸಂಪತ್ಸಾಮಗ್ರಿಯನ್ನೆಲ್ಲ ಯಾರೋ ಒಬ್ಬರು ಕುಳಿತು ತಮ್ಮ ಮನಸ್ಸಿಗೆ ಬಂದಹಾಗೆ ಹಂಚಿಹಾಕುವುದಲ್ಲ. ಪ್ರತಿಯೊಬ್ಬನೂ ತನ್ನ ಸಹಜವಾದ ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟು ಸಾಕು ; ಒಂದು ಕವಡೆಯೂ ಹೆಚ್ಚಾಗಿರದೆ ಇರುತ್ತದೆ ಎಂದು ಅರ್ಥ.

'ಒಂದು ಸಾಮಾನ್ಯ ಸ್ಥೂಲವಾದ ಉದಾಹರಣೆಯನ್ನು ತೆಗೆದುಕೊಳ್ಳೋಣ. ಒಬ್ಬನಿಗೆ ಮಂದಾಗ್ನಿ, ಜೀರ್ಣಶಕ್ತಿ ಕಡಿಮೆ. ಅವನಿಗೆ ಒಂದು ಪಾವು ಹಿಟ್ಟಾದರೆ ಸಾಕು. ಇನ್ನೊಬ್ಬನಿಗೆ ಒಂದು ಸೇರು ಬೇಕು. ಇಬ್ಬರಿಗೂ ಅವರಿಗೆ ಬೇಕಾದಷ್ಟು ಹಿಟ್ಟು ದೊರಕುವಂತಿರಬೇಕು. ಒಂದೊಂದು ಪಾವನ್ನೋ ಒಂದೊಂದು ಸೇರನ್ನೋ ಇಬ್ಬರ ಮೋರೆಗೂ ಬಿಸುಟುಬಿಟ್ಟರೆ ಆಗದು ; ಅದು ಕೂಡದು.

'ಈಗ ಸರ್ವಸಮ'ಭಾಗ ಸಿದ್ಧಾಂತದ ಬುಡದಲ್ಲಿ ಶ್ರೀಮಂತರು ಧರ್ಮದ ಪಾರುಪತ್ಯಗಾರರಾಗಿರಬೇಕೆಂಬ ಸಿದ್ಧಾಂತವಿದೆ; ಅನಾಸಕ್ತರಾದ ಯಜಮಾನರಾಗಿರಬೇಕೆಂಬ ಭಾವವಿದೆ; ಇದೇ ಜಟಿಲವಾದ, ಪ್ರಧಾನವಾದ ಸಮಸ್ಯೆ.

'ಈ ಸರ್ವಸಮವಿಭಾಗ ಹೇಗೆ ಆಗಬೇಕು? ಕ್ರಾಂತಿಯಿಂದಲೇ ? ದಂಗೆಯಿಂದಲೇ ? ಹಣವಂತರ ಸಂಪತ್ತನ್ನೆಲ್ಲ ಬಲಾತ್ಕಾರವಾಗಿ ಕಿತ್ತುಕೊಂಡು ಬಿಡೋಣವೇ ?

'ಕೂಡದು ಎನ್ನುತ್ತದೆ ಅಹಿಂಸೆ. ಸಂಪತ್ತಿನ ಬಲಾತ್ಕಾರ ಆಕ್ರಮಣದಿಂದ ಲೋಕ ಇನ್ನೂ ಪಾತಾಳಕ್ಕೆ ಬಿದ್ದೀತು. ಹಣವಂತನ ಕೌಶಲವೆಲ್ಲ ಮಾಯವಾಗಿ ಲೋಕಕ್ಕೆ ಆ ಸಾಮರ್ಥ್ಯದ ಭಾವ ಇಲ್ಲವಾದೀತು. ಅವನಿಗೆ ಸೃಷ್ಟಿ ಕೌಶಲ, ನಿರ್ಮಾಣಶಕ್ತಿ ಇದೆ. ಆ ಶಕ್ತಿಯನ್ನು ಕಳೆದುಕೊಳ್ಳುವುದು ಉಚಿತವಲ್ಲ.

'ಆದರೆ, ಇದೆಲ್ಲ, ಈ ಅಹಿಂಸೆಯ ಮಾತೆಲ್ಲ ನಿಜವಾಗಬೇಕಾದರೆ ಮನುಷ್ಯ ಸ್ವಭಾವವೇ ಬದಲಾಗಬೇಡವೇ? ಇತಿಹಾಸದಲ್ಲಿ ಇಂಥ ಉದಾಹರಣೆ ಎಲ್ಲಾದರೂ ಇದೆಯೆ ? ಯಾವಾಗಲಾದರೂ ನಡೆದಿದೆಯೆ ?

'ಖಂಡಿತವಾಗಿ ನಾನು ಹೇಳುತ್ತೇನೆ. ನೀಚ ಸ್ವಾರ್ಥಸಂಗ್ರಹ ಬುದ್ಧಿಯನ್ನು ತೊರೆದು, ಲೋಕವನ್ನೇ ಇಡಿಯಾಗಿ ಕಂಡು, ಲೋಕಹಿತದ ಹಾದಿ

ಯನ್ನು ವ್ಯಕ್ತಿಗಳು ಹಿಡಿದು ನಡೆದಿದ್ದಾರೆ. ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಅಂಥ ಪರಿವರ್ತನೆ ಆಗಿದೆ. ಒಂದು ಜೀವಿಯಲ್ಲಿ ಆ ಪರಿವರ್ತನೆ ಆಗಬಲ್ಲುದಾದರೆ, ಅನೇಕ ಜನರಲ್ಲಿಯೂ ಆಗಬಲ್ಲುದು.

'ನಾಳಿನ ಜಗತ್ತಿನಲ್ಲಿ ಬಡತನವಿರದು, ಯುದ್ಧವಿರದು, ಕ್ರಾಂತಿಗಳಿರದು, ರಕ್ತಪಾತವಿರದು.

'ದೈವಭಕ್ತಿ ಹಿಂದೆಂದೂ ಇಲ್ಲದಷ್ಟು ಗಾಢವಾಗಿ, ಅತಿಶಯವಾಗಿ ಇದ್ದೀತು ಭವಿಷ್ಯದ ಜಗತ್ತಿನಲ್ಲಿ.

'ಈ ಜಗತ್ತಿನ ಅಸ್ತಿತ್ವವೇ ವಿಶಾಲ ದೃಷ್ಟಿಯಿಂದ ನೋಡಿದರೆ, ಧರ್ಮದ ಮೇಲೆ ಆಧಾರಗೊಂಡಿದೆ. ಆದುದರಿಂದಲೇ ಲೋಕದಿಂದ ಧರ್ಮವನ್ನು ಕಿತ್ತೊಗೆಯಲು ಅಸಾಧ್ಯ. ಹಾಗೆ ಮಾಡಿದ ಪ್ರಯತ್ನವೆಲ್ಲ ವಿಫಲವಾದೀತು. ಕಟ್ಟಕಡೆಗೆ ಮಾನವ ಲೋಕ ವಿನಯಪೂರ್ವಕವಾಗಿ ದೇವರಿಗೆ, ದೇವರ ನಿರಂತರವಾದ ಸಚೇತನ ನಿಯಮಕ್ಕೆ ಶರಣು ಹೋದೀತು."[1]

ಇದರಿಂದ ಅಹಿಂಸೆಯ ಅಭೇದ್ಯ ಪ್ರಭಾವದಲ್ಲಿ ಅಹಿಂಸಾ ಪ್ರಧಾನ ಸಮಾಜ ರಚನೆಯಲ್ಲಿ ಗಾಂಧೀಜಿಗೆ ಎಂಥ ಗಾಢವಾದ ನಂಬಿಕೆ-ನಂಬಿಕೆಯಷ್ಟೇ ಅಲ್ಲ—ಆತ್ಮಸಾಕ್ಷೀ ರೂಪದ ವಿಶ್ವಾಸ ಇತ್ತೆಂಬುದು ವಿದಿತವಾಗುತ್ತದೆ. ಮಾನವನ ಇತಿಹಾಸದಲ್ಲಿ ಅಂತರ್ಗತವಾಗಿದ್ದು ಬಾಹ್ಯಕ್ಕೆ ಸಾಧಾರಣವಾಗಿ ಗೋಚರವಾಗದೆಯಿರುವ ಆತ್ಮಶಕ್ತಿಯ ವೈಭವವನ್ನ ಇದು ಎತ್ತಿ ಹಿಡಿದು ಘೋಷಿಸುತ್ತದೆ. ಇದು ಮಾನವತೆಯ ಗಾಂಭೀರ್ಯದ, ಮಹತ್ವದ ಸ್ಪಷ್ಟ ನಿರೂಪಣೆ. ಕಾಲದ ದಟ್ಟ ಹೊದಿಕೆಯನ್ನು ಹರಿದು, ಆಚೆ ಇರುವ ದೃಶ್ಯವನ್ನು ಕಣ್ಣಮುಂದೆ ಇಟ್ಟಂತಿದೆ. ಇಂಥ ವಿಶ್ವಾಸವೇ ಋಷಿ-ಮುನಿಗಳ, ಸಾಧು ಸಂತರ ಪ್ರವಾದಿಗಳ, ಮಾನವ ಪ್ರೇಮಿಗಳ ಜೀವದುಸಿರು ; ಜಗತ್ತಿನ ಜೀವಾಳ ; ಮೂರುದಿನದ ಬದುಕಿನಲ್ಲಿ ಕಾಣುವ ಅಮರತೆಯ ರೇಖೆ.

---

1. ಗಾಂಧೀ ಗ್ರಂಥ ಮಾಲೆ : 'ಸಮಾಜಧರ್ಮ' ಸಂಪುಟ : ಪುಟ ೪.

೨. ಭಾಷಣಗಳು ಮತ್ತು ಹೇಳಿಕೆಗಳು

ಸೂಚನೆ: ಈ ಅಧ್ಯಾಯದಲ್ಲಿ ಅಲ್ಲಲ್ಲೇ ಉದಾಹರಿಸಿರುವ ಭಾಗಗಳನ್ನು ಕನ್ನಡ ಗಾಂಧೀ ಗ್ರಂಥಮಾಲೆಯ 'ಭಾಷಣಗಳು–ಹೇಳಿಕೆಗಳು' ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ. —ಲೇ.

ಹಿಂದಿನ ಅಧ್ಯಾಯದಲ್ಲಿ ವಿಸ್ತಾರವಾದ ಗಾಂಧೀ ಸಾಹಿತ್ಯ ವಸ್ತುವಿನ ಸಾಮಾಜಿಕ ಸಂಬಂಧಗಳ ದೃಷ್ಟಿಯಿಂದ ಪರಿಶೀಲಿಸಲಾಗಿದೆ. ಈ ಅಧ್ಯಾಯದಲ್ಲಿಯೂ, ಮುಂದಿನ ಎರಡು ಅಧ್ಯಾಯಗಳಲ್ಲಿಯೂ ಗಾಂಧೀ ಸಾಹಿತ್ಯದ ಕೆಲವು ವಿಶಿಷ್ಟ ಪ್ರಕಾರಗಳನ್ನು ಕುರಿತು ವಿವೇಚಿಸಲಾಗುತ್ತದೆ. ಅವು ಈ ರೀತಿ ಇವೆ: ಭಾಷಣಗಳು ಮತ್ತು ಹೇಳಿಕೆಗಳು, ಸಂಭಾಷಣೆ ಮತ್ತು ಪತ್ರಗಳು.

ಗಾಂಧೀಜಿ, ದಕ್ಷಿಣ ಆಫ್ರಿಕಾದಲ್ಲಿದ್ದಾಗ, ಅಲ್ಲಿನ ಭಾರತೀಯ ನೆಲಸುಗಾರರ ನಾಗರಿಕ ಹಕ್ಕುಬಾಧ್ಯತೆಗಳಿಗೆ ಹೋರಾಟ ನಡೆಸುವ ಸಾರಥ್ಯವನ್ನು ವಹಿಸಬೇಕಾಯಿತು. ಇದು ಇಪ್ಪತ್ತೆರಡು ವರ್ಷಗಳ ಕಾಲ ಸಾಗಿತು. ಅನಂತರ ಅವರು ಭಾರತಕ್ಕೆ ಹಿಂದಿರುಗಿ ಬಂದಮೇಲೆ, ಭಾರತದ ಸ್ವಾತಂತ್ರ್ಯ ಹೋರಾಟದ ಅಧಿನಾಯಕರಾಗಿ ಮೂರು ದಶಕಗಳ ಅವಿಶ್ರಾಂತ ಕಾರ್ಯದಲ್ಲಿ ನಿರತರಾಗಿದ್ದರು. ಈ ಎಲ್ಲ ಕಾಲದಲ್ಲಿ ಅವರು ಬದುಕಿನ ವಿವಿಧ ರಂಗಗಳ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಬೇಕಾಗಿತ್ತು; ರಾಷ್ಟ್ರದ ಅನಂತ ಸಮಸ್ಯೆಗಳನ್ನು ಅವರಿಗೆ ಪರಿಚಯ ಮಾಡಿಕೊಡಬೇಕಾಗಿತ್ತು; ಕಾರ್ಯಕ್ರಮಗಳನ್ನು ವಿವರಿಸಬೇಕಾಗಿತ್ತು; ಸಂದೇಹ–ಸಂಶಯಗಳನ್ನು ಪರಿಹರಿಸಬೇಕಾಗಿತ್ತು; ಈ ಎಲ್ಲ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅವರು ಭಾಷಣಗಳನ್ನು ಮಾಡಬೇಕಿತ್ತು; ಆಗಾಗ ಹೇಳಿಕೆಗಳನ್ನು ನೀಡಬೇಕಾಗಿತ್ತು. ರಾಜಕೀಯ ಕಾರ್ಯಕರ್ತರು, ಸಾಮಾಜಿಕ ಕಾರ್ಯಕರ್ತರು, ವಿದ್ಯಾರ್ಥಿಗಳು, ಕಾರ್ಮಿಕರು, ಮಹಿಳಾ ಕಾರ್ಯಕರ್ತರು, ವಾಣಿಜ್ಯ ಮುಖಂಡರು, ಇತ್ಯಾದಿ ಹತ್ತಾರು ಬಗೆಗೆಗಳ ಜನರ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಬೇಕಾಗಿತ್ತು. ಹೀಗೆ ಅವರು ಅನಿವಾರ್ಯವಾಗಿ ಮಾಡಲೇ

ಬೇಕಾಗಿದ್ದು ಮಾಡಿದ ಭಾಷಣಗಳು ಅಸಂಖ್ಯವಾಗಿವೆ. ಅವರ ಬರೆಹಗಳು ಎಷ್ಟು ವ್ಯಾಪ್ತಿಯನ್ನು ಪಡೆದಿವೆಯೋ ಅಷ್ಟಕ್ಕೇನು ಕಡಿಮೆಯಿಲ್ಲದ ವ್ಯಾಪ್ತಿ ಅವರ ಭಾಷಣಗಳು ಮತ್ತು ಹೇಳಿಕೆಗಳಿಗೂ ಉಂಟು.

ಗಾಂಧೀಜಿ ದೇಶಾದ್ಯಂತ ಸಂಚರಿಸಿ, ಕೋಟ್ಯಂತರ ಜನಗಳನ್ನು ಪ್ರತ್ಯಕ್ಷ ಸಂದರ್ಶಿಸಿದ್ದರು. ಜೀವನದ ವಿವಿಧ ಸಮಸ್ಯೆಗಳನ್ನು ಕಣ್ಣಾರೆ ಕಂಡು, ಕಿವಿತುಂಬ ಕೇಳಿ, ಅವುಗಳ ಸತ್ಯಸ್ವರೂಪಗಳನ್ನು ಅರಿತುಕೊಂಡಿದ್ದರು. ಆದುದರಿಂದ ಅವರ ಭಾಷಣಗಳು ಆ ಸಮಸ್ಯೆಗಳ ನಿಜಸ್ವರೂಪವನ್ನು ಪ್ರತಿಬಿಂಬಿಸುತ್ತಿದ್ದವು. ಅವು ಅವರ ಕಾಲದ ಇತರ ಮುಖಂಡರಾದ ಲೋಕಮಾನ್ಯ ತಿಲಕರು, ಸುರೇಂದ್ರನಾಥ ಬ್ಯಾನರ್ಜಿ, ಲಾಲಾ ಲಜಪತ ರಾಯ್, ಜವಾಹರಲಾಲ್ ನೆಹರೂ, ಸುಭಾಷ್‌ಚಂದ್ರಬೋಸ್, ಶ್ರೀನಿವಾಸ ಶಾಸ್ತ್ರಿ ಮುಂತಾದವರ ಭಾಷಣಗಳಂತೆ ಇರುತ್ತಿರಲಿಲ್ಲ. ಅವುಗಳ ವೈಶಿಷ್ಟ್ಯ-ವೈಖರಿಗಳೇ ಬೇರೆ. ಅವರ ಬರೆವಣಿಗೆಯಲ್ಲಿ ಯಾವ ಸರಳ-ಸುಂದರ ನೈಜ ಭಾವ ಎದ್ದುಕಾಣುತ್ತದೆಯೋ ಅದೇ ಭಾವ ಭಾಷಣಗಳಲ್ಲೂ ಇರುತ್ತಿದ್ದಿತು. ಮೊದಲು ಮೊದಲು ಭಾಷಣ ಮಾಡಲು ಹಿಂಜರಿಯುತ್ತ, ಗಾಂಧೀಜಿ ಕ್ರಮೇಣ ಪ್ರಭಾವಶಾಲಿ ಭಾಷಣಕಾರರಾದರು. ಶ್ರೋತೃಗಳನ್ನು ಪ್ರೇರೇಪಿಸುವುದೊಂದೇ ಅವರ ಉದ್ದೇಶವಾಗಿರುತ್ತಿರಲಿಲ್ಲ. ಒಂದು ದೃಷ್ಟಿಯಲ್ಲಿ ಪ್ರೇರೇಪಣೆಯ ಅಂಶ ಅವರ ಭಾಷಣಗಳಲ್ಲಿ ಇರುತ್ತಲೇ ಇರಲಿಲ್ಲ. ಆದರೂ ಅವು ಉತ್ಪನ್ನ ಮಾಡುವ ಪ್ರೇರಣೆ, ಸ್ಫೂರ್ತಿ ಬೇರೆಯವರ ಭಾಷಣಗಳಿಂದ ಆಗುತ್ತಿದ್ದುದು ಅಪರೂಪ. ದುಃಖ, ದಾರಿದ್ರ್ಯ, ನೋವು, ಅನ್ಯಾಯ ಇತ್ಯಾದಿಗಳನ್ನು ವರ್ಣಿಸುವಾಗ ಅವರು ಎಳ್ಳಷ್ಟೂ ಉತ್ಪ್ರೇಕ್ಷೆ ಮಾಡದೆ, ಸತ್ಯದ ಗೆರೆಯನ್ನು ದಾಟದೆ ಇದ್ದರೂ, ಆ ನೈಜ ಸರಳವರ್ಣನೆಯೇ ಅವರನ್ನು ಭಾವುಕರನ್ನಾಗಿ ಮಾಡಿ, ಶ್ರೋತೃಗಳಲ್ಲಿ ಭಾವ ಬುಗ್ಗೆಯನ್ನು ತುಂಬಿ ಹರಿಸುತ್ತಿತ್ತು. ಬರಹದಲ್ಲಿ ಹೇಗೆ ಅವರ ಮಾತಿನ ಆಡಂಬರವನ್ನು ತೋರ್ಪಡಿಸದೆ, ನೇರವಾಗಿ ಸಂಗ್ರಹವಾಗಿ ವಿಷಯ ನಿರೂಪಣೆ ಮಾಡುತ್ತಿದ್ದರೋ ಅದೇ ರೀತಿ ಅವರ ಭಾಷಣಗಳಲ್ಲಿಯೂ ವಿಷಯ ನಿರೂಪಣೆಯೇ ಪ್ರಧಾನವಾಗಿರುತ್ತಿತ್ತು ; ಅದು ವಿಚಾರ ಪ್ರಚೋದನೆ ಮಾಡುತ್ತಿತ್ತು.

ಗಾಂಧೀಜಿ ಸೌಮ್ಯವಾಗಿಯೂ ನಮ್ರತೆಯಿಂದಲೂ ಮಾತನಾಡು ತ್ತಿದ್ದರು. ಅದರಲ್ಲಿ ನಟನೆಯ ರೀತಿಯ ಏರುಪೇರುಗಳಾಗಲೀ, ಭಾವಭಂಗಿ ಯಾಗಲೀ, ಮನಸೆಳೆವ ಪದಗುಚ್ಛಗಳಾಗಲೀ ಇರುತ್ತಿರಲಿಲ್ಲ. ತಾವು ಹೇಳ ಬೇಕಾದುದನ್ನು ಅಹಂಭಾವಪೂರಿತರಾಗಿ ಹೇಳುತ್ತಿರಲಿಲ್ಲ. ಒಂದು ಸುಭಾ ಷಿತ ಹೇಳುವಂತೆ, 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ | ನ ಬ್ರೂ ಯಾತ್ ಸತ್ಯಮಪ್ರಿಯಂ' (ಸತ್ಯವನ್ನು ನುಡಿಯಬೇಕು, ಪ್ರಿಯವಾಗಿ ನುಡಿಯಬೇಕು; ಸತ್ಯವನ್ನು ನುಡಿಯುವಾಗ ಅಪ್ರಿಯವಾಗಿ ನುಡಿಯ ಬಾರದು) ಎಂಬುದು ಅವರ ಆದರ್ಶವಾಗಿತ್ತು. ಸತ್ಯವನ್ನಂತೂ ನುಡಿಯಲೇ ಬೇಕು. ಅದರಲ್ಲಿ ಎಂದಿಗೂ ತಪ್ಪಬಾರದು; ಅದನ್ನೂ ಪ್ರಿಯವಾಗಿಯೇ ನುಡಿಯಬೇಕು. ಅದನ್ನು ಅಪ್ರಿಯವಾದ ರೀತಿಯಲ್ಲಿ ನುಡಿಯಬೇಕಾದುದಿಲ್ಲ, ಎಂದರೆ ನುಡಿಯುವ ವಿಧಾನ, ಮಾರ್ಗ ಗುರಿಯಷ್ಟೇ ಪ್ರಧಾನವಾಗಿರಬೇಕು ಎಂಬುದನ್ನು ಅವರು ಪಾಲಿಸಲು ಯತ್ನಿಸುತ್ತಿದ್ದರು. ಆದರೆ ಶ್ರೋತೃಗಳನ್ನು ಮೆಚ್ಚಿಸುವುದಕ್ಕಾಗಲೀ ಇತರ ಯಾವ ಕಾರಣಕ್ಕಾಗಲೀ ಅವರು ಎಂದಿಗೂ ಸತ್ಯವನ್ನು ಮರೆಮಾಜುತ್ತಿರಲಿಲ್ಲ. ಸತ್ಯವನ್ನು ಪ್ರಿಯವಾದ ರೀತಿಯಲ್ಲಿಯೇ ನುಡಿದು ಪರಿವರ್ತನೆ ತರುವುದು ಅವರ ಗುರಿಯಾಗಿತ್ತು. ಕೆಲವು ಸಂದರ್ಭ ಗಳಲ್ಲಿ ಅವರ ಭಾಷಣಗಳು ಕೆಲವರು ಶ್ರೋತೃಗಳಿಗೆ ಅಸಂತೋಷವನ್ನು ಉಂಟುಮಾಡಬಹುದಾಗಿದ್ದರೂ ಅವರು ಸತ್ಯವನ್ನು ನುಡಿಯದೆ ಇರು ತ್ತಿರಲಿಲ್ಲ.

ಮಾತಿನ ಮೇಲೆ ಸತ್ಯದ ಸ್ವಾಮ್ಯವನ್ನು ಇಟ್ಟುಕೊಳ್ಳುವುದಕ್ಕೆ ಗಾಂಧೀಜಿ ವಾರಕ್ಕೊಮ್ಮೆ ಮೌನವನ್ನು ಆಚರಿಸುತ್ತಿದ್ದರು. ಯಾವುದೇ ಭಾಷಣವನ್ನು ಮಾಡುವುದಕ್ಕೆ ಮುಂಚೆ, ಪ್ರಾರ್ಥನಾಪರರಾಗಿ ಅದರಿಂದ ಅಂತರಂಗದ ಪ್ರಸನ್ನತೆಯನ್ನು ಪಡೆದುಕೊಂಡು ಮಾತನಾಡುತ್ತಿದ್ದರು. ಇದ ರಿಂದ ಅವರ ಮಾತಿಗೆ ಅದರ ಸರಳತೆಯಲ್ಲಿಯೇ ಅಪೂರ್ವ ಶೋಭೆ ಬರು ತ್ತಿತ್ತು. ಅದು ಶ್ರೋತೃಗಳ ಮನೋಹೃದಯಗಳನ್ನು ನೇರವಾಗಿ ಪ್ರವೇಶಿಸಿ ವಿಚಾರಮಂಥನವನ್ನು ಎಸಗುತ್ತಿತ್ತು.

ಗಾಂಧೀಜಿ ವಿದ್ಯಾರ್ಥಿಗಳೊಂದಿಗೆ ಆತ್ಮೀಯ ಸಂಪರ್ಕವನ್ನು ಇಟ್ಟು ಕೊಂಡಿರುತ್ತಿದ್ದರು. ಎಲ್ಲಿ ಹೋದರೂ ಅವರು ವಿದ್ಯಾರ್ಥಿಗಳಿಗೆ ಸಂದೇಶ

ನೀಡಬೇಕಾಗುತ್ತಿತ್ತು. ಅವರ ಕರೆಗೆ ಓಗೊಟ್ಟು, ರಾಷ್ಟ್ರಾದ್ಯಂತ ಸಹಸ್ರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸ್ವಾತಂತ್ರ್ಯ ಹೋರಾಟದ ಅಗ್ನಿಕುಂಡಕ್ಕೆ ಧುಮುಕಿದುದುಂಟು. ೧೯೧೫ರಲ್ಲಿ ಅವರು ದಕ್ಷಿಣ ಆಫ್ರಿಕಾದಿಂದ ಹಿಂದೂಸ್ಥಾನಕ್ಕೆ ಹಿಂದಿರುಗಿ ಬಂದ ಸಮಯದಲ್ಲಿ ಮದರಾಸಿನ ವಿದ್ಯಾರ್ಥಿಗಳು ನೀಡಿದ ಸನ್ಮಾನ ಸಂದರ್ಭದಲ್ಲಿ ಮಾಡಿದ ಭಾಷಣದ ಭಾಗವಿದು : "ನೀವು, ಮದರಾಸಿನಲ್ಲಿರುವ ವಿದ್ಯಾರ್ಥಿಗಳೂ ಮತ್ತು ಭಾರತದಲ್ಲೆಲ್ಲಾ ಇರುವ ವಿದ್ಯಾರ್ಥಿಗಳೂ ನಿಮ್ಮನ್ನು ಅರ್ಹರನ್ನಾಗಿ ಮಾಡಿ, ನಿಮ್ಮ ಅತ್ಯುತ್ತಮ ಶಕ್ತಿಯನ್ನು ಪ್ರಚೋದಿಸುವ ವಿದ್ಯೆಯನ್ನು ಕಲಿಯುತ್ತಿದ್ದೀರಾ? ಅಥವಾ ನಿಮ್ಮ ವಿದ್ಯೆ ಸರಕಾರೀ ಅಧಿಕಾರಿಗಳನ್ನೂ ವ್ಯಾಪಾರಿ ಕಛೇರಿಗಳ ಉದ್ಯೋಗಸ್ಥರನ್ನೂ ತಯಾರು ಮಾಡುವ ಕಾರ್ಖಾನೆಯೋ? ನೀವು ಕಲಿಯುತ್ತಿರುವ ವಿದ್ಯೆಯ ಗುರಿ ಸರಕಾರದ ಇಲಾಖೆಗಳಲ್ಲಾಗಲೀ ಇತರ ಇಲಾಖೆಗಳಲ್ಲಾಗಲೀ ಉದ್ಯೋಗವನ್ನು ಸಂಪಾದಿಸುವುದು ಮಾತ್ರವೋ? . . . . .

"ನೀವು ಕೇಳಿರಬಹುದು, ನಾನು ಆಧುನಿಕ ನಾಗರಿಕತೆಯ ದೃಢವಾದ ಪ್ರತಿಕಕ್ಷಿಯೆಂದು. ಯೂರೋಪಿನಲ್ಲಿ ಏನು ನಡೆಯುತ್ತಿದೆ ಎಂಬುದರ ಕಡೆಗೆ ನಿಮ್ಮ ದೃಷ್ಟಿಯನ್ನು ತಿರುಗಿಸಿ. ಇಂದು ಯೂರೋಪು ಆಧುನಿಕ ನಾಗರಿಕತೆಯ ಹಿಮ್ಮಡಿಯ ಅಡಿಯಲ್ಲಿ ನರಳುತ್ತಿರುವುದೆಂಬ ನಿಶ್ಚಯಕ್ಕೆ ನೀವು ಬಂದರೆ, ಆಗ ಆ ನಾಗರಿಕತೆಯನ್ನು ನಮ್ಮ ಮಾತೃಭೂಮಿಯಲ್ಲಿ ಅನುಸರಿಸುವುದಕ್ಕೆ ಮುಂಚಿತವಾಗಿ ನೀವೂ ನಿಮ್ಮ ಹಿರಿಯರು ಒಂದು ಬಾರಿಯಲ್ಲ, ಎರಡು ಬಾರಿ ಯೋಚಿಸಬೇಕಾಗುವುದು. ನಮ್ಮ ಆಳ್ವಿಕೆಗಾರರು ಆ ನಾಗರಿಕತೆಯನ್ನು ಇಲ್ಲಿಗೆ ತರುತ್ತಿದ್ದಾರೆ. ನಾವೇನು ಮಾಡೋಣ ಎನ್ನುವಿರೋ? ಆ ತಪ್ಪನ್ನು ಮಾಡಬೇಡಿ. ನಾವು ಆ ನಾಗರಿಕತೆಯನ್ನು ಅಂಗೀಕರಿಸಲು ಸಿದ್ಧವಾಗಿಲ್ಲದಿದ್ದಲ್ಲಿ ಆಡಳಿತಗಾರರು ಅದನ್ನು ನಮ್ಮ ದೇಶಕ್ಕೆ ತರುವುದು ಸಾಧ್ಯವೆಂದು ನಾನು ಭಾವಿಸುವುದಿಲ್ಲ. ಅವರು ಅದನ್ನು ಇಲ್ಲಿಗೆ ತಂದರೆ, ಆಡಳಿತಗಾರರನ್ನು ತಿರಸ್ಕರಿಸದೆ, ಅವರ ನಾಗರಿಕತೆಯನ್ನು ತಿರಸ್ಕರಿಸುವ ಶಕ್ತಿ ನಮ್ಮಲ್ಲಿದೆಯೆಂದು ನನಗೆ ತೋರುತ್ತದೆ. (ಹರ್ಷಧ್ವನಿ) . . . .

"ನಾವು ಸತ್ಯವನ್ನು ಅನುಸರಿಸಬೇಕಾದರೆ, ಅಹಿಂಸೆಯನ್ನು ಅನುಸರಿಸಬೇಕಾದರೆ, ಜತೆಯಲ್ಲಿ ನಾವು ಅಭಯವನ್ನು ಅನುಸರಿಸುವುದನ್ನೂ ಕಲಿಯ

ಬೇಕು. ನಮ್ಮ ಆಳ್ವಿಕೆಗಾರರು ಮಾಡುತ್ತಿರುವುದು ತಪ್ಪು ಎಂದು ನಮಗೆ ತೋರಿದರೆ ನಮ್ಮ ಅಭಿಪ್ರಾಯವನ್ನು ಅವರಿಗೆ ಹೇಳಬೇಕು. ನಾವು ಹೇಳುವುದು ರಾಜದ್ರೋಹವಾದರೂ ಅದನ್ನೇ ಹೇಳಬೇಕು. ಆದರೆ ಅದರ ಪರಿಣಾಮವಾಗಿ ಯಾವ ಅಪಾಯ ಬಂದರೂ ಎದುರಿಸಲು ಸಿದ್ಧರಾಗಿರಬೇಕು. ನೀವು ಪರಿಣಾಮವನ್ನು ಎದುರಿಸಲು ಸಿದ್ಧರಾಗಿ, ಹಿಂದಿನಿಂದ ಹೊಡೆಯುವುದನ್ನು ಬಿಟ್ಟಾಗ, ಸರ್ಕಾರ ಸಹ ನಿಮ್ಮ ಸಲಹೆಯನ್ನು ಕೇಳುವ ಅರ್ಹತೆಯನ್ನು ನೀವು ಸ್ಥಾಪಿಸಿಕೊಳ್ಳುವಿರಿ.' . . . .

"ನಮ್ಮ ಧರ್ಮದ ಅರ್ಥವನ್ನು ನಮಗೆ ಹೇಳಿಕೊಡಲು ಮ್ಯಾಕ್ಸ್ ಮುಲ್ಲರ್ ಬೇಕಿಲ್ಲ. ಇರಲಿ. ಆತ ಹೀಗೆ ಹೇಳಿದ್ದಾನೆ. ನಮ್ಮ ಧರ್ಮದಲ್ಲಿರುವುದು ನಾಲ್ಕು ಅಕ್ಷರ (Duty)-ಕರ್ತವ್ಯ—ಐದು ಅಕ್ಷರ (Right) ಹಕ್ಕು ಅಲ್ಲ ಎಂದು. ನಮ್ಮ ಕರ್ತವ್ಯಗಳನ್ನು ಹೆಚ್ಚು ಉತ್ತಮವಾಗಿ ಮಾಡುವುದರಿಂದ ಮಾತ್ರ ನಮ್ಮ ಹಕ್ಕುಗಳನ್ನು ಹೊಂದಲು ನಮಗೆ ನ್ಯಾಯವಾದ ಅರ್ಹತೆಯುಂಟಾಗುವುದೆಂದು ನೀವು ನಂಬುವಿರಾದರೆ, ಯಾವಾಗಲೂ ನಿಮ್ಮ ಕರ್ತವ್ಯವನ್ನು ಕುರಿತು ಯೋಚಿಸಿ. ನಿಮ್ಮ ಹೋರಾಟ ಆ ಮಾರ್ಗದಲ್ಲಿರಲಿ. ಯಾವ ಮನುಷ್ಯನಿಗೂ ನೀವು ಹೆದರಬೇಕಾಗಿಲ್ಲ. ದೇವರಿಗೆ ಮಾತ್ರ ಭಯಪಡಿ" . . . .

ಈ ಭಾಷಣ ಎಂಥ ನಿರ್ಭೀತ ರಾಷ್ಟ್ರೀಯ ಮನೋಭಾವವನ್ನು ಹುಟ್ಟಿಸುವಂಥದು.

ವೆಲ್ಲೂರು ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ೮–೯–೧೯೨೭ರಂದು ಮಾಡಿದ ಭಾಷಣದ ಭಾಗವಿದು : ". . . . .ಬಹುಭಾಗದ ವಿದ್ಯಾರ್ಥಿಗಳು ವ್ಯಾಸಂಗದ ಕಾಲದಲ್ಲಿ ಅನೇಕ ಆದರ್ಶಗಳನ್ನು ಹೊಂದಿರುತ್ತಾರೆ. ಆದರೆ ವಿದ್ಯಾರ್ಥಿದೆಸೆ ಮುಗಿದಕೂಡಲೇ ಆ ಆದರ್ಶಗಳೆಲ್ಲ ಅವರಿಂದ ಮರೆಯಾಗುತ್ತವೆ. ಇದು ಒಂದು ವಿಶಿಷ್ಟವಾದ ಎಂದರೆ ದುಃಖಕರವಾದ ಪರಿಸ್ಥಿತಿ. ಕಾಲೇಜನ್ನು ಬಿಟ್ಟಕೂಡಲೇ ಬಹುಭಾಗ ವಿದ್ಯಾರ್ಥಿಗಳು ಹೊಟ್ಟೆಪಾಡಿಗೆ ಅಲೆಯುತ್ತಾರೆ. ಇದರಲ್ಲಿ ಏನೋ ಒಂದು ದೋಷವಿದೆ. ಒಂದು ಕಾರಣವಂತೂ ಸ್ಪಷ್ಟವಾಗಿ ಕಣ್ಣಿಗೆ ಕಾಣಿಸುತ್ತದೆ. ಎಲ್ಲ ವಿದ್ಯಾತಜ್ಞರೂ ಮತ್ತು

ಶಿಕ್ಷಣದೊಂದಿಗೆ ಸಂಪರ್ಕವಿರುವವರೂ ನಮ್ಮ ಶಿಕ್ಷಣ ಪದ್ಧತಿಯಲ್ಲಿ ದೋಷವಿದೆಯೆಂಬುದನ್ನು ಒಪ್ಪುತ್ತಾರೆ. ಈ ಶಿಕ್ಷಣ ಭಾರತದ ಅವಶ್ಯಕತೆಗಳಿಗೆ ಅರ್ಹವಾದುದಲ್ಲ; ಭಾರತದ ಬಡತನಕ್ಕಂತೂ ಅರ್ಹವಾದುದೇ ಅಲ್ಲ. ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಲ್ಲಿ ಸಿಕ್ಕುವ ವಿದ್ಯೆಗೂ ಅವರ ಮನೆ ಅಥವಾ ಹಳ್ಳಿಯ ಜೀವನ ಸ್ಥಿತಿಗೂ ಯಾವ ಸಂಬಂಧವೂ ಇಲ್ಲವೇ ಇಲ್ಲ. . . ಇಂಥ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಏನನ್ನು ಮಾಡಬಹುದು . . . . . ವಿದ್ಯಾರ್ಥಿಗಳು ತಮ್ಮ ಅಂತರಂಗವನ್ನು ಶೋಧಿಸಿಕೊಳ್ಳಬೇಕು. ತಮ್ಮ ಚಾರಿತ್ರ್ಯವನ್ನು ಉತ್ತಮಪಡಿಸಿಕೊಳ್ಳಬೇಕು. ತನ್ನ ಸ್ವಂತ ಬಾಳಿನ ಚಾರಿತ್ರ್ಯವನ್ನು ಶುದ್ಧಪಡಿಸಿಕೊಳ್ಳುವುದು ಉತ್ತಮವಾದ ಶಿಕ್ಷಣಕ್ಕೆ ಅನಿವಾರ್ಯವಾದ ನಿಯಮ . . . . . ನಿಮ್ಮಲ್ಲಿ ಬಹುಭಾಗ ಹಿಂದೂಗಳಿದ್ದೀರಿ. ಎಲ್ಲರೂ ಭಗವದ್ಗೀತೆಯ ಸರಳವಾದ, ಸೊಗಸಾದ, ಭಾವನಾಪೂರಿತವಾದ ಉಪದೇಶವನ್ನು ಅರ್ಥಮಾಡಿಕೊಳ್ಳಿ. ಹೀಗೆ ಹೃದಯ ಶುದ್ಧಿ ಮಾಡಿಕೊಳ್ಳಬೇಕಾದರೆ ಭಗವಂತನಲ್ಲಿ ಪೂರ್ಣ ಶರಣಾಗತರಾಗಿ ಪ್ರಾರ್ಥನೆಮಾಡಿ . . . . ದೇವರಲ್ಲಿ ನಂಬಿಕೆಯನ್ನು ಕಳೆದುಕೊಳ್ಳಬೇಡಿ. ದೇವರು ಇದ್ದಾನೆ ಎಂಬುದನ್ನು ಸಕಾರಣವಾಗಿ ನಿಮಗೆ ತೋರಿಸಲು ನನಗೆ ಸಾಧ್ಯವಿಲ್ಲ. ಏಕೆಂದರೆ ಈ ವಿಷಯ ತರ್ಕ ಮತ್ತು ವಾದವನ್ನು ಮೀರಿದುದು. ಆದರೆ ನಿಮಗೆ ಹೀಗೆ ಹೇಳಬಯಸುತ್ತೇನೆ. ನಿಮ್ಮ ಹೃದಯಗಳಲ್ಲಿ ನಮ್ರತೆಯನ್ನು ತುಂಬಿಕೊಳ್ಳಿ. ಜಗತ್ತಿನ ಋಷಿಗಳು, ಯೋಗಿಗಳು, ಸಾಧುಗಳು, ಸಿದ್ಧರು, ಗುರುಗಳು ಇವರೆಲ್ಲರ ಅನೇಕ ಅನುಭವಗಳನ್ನು ಮೂಢನಂಬಿಕೆಗಳೆಂದು ಸುಮ್ಮನೆ ತಳ್ಳಿಬಿಡಬೇಡಿ. ನೀವು ಇಷ್ಟನ್ನು ಮಾತ್ರ ಮಾಡುವುದಾದರೆ, ಇತರ ವಿಷಯಗಳೆಲ್ಲ ನಿಮಗೆ ಕರತಲಾಮಲಕದಂತೆ ಸ್ಪಷ್ಟವಾಗುತ್ತದೆ."

೧೫-೯-೨೭ರಂದು ಮದರಾಸ್ ಪಚ್ಚಿಯಪ್ಪ ಕಾಲೇಜಿನಲ್ಲಿ ಮಾಡಿದ ಭಾಷಣದ ಭಾಗವಿದು : " ಕಲ್ಲೀಕೋಟೆಯ ಒಬ್ಬ ಪ್ರೊಫೆಸರರ ಪ್ರಾರ್ಥನೆಯಂತೆ, ನಾನು ನಿಮಗೆ ಇನ್ನು ಬೀಡಿ, ಸಿಗರೇಟ್ ಸೇದುವುದು, ಕಾಫೀ-ಟೀ ಕುಡಿತ ಇವುಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತೇನೆ. ಇವು ನಮ್ಮ ಜೀವನದ ಆವಶ್ಯಕತೆಗಳಲ್ಲ. . . . ನಾವು ಈ ವಸ್ತುಗಳಿಗೆ ಅಡಿಯಾಳುಗಳಾಗಬಾರದು. ಅವು ಸ್ವದೇಶೀಯಾಗಲಿ ಪರದೇಶೀಯಾಗಲಿ ತ್ಯಜಿಸತಕ್ಕವೆ.

. . . . ಯಾವ ವಿದ್ಯಾರ್ಥಿಯೇ ಆಗಲಿ ತನ್ನ ಬಾಯನ್ನು ಹೊಗೆಯ ಕೊಳವೆಯನ್ನಾಗಿ ಮಾಡಿಕೊಂಡು ಹೊಲಸು ಮಾಡಬಹುದೇ? . . . . ಟಾಲ್‌ಸ್ಟಾಯಿಯ ಕಥೆಯೊಂದರಲ್ಲಿ ಒಬ್ಬ ಕುಡುಕ ಕೊಲೆಮಾಡಲು ಹಿಂದೆಗೆಯುತ್ತಿರುತ್ತಾನೆ. ಆಗ ಆತ ಒಂದು ಸಿಗರೇಟ್ ಸೇದತೊಡಗುತ್ತಾನೆ. ಒಂದೆರಡು ಸಲ ಹೊಗೆ ಎಳೆದುಕೊಂಡ ಕೂಡಲೇ ನಗುತ್ತಾ ಎದ್ದುನಿಂತು, 'ನಾನು ಎಂಥ ಹೇಡಿ!' ಎಂದುಕೊಂಡು ಬಾಕನ್ನು ತೆಗೆದುಕೊಂಡು ತನ್ನ ಕ್ರೂರಕೃತ್ಯವನ್ನು ಪೂರೈಸುತ್ತಾನೆ. ಟಾಲ್‌ಸ್ಟಾಯಿಯವರು ಅನುಭವದಿಂದ ಮಾತನಾಡುತ್ತಿದ್ದರು. ತಮಗೆ ಅನುಭವವಾಗದಿದ್ದ ಯಾವ ವಿಷಯವನ್ನೂ ಅವರು ಬರೆದಿಲ್ಲ. ಅವರು ಮದ್ಯಪಾನವನ್ನು ವಿರೋಧಿಸುತ್ತಾರೆ. ಅದಕ್ಕಿಂತ ಹೆಚ್ಚಾಗಿ ಸಿಗರೇಟ್ ಚುಟ್ಟಾಗಳನ್ನು ವಿರೋಧಿಸುತ್ತಾರೆ. ಕುಡಿತದಿಂದ ಕಡಿಮೆ ಕೇಡು, ಸಿಗರೇಟಿನಿಂದ ಕಡಿಮೆ ಕೇಡು ಎಂಬ ತಪ್ಪುಭಾವನೆ ಇಟ್ಟುಕೊಳ್ಳಬೇಡಿ. ಇಲ್ಲ. ಸಿಗರೇಟು ಪಿಶಾಚಿಯಾದರೆ, ಮದ್ಯಪಾನ ಸೈತಾನ."

ಇಂಗ್ಲೆಂಡಿನ ಈಟನ್ ಶಾಲೆಯ ವಿದ್ಯಾರ್ಥಿಗಳನ್ನು ಕುರಿತು ಮಾಡಿದ ಭಾಷಣದ ಭಾಗವಿದು: "ನಿಮಗೆ ಇಂಗ್ಲೆಂಡಿನಲ್ಲಿ ಒಂದು ಮುಖ್ಯಸ್ಥಾನವಿದೆ. ನಿಮ್ಮಲ್ಲಿ ಕೆಲವರು ಪ್ರಧಾನ ಮಂತ್ರಿಗಳು, ಸೈನ್ಯಾಧಿಪತಿಗಳು, ಆಡಳಿತಗಾರರು ಆಗುವ ಭವಿಷ್ಯವಿದೆ. ನಿಮ್ಮ ಶೀಲ ರೂಪಿಸಿಕೊಳ್ಳುವ ಈ ಕಾಲದಲ್ಲಿಯೇ ನಿಮ್ಮ ಹೃದಯವನ್ನು ಹೊಗಲು ನಾನು ಕಾತರನಾಗಿದೇನೆ. ಏಕೆಂದರೆ, ಈಗಲೇ ಅದು ಸುಲಭ ಸಾಂಪ್ರದಾಯಿಕ ರೀತಿಯಲ್ಲಿ ನಿಮಗೆ ಬೋಧಿಸಲ್ಪಡುತ್ತಿರುವ ಇತಿಹಾಸಕ್ಕೆ ವಿರುದ್ಧವಾದ ಕೆಲವಾರು ಅಂಶಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ. ದೊಡ್ಡ ಅಧಿಕಾರ ಸ್ಥಾನಗಳಲ್ಲಿರುವವರಲ್ಲಿ ನಾನು ವಿಷಯಜ್ಞಾನವಿಲ್ಲದಿರುವ ಸ್ಥಿತಿಯನ್ನು ಕಂಡಿರುವೆನೇ ವಿನಾ ಜ್ಞಾನಶೂನ್ಯತೆಯನ್ನಲ್ಲ. ಆ ಜ್ಞಾನವಾದರೂ ಅಸಂಬದ್ಧ ಅಂಶಗಳ ಆಧಾರವನ್ನು ಹೊಂದಿರುತ್ತದೆ. ನೀವು ಸತ್ಯಾಂಶಗಳನ್ನು ಹೊಂದಿರಬೇಕೆಂಬುದು ನನ್ನ ಆಶಯ. ನೀವು ಒಂದಲ್ಲ ಒಂದು ದಿನ ಶೋಷಣೆ ಮಾಡುವ ಕಾರ್ಯದಿಂದ ಮುಕ್ತರಾಗಿ, ಶಸ್ತ್ರಬಲವನ್ನು ತ್ಯಜಿಸಿ, ಜಗತ್ತಿನ ಶಾಂತಿರಕ್ಷಕ ಜನಾಂಗದವರಾಗಬಲ್ಲಿರೆಂಬುದನ್ನು ಕಲ್ಪಿಸಿಕೊಳ್ಳಬಲ್ಲೆನೇ ಹೊರತು ಸಾಮ್ರಾಜ್ಯ ಶಿಲ್ಪಿಗಳಂತಲ್ಲ."

ಹೀಗೆ ಗಾಂಧೀಜಿ ನೂರಾರು ಭಾಷಣಗಳನ್ನು ಮಾಡಿದುದುಂಟು. ವಿದ್ಯಾರ್ಥಿಗಳಲ್ಲಿ ದೇಶಾಭಿಮಾನ, ದೈವಭಕ್ತಿ, ಕರ್ತವ್ಯಪ್ರಜ್ಞೆ ಇತ್ಯಾದಿಗಳು ತಮ್ಮ ನಿಷ್ಕಲಂಕ ಮಾತುಗಳಿಂದ ಜನಿಸುವಂತೆ ಮಾಡಿದುದುಂಟು.

ಗಾಂಧೀಜಿ ಮಾಡಿದ ಅವಿರತ ಸಾರ್ವಜನಿಕ ಭಾಷಣಗಳಲ್ಲಿ ಅವರು ೧೯೧೬ರ ಫೆಬ್ರವರಿ ೪ರಂದು ಕಾಶೀ ವಿಶ್ವವಿದ್ಯಾಲಯದ ಪ್ರಾರಂಭೋತ್ಸವ ದಂದು ಮಾಡಿದ ಭಾಷಣ ಒಂದು ಪ್ರಚಂಡ ವಿಪ್ಲವವನ್ನೇ ಎಬ್ಬಿಸಿತು. ಹಾಗೆಯೇ ೧೯೩೧ರಲ್ಲಿ ಅವರು ದುಂಡುಮೇಜಿನ ಪರಿಷತ್ತಿನ ಮುಂದೆ ಮಾಡಿದ ಭಾಷಣವೂ, ೧೯೪೨ರಲ್ಲಿ ಚರಿತ್ರಾರ್ಹವಾದ 'ಕ್ವಿಟ್ ಇಂಡಿಯಾ' ನಿರ್ಣಯದ ಬಗೆಗೆ ಮಾಡಿದ ಭಾಷಣವೂ ತಮ್ಮ ವೈಶಿಷ್ಟ್ಯದಿಂದ ಇತಿಹಾಸವನ್ನೇ ನಿರ್ಮಿಸಿವೆ.

ಕಾಶೀ ವಿಶ್ವವಿದ್ಯಾಲಯದ ಆರಂಭೋತ್ಸವ. ಪಂಡಿತ ಮದನ ಮೋಹನ ಮಾಳವೀಯರ ಇಚ್ಛೆಯ ಪ್ರಕಾರ ಗಾಂಧೀಜಿ ಭಾಷಣ ಮಾಡಲು ಒಪ್ಪಿದರು. ಸಭಾಧ್ಯಕ್ಷ ಭಾರತದ ಅಂದಿನ ವೈಸ್‌ರಾಯ್ ಲಾರ್ಡ್ ಹಾರ್ಡಿಂಜ್. ಸಭಾ ಸದರು ರಾಜಮಹಾರಾಜರು, ಶ್ರೀಮಂತ ಶ್ರೇಷ್ಠರು. ಆ ಭಾಷಣವನ್ನು ಕೇಳಿ ಮುಗ್ಧರಾಗಿ ಪ್ರಭಾವಿತರಾದವರಲ್ಲಿ ಸಂತ ವಿನೋಬಾಜೀಯವರೂ ಒಬ್ಬರು. ಅವರು ಆಗ ಕಾಶೀ ನಗರದಲ್ಲಿ ಶಾಸ್ತ್ರಾಧ್ಯಯನ ಮಾಡುತ್ತಿದ್ದರು. ಆದರೆ ಅವರಿಗೆ ಮನಸ್ಸಿನ ಆಂದೋಳನವೇ ನಡೆದಿತ್ತು. ಅಂದಿನ ಭಾಷಣದ ಪ್ರಭಾವ ಗಾಂಧೀಜಿಯವರಿಗೆ ಪರಮಶಿಷ್ಯರೊಬ್ಬರನ್ನು ಒದಗಿಸಿಕೊಟ್ಟಿತು. ಆ ಭಾಷಣದ ಭಾಗವಿದು : "ಈ ಪವಿತ್ರ ನಗರಿಯಲ್ಲಿ, ಈ ಮಹತ್ ಕಾಲೇಜಿನ ನೆರಳಿನಲ್ಲಿ ಈ ಸಂಜೆ ನಾನು ಅನಿವಾರ್ಯವಾಗಿ ಇಂಗ್ಲಿಷಿನಲ್ಲಿ ಮಾತನಾಡಬೇಕಾಗಿರುವುದು ನಮಗೆಲ್ಲ ನಾಚಿಕೆಗೇಡು, ದೈನ್ಯದ ಪ್ರಸಂಗ. ಈ ಎರಡು ದಿನಗಳಲ್ಲಿ ಇಲ್ಲಿ ಕೊಟ್ಟ ಉಪನ್ಯಾಸಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷಿಸಲು ನನ್ನನ್ನು ಪರೀಕ್ಷಕನನ್ನಾಗಿ ನೇಮಿಸಿದರೆ, ಪರೀಕ್ಷೆಗೆ ಕುಳಿತವರಲ್ಲಿ ಬಹುಮಂದಿ ಉತ್ತೀರ್ಣರಾಗುವುದಿಲ್ಲವೆಂದು ನಾನು ಬಲ್ಲೆ. ಏಕೆಂದರೆ ಇವು ವಿದ್ಯಾರ್ಥಿಗಳ ಹೃದಯಗಳನ್ನು ಮುಟ್ಟಲಿಲ್ಲ . . . . ನಮ್ಮ ಭಾಷೆಗಳು ನಮ್ಮ ಪ್ರತಿಬಿಂಬ. ನಮ್ಮ ಭಾಷೆಯಲ್ಲಿ ಮಹದ್ವಿಚಾರಗಳನ್ನು ಹೇಳಲು ಅಶಕ್ತವೆಂದು ನೀವು ನುಡಿಯುವುದಾದರೆ, ನಮ್ಮ ಜನಾಂಗ ಎಷ್ಟು ಬೇಗ ನಾಶವಾದರೆ ನಮಗೆ

ಅಷ್ಟು ಒಳ್ಳೆಯದು. ಇಂಗ್ಲಿಷ್ ರಾಷ್ಟ್ರಭಾಷೆಯಾಗುವುದೆಂದು ಕನಸು ಕಾಣು ವವರು ಒಬ್ಬರಾದರೂ ಇದ್ದಾರೆಯೆ? (ಎಂದಿಗೂ ಇಲ್ಲ ಎಂಬ ಧ್ವನಿ) ರಾಷ್ಟ್ರಕ್ಕೆ ಏಕೆ ಈ ಪ್ರತಿಬಂಧಕ?.... ನಮ್ಮ ಮೇಲೆ ಇರುವ ಆಕ್ಷೇಪಣೆ, ನಮಗೆ ಯಾವುದನ್ನೂ ಉಪಕ್ರಮಿಸುವ ಶಕ್ತಿಯಿಲ್ಲವೆಂಬುದು. ಒಂದು ಪರ ಭಾಷೆಯಲ್ಲಿ ನಿಪುಣರಾಗುವುದಕ್ಕಾಗಿಯೇ ನಮ್ಮ ಬಾಳಿನ ಅಮೌಲ್ಯ ಕಾಲ ವನ್ನು ನಾವು ವೆಚ್ಚಮಾಡುತ್ತಿರಬೇಕಾದರೆ, ನಮಗೆ ಉಪಕ್ರಮ ಶಕ್ತಿ ಹೇಗೆ ಬರುತ್ತದೆ? ಆ ಪರಭಾಷೆಯಲ್ಲಿ ಪ್ರವೀಣರಾಗುವುದಕ್ಕೂ ನಮಗೆ ಸಾಧ್ಯವಿಲ್ಲ. ಆದರೆ ಕಳೆದ ಐವತ್ತು ವರ್ಷಗಳಿಂದ ನಮ್ಮ ಪ್ರಾಂತಭಾಷೆಗಳಲ್ಲಿ ನಾವು ಶಿಕ್ಷಣವನ್ನು ಪಡೆಯುತ್ತಿದ್ದೆವೆಂದು ಭಾವಿಸಿ. ಆಗ ನಾವು ಏನು ಆಗುತ್ತಿ ದ್ದೆವು? ನಮ್ಮ ಭಾರತ ಸ್ವತಂತ್ರವಾಗಿರುತ್ತಿತ್ತು. ನಮ್ಮ ವಿದ್ಯಾವಂತರು ತಮ್ಮ ದೇಶಬಾಂಧವರೊಂದಿಗೆ ತಮ್ಮ ನಾಡಿನಲ್ಲಿಯೇ ಪರಕೀಯರಂತಲ್ಲದೆ, ಅವರ ಹೃದಯವನ್ನು ಮುಟ್ಟುವಂತೆ ಮಾತನಾಡುತ್ತಿದ್ದರು. ಅವರು ಅತ್ಯಂತ ಬಡವರೊಡನೆ ಕಾರ್ಯಮಾಡುತ್ತಿದ್ದರು. ಈ ೫೦ ವರ್ಷಗಳಲ್ಲಿ ಅವರು ಗಳಿಸಿದುದೆಲ್ಲ ರಾಷ್ಟ್ರದ ಸೊತ್ತು ಆಗಿರುತ್ತಿದ್ದಿತು (ಕರತಾಡನ). ಇಂದು ನಮ್ಮ ಪತ್ನಿಯರು ಸಹ ನಮ್ಮ ಅತ್ಯುಚ್ಚ ವಿಚಾರಗಳಲ್ಲಿ ಭಾಗಿಗಳಲ್ಲ. ಪ್ರೊಫೆಸರ್ ಬೋಸ್, ಪ್ರೊಫೆಸರ್ ಸರ್ ಪ್ರಫುಲ್ಲಚಂದ್ರ ರಾಯ್, ಇವರ ಕಣ್‌ಕೋರೈಸುವ ಶೋಧನೆಗಳನ್ನು ನೋಡಿ. ಅವರ ಶೋಧಗಳು ಜನ ಸಾಮಾನ್ಯರ ಸ್ವತ್ತು ಆಗಿಲ್ಲವೆಂಬುದು ನಾಚಿಕೆಕೇಡು ಅಲ್ಲವೆ?... ಈಗ ನಿಮ್ಮನ್ನು ಇನ್ನೊಂದು ದೃಶ್ಯಕ್ಕೆ ಪ್ರವೇಶಗೊಳಿಸುತ್ತೇನೆ. ನಿನ್ನೆ ನಮ್ಮ ಕಾರ್ಯಕಲಾಪಗಳ ಅಧ್ಯಕ್ಷರಾಗಿದ್ದ ಮಹಾರಾಜರು ಭಾರತದೇಶದ ದಾರಿದ್ರ್ಯ ವನ್ನು ಕುರಿತು ಮಾತನಾಡಿದರು. ಇತರ ಭಾಷಣಕಾರರೂ ಅದನ್ನು ಒತ್ತಿ ಹೇಳಿದರು. ಆದರೆ ವೈಸ್‌ರಾಯರು ನಡೆಸಿಕೊಟ್ಟ ಈ ಉತ್ಸವವಲ್ಲಿ ವಿಶಾಲ ವಾದ ಸಭಾಂಗಣದಲ್ಲಿ ನಾವು ನೋಡುವುದು ನಿಜವಾಗಿ ಒಂದು ಆಡಂಬರ ಪ್ರದರ್ಶನ. ಪ್ಯಾರಿಸ್‌ನಿಂದ ಬರುವ ಬಹು ದೊಡ್ಡ ರತ್ನಪಡಿ ವ್ಯಾಪಾರಿಯ ಕಣ್ಣಿಗೆ ವೈಭವದ ಹಬ್ಬ. ಈ ರತ್ನಾಭರಣ ಖಚಿತರಾದ ಧನಿಕ ರಾಜಮಾನ್ಯ ರನ್ನು ನಾನು ನಮ್ಮ ದೇಶದ ಲಕ್ಷಾವಧಿ ಬಡವರೊಂದಿಗೆ ಹೋಲಿಸಿ ನೋಡು ತ್ತೇನೆ. ಈ ರಾಜಮಾನ್ಯರಿಗೆ ಹೀಗೆ ಹೇಳಬೇಕೆಂದು ನನ್ನ ಬಯಕೆ: 'ನೀವು

ನಿಮ್ಮ ಈ ರತ್ನಾಭರಣಗಳನ್ನೆಲ್ಲ ತೆಗೆದು ಅವನ್ನೆಲ್ಲ ಒಂದು ನಿಧಿಯಾಗಿ ಮಾಡಿ ಈ ದೇಶದ ಧರ್ಮದರ್ಶಿಗಳಾಗಿ ನೀವು ಅದನ್ನು ಇಟ್ಟುಕೊಂಡ ಹೊರತು ಈ ದೇಶಕ್ಕೆ ಮುಕ್ತಿಯಿಲ್ಲ.' (ಕೇಳಿ ಕೇಳಿ ಮತ್ತು ಕರತಾಡನ). ಚಕ್ರವರ್ತಿಗೆ ನಮ್ಮ ರಾಜಭಕ್ತಿಯನ್ನು ತೋರಿಸಬೇಕಾದರೆ, ನಮ್ಮ ಭಂಡಾರವನ್ನೆಲ್ಲ ಬಿಚ್ಚಿ ಅದರಲ್ಲಿರುವ ರತ್ನಗಳಿಂದ ನಮ್ಮನ್ನು ಅಲಂಕರಿಸಿಕೊಂಡು ಅವರ ಮುಂದೆ ಹೋಗುವುದು ಆವಶ್ಯಕವೆಂದು ಚಕ್ರವರ್ತಿಗಳ ಅಥವಾ ಲಾರ್ಡ್ ಹಾರ್ಡಿಂಜರ ಅಭಿಪ್ರಾಯವಲ್ಲವೆಂದು ನನಗೆ ಗೊತ್ತು. ಚಕ್ರವರ್ತಿಯವರು ಇದಾವುದನ್ನೂ ನಿರೀಕ್ಷಿಸುವುದಿಲ್ಲವೆಂದೇ ನನ್ನ ಪ್ರಾಣವನ್ನು ಬೇಕಾದರೂ ಒತ್ತೆಯಿಟ್ಟು ಒಂದು ಸಂದೇಶವನ್ನು ತರಲು ಹೋಗುತ್ತೇನೆ. ಸಭಾಸದರೆ, ಭಾರತದ ಯಾವುದಾದರೂ ದೊಡ್ಡ ನಗರದಲ್ಲಿ ಒಂದು ವೈಭವಯುತ ಮನೆಯನ್ನು ಕಟ್ಟುತ್ತಾರೆಂದು ನನ್ನ ಕಿವಿಗೆ ಬಿದ್ದಕೂಡಲೇ—ಆ ನಗರ ಬ್ರಿಟಿಷ್ ಆಳ್ವಿಕೆಯಲ್ಲಿರಲಿ ಅಥವಾ ಭಾರತದ ರಾಜರ ಆಳ್ವಿಕೆಯಲ್ಲಿರಲಿ—ನನಗೆ ಬಹಳ ಮನಃಕ್ಲೇಶವಾಗುತ್ತದೆ. ನಾನು ತತ್‌ಕ್ಷಣ 'ಅದು ಬಡರೈತನಿಂದ ಬಂದಿರುವ ಹಣ" ಎಂದು ಹೇಳುತ್ತೇನೆ. . . .

ಇಷ್ಟು ನೇರವಾಗಿ, ನಿರ್ಭೀತರಾಗಿ ಗಾಂಧೀಜಿ ಭಾಷಣ ಮಾಡುತ್ತಿದ್ದರು. ಅಂದಿನ ಸಭೆಯಲ್ಲಿ ನೆರೆದಿದ್ದ ರಾಜಮಹಾರಾಜರಿಗೆ ಅವರ ಮಾತು ಅಪ್ರಿಯವಾಗಿದ್ದಿತಾದರೂ ಸತ್ಯವನ್ನು ನುಡಿಯಲೇ ಬೇಕಾಗಿದ್ದ ಗಾಂಧೀಜಿ ಅದಕ್ಕೆ ಹಿಂದೆ ಮುಂದೆ ನೋಡಲಿಲ್ಲ.

೧೯೩೧ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನ ವಿವಿಧ ಸಭೆಗಳಲ್ಲಿ ಗಾಂಧೀಜಿ ಮಾಡಿದ ಭಾಷಣಗಳು ಅಮೋಘವಾದುವು. ಭಾರತದ ನಿಲುವು ಏನೆಂಬುದನ್ನು ಅವರು ಹೀಗೆ ಶೃತಪಡಿಸಿದರು: "ನನ್ನ ದೇಶಕ್ಕೆ ಸ್ವಾತಂತ್ರ್ಯ ಬೇಕಾಗಿದೆ. ಆದರೆ ಮನುಷ್ಯ ಪ್ರಪಂಚದಲ್ಲಿ ಐದನೆಯ ಒಂದು ಭಾಗವಾದ ಜನಾಂಗಕ್ಕೆ ಸೇರಿದ ನಾನು ಸ್ವಾತಂತ್ರ್ಯವನ್ನು ಬಯಸುವುದು ನನ್ನಿಂದ ಸಾಧ್ಯವಾಗುವುದಾದರೆ ಜಗತ್ತಿನ ಯಾವ ಜನಾಂಗವನ್ನೂ—ಕೊನೆಗೆ ಒಬ್ಬ ವ್ಯಕ್ತಿಯನ್ನೂ ಲೂಟಿ ಮಾಡುವುದಕ್ಕಲ್ಲ ಎಂಬುದನ್ನು ನಂಬಿರಿ. ನನ್ನ ದೇಶಕ್ಕೆ, ನನಗೆ ಸ್ವಾತಂತ್ರ್ಯಬೇಕಾದ ಮೇಲೆ ನಾನು ಜಗತ್ತಿನಲ್ಲಿರುವ ಇತರ ಎಲ್ಲ ಜನಾಂಗದವರ—ಅವರು ಬಲಿಷ್ಠರಾಗಿರಲಿ, ದುರ್ಬಲ

ರಾಗಿರಲಿ — ಸ್ವಾತಂತ್ರ್ಯವನ್ನು ಸಮನಾಗಿ ಬೆಳಸಿ ರಕ್ಷಿಸದಿದ್ದಲ್ಲಿ ನನ್ನ ಸ್ವಾತಂತ್ರ್ಯಕ್ಕೆ ನಾನು ಅರ್ಹನಾಗುವುದಿಲ್ಲ. ಆದುದರಿಂದ ಈ ಸುಂದರವಾದ ದ್ವೀಪವನ್ನು ಸಮೀಪಿಸುತ್ತಾ ಬರುತ್ತಿದ್ದಂತೆ ನಾನು ಹೀಗೆ ಹೇಳಿಕೊಂಡೆನು. 'ಬಲಾತ್ಕಾರದಿಂದಲ್ಲ, ಪ್ರೇಮದ ರೇಶ್ಮೆದಾರದಿಂದ ಬಂಧಿತವಾದ, ಸಮಾನ ಪಾಲುದಾರರಾದ ಭಾರತ, ನಿಮ್ಮ ಆಯವ್ಯಯ ಪಟ್ಟಿಯನ್ನು ಸರಿತೂಗಿಸುವುದರಲ್ಲಿ ಒಂದು ವರ್ಷಕ್ಕಲ್ಲ ಮುಂದೆ ಅನೇಕ ವರ್ಷಗಳವರೆಗೆ ನಿಜವಾದ ಸಹಾಯವಾಗಬಲ್ಲುದು ಎಂದು ಬ್ರಿಟಿಷ್ ಮಂತ್ರಿಗಳಿಗೆ ಮನದಟ್ಟುಮಾಡಿಕೊಡಲು ನನಗೆ ಸಾಧ್ಯವಾದರೂ ಆಗಬಲ್ಲುದು'. ಈ ಎರಡೂ ರಾಷ್ಟ್ರಗಳು ಏನನ್ನು ತಾನೇ ಮಾಡಲಾರವು. ಒಂದು ರಾಷ್ಟ್ರ ಜನಸಂಖ್ಯೆಯಲ್ಲಿ ಕಡಿಮೆಯಾದರೂ ಧೀರರು, ಅದ್ವಿತೀಯವಾದ ಪರಾಕ್ರಮದ ಇತಿಹಾಸವುಳ್ಳವರು, ಗುಲಾಮರಿಗೆ ಇದಿರಾಗಿ ಹೋರಾಡಿ ಪ್ರಸಿದ್ಧರಾದವರು, ದುರ್ಬಲರನ್ನು ರಕ್ಷಿಸುತ್ತೇವೆಂದು ನೂರಾರು ಬಾರಿ ಹೇಳುತ್ತಲಂತೂ ಬಂದಿರುವವರು. ಮತ್ತೊಂದು ರಾಷ್ಟ್ರ ಬಹಳ ಪ್ರಾಚೀನ. ಕೋಟ್ಯಂತರ ಜನಗಳುಳ್ಳ ವೈಭವಯುಕ್ತವಾಗಿದ್ದ ರಾಷ್ಟ್ರ. ಈಗ ಇಲ್ಲಿ ಎರಡು ಮಹಾ ಸಂಸ್ಕೃತಿಗಳು ಪ್ರತಿನಿಧಿಸಲ್ಪಟ್ಟಿವೆ. ಹಿಂದೂ ಸಂಸ್ಕೃತಿ ಮತ್ತು ಮುಸಲ್ಮಾನ್ ಸಂಸ್ಕೃತಿಯ ಜತೆಗೆ ದೊಡ್ಡ ಸಂಖ್ಯೆಯಲ್ಲಿ ಕ್ರೈಸ್ತರು; ಸಂಖ್ಯೆಯಲ್ಲಿ ತೀರ ಕಡಿಮೆಯಾದರೂ ಲೋಕೋಪಕಾರ ಮತ್ತು ಸಾಹಸಗಳಲ್ಲಿ ಅದ್ವಿತೀಯರೂ ತೇಜಸ್ವಿಗಳೂ ಆದ ಪಾರಸೀಗಳು; ಆ ಗುಣಗಳಲ್ಲಿ ಅವರನ್ನು ಮೀರಿದವರೇ ಇಲ್ಲ. ಈ ಎಲ್ಲ ಸಂಸ್ಕೃತಿಗಳೂ ಭಾರತದಲ್ಲಿ ಒಟ್ಟಾಗಿ ಸೇರಿವೆ. ದೇವರು ಇಲ್ಲಿ ಸೇರಿರುವ ಹಿಂದೂಗಳನ್ನು ಮತ್ತು ಮುಸಲ್ಮಾನರನ್ನೂ ಸೂಕ್ತವಾದ ಮನೋಭಾವದಲ್ಲಿ ಪ್ರೇರಿಸಿ, ಅವರು ತಮ್ಮತಮ್ಮೊಳಗಿನ ವ್ಯತ್ಯಾಸಗಳನ್ನು ಮರೆತು ಗೌರವಾನ್ವಿತ ಒಪ್ಪಂದಕ್ಕೆ ಬಂದು ಒಂದಾಗುತ್ತಾರೆಂದು ಭಾವಿಸಿ; ಆಗ ಇಂಗ್ಲೆಂಡನ್ನೂ ಭಾರತವನ್ನೂ ಒಟ್ಟಾಗಿ ತೆಗೆದುಕೊಳ್ಳಿ. ನಾನು ಮತ್ತೆ ನನ್ನನ್ನೇ ಕೇಳಿಕೊಳ್ಳುತ್ತೇನೆ. ನಿಮ್ಮನ್ನೂ ಕೇಳುತ್ತೇನೆ. ಗ್ರೇಟ್ ಬ್ರಿಟನ್ನಿನಷ್ಟೇ ಸ್ವತಂತ್ರವಾಗಿರುವ ಭಾರತ ಮತ್ತು ಗ್ರೇಟ್ ಬ್ರಿಟನ್ ಇವುಗಳ ಗೌರವಾನ್ವಿತ ಪಾಲುದಾರತನ ಪರಸ್ಪರ ಹಿತಕ್ಕಾಗಿ ಆಗುವುದಿಲ್ಲವೆ? ಹೀಗೆ ಈ ಕನಸಿನ ಆಶೆಯಿಂದ

ನಾನು ಬ್ರಿಟಿಷ್ ದ್ವೀಪಕ್ಕೆ ಬಂದಿದ್ದೇನೆ. ಅದೇ ಕನಸನ್ನೇ ಇನ್ನೂ ಅಪ್ಪಿಕೊಂಡಿದ್ದೇನೆ.”

ಈ ಮಾತಿನ ಶಕ್ತಿ ಎಂಥ ಸಮನ್ವಯಪೂರಿತವಾದುದು. ಉದ್ವೇಗವಿಲ್ಲದೆ ಪ್ರಭಾವವನ್ನು ಬೀರುವಂಥದು. ಇದು ‘ನಬ್ರೂಯಾತ್ ಸತ್ಯಂ ಅಪ್ರಿಯಂ’ (ಸತ್ಯವನ್ನು ಅಪ್ರಿಯವಾಗಿ ನುಡಿಯಬಾರದು) ಎಂಬ ಉಕ್ತಿಗೆ ನಿದರ್ಶನ. ಆ ಚರಿತ್ರಾರ್ಹ ಸಮಯದಲ್ಲಿ ಇಂಥ ಹಲವಾರು ಭಾಷಣಗಳನ್ನು ಮಾಡಿದ ಕೀರ್ತಿ ಗಾಂಧೀಜಿಯದು.

೧೯೩೩ರಲ್ಲಿ ಗಾಂಧೀಜಿ ತುರಂಗದಲ್ಲಿದ್ದಾಗ ಅವರ ಅನುಯಾಯಿಗಳು ಶ್ರೀ ಜಮ್ನಾಲಾಲ್ ಬಜಾಜರ ಸೂಚನೆಯ ಪ್ರಕಾರ, ಸತ್ಯ ಅಹಿಂಸೆಗಳಲ್ಲಿ, ನಂಬಿಕೆಯಿಟ್ಟು ಸತ್ಯಾನ್ವೇಷಣೆ ಮಾಡಲು, ಸಾಧಕರಾಗಿ ಬದುಕಲು ಮತ್ತು ಗಾಂಧೀ ಪ್ರಣೀತ ರಚನಾತ್ಮಕ ಕಾರ್ಯಗಳ ಆಧಾರದ ಮೇಲೆ ರಾಷ್ಟ್ರಸೇವೆಗೈಯಲು ಸಿದ್ಧರಾದ ಕಾರ್ಯಕರ್ತರ ಸಂಘವೊಂದನ್ನು ಸ್ಥಾಪಿಸಿದರು. ಅದಕ್ಕೆ ‘ಗಾಂಧೀ ಸೇವಾ ಸಂಘ’ ಎಂಬ ಹೆಸರಿತ್ತು. ಆ ಸಂಘದ ವಾರ್ಷಿಕೋತ್ಸವಗಳಲ್ಲಿ ಗಾಂಧೀಜಿ ಮಾಡಿದ ಭಾಷಣಗಳು ಅವರ ಆತ್ಮನಿವೇದನಗಳಂತಿವೆ. ಮಹಾರಾಷ್ಟ್ರದ ಸಾವಲಿ (೧೯೩೬), ಕನ್ನಡ ರಾಜ್ಯದ ಹುದಲಿ (೧೯೩೭), ಒರಿಸ್ಸಾದ ದೆಲಾಂಗ್ (೧೯೩೮), ಬಿಹಾರದ ಬೃಂದಾವನ್ (೧೯೩೯), ಬಂಗಾಳದ ಮಲಿಕಾಂಡ (೧೯೪೦) ಈ ಕಡೆಗಳಲ್ಲಿ ವಾರ್ಷಿಕೋತ್ಸವಗಳು ನಡೆದವು. ಸಂಘದ ಸದಸ್ಯರಾದ ಸತ್ಯ–ಅಹಿಂಸಾ ವ್ರತಧಾರಿಗಳು ಶಾಸನ ಸಭಾ ಚುನಾವಣೆಗಳಲ್ಲಿ ಭಾಗವಹಿಸಬಹುದೇ ಎಂಬ ಪ್ರಶ್ನೆ ಆಗಾಗ ಏಳುತ್ತಿತ್ತು. ಕಾಂಗ್ರೆಸ್ ಮತ್ತು ಸಂಘ ಎರಡೂ ಪರಸ್ಪರ ಸ್ಪರ್ಧಿಸುವ ಸಂಸ್ಥೆಗಳೆಂಬ ಭಾವನೆಯೂ ಬೆಳೆದಿತ್ತು. ಫೈಜಪುರ ಕಾಂಗ್ರೆಸ್ ‘ಜವಾಹರಲಾಲರ ಕಾಂಗ್ರೆಸ್’ ಎಂದು ಪ್ರತೀತಿಯಾಗಿದ್ದರೆ, ಸಂಘದ ಹುದಲಿ ಅಧಿವೇಶನ (೧೯೩೭) ‘ಗಾಂಧೀಜಿಯ ಕಾಂಗ್ರೆಸ್’ ಎಂದು ಪ್ರತೀತಿಯಾಗಿತ್ತು. ಆಗ ಗಾಂಧೀಜಿ ಸಂಘದ ಕಾರ್ಯಕರ್ತರ ಶ್ರದ್ಧೆಯನ್ನು ಒರೆಗೆ ಹಚ್ಚಿದರು. ಅವರ ಭಾಷಣದ ಭಾಗ ಹೀಗಿತ್ತು: “ನನಗೆ ಅದರಲ್ಲಿರುವ (ಸತ್ಯ ಅಹಿಂಸೆಗಳಲ್ಲಿ) ಶ್ರದ್ಧೆ ಎಂದಿಗಿಂತಲೂ ತೀವ್ರವಾಗಿದೆ. ಆದರೂ, ಒಂದು ವೇಳೆ ಅದು ಮುಸಕಾದರೂ ನೀವೇನು ಮಾಡಬೇಕೆಂದಿರುವಿರಿ? ಕಾರ್ಯಕ್ರಮ

ವನ್ನು ಬಿಟ್ಟುಬಿಡುವಿರೇನು ? ನಿಮಗೆ ಇದರಲ್ಲಿ ಸ್ವತಂತ್ರವಾದ ಶ್ರದ್ಧೆಯಿದೆಯೆ? ಅಥವಾ ನಾನು ನಂಬುವೆನೆಂಬ ಕಾರಣದಿಂದ ನೀವದಕ್ಕೆ ಶ್ರದ್ಧೆಯುಳ್ಳವರಾಗಿರುವಿರೋ? ನಿಮಗೆ ಸ್ವತಂತ್ರವಾದ ಶ್ರದ್ಧೆಯಿದ್ದರೆ, ಸಂಘಕ್ಕೆ ನನ್ನ ಹೆಸರಿಡಬೇಕಾದ ಆವಶ್ಯಕತೆಯಿಲ್ಲ. ನನಗಾಗಿ ನಿಮ್ಮ ಶ್ರದ್ಧೆಯಾದರೆ ನರನ ಪೂಜೆಯನ್ನು ಮಾಡುತ್ತಿದೀರಿ; ತತ್ವವನ್ನಲ್ಲ, ನರನ ಪೂಜೆ ಒಬ್ಬ ಮನುಷ್ಯನನ್ನು ಉದ್ಧಾರಮಾಡುವುದಕ್ಕೆ ಬದಲಾಗಿ ಅವನನ್ನು ಅಧೋಗತಿಗೆ ಒಯ್ಯುತ್ತದೆಂದು ನಾನು ನಿಮಗೆ ಹೇಳಬಯಸುತ್ತೇನೆ. ಪ್ರಾಯಶಃ ನಾನು ಹೇಳಿದ್ದರಿಂದ ನೀವು ಆ ತತ್ವಗಳನ್ನು ಒಪ್ಪಿದಿರೆಂಬುದು ಗಣನೆಗೆ ತೆಗೆದುಕೊಳ್ಳಬೇಕಾಗಿಯೇ ಇಲ್ಲ. ಆ ತತ್ವಗಳಿಗೆ ನೀವು ಹೃತ್ಪೂರ್ವಕವಾಗಿ ಒಪ್ಪಿದಿರಿ ಎಂದರೆ, ಅವುಗಳನ್ನು ನೀವು ಅರಗಿಸಿಕೊಂಡಿರಿ ಎಂಬುದು ಕಾರಣವಾಗುತ್ತದೆ. ಅರಗಿಸಿಕೊಳ್ಳದಿದ್ದರೆ ಅವುಗಳಿಂದ ಪ್ರಯೋಜನವಿಲ್ಲ; ಜೀರ್ಣವಿಲ್ಲದ ಆಹಾರ ಹೇಗೆ ಪ್ರಯೋಜನವಿಲ್ಲವೋ ಹಾಗೆ. ಅದು ಹಾನಿಕರವೂ ಆಗಬಹುದು. ಚೆನ್ನಾಗಿ ಅರಗಿಸಿಕೊಳ್ಳದ ತತ್ವಗಳು ಜೀರ್ಣವಾಗದ ಆಹಾರಕ್ಕಿಂತಲೂ ಕೆಡುಕನ್ನು ಮಾಡುವುವು. ಏಕೆಂದರೆ, ಅಂಥ ಆಹಾರ ಶರೀರಕ್ಕೆ ಹಾನಿ ತರುವುದು. ಆದರೆ ಅದಕ್ಕೆ ಚಿಕಿತ್ಸೆಯಿದೆ. ಜೀರ್ಣವಾಗದ ತತ್ವಗಳು ಆತ್ಮನನ್ನು ಕೆಡಿಸುವುವು. ಇದಕ್ಕೆ ಚಿಕಿತ್ಸೆಯೇ ಇಲ್ಲ." . . . .

ಎಷ್ಟು ಖಚಿತ ಹಾಗೂ ಸತ್ಯನಿಷ್ಠುರ ವಿಚಾರವಿದು !

೧೯೩೮ರ ಹೊತ್ತಿಗೆ ಸಂಘ ಅದರ ಉನ್ನತಸ್ಥಿತಿಯಲ್ಲಿತ್ತು. ರಾಷ್ಟ್ರದ ಮಹಾನಾಯಕರುಗಳು ಅದರ ಸದಸ್ಯರಾಗಿದ್ದರು. ಆಗ ನಡೆದ ಚುನಾವಣೆಗಳ ಪರಿಣಾಮವಾಗಿ, ಕಾಂಗ್ರೆಸ್ ಪ್ರಾಂತಗಳಲ್ಲಿ ಅಧಿಕಾರ ಸ್ವೀಕಾರ ಮಾಡುವ ಪ್ರಶ್ನೆ ಬಂದಿತು. ಅನೇಕ ಸದಸ್ಯರಿಗೆ ಇದೊಂದು ಮಹಾ ಪ್ರಲೋಭನೆಯಾಯಿತು. ದೆಲಾಂಗಿನ ವಾರ್ಷಿಕಾಧಿವೇಶನದಲ್ಲಿ ಗಾಂಧೀಜಿ ಹೀಗೆ ನುಡಿದರು: "ಕಾಂಗ್ರೆಸ್ಸಿನಲ್ಲಿರುವ ಭ್ರಷ್ಟಾಚಾರದ ವಿಷಯವನ್ನು ತೆಗೆದುಕೊಳ್ಳಿ. ಕಾಂಗ್ರೆಸ್ಸಿನಲ್ಲಿ ಈ ದೋಷಗಳು ಏಕಿರಬೇಕು? ಇಷ್ಟು ಭ್ರಷ್ಟಾಚಾರಗಳನ್ನಿಟ್ಟುಕೊಂಡು ನಾವು ಕಾಂಗ್ರೆಸ್ಸಿಗರೆಂದು ಅನಿಸಿಕೊಳ್ಳಲು ಅರ್ಹರೆ? ನಿಮ್ಮಲ್ಲಿ ಕೆಲವರಿಗೆ 'ಗಾಂಧೀ ಅನುಯಾಯಿಗಳು' ಎಂಬ ಹೆಸರು ಬಂದಿದೆ. 'ಗಾಂಧೀ ಅನುಯಾಯಿ' ಎಂಬ ಹೆಸರಿಟ್ಟುಕೊಳ್ಳತಕ್ಕದಲ್ಲ.

ಅದಕ್ಕಿಂತಲೂ 'ಅಹಿಂಸಾ ಅನುಯಾಯಿ' ಎಂದು ಏಕೆ ಆಗಬಾರದು? ಏಕೆಂದರೆ, ಗಾಂಧೀ ಒಳ್ಳೆಯದು ಮತ್ತು ಕೆಟ್ಟದು ಇವುಗಳ ಮಿಶ್ರಣ; ದೌರ್ಬಲ್ಯ ಮತ್ತು ಬಲಗಳ ಮಿಶ್ರಣ; ಹಿಂಸೆ ಮತ್ತು ಅಹಿಂಸೆಗಳ ಮಿಶ್ರಣ. ಆದರೆ ಅಹಿಂಸೆಯಲ್ಲಿ ಬೆರಕೆಯಿಲ್ಲ. 'ಅಹಿಂಸಾ ಅನುಯಾಯಿ' ಅನಿಸಿಕೊಂಡರೆ, ನೀವು ಶುದ್ಧವಾದ ಅಹಿಂಸೆಯನ್ನು ಆಚರಿಸುತ್ತೇವೆಂದು ಹೇಳಬಲ್ಲಿರಾ? ನಿಮ್ಮ ಎದುರಾಳಿಗಳ ಬಾಣಗಳು ನಿಮ್ಮ ಎದೆಯನ್ನು ನಾಟಿದರೂ ಯಾವ ಪ್ರತೀಕಾರವನ್ನೂ ಮಾಡದೆ ಇರುವೆವೆಂದು ಹೇಳಬಲ್ಲಿರಾ? ಅವರು ನಿಮ್ಮನ್ನು ಟೀಕಿಸುವಾಗ ನಿಮ್ಮ ಮನಸ್ಸು ಕಲಕುವುದಿಲ್ಲವೆಂದೂ ಹೇಳಬಲ್ಲಿರಾ? ನಿಮ್ಮಲ್ಲಿ ಅನೇಕರು ಹೀಗೆ ಹೇಳಲಾರಿರೆಂದೇ ನಾನು ದುಃಖದಿಂದ ಒಪ್ಪಿಕೊಳ್ಳಬೇಕು.

'ಇಷ್ಟು ದೂರ ಅಹಿಂಸೆಯ ಅಭ್ಯಾಸವನ್ನು ಮಾಡಿರುವುದಾಗಿ ನಾವೆಂದೂ ಹೇಳಿಕೊಳ್ಳಲಿಲ್ಲವೆಂದು ನೀವು ಉತ್ತರ ಹೇಳಬಹುದು. ಹಾಗಾದರೆ ಅಷ್ಟರಮಟ್ಟಿಗೆ ನನ್ನ ಆಚರಣೆಯಲ್ಲಿ ಏನೋ ನ್ಯೂನತೆಯಿದೆಯೆಂದು ನಾನು ನನ್ನ ಲೋಪವನ್ನು ಒಪ್ಪಿಕೊಳ್ಳುತ್ತೇನೆ. ಅಹಿಂಸಾ ಪಾಲನೆಯಲ್ಲಿ ಸ್ವಂತ ದೋಷವನ್ನು ದೊಡ್ಡದಾಗಿ ಕಾಣಬೇಕು. ಎದುರಾಳಿಯ ಲೋಪವನ್ನು ಸಣ್ಣದಾಗಿ ಕಾಣಬೇಕು; ತನ್ನ ಕಣ್ಣಿನಲ್ಲಿರುವ ಧೂಳಿನ ಕಣವನ್ನು ದೂಲದಂತೆಯೂ ಎದುರಾಳಿಯ ಕಣ್ಣಿನಲ್ಲಿರುವ ದೂಲವನ್ನು ಧೂಳಿನ ಕಣದಂತೆಯೂ ಕಾಣಬೇಕು. . . . ."

ಕಡೆಯದಾಗಿ ೧೯೪೦ರ ಫೆಬ್ರವರಿ ೨೪ರಂದು ಸಂಘದ ಕೊನೆಯ ಸಭೆ ಪೂರ್ವ ಬಂಗಾಳದ ಪದ್ಮಾನದಿ ತೀರದಲ್ಲಿರುವ ಮಲಿಕಾಂಡ ಎಂಬ ಹಳ್ಳಿಯಲ್ಲಿ ನಡೆದಾಗ, ಗಾಂಧೀಜಿ ಮಾಡಿದ ಭಾಷಣದ ಭಾಗವಿದು: "ಪರಸ್ಪರ ಹೊಂದಾಣಿಕೆಯಿಲ್ಲದ ಪದಾರ್ಥಗಳನ್ನು ಮಿಶ್ರಣ ಮಾಡಿದರೆ ಅದು ಸಿಡಿಯಲೇಬೇಕು. ನೀವು ನೇರವಾಗಿಯೂ, ನ್ಯಾಯವಾಗಿಯೂ ವರ್ತಿಸಬೇಕು. ಗೌಣವಾದ ವಿಷಯಗಳಲ್ಲಿ ನೀವು ರಾಜಿಮಾಡಿಕೊಳ್ಳಲು ಸಿದ್ಧರಿದ್ದರೂ ಸತ್ಯದ ವಿಷಯದಲ್ಲಿ ಅದರಿಂದ ಸರಿದು ರಾಜಿಮಾಡಿಕೊಳ್ಳುವ ಅಹಿತವಾದ ಸ್ಥಿತಿಗೆ ಬರಬಾರದು. ಅದೇ ರಾಜಿಯ ಮರ್ಮ. ಹತ್ತಿರದ ಅಥವಾ ದೂರದ ಗುರಿಯ ಉದ್ದೇಶವಿಲ್ಲದೆ ಸೇವೆ ಮಾಡುವುದೇ ನಿಮ್ಮ ಧ್ಯೇಯವಾಗಿರಲಿ.

ನಿಮ್ಮ ಸುತ್ತಲೂ ಬಡತನ ಆವರಿಸಿದೆ. ಯಾರು ಸಂಕಟದಲ್ಲಿ ಇರುವರೋ— ಅವರು ಮುಸಲ್ಮಾನರಾಗಿರಲಿ, ನಾಮ ಶೂದ್ರರಾಗಿರಲಿ ಅವರ ಸೇವೆ ಮಾಡಿ. ಸತ್ಯಾಗ್ರಹ ಎಲ್ಲ ಪಕ್ಷಗಳನ್ನೂ ಮತಭೇದಗಳನ್ನೂ ಅತಿಕ್ರಮಿಸಿರುವ ತತ್ವ. ಅದು ನಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಜೀವನವನ್ನು ಪೂರ್ಣವಾಗಿ ಹೊಕ್ಕು ವ್ಯಾಪಿಸಿರಬೇಕು . . . ."

ರಾಜಕಾರಣಿಗಳೆಲ್ಲರೂ ಸಂಘವನ್ನು ಬಿಟ್ಟರು. ಅದು ೯ ಮಂದಿ ಸತ್ಯಾನ್ವೇಷಕರ ಸಂಖ್ಯೆಗೆ ಇಳಿಯಿತು. ಆಗ ಗಾಂಧೀಜಿ ಹೀಗೆ ಹೇಳಿದರು: "ಸಂಘದ ಸದಸ್ಯತ್ವವನ್ನು ಬಿಟ್ಟರೂ ನೀವು ಪ್ರತಿಯೊಬ್ಬನೂ ಸಂಘದ ಧ್ಯೇಯದ ಪ್ರತಿನಿಧಿಗಳಾಗಿರಬೇಕು. ನಾನು ಸಾಬರಮತಿಯ ಸತ್ಯಾಗ್ರಹ ಆಶ್ರಮವನ್ನು ವಿಸರ್ಜನೆ ಮಾಡಿದಾಗ, ಅಲ್ಲಿದ್ದ ಪ್ರತಿಯೊಬ್ಬನೂ ಸಂಚಾರ ದಲ್ಲಿರುವ ಆಶ್ರಮವಾಗಬೇಕೆಂದು ಹೇಳಿದೆನು. ಅದೇ ರೀತಿ ನಿಮ್ಮಲ್ಲಿ ಪ್ರತಿ ಯೊಬ್ಬನೂ ಸಂಚಾರೀ ಗಾಂಧೀ ಸೇವಾ ಸಂಘವಾಗಿರಬೇಕು. ಈಗ ಪ್ರತಿ ಯೊಬ್ಬ ಸದಸ್ಯನೂ ಹೆಚ್ಚು ಅಂತರ್ಮುಖಿಯಾಗಿ ಮುಂದೆ ಕಾದಿರುವ ಮಹತ್ಕಾರ್ಯಗಳನ್ನು ಮಾಡಲು ಸಿದ್ಧನಾಗಬೇಕು. ತಾನು ಪ್ರತಿಜ್ಞೆ ಮಾಡಿ ರುವ ಧ್ಯೇಯಸಾಧನೆ ತನ್ನ ಜೀವನದಲ್ಲಿ ಪೂರ್ಣವಾಗುವಂತೆ ದೃಢಸಂಕಲ್ಪ ವನ್ನು ಕೈಗೊಂಡು, ಅವಶ್ಯವಿದ್ದಲ್ಲಿ ಹರ್ಷಚಿತ್ತದಿಂದ ಮರಣವನ್ನು ಎದುರಿ ಸಲೂ ಸಿದ್ಧನಾಗಬೇಕು. ನೀವು ಹಾಗೆ ಮಾಡುವುದಾದರೆ ನಿಮ್ಮ ಮನೆಗಳಿಗೆ ಹಗುರವಾದ ಹೃದಯದಿಂದ ಹೋಗುವಿರಿ; ದುಃಖ ಅಥವಾ ವಿಷಣ್ಣತೆ ಯಿಂದಲ್ಲ. ನಿಜವಾಗಿಯೂ ದುಃಖಕ್ಕಾಗಲೀ ವಿಷಣ್ಣತೆಗಾಗಲೀ ಕಾರಣವಿಲ್ಲ. ಯಾರು ತಾನು ಅರಿತವನಲ್ಲವೆಂದು ಅರಿಯುವನೋ ಅವನೇ ನಿಜವಾದ ವಿವೇಕಿಯೆಂದು ಹೇಳಲಾಗಿದೆ. ಈಗ ನಮ್ಮ ಧ್ಯೇಯಕ್ಕೆ ಅನುಗುಣವಾಗಿ ನಾವು ಆಚರಿಸುತ್ತಿಲ್ಲವೆಂದು ಅರಿತಿರುವೆವು. ಇದರಿಂದ ನಾವು ಶೀಲವಂತ ರೆಂಬ ಆತ್ಮಪ್ರತಿಷ್ಠೆಯ ಭಾರವನ್ನು ಕಳೆಮಕೊಳ್ಳುತ್ತಿದ್ದೇವೆ. ಈ ಅರಿವು ನಿಮಗೆ ಹೆಚ್ಚು ಶಕ್ತಿಯನ್ನು ಒದಗಿಸಬೇಕು."

ಕಾರ್ಯಕರ್ತರಿಗೆ ಎಂಥ ಉತ್ತೇಜಕ ವಚನವಿದು. ರಾಗದ್ವೇಷಗಳಿಂದ ದೂರವಾಗಿ, ಶಾಂತಿ–ಸಮಾಧಾನ, ವಿಚಾರನಿಷ್ಠೆ, ತತ್ವನಿಷ್ಠೆ ಇವುಗಳನ್ನು ಹೆಚ್ಚು ಮೈಗೂಡಿಸುವ ಸತ್ವ ಇದರಲ್ಲಿ ಇಲ್ಲವೆ ?

ಗಾಂಧೀಜಿಯ ಭಾಷಣಗಳಲ್ಲಿ ಅವರು ಕಾಂಗ್ರೆಸ್ ಸಂಸ್ಥೆಯ ಪರವಾಗಿ ಅದರ ವೇದಿಕೆಗಳ ಮೇಲೆ ಮಾಡಿದ ಭಾಷಣಗಳು ಅತ್ಯಂತ ಪ್ರಭಾವಶಾಲಿಯಾದುವು. ಅವು ಅಸಂಖ್ಯಾತವಾಗಿವೆ. ಇಡಿಯ ರಾಷ್ಟ್ರಕ್ಕೆ ಅವು ಚೈತನ್ಯ ನೀಡುತ್ತಿದ್ದುವು. ಎಲ್ಲ ನಾಯಕರೂ ಅವರ ವಾಣಿಗೆ ಮಣಿಯುತ್ತಿದ್ದರು. ಭಿನ್ನಾಭಿಪ್ರಾಯಗಳು ಬಂದಾಗಲೂ ಆತ್ಮಪರೀಕ್ಷೆ ಮಾಡಿಕೊಂಡು ಐಕ್ಯವನ್ನು ಕಾಪಾಡಿಕೊಳ್ಳುವ ಶಕ್ತಿ ಅವರ ಮಾತಿನಲ್ಲಿ ಇರುತ್ತಿತ್ತು.

ಗಾಂಧೀಜಿ ಕಾಂಗ್ರೆಸ್ ಅಧ್ಯಕ್ಷರಾದುದು ಒಮ್ಮೆಯೆ. ೧೯೨೪ರಲ್ಲಿ; ಬೆಳಗಾಂ ಅಧಿವೇಶನದಲ್ಲಿ; ಅದು ಕನ್ನಡಿಗರ ಹಿರಿಮೆಯ ಮಾತು. ಕರ್ಣಾಟಕ ಪ್ರಾಂತವನ್ನು ಗಾಂಧೀ ಪ್ರಾಂತವೆಂದೇ ಕರೆದ ಕಾಲವಿತ್ತು. ಆ ಅಧಿವೇಶನದಲ್ಲಿ ಸಿ.ಆರ್. ದಾಸ್, ಮೋತಿಲಾಲ್ ನೆಹರೂ, ಸುಭಾಷ್ ಚಂದ್ರ ಬೋಸ್ ಮುಂತಾದವರ ನಾಯಕತ್ವದಲ್ಲಿದ್ದ ಕಾಂಗ್ರೆಸ್ಸಿನ ಸ್ವರಾಜ್ಯ ಪಕ್ಷಕ್ಕೂ ಅಸಹಕಾರವನ್ನು ಮುಂದುವರಿಸಬೇಕೆಂದು ದೃಢಪ್ರತಿಜ್ಞರಾಗಿದ್ದ ಜವಾಹರಲಾಲ್ ನೆಹರೂ, ರಾಜಾಜೀ, ರಾಜೇನ್‌ಬಾಬೂ ಇವರ ಪಕ್ಷಕ್ಕೂ ಸರಿಯಾದ ಕಾರ್ಯಕ್ರಮವನ್ನು ಗೊತ್ತುಮಾಡಿ, ಮಾರ್ಗದರ್ಶನವಿತ್ತರು ಗಾಂಧೀಜಿ. ಎರಡು ಪಕ್ಷಗಳವರೂ ರಚನಾತ್ಮಕ ಕಾರ್ಯದಲ್ಲಿ ಒಟ್ಟುಗೂಡಿ ಕೆಲಸಮಾಡುವಂತೆ ಪ್ರೇರಿಸಿದರು. ವಿಶಿಷ್ಟವಾದ ಸರಳತೆ, ಸ್ಪಷ್ಟನಿರೂಪಣ ಇವುಗಳಿಗೆ ಅವರ ಅಧ್ಯಕ್ಷ ಭಾಷಣ ನಿದರ್ಶನ. ಅವರು 'ಹಿಂದೂಸ್ಥಾನದ ಕೋಟ್ಯಂತರ ಜನರ ಹಸಿವನ್ನು ಪರಿಹರಿಸಲು ಏಕಮಾತ್ರ ಸಾಧನವಾದ ಚರಖಾ', ಹಿಂದೂ-ಮುಸಲ್ಮಾನರ ಐಕ್ಯ, ಅಸ್ಪೃಶ್ಯತಾ ನಿವಾರಣೆ, ಸ್ವರಾಜ್ಯ ಯೋಜನೆ ಇತ್ಯಾದಿ ಮುಖ್ಯ ವಿಷಯಗಳ ಆವಶ್ಯಕತೆಯ ಬಗೆಗೂ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ, ಅಸಹಕಾರ ಆಂದೋಳನ ಇತ್ಯಾದಿಗಳ ಬಗೆಗೂ ವಿಶ್ಲೇಷಣೆಮಾಡಿ, ಕಡೆಯಲ್ಲಿ ಹೀಗೆ ನುಡಿದರು: "ಕಾಂಗ್ರೆಸ್ ಸಂಸ್ಥೆ ಅವಿಭಾಗವಾಗಿ ಉಳಿಯಬೇಕೆಂಬ ಆಸೆ ನನಗೆ ಇರುವುದರಿಂದ ಕಾಯದೆ ಭಂಗವನ್ನು ನಿಲ್ಲಿಸಬೇಕೆಂದು ಸಲಹೆ ಮಾಡುತ್ತೇನೆ. ಏಕೆಂದರೆ, ದೇಶ ಇದಕ್ಕೆ ಸಿದ್ಧವಾಗಿಲ್ಲವೆಂದು ನನಗೆ ಕಾಣುತ್ತದೆ. ಆದರೆ ನನ್ನ ಮಟ್ಟಿಗೆ ನಾನು ಒಬ್ಬ ವ್ಯಕ್ತಿಯಾಗಿ ಕಾಯದೆ ಭಂಗವನ್ನು ಬಿಡುವುದಿಲ್ಲ. ಸರ್ಕಾರ ಹೀಗಿರುವವರೆಗೆ ನಾನು ಕಾಯದೆ ಭಂಗವನ್ನು ಬಿಡಲಾರೆ. ನನಗೆ ಅದು ಬರಿಯ ಒಂದು

ಕಾರ್ಯನೀತಿ ಮಾತ್ರವಲ್ಲ. ಅದೇ ನನ್ನ ಧರ್ಮ.... ನಾನು ಇಂಗ್ಲಿಷರನ್ನು ದ್ವೇಷಿಸಲಾರೆ; ದ್ವೇಷಿಸುವುದಿಲ್ಲ. ಆದರೆ ಅವರು ಹೊರಿಸುವ ಹೊರೆಯನ್ನು ಹೊರುವುದಿಲ್ಲ. ಭಾರತದ ಮೇಲೆ ಬ್ರಿಟಿಷ್ ಸಂಸ್ಥೆಗಳನ್ನೂ ಬ್ರಿಟಿಷ್ ಕ್ರಮಗಳನ್ನೂ ಹೊರಿಸುವ ಅಪವಿತ್ರ ಪ್ರಯತ್ನಗಳನ್ನು ನನ್ನ ಪ್ರಾಣವನ್ನಾದರೂ ಕೊಟ್ಟು ಎದುರಿಸುತ್ತೇನೆ. ಆದರೆ ಆ ಪ್ರಯತ್ನಗಳನ್ನು ನಾನು ಎದುರಿಸುವುದು ಅಹಿಂಸಾಮಾರ್ಗದಿಂದ. ಭಾರತ ಅಹಿಂಸಾಮಾರ್ಗದಲ್ಲಿ ಆಂಗ್ಲೇಯ ಆಳ್ವಿಕೆಗಾರರನ್ನು ಎದುರಿಸಲು ಶಕ್ತವಾಗಿದೆಯೆಂಬುದು ನನ್ನ ನಂಬಿಕೆ. ಈ ಪ್ರಯೋಗಕ್ಕೆ ಇನ್ನೂ ಅಪಜಯವಾಗಿಲ್ಲ. ಇದಕ್ಕೆ ಜಯವೇ ಆಗಿದೆ; ಆದರೆ ನಾವು ನಿರೀಕ್ಷಿಸಿದಷ್ಟು ಅಲ್ಲ. ನಾನು ನಿರಾಶನಾಗಿಲ್ಲ. ಅದರ ಬದಲು ಭಾರತ ತನ್ನ ಸ್ಥಾನವನ್ನು ಬೇಗನೆ ಗಳಿಸಿಕೊಳ್ಳುತ್ತದೆ; ಸತ್ಯಾಗ್ರಹದಿಂದಲೇ ಗಳಿಸಿಕೊಳ್ಳುತ್ತದೆ ಎಂಬುದು ನನ್ನ ನಂಬಿಕೆ.... ನಾನು ಪದೇ ಪದೇ ಹೇಳಿದ್ದೇನೆ, ಸತ್ಯಾಗ್ರಹಕ್ಕೆ ಎಂದಿಗೂ ಅಪಜಯವಿಲ್ಲವೆಂದು; ಒಬ್ಬ ಸಂಪೂರ್ಣ ಸತ್ಯಾಗ್ರಹಿ ಸಾಕು, ಸತ್ಯವನ್ನು ಸ್ಥಾಪಿಸಲು ಎಂದು. ನಾವೆಲ್ಲ ಸಂಪೂರ್ಣ ಸತ್ಯಾಗ್ರಹಿಗಳಾಗಲು ಪ್ರಯತ್ನಿಸೋಣ. ಈ ಪ್ರಯತ್ನಕ್ಕೆ ನಮ್ಮಲ್ಲಿ ಅತ್ಯಂತ ಸಣ್ಣವರಿಂದ ಆಗದ ಕೆಲಸ, ಗುಣ ಯಾವುದೂ ಇಲ್ಲ. ಏಕೆಂದರೆ ಸತ್ಯಾಗ್ರಹ ನಮ್ಮ ಅಂತರಾತ್ಮದ ಒಂದು ಲಕ್ಷಣ. ಅದು ನಮ್ಮಲ್ಲಿ ಒಬ್ಬೊಬ್ಬರಲ್ಲಿಯೂ ಸುಪ್ತವಾಗಿದೆ. ಸ್ವರಾಜ್ಯ ಹೇಗೋ ಹಾಗೆ ಸತ್ಯಾಗ್ರಹವೂ ನಮ್ಮ ಜನ್ಮಸಿದ್ಧ ಹಕ್ಕು. ಅದು ನಿಮಗೆ ತಿಳಿದಿರಲಿ."

ಇಂಥ ಮಾತುಗಳಿಂದ ರಾಷ್ಟ್ರದ ಅಹಿಂಸಕ ಹೋರಾಟದ ತೇಜಸ್ಸನ್ನು ಜೀವಂತವಾಗಿ ಇರುವಂತೆ ಮಾಡಿದರು ಗಾಂಧೀಜಿ. ಸ್ವಾತಂತ್ರ್ಯ ಸಮರದ ಕಡೆಯ ಅಂಕ 'ಬ್ರಿಟಿಷರೇ ಭಾರತ ಬಿಟ್ಟು ಹೊರಡಿ' ಎಂಬ ದಿವ್ಯ ಮಂತ್ರೋಚ್ಚಾರಣೆಯಿಂದ ನಡೆಯಿತು, ೧೯೪೨ರಲ್ಲಿ. ಇಡಿಯ ರಾಷ್ಟ್ರವೇ ಸಾತ್ವಿಕವೀರ ತೇಜಸ್ಸಿನಿಂದ ದುಮುಮುಸಿತು ಅಂದು. ಆಗಸ್ಟ್ ೮ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಂಗೀಕರಿಸಿದ ಗೊತ್ತುವಳಿಯ ಮೇಲೆ, ಗಾಂಧೀಜಿ ಎರಡು ಘಂಟೆಗಳ ಮೇಲ್ಪಟ್ಟು ಮಾತನಾಡಿದರು; ಮೊದಲು ಹಿಂದೂಸ್ಥಾನಿಯಲ್ಲಿ ಅನಂತರ ಇಂಗ್ಲಿಷಿನಲ್ಲಿ. ಆ ಭಾಷಣದ ಭಾಗಗಳನ್ನು ಕೊಡುವ ಮುನ್ನ ಅವರು ವಿಷಯವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂದೆ

ಮಂಡಿಸಿ ಆಡಿದ ಮಾತುಗಳಿವು: 'ನಿಮಗೆ ಭರವಸೆ ಕೊಡುತ್ತೇನೆ. ೧೯೨೦ ರಲ್ಲಿ ಇದ್ದ ಗಾಂಧಿಯೇ ನಾನು. ಮೂಲಭೂತ ಬದಲಾವಣೆ ಏನೂ ಆಗಿಲ್ಲ ನನ್ನಲ್ಲಿ. ಆಗ ಎಷ್ಟು ಪ್ರಾಧಾನ್ಯ ಕೊಟ್ಟೆನೋ ಅಹಿಂಸೆಗೆ ಈಗಲೂ ಅಷ್ಟೆ. ಏನಾದರೂ ಬದಲಾವಣೆ ಆಗಿದ್ದರೆ, ಮೊದಲಿಗಿಂತ ಅದರ ಮೇಲೆ ಭಾರ ಹೆಚ್ಚು. ಈಗಿನ ತೀರ್ಮಾನಕ್ಕೂ ನನ್ನ ಹಿಂದಿನ ಬರಹ ಭಾಷಣಗಳಿಗೂ ಏನೂ ವಿರೋಧವಿಲ್ಲ.

"ಇಂಥ ಪ್ರಸಂಗ ಪ್ರತಿಯೊಬ್ಬನ ಬಾಳಿನಲ್ಲೂ ಬರುವುದಿಲ್ಲ. ಬಂದರೂ ಬಹಳ ಅಪರೂಪ. ಇಂದು ನಾನು ಹೇಳುತ್ತಿರುವುದರಲ್ಲಿ, ಮಾಡುತ್ತಿರುವುದ ರಲ್ಲಿ ಶುದ್ಧತಮ ಅಹಿಂಸೆಯಲ್ಲದೆ ಬೇರೇನೂ ಇಲ್ಲ ಎಂಬುದನ್ನು ತಿಳಿದು ಕೊಳ್ಳಿ. ನಿಮಗೂ ಹಾಗೆಯೇ ಅನಿಸಬೇಕು. ಕಾರ್ಯಸಮಿತಿಯ ಗೊತ್ತುವಳಿ ಅಹಿಂಸೆಯ ಮೇಲೆ ಆಧಾರಗೊಂಡಿದೆ. ಮುಂದೆ ಯೋಚಿಸಿರುವ ಹೋರಾ ಟವೂ ಅಹಿಂಸೆಯನ್ನೇ ಅವಲಂಬಿಸಿದೆ. ನಿಮ್ಮಲ್ಲಿ ಯಾರಿಗಾದರೂ ಅಹಿಂಸೆ ಯಲ್ಲಿ ಶ್ರದ್ಧೆ ಹೋಗಿದ್ದರೆ ಅವರು ಈ ತೀರ್ಮಾನಕ್ಕೆ ಮತ ಕೊಡಬೇಕಾಗಿಲ್ಲ.

'ನನ್ನ ನಿಲುವನ್ನು ವಿಶದೀಕರಿಸುತ್ತೇನೆ. ಅಹಿಂಸೆಯ ಆಯುಧವನ್ನು ಅಮೂಲ್ಯದಾನವಾಗಿ ಕೊಟ್ಟಿದಾನೆ ನನಗೆ ದೇವರು. ಈಗ ನನ್ನ ಮತ್ತು ನನ್ನ ಅಹಿಂಸೆಯ ಪರೀಕ್ಷೆ. ಹಿಂಸೆಯ ಜ್ವಾಲೆಗೆ ಸಿಕ್ಕಿ ಬೂದಿಯಾಗುತ್ತಿರುವ ಭೂಮಿ ಬಿಡುಗಡೆಗಾಗಿ ಗೋಳಿಡುತ್ತಿದ್ದರೂ, ಈಗಿನ ವಿಷಮ ಸಮಯದಲ್ಲಿ ದೇವರು ಕೊಟ್ಟ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳದಿದ್ದರೆ, ಅವನು ನನ್ನನ್ನು ಕ್ಷಮಿಸವುದಿಲ್ಲ; ಈ ಮಹಾ ಸಂಗ್ರಾಮಕ್ಕೆ ನಾನು ಅರ್ಹನಾಗಲಾರೆ. ಈಗ ನಾನು ಕಾರ್ಯಕ್ಕೆ ಇಳಿಯಬೇಕು.

'ನಮ್ಮದಕ್ಕಿಂತ ಹೆಚ್ಚು ನಿಜವಾದ ಪ್ರಜಾತಾಂತ್ರಿಕ ಸಮರ ಜಗತ್ತಿನ ಸ್ವಾತಂತ್ರ್ಯದ ಇತಿಹಾಸದಲ್ಲಿ ಇಲ್ಲವೆಂದು ನನ್ನ ಭಾವನೆ. ಸೆರೆಮನೆಯಲ್ಲಿ ಇದ್ದಾಗ, ಕಾರ್ಲೈಲನ 'ಫ್ರಾನ್ಸಿನ ಮಹಾಕ್ರಾಂತಿ'ಯನ್ನು ಓದಿದೆ. ಪಂಡಿತ ಜವಾಹರಲಾಲ್ ರಷ್ಯಾದ ಕ್ರಾಂತಿ ವಿಷಯ ಸ್ವಲ್ಪ ಹೇಳಿದಾರೆ. ಆದರೆ ಈ ಕ್ರಾಂತಿಗಳು ಹಿಂಸಾತ್ಮಕವಾದುದರಿಂದ ಪ್ರಜಾತಾಂತ್ರಿಕ ಧ್ಯೇಯವನ್ನು ಸಾಧಿಸಲು ಅಸಮರ್ಥವಾದುವು. ನಾನು ಕಲ್ಪಿಸಿಕೊಂಡ ಅಹಿಂಸೆಯಿಂದ ಸ್ಥಾಪಿತವಾದ ಪ್ರಜಾತಂತ್ರದಲ್ಲಿ ಸರ್ವಸಮಾನಸಮತೆ ಇದ್ದೀತು. ಪ್ರತಿ

ಯೊಬ್ಬನೂ ತನಗೆ ತಾನೇ ಪ್ರಭು ; ಇಂಥ ಪ್ರಜಾತಂತ್ರಕ್ಕಾಗಿ ಹೋರಾಡಲು ನಿಮ್ಮನ್ನು ನಾನಿಂದು ಕರೆಯುತ್ತಿದ್ದೇನೆ....

'ಎಂದಿಗಿಂತ ಇಂದು ನಾನು ಬ್ರಿಟಿಷರಿಗೆ ಹೆಚ್ಚು ಸ್ನೇಹಿತ ಎನಿಸುತ್ತಿದೆ. ಅವರು ಸಂಚಿನಲ್ಲಿದ್ದಾರೆ ಎಂಬುದು ಒಂದು ಕಾರಣ. ಆದುದರಿಂದ ನನ್ನ ಸ್ನೇಹವೇ ಅವರನ್ನೂ ತಪ್ಪು ಮಾಡದಂತೆ ತಡೆಯಲು ಹೇಳುತ್ತಿದೆ. ಪರಿಸ್ಥಿತಿಯನ್ನು ನೋಡಿದರೆ ಅಗಾಧ ಕಂದರವೊಂದರ ಅಂಚಿನಲ್ಲಿದಾರೆ ಅವರು. ಅವರಿಗೆ ಎಚ್ಚರ ಕೊಡುವುದು ನನ್ನ ಕರ್ತವ್ಯ. ತತ್ಕಾಲಕ್ಕೆ ಅವರಿಗೆ ಸಿಟ್ಟು ಬರಬಹುದು. ಅವರಿಗೆ ಸಹಾಯ ಮಾಡಿದ ಕೈಯನ್ನೇ ಅವರು ಕಡಿಯಲೂ ಬಹುದು. ಜನ ನಕ್ಕಾರು. ಆದರೂ ಇದು ನನ್ನ ಶಪಥ. ನನ್ನ ಬಾಳಿನ ಮಹತ್ತರ ಹೋರಾಟ ನಡೆಸಲಿದೇನೆ. ಇಂಥ ಸಮಯದಲ್ಲಿ ಯಾರ ವಿಷಯದಲ್ಲೂ ದ್ವೇಷ ಭಾವನೆ ನನಗೆ ಸಲ್ಲದು."

ಗೊತ್ತುವಳಿ ಚರ್ಚೆಯಾಗಿ ಅಂಗೀಕಾರವಾಯಿತು. ಅನಂತರ ಗಾಂಧೀಜಿ ಮಾತನಾಡಿದರು, ಅಖಿಲ ಭಾರತ ಕಾಂಗ್ರೆಸ್ ಸಮಿತಿಯನ್ನು ಉದ್ದೇಶಿಸಿ, ನಿರ್ಣಯಕ್ಕೆ ತಿದ್ದುಪಡಿ ತಂದ ಮೂವರನ್ನೂ ವಿರುದ್ಧವಾಗಿ ಮತಕೊಟ್ಟ ಹದಿಮೂರು ಮಂದಿ ಗೆಳೆಯರನ್ನೂ ಅವರ ಧೈರ್ಯಕ್ಕಾಗಿ ಅಭಿನಂದಿಸಿದರು. ಹಿಂದೂ-ಮುಸ್ಲಿಂ ಐಕಮತ್ಯಕ್ಕೆ ತಾವು ಮಾಡಿದ ಪ್ರಯತ್ನಗಳನ್ನು ವಿವರಿಸಿದರು ; ಕಾಯಿದೆ-ಆಜಂ ಜಿನ್ನಾರವರಿಗೂ ಹಿಂದೂ ಪಕ್ಷಪಾತಿ ನಾಯಕರಿಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಕಳಕಳಿಯ ಪ್ರಾರ್ಥನೆ ಸಲ್ಲಿಸಿದರು ; ಅನಂತರ ಹೀಗೆ ಮುಂದುವರಿಸಿದರು : "....ಆದ್ದರಿಂದ ಈ ಕೂಡಲೇ ಸ್ವಾತಂತ್ರ್ಯ ಬೇಕು ನನಗೆ. ಸಾಧ್ಯವಾದರೆ ಇವತ್ತು ರಾತ್ರಿಯೇ, ಬೆಳಕು ಹರಿಯುವುದರೊಳಗಾಗಿಯೆ. ಮತೀಯ ಸೌಹಾರ್ದ-ಐಕಮತ್ಯ ಇವುಗಳಿಗಾಗಿ ಕಾಯುವಂತಿಲ್ಲ ಸ್ವಾತಂತ್ರ್ಯ. ಆ ಐಕಮತ್ಯ ಬರದಿದ್ದರೆ ಅದಕ್ಕಾಗಿ ಮಾಡಬೇಕಾದ ಬಲಿದಾನ ಇನ್ನೂ ಹೆಚ್ಚಾದೀತು. ಆದರೆ ಕಾಂಗ್ರೆಸ್ ಸ್ವಾತಂತ್ರ್ಯವನ್ನಾದರೂ ಗಳಿಸಬೇಕು ಇಲ್ಲವೇ ಆ ಪ್ರಯತ್ನದಲ್ಲಿ ನಿರ್ನಾಮವಾಗಬೇಕು. ಕಾಂಗ್ರೆಸ್ ಯಾವ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆಯೋ ಅದು ಕಾಂಗ್ರೆಸ್ಸಿಗರಿಗೆ ಮಾತ್ರವಲ್ಲ, ನಲವತ್ತು

ಕೋಟಿ ಭಾರತೀಯರಿಗೆ; ಮರೆಯಬೇಡಿ, ಕಾಂಗ್ರೆಸ್ಸಿಗರು ಎಂದೆಂದಿಗೂ ಜನತೆಯ ವಿನಮ್ರಸೇವಕರಾಗಿರಬೇಕು. . . .”

‘ಸತ್ಯಾಗ್ರಹದಲ್ಲಿ ಮೋಸ, ಸುಳ್ಳು ಮತ್ತು ಯಾವ ಬಗೆಯ ಅಸತ್ಯಕ್ಕೂ ಸ್ಥಾನವಿಲ್ಲ. ಇವತ್ತು ಕಪಟ, ಅಸತ್ಯ ಜಗತ್ತಿನಲ್ಲಿ ಮೆರೆಯುತ್ತಿವೆ. ಇಂಥ ಪ್ರಸಂಗವನ್ನು ನೋಡಿಯೂ ನಿಸ್ಸಹಾಯಕನಾಗಿ ನಾನು ಕೂಡಲಾರೆ. ಈ ಕಾಲದಲ್ಲಿ ಯಾರೂ ಮಾಡಿರಲಾರದಷ್ಟು ಭಾರತದ ಆದ್ಯಂತವೂ ನಾನು ಸುತ್ತಾಡಿದ್ದೇನೆ. ಈ ಮೂಕ ಜನಕೋಟಿ ನನ್ನಲ್ಲಿ ತಮ್ಮ ಗೆಳೆಯನನ್ನು ಪ್ರತಿನಿಧಿಯನ್ನು ಕಂಡಿದ್ದಾರೆ. ಮನುಷ್ಯಮಾತ್ರನಿಗೆ ಸಾಧ್ಯವಿದ್ದಷ್ಟು ನಾನೂ ಅವರೊಡನೆ ತಾದಾತ್ಮ್ಯವನ್ನು ಸಾಧಿಸಿದೆ. ಅವರ ಕಣ್ಣಿನಲ್ಲಿ ನಂಬಿಕೆಯನ್ನು ನೋಡಿದೆ. ಅದನ್ನು ಈಗ ಉಪಯೋಗಿಸಿಕೊಳ್ಳಬೇಕು ಎನ್ನುತ್ತೇನೆ. ಹಿಂಸೆ-ಅಸತ್ಯಗಳ ಆಶ್ರಯದಲ್ಲಿ ನಿಂತ ಈ ಸಾಮ್ರಾಜ್ಯದೊಡನೆ ಹೋರಾಡಲು ಈ ಪರಮ ಮುಹೂರ್ತದಲ್ಲಿ ನನ್ನ ಒಳಗಿನ ಬೆಳಕನ್ನು ಹೊರಗೆ ಹರಿಯಿಸದೆ ಹೇಗೆ ಸುಮ್ಮನೆ ಕೂಡಲಿ? ಜಪಾನನ್ನು ಸ್ವಲ್ಪ ತಡಿಯಿರಿ ಎನ್ನಲೇ? ಇಡಿಯ ಜಗತ್ತನ್ನೇ ಸುಡುತ್ತಿದೆ ದಳ್ಳುರಿ. ಈ ಹೊತ್ತಿನಲ್ಲಿ ನಿಷ್ಕ್ರಿಯನಾಗಿ ಸುಮ್ಮನೆ ಕೂತರೆ, ನಾನು ಕೊಟ್ಟ ಐಶ್ವರ್ಯವನ್ನು ಉಪಯೋಗಸಲಿಲ್ಲವೇಕೆ ಎಂದು ದೇವರು ನನ್ನನ್ನು ದಂಡಿಸಿಯಾನು. . . .

‘ಬರಿಯ ಭ್ರಾಂತಿಯಲ್ಲ ಇದು, ನಾನು ಹೇಳುತ್ತಿರುವುದು. ತಾನು ಸ್ವತಂತ್ರ ಎಂದ ಕೂಡಲೇ ಗುಲಾಮನ ಸಂಕೋಲೆ ಕಡಿದುಹೋಯಿತು. ಅವನು ಧಣಿಗೆ ಸ್ಪಷ್ಟವಾಗಿ ಹೇಳುತ್ತಾನೆ. ಈ ಗಳಿಗೆಯವರೆಗೆ ನಾನು ನಿನ್ನ ಗುಲಾಮನಾಗಿದ್ದೆ. ಇನ್ನು ಮುಂದೆ ಅಲ್ಲ. ನೀನು ನನ್ನನ್ನು ಕೊಂದರೂ ಸರಿ. ಬದುಕಗೊಟ್ಟರೆ ನನ್ನನ್ನು ಬಂಧಮುಕ್ತನನ್ನಾಗಿ ಮಾಡು, ನಿನ್ನ ಸ್ವಪ್ರೇರಣೆಯಿಂದ. ನಿನ್ನಿಂದ ಮತ್ತೇನೂ ನಾನು ಬೇಡುವುದಿಲ್ಲ. ನಾನೇ ದುಡಿದು ಅನ್ನ ಬಟ್ಟೆ ಗಳಿಸಿಕೊಳ್ಳುತ್ತಿದ್ದೆ. ಆದರೂ ನೀನು ನನಗೆ ಅನ್ನ ಬಟ್ಟೆ ಕೊಟ್ಟೆ. ಅನ್ನ ಬಟ್ಟೆಗಾಗಿ ಇಷ್ಟು ದಿನ ನಾನು ನಿನ್ನನ್ನು ಅವಲಂಬಿಸಿದೆ, ದೇವರನ್ನಲ್ಲ. ಆದರೆ ನನಗೆ ಸ್ವಾತಂತ್ರ್ಯದ ಆಕಾಂಕ್ಷೆಯನ್ನು ಹುಟ್ಟಿಸಿದ್ದಾನೆ ಈಗ. ಇಂದಿನಿಂದ ನಾನು ಸ್ವತಂತ್ರ. ಇನ್ನು ಮುಂದೆ ನಿನ್ನನ್ನು ಅವಲಂಬಿಸುವುದಿಲ್ಲ. . . .

'ಚಿಕ್ಕದೊಂದು ಮಂತ್ರ ಹೇಳಿಕೊಡುತ್ತೇನೆ — ನಿಮಗೆ. ನಿಮ್ಮ ಹೃದಯದಲ್ಲಿ ಅದನ್ನು ಮುದ್ರಿಸಿಕೊಳ್ಳಿ. ನಿಮ್ಮ ಪ್ರತಿ ಉಸಿರೂ ಆ ಮಂತ್ರದ ಉಸಿರು. 'ಮಾಡು ಇಲ್ಲವೇ ಮಡಿ'. ಇದು ಆ ಮಂತ್ರ. ದೇಶವನ್ನು ಬಿಡುಗಡೆ ಮಾಡಿಯೇವು, ಇಲ್ಲವೇ ಆ ಪ್ರಯತ್ನದಲ್ಲಿ ಪ್ರಾಣ ಬಿಟ್ಟೇವು. ನಮ್ಮ ದಾಸ್ಯ ಮುಂದುವರಿಯುವುದನ್ನು ನೋಡಲು ನಾವು ಬದುಕುವುದಿಲ್ಲ . . . .

"ಭಗವಂತನ ಸಾಕ್ಷಿಯಾಗಿ, ನಿಮ್ಮ ಅಂತರಾತ್ಮದ ಸಾಕ್ಷಿಯಾಗಿ, ಪ್ರತಿಜ್ಞೆ ಮಾಡಿ : ಸ್ವಾತಂತ್ರ್ಯ ಬರುವವರೆಗೆ ವಿರಮಿಸುವುದಿಲ್ಲ, ಆ ಪ್ರಯತ್ನದಲ್ಲಿ ಪ್ರಾಣ ಬಿಡಲೂ ಸಿದ್ಧ ಎಂದು. ಪ್ರಾಣ ತೊರೆಯಲು ಸಿದ್ಧನಾದವನಿಗೆ ಅದು ಲಭಿಸೀತು ; ಉಳಿಸಿಕೊಳ್ಳಲು ಯತ್ನಿಸಿದವನು ಕಳೆದುಕೊಂಡಾನು. ಸ್ವಾತಂತ್ರ್ಯ ಹೇಡಿಗಳಿಗೆ ದುರ್ಬಲ ಮನದವರಿಗೆ ಅಲ್ಲ . . . ."

ಹೀಗೆಯೇ ಮುಂದುವರಿಸಿದರು ಭಾರತ ಸ್ವಾತಂತ್ರ್ಯ ಹೋರಾಟದ ಕಹಳೆಯನ್ನು. ಶುದ್ಧ ಸಾತ್ವಿಕ ತೇಜಸ್ಸಿನ ಯೋಧಾಗ್ರಣಿಯ ಮಾತುಗಳಿವು. ಹಿಂಸಾಮಾರ್ಗ ಹಿಡಿದು ಜೀವದ ಹಂಗುದೊರೆದು ಹೋರಾಡುವವನಿಗೂ ಅಹಿಂಸಕ ಪಥಹಿಡಿದು, ಹೋರಾಡಲು ಧೀರವಾಣಿಯಿತ್ತ ಉದಾತ್ತ ನಾಯಕನ ವಾಣಿಗೂ ಎಷ್ಟು ವ್ಯತ್ಯಾಸ ! ಭಾರತದ ಸ್ವಾತಂತ್ರ್ಯ ಹೋರಾಟ ಜಗತ್ತಿನ ವಿಮೋಚನೆಯ ಹೋರಾಟವೇ ಆಗಿತ್ತು ಆ ಮಹಾ ನಾಯಕನಿಗೆ. ಈ ರೀತಿ ಮುಗಿಯಿತು ಆ ನಿಷ್ಕಾಮ ಸಮರದ ಕರೆ : "ಜಗತ್ತಿನ ವಿಮೋಚನೆಯ ಚಳುವಳಿಯಲ್ಲಿ (ಮಹಾಯುದ್ಧ) ಈ ಅಪಾರ ಜನಸಮೂಹ ಉರಿದೆದ್ದು ಹೇಗೆ ಧುಮುಕೀತು ; ತನಗೇ ಸ್ವಾತಂತ್ರ್ಯ ಸ್ಪರ್ಶವಾಗದೆ? ತಾನೇ ಸಾತಂತ್ರ್ಯ ಕಾಣದೆ? ಇವತ್ತು ಜೀವನ ಸ್ಪರ್ಶವೇ ಇಲ್ಲ ಅವರಿಗೆ. ಅದನ್ನು ಗಾಣವಾಡಿ ಹಿಂಡಿಹಾಕಿದಾರೆ. ಅವರ ಕಣ್ಣಿಗೆ ಕಾಂತಿ–ಕಳೆ ಬರಬೇಕು ಎಂದರೆ, ಸ್ವಾತಂತ್ರ್ಯ ನಾಳೆ ಅಲ್ಲ, ಇಂದೇ, ಬರಬೇಕು. ಆದ್ದರಿಂದ ನಾನು ಪಣ ತೊಟ್ಟಿದ್ದೇನೆ, ಕಾಂಗ್ರೆಸ್ಸನ್ನು ಪಣ ಇಟ್ಟಿದ್ದೇನೆ; ಕಾಂಗ್ರೆಸ್ಸೂ ಪಣ ತೊಟ್ಟಿದೆ : 'ಮಾಡು ಇಲ್ಲವೇ ಮಡಿ."

ಗಾಂಧೀಜಿಯ ಭಾಷಣಗಳಲ್ಲಿ — ಅವು ಪುಟ್ಟವಿರಲಿ, ಸಣ್ಣವಿರಲಿ, ರಾಜಕೀಯವಾಗಿರಲಿ, ಜೀವನದ ಯಾವ ವೃತ್ತದ ಯಾವ ವೃತ್ತಿಯವರಿಗೇ ಆಗಿದ್ದರೂ ಅವುಗಳಲ್ಲಿ ಧೀರತನ, ಉದಾತ್ತತೆ, ಸಮಸ್ಯೆಯ ವಿಶ್ಲೇಷಣೆ, ಆತ್ಮ

ಶೋಧನೆ, ತಪ್ಪುಗಳ ಅಂಗೀಕಾರ, ದೃಢಚಿತ್ತದ ಕ್ರಿಯೆಗೆ ಕರೆ ಇವು ಅಡಗಿರುತ್ತಿದ್ದವು. ಅವುಗಳಲ್ಲಿ ವೇಗವಿದ್ದರೂ ಉದ್ವೇಗವಿರುತ್ತಿರಲಿಲ್ಲ; ತಳಮಳವಿದ್ದರೂ ದ್ವೇಷಾಸೂಯೆಗಳ ಭಾವವಿರುತ್ತಿರಲಿಲ್ಲ; ಮಾನವಾನುಕಂಪ, ಸಮನ್ವಯ ಭಾವ, ತ್ಯಾಗಶೀಲತೆ, ಇವು ಎದ್ದು ಕಾಣುತ್ತಿದ್ದವು; ಕರ್ತವ್ಯಕ್ಕಾಗಿ ಪಣತೊಡುವ ಕೆಚ್ಚಿದ್ದರೂ, ಅದು ಸತ್ಯದಲ್ಲಿ ಅವಿರತ ನಂಬಿಕೆಯಿಂದ ಕೂಡಿರುತ್ತಿದ್ದಿತು; ಅಹಿಂಸೆ ಮತ್ತು ಪ್ರೇಮಗಳಿಂದ ಕೂಡಿರುತ್ತಿದ್ದಿತು; ಹೃದಯವನ್ನು ನೇರವಾಗಿ ಸ್ಪರ್ಶಿಸುವುದರ ಜತೆಗೆ ವಿಚಾರಶಕ್ತಿಯನ್ನೂ ಎಚ್ಚರಗೊಳಿಸಿ, ತನುಮನಧನಗಳನ್ನು ಉದ್ದೇಶಿತ ಕಾರ್ಯಕ್ಕೆ ನಿರ್ಮಮತೆಯಿಂದ ಧಾರೆ ಎರೆಯುವ, ರಾಜಸದಿಂದ ದೂರವಾದ ಸತ್ವಗುಣದ ಶಕ್ತಿಯನ್ನು ಶ್ರೋತೃಗಳಲ್ಲಿ ಹುಟ್ಟಿಸುತ್ತಿದ್ದವು.

ಇನ್ನು ಗಾಂಧೀಜಿಯ ಹೇಳಿಕೆಗಳನ್ನು ಕುರಿತು ವಿಚಾರ ಮಾಡೋಣ. ಅವರು ಸಾರ್ವಜನಿಕ ಜೀವನದಲ್ಲಿ ವೈಯಕ್ತಿಕವಾಗಿಯಾಗಲೀ ಸಾಂಘಿಕವಾಗಿಯೇ ಆಗಲಿ ಕೈಗೊಂಡ ಕಾರ್ಯಗಳ ಬಗೆಗೆ ವಿವರಣೆ ಕೊಡುವುದಕ್ಕೋಸ್ಕರ, ಆಕ್ಷೇಪಗಳು ಬಂದರೆ ಅವುಗಳ ಮೇಲೆ ಬೆಳಕನ್ನು ಚೆಲ್ಲಿ, ತಮ್ಮ ನಿಲುವನ್ನು ವಿವರಿಸುವುದಕ್ಕೋಸ್ಕರ ಈ ಹೇಳಿಕೆಗಳನ್ನು ಕೊಡಬೇಕಾಗಿದ್ದಿತು. ಅಂತೆಯೇ ಅವು ಅವರ ಭಾಷಣಗಳಷ್ಟು ಪ್ರಮಾಣದಲ್ಲಿ ಇಲ್ಲದಿದ್ದರೂ ಹೇರಳವಾಗಿಯೇ ದೊರೆಯುತ್ತವೆ. ಜಗತ್ತಿನ ಐದನೆಯ ಒಂದು ಭಾಗದ ಜನತೆಯ ಭವಿಷ್ಯವನ್ನು ನಿರ್ಧರಿಸುವ ಮಹಾಕಾರ್ಯದಲ್ಲಿ ನಿರತವಾದ ಬೃಹದ್ ಸಂಸ್ಥೆ ಕಾಂಗ್ರೆಸ್ಸಿನ ರೀತಿನೀತಿಗಳು, ಅವುಗಳ ಮುಂದುವರಿಕೆಗಾಗಿ ಅವರ ನಾಯಕತ್ವದಲ್ಲಿ ಇಟ್ಟ ಹೆಜ್ಜೆ ಇತ್ಯಾದಿಗಳ ಬಗೆಗೆಲ್ಲ ಸ್ಫುಟವಾದ ವಿವರಣೆ ಬೇಕಾಗುತ್ತಿತ್ತು. ಹಾಗೆಯೇ ತಾವು ಕೈಗೊಳ್ಳಬಹುದಾದ ಕ್ರಿಯಾಸ್ವರೂಪದ ಬಗೆಗೆ ಕಾರ್ಯಕರ್ತರಿಗೂ ಸಾರ್ವಜನಿಕರಿಗೂ, ಅವರನ್ನು ತಪ್ಪುತಿಳಿದುಕೊಳ್ಳಬಹುದಾದ ಬ್ರಿಟಿಷ್ ಸರ್ಕಾರಕ್ಕೂ, ಪತ್ರಿಕೆಗಳವರಿಗೂ, ಅವರು ವಿವರಗಳನ್ನು ನೀಡಬೇಕಾದ ನೈತಿಕ ಹೊಣೆಯನ್ನು ಹೊತ್ತಿರುತ್ತಿದ್ದರು. ಯಾರನ್ನೂ ಪೇಚಿಗೆ ಸಿಕ್ಕಿಸಬಾರದೆಂಬುದೂ, ಯಾರಿಗೂ ತಮ್ಮ ಕಾರ್ಯಗಳ ಬಗೆಗೆ ಅರಿವು ಇಲ್ಲದೆ ಇರಲಿ ಎಂಬ ದೃಷ್ಟಿಯಿಂದಲೂ ಅವರ ಹೇಳಿಕೆಗಳಿಗೆ ಅಗತ್ಯವಿರುತ್ತಿತ್ತು. ಅವರು ಹಲವಾರು ಸಲ ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕಾಗಿ,

ರಾಷ್ಟ್ರಜೀವನದಲ್ಲಿ ಭುಗಿಲೆಂದು ಎದ್ದ ಹಿಂಸಾಕೃತ್ಯಗಳ ಪರಿಹಾರಕ್ಕಾಗಿ ಅವರು ಆಗಾಗ ಕೈಗೊಳ್ಳುತ್ತಿದ್ದ ಉಪವಾಸಗಳ ಬಗೆಗೆ ಹೇಳಿಕೆಗಳನ್ನು ನೀಡುತ್ತಿದ್ದರು. ಆ ಹೇಳಿಕೆಗಳ ಪೈಕಿ, ಕೆಲವು ಬಹಳ ಮಹತ್ವದ್ದಿವೆ. ೧೯೩೩ರಲ್ಲಿ ಹರಿಜನ ಸಮಸ್ಯೆಯ ಪರಿಹಾರಕ್ಕಾಗಿ ಉಪವಾಸ ಆರಂಭಮಾಡುವ ಮುನ್ನ ಕೊಟ್ಟ ಹೇಳಿಕೆ, ಎರವಡಾ ಸೆರೆಮನೆಯಿಂದ ಬಿಡುಗಡೆಯಾದಾಗ ಇತ್ತ ಹೇಳಿಕೆ, ೧೯೩೩ರಲ್ಲಿ ಸಾಬರಮತಿ ಆಶ್ರಮವನ್ನು ತ್ಯಜಿಸುವಾಗ ಇತ್ತ ಹೇಳಿಕೆ, ಸವಿನಯ ಶಾಸನೋಲ್ಲಂಘನವನ್ನು ತಮ್ಮ ಪೂರ್ತಿಗೆ ಸೀಮಿತಗೊಳಿಸುವ ಸಂದರ್ಭದಲ್ಲಿ ಕೊಟ್ಟ ಹೇಳಿಕೆ, ೧೯೩೪ರಲ್ಲಿ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವದಿಂದಲೂ ನಿವೃತ್ತಿಯಾಗುವ ಮುನ್ನ ಇತ್ತ ಹೇಳಿಕೆ, ೧೯೩೯ರಲ್ಲಿ ರಾಜಕೋಟೆಯ ಸತ್ಯಾಗ್ರಹದ ಸಂದರ್ಭದಲ್ಲಿ ಮಾರಿಸ್ ಗ್ವಯರ್ ಕೊಟ್ಟ ತೀರ್ಪನ್ನು ನಿರಾಕರಿಸುತ್ತಾ ಇತ್ತ ಹೇಳಿಕೆ, ೧೯೪೦ರಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ರಾಷ್ಟ್ರದ ಮುಂದಿಡುವಾಗ ಕೊಟ್ಟ ಹೇಳಿಕೆ, ಇನ್ನೂ ಹಲವಾರು ಸಂದರ್ಭಗಳಲ್ಲಿ ಅವವುಗಳ ಬಗೆಗೆ ಇತ್ತ ಹೇಳಿಕೆಗಳು—ಇತ್ಯಾದಿ ಸಾಮಾಜಿಕ ಮತ್ತು ರಾಜಕೀಯ ಸ್ವರೂಪದಿಂದ ಕೂಡಿದ್ದು ತಮ್ಮ ಮಹತ್ವದಿಂದ ಪ್ರಸಿದ್ಧವಾಗಿವೆ. ಆದರೆ ಒಂದು ಹೇಳಿಕೆ, ಅವರು ೧೯೨೨ರಲ್ಲಿ ಬಂಧಿತರಾಗಿ ರಾಜದ್ರೋಹದ ಆಪಾದನೆಗೆ ಗುರಿಮಾಡಲ್ಪಟ್ಟಾಗ ನ್ಯಾಯಸ್ಥಾನದ ಮುಂದೆ ಇತ್ತ ಹೇಳಿಕೆ—ಎಲ್ಲ ಹೇಳಿಕೆಗಳಿಗಿಂತಲೂ ಭಿನ್ನವಾಗಿ, ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ. ಆ ಮೊಕದ್ದಮೆಯ ವಿಚಾರಣೆ ಇಡಿಯ ಜಗತ್ತಿನ ಗಮನವನ್ನೇ ಸೆಳೆದಿದ್ದಿತು. ಅಹಿಂಸೆಯ ಪ್ರವಾದಿಯೆಂದು ಹೆಸರಾಂತಿದ್ದ ಗಾಂಧೀಜಿಯವರ ಆ ರಾಜಕೀಯ ವಿಚಾರಣೆಯನ್ನು ಶತಮಾನಗಳ ಹಿಂದೆ, ಗ್ರೀಸ್ ದೇಶದಲ್ಲಿ ನಡೆದ ಮಹಾ ಐತಿಹಾಸಿಕ ಸಾಕ್ರೆಟೀಸನ ವಿಚಾರಣೆಗೆ ಹೋಲಿಸಿದವರಿದ್ದಾರೆ. ಗಾಂಧೀಜಿ, ಅಡ್ವೋಕೇಟ್-ಜನರಲ್ ತಮ್ಮ ಮೇಲೆ ಹೊರಿಸಿದ್ದ ಆಪಾದನೆಗಳನ್ನೆಲ್ಲ ಒಪ್ಪಿಕೊಂಡು ಈ ರೀತಿ ನುಡಿದರು: "... ಅಡ್ವೋಕೇಟ್ ಜನರಲ್‌ರವರು ನನ್ನ ಮೇಲೆ ಹೊರಿಸಿರುವ ಆಪಾದನೆಗಳನ್ನೆಲ್ಲ ಒಪ್ಪಿಕೊಳ್ಳಬಯಸುತ್ತೇನೆ. ಈ ವಿಷಯವಾಗಿ ನಿದ್ರಾರಹಿತನಾಗಿ ಆಳವಾಗಿ ಚಿಂತಿಸಿದಷ್ಟೂ ಚೌರಿಚೌರಾದಲ್ಲಿ ನಡೆದ ಅಮಾನುಷ ಪಾತಕಗಳಿಗೂ ಬೊಂಬಾಯಿಯಲ್ಲಿ ನಡೆದ ಹುಚ್ಚು ಆಕ್ರೋಶಕ್ಕೂ ನನಗೂ ಸಂಬಂಧವಿಲ್ಲ

ವೆಂದುಕೊಳ್ಳಲು ಸಾಧ್ಯವೇ ಇಲ್ಲ. ಜವಾಬುದಾರಿಯುಳ್ಳ ವ್ಯಕ್ತಿಯಾಗಿ, ಸಾಕಷ್ಟು ವಿದ್ಯಾವಂತನಾಗಿ, ಸಾಕಷ್ಟು ಲೋಕಾನುಭವವುಳ್ಳವನಾಗಿ ನನ್ನ ಕ್ರಿಯೆಗಳ ಪರಿಣಾಮವನ್ನು ನಾನು ಅರಿತಿರಬೇಕಾಗಿತ್ತೆಂದು ಅವರು ಹೇಳಿರುವುದು ಸರಿ. ನಾನು ಬೆಂಕಿಯೊಡನೆ ಸರಸವಾಡುತ್ತಿದ್ದೆನೆಂದು ಅರಿತಿದ್ದೆ. ನಾನು ಅಪಾಯದೊಳಕ್ಕೆ ಪ್ರವೇಶಿಸಿದೆ. ಈಗ ಬಂಧನದಿಂದ ಬಿಡುಗಡೆಯಾದರೂ ಪುನಃ ಅದನ್ನೇ ಮಾಡುತ್ತೇನೆ. ಈಗ ತಾನೆ ಹೇಳಿದ ರೀತಿ ಹೇಳದಿದ್ದರೆ ನನ್ನ ಕರ್ತವ್ಯಕ್ಕೆ ಚ್ಯುತಿ ಬಂದೀತೆಂದು ಈ ಬೆಳಗ್ಗೆ ನನಗನ್ನಿಸಿತು.

'ಹಿಂಸೆಯನ್ನು ತಪ್ಪಿಸಬೇಕೆಂದು ನನ್ನ ಇಚ್ಛೆಯಾಗಿತ್ತು; ಅಹಿಂಸೆ ನನ್ನ ನಂಬಿಕೆಯ ಪ್ರಥಮ ಸೂತ್ರ; ಅದು ಕೊನೆಯ ಸೂತ್ರವೂ ಹೌದು. ಆದರೆ ನಾನು ಆಯ್ಕೆ ಮಾಡಬೇಕಾಗಿತ್ತು. ಯಾವ ಪ್ರಭುತ್ವ ನನ್ನ ದೇಶಕ್ಕೆ ಸರಿಪಡಿಸಲಾಗದ ನಷ್ಟವನ್ನು ಮಾಡಿದೆಯೆಂದು ಭಾವಿಸಿದೆನೋ ಅದಕ್ಕೆ ನಾನು ಮಣಿಯಬೇಕಾಗಿತ್ತು, ಇಲ್ಲವೇ ನನ್ನಿಂದ ಸತ್ಯಾಂಶವನ್ನು ತಿಳಿದುಕೊಂಡು ಹುಚ್ಚಿಗೆದ್ದ ನನ್ನ ಜನರ ಕ್ರೋಧಾನಲವನ್ನು ಎದುರಿಸಬೇಕಾಗಿತ್ತು. ನನ್ನ ಬಾಂಧವರು ಆಗಾಗ ಹುಚ್ಚಿಗೆದ್ದಿದ್ದಾರೆಂದು ನಾನು ಬಲ್ಲೆ. ಅದಕ್ಕಾಗಿ ನನಗೆ ತುಂಬ ದುಃಖ. ಆದುದರಿಂದ ಹಗುರ ಶಿಕ್ಷೆಗಲ್ಲ, ಉಗ್ರಶಿಕ್ಷೆಗೆ ನಾನು ತಲೆಬಾಗುತ್ತೇನೆ. ನಾನು ದಯಾಭಿಕ್ಷೆ ಬೇಡುವುದಿಲ್ಲ. ಅಪರಾಧವನ್ನು ಕಡಿಮೆ ಮಾಡುವ ಯಾವ ನೆಪವನ್ನೂ ಹೂಡಲಾರೆ. ಆದುದರಿಂದ ನ್ಯಾಯ ನಿಬಂಧನೆಯ ದೃಷ್ಟಿಯಿಂದ ಯಾವುದು ಉದ್ದೇಶಪೂರ್ವಕ ಪಾತಕವೆಂದು ಪರಿಗಣಿಸಲ್ಪಟ್ಟು ಅದಕ್ಕಾಗಿ ಯಾವ ಪರಮಾವಧಿ ಶಿಕ್ಷೆ ವಿಧಿಸಲ್ಪಡಬಹುದೋ ಅದನ್ನು ಸ್ವಾಗತಿಸಿ, ಸಂತಸದಿಂದ ಸ್ವೀಕರಿಸುತ್ತೇನೆ. ಇದು ನಾಗರಿಕ ಪ್ರಜೆಯ ಕರ್ತವ್ಯವೆಂದು ನನ್ನ ಭಾವನೆ. ಆದುದರಿಂದ ನ್ಯಾಯಾಧೀಶರೇ, ನನ್ನ ಹೇಳಿಕೆಯಲ್ಲಿ ನಾನು ತಿಳಿಸುವಂತೆ ನಿಮಗಿರುವುದು ಒಂದೇ ಮಾರ್ಗ. ನಿಮ್ಮ ಸ್ಥಾನಕ್ಕೆ ರಾಜಿನಾಮೆ ಕೊಡಿ, ಇಲ್ಲವೇ ಯಾವ ಪದ್ಧತಿ ಮತ್ತು ನ್ಯಾಯ ನಿಬಂಧನೆಯನ್ನು ನೀವು ಪಾಲಿಸುತ್ತಾ ಅದು ಪ್ರಜೆಗಳಿಗೆ ಒಳಿತೆಂದು ಭಾವಿಸುವಿರೋ ಅದರ ಪ್ರಕಾರ ಅತ್ಯಂತ ಉಗ್ರ ಶಿಕ್ಷೆಯನ್ನು ವಿಧಿಸಿರಿ; ಆ ಬಗೆಯ ಪರಿವರ್ತನೆಯನ್ನು ನಾನು ನಿರೀಕ್ಷಿಸುವುದಿಲ್ಲ. ಆದರೆ ನನ್ನ ಈ ಹೇಳಿಕೆಯನ್ನು ಮುಗಿಸುವುದರೊಳಗೆ ವಿವೇಕಯುಕ್ತ ಮನುಷ್ಯನನ್ನೂ ಇಂಥ

ಹುಚ್ಚು ಸಾಹಸಕ್ಕೆ ನೂಕಬಲ್ಲ ಎಂಥ ತಾಪ ನನ್ನ ಹೃದಯದಲ್ಲಿದೆ ಎಂಬುದರ ದರ್ಶನ ನಿಮಗೆ ಆದೀತು."

ಇಷ್ಟನ್ನು ಪ್ರಾಸ್ತಾವಿಕವಾಗಿ ನುಡಿದ ಮೇಲೆ ಗಾಂಧೀಜಿ ತಮ್ಮ ವಿವರವಾದ ಹೇಳಿಕೆಯನ್ನು ಓದಿದರು. ಆದರಲ್ಲಿ ತಾವು ಮೊದಲು ಬ್ರಿಟಿಷ್ ರಾಜನಿಷ್ಠೆಯಿಂದ ಕೂಡಿದ್ದುದಾಗಿಯೂ, ಆದರೆ ಕಾಲಗತಿಸಿದಂತೆ ಬ್ರಿಟಿಷ್ ಸರ್ಕಾರ ಭಾರತ ಜನಕ್ಕೆ ಮಾಡುತ್ತಿದ್ದ ಆರ್ಥಿಕ ಶೋಷಣೆಯ ಬಗೆಗೆ ಅರಿವಾಗಿ, ಹಾಗೂ ಅದು ಕಲ್ಪಿಸಿದ್ದ ರಾಜಕೀಯ ದಾಸ್ಯದ ಬಗೆಗೆ, ಅದರಲ್ಲಿಯೂ ೧೯೧೯ರಲ್ಲಿ ನಡೆದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡದಿಂದ ಆ ನಂಬಿಕೆ, ನಿಷ್ಠೆ ಶಿಥಿಲವಾಗಿ, ಭಗ್ನವಾಗಿ, ತಾವು ಪ್ರತಿಭಟನೆಗೆ ನಿಲ್ಲಬೇಕಾಯಿತೆಂದೂ ತಿಳಿಸಿ, ಪೀನಲ್‌ಕೋಡಿನ ರಾಜಕೀಯ ವಿಧಿಗಳ ರಾಜ ೧೨೪–ಎ. ಪ್ರಕಾರ ಆಪಾದನೆಗೆ ಗುರಿಯಾದುದಕ್ಕೆ ಸಂತೋಷಪಟ್ಟು ಹೀಗೆ ಹೇಳಿದರು: "ಭಾರತದ ಅತ್ಯಂತ ಪ್ರೀತ್ಯಾಸ್ಪದರಾದ ದೇಶಭಕ್ತರು ಆದರ ಪ್ರಕಾರ (೧೨೪ ಎ ವಿಧಿ) ಶಿಕ್ಷೆಗೊಳಗಾಗಿರುವುದು ನನಗೆ ಗೊತ್ತು. ಆದುದರಿಂದ ಈ ವಿಧಿಯ ಪ್ರಕಾರ ನಾನೂ ಆಪಾದಿತನಾಗಿರುವುದು ನನಗೊಂದು ದೊಡ್ಡ ಭಾಗ್ಯ. ಯಾವ ಅಧಿಕಾರಿಯ ವಿಷಯದಲ್ಲಿಯೂ ನನಗೆ ದುರ್ಭಾವನೆಯಿಲ್ಲ. ಚಕ್ರವರ್ತಿಯವರ ಬಗೆಗೂ ವ್ಯಕ್ತಿಶಃ ನನಗೆ ಯಾವ ಬಗೆಯ ಅಪ್ರೀತಿ ಇಲ್ಲ..... ಬ್ರಿಟಿಷರ ಆಳ್ವಿಕೆಯಲ್ಲಿ ಭಾರತ ಹಿಂದೆಂದೂ ಇಲ್ಲದಷ್ಟು ಪೌರುಷಹೀನವಾಗಿದೆ. ಇಂಥ ಅಭಿಪ್ರಾಯವನ್ನು ಹೊಂದಿರುವಾಗ ಪ್ರಭುತ್ವ ಪದ್ಧತಿಗೆ ಪ್ರೀತಿ ತೋರಿಸುವುದು ಪಾಪವೆಂದು ಪರಿಗಣಿಸುತ್ತೇನೆ. ನನ್ನ ವಿರುದ್ಧ ಸಾಕ್ಷ್ಯಕ್ಕೋಸ್ಕರ ಕೊಡಲ್ಪಟ್ಟಿರುವ ಲೇಖನವನ್ನು ಬರೆದ ನನ್ನ ಭಾಗ್ಯವೇ ಭಾಗ್ಯ.

'.....ಒಳ್ಳೆಯದರೊಡನೆ ಸಹಕಾರ ಹೇಗೆ ಕರ್ತವ್ಯವೋ ಹಾಗೆಯೇ ಕೆಟ್ಟದರೊಡನೆ ಅಸಹಕಾರ ಮಾಡುವುದೂ ಒಂದು ಕರ್ತವ್ಯವೆಂದು ನನ್ನ ಅಭಿಪ್ರಾಯ. ಅದರ ಹಿಂದೆ ತಪ್ಪುಮಾಡಿದವನ ವಿಷಯದಲ್ಲಿ ಅಸಹಕಾರವು ಉದ್ದೇಶಪೂರ್ವಕವಾಗಿ ಹಿಂಸೆಯ ರೂಪವನ್ನು ತಾಳುತ್ತಿದ್ದಿತು. ಹಿಂಸಾಯುಕ್ತ ಅಸಹಕಾರ ಕೆಟ್ಟದನ್ನು ಹೆಚ್ಚಿಸುವುದೆಂದೂ, ಕೆಟ್ಟದು ಹಿಂಸೆಯಿಂದಲೇ ಬೆಳೆಯುತ್ತದೆಂದೂ, ಕೆಟ್ಟದರಿಂದ ದೂರ ಸರಿಯಬೇಕಾದರೆ

ಹಿಂಸೆ ಪೂರ್ಣವಾಗಿ ತ್ಯಾಜ್ಯವಾಗಬೇಕೆಂದೂ ನನ್ನ ದೇಶಬಂಧುಗಳಿಗೆ ನಾನು ತೋರಿಸಲು ಯತ್ನಿಸುತ್ತಿದ್ದೇನೆ. ಅಹಿಂಸೆ ಕೆಟ್ಟುದರೊಡನೆ ಅಸಹಕಾರ ಮಾಡಿದ ಪರಿಣಾಮವಾಗಿ ಬಂದ ಶಿಕ್ಷೆಗೆ ಇಚ್ಛಾಪೂರ್ವಕವಾಗಿ ಶರಣಾಗ ಬೇಕು. ಆದುದರಿಂದ ನ್ಯಾಯ ನಿಬಂಧನೆಯ ದೃಷ್ಟಿಯಿಂದ ಯಾವುದು ಉದ್ದೇಶಪೂರ್ವಕ ಪಾತಕವೆಂದು ಪರಿಗಣಿಸಲ್ಪಡುವುದೋ, ಅದಕ್ಕಾಗಿ ಯಾವ ಪರಮಾವಧಿ ಶಿಕ್ಷೆ ವಿಧಿಸಲ್ಪಡುವುದೋ ಅದನ್ನು ಸ್ವಾಗತಿಸಿ, ಸಂತಸ ದಿಂದ ಸ್ವೀಕರಿಸುತ್ತೇನೆ. ಇದು ನಾಗರಿಕ ಪ್ರಜೆಯ ಪರಮ ಕರ್ತವ್ಯವೆಂದು ನನ್ನ ಭಾವನೆ. ನ್ಯಾಯಾಧೀಶರೇ, ಮತ್ತು ಪಂಚಾಯತರೇ ನಿಮಗಿರುವ ಮಾರ್ಗ ಒಂದೇ. ನೀವು ಆಡಳಿತ ನಡೆಸುತ್ತಿರುವ ನ್ಯಾಯ ನಿಬಂಧನೆಗಳು ನಿಮಗೆ ಕೆಟ್ಟುದೆನಿಸಿದರೆ, ಮತ್ತು ನಾನು ನಿಜವಾಗಿಯೂ ನಿರಪರಾಧಿ ಎನಿಸಿ ದರೆ ನಿಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡುವುದರ ಮೂಲಕ ಕೆಟ್ಟುದ ರೊಡನೆ ನಿಮ್ಮ ಸಂಸರ್ಗವನ್ನು ತ್ಯಜಿಸಿ, ಇಲ್ಲವೇ ನೀವು ಆಡಳಿತ ನಡೆಸು ತ್ತಿರುವ ನ್ಯಾಯ ನಿಬಂಧನೆ ಈ ದೇಶದ ಜನಕ್ಕೆ ಒಳ್ಳೆಯದನ್ನು ಮಾಡು ತ್ತದೆಂದು ನಿಮಗೆ ಅನಿಸಿದರೆ, ಆದುದರಿಂದ ನನ್ನ ಚಟುವಟಿಕೆಗಳು ಸರ್ವರ ಸುಖಕ್ಕೆ ಧಕ್ಕೆ ತರುವುದೆಂದು ಭಾವಿಸುವುದಾದರೆ, ನನಗೆ ಉಗ್ರತರ ಶಿಕ್ಷೆ ಯನ್ನು ವಿಧಿಸಿ.”

ನ್ಯಾಯಾಧೀಶ ಬ್ಲೂಂ ಫೀಲ್ಡರು, ಗಾಂಧೀಜಿಯ ಈ ಹೇಳಿಕೆಯಿಂದ ಪ್ರಭಾವಿತರಾದುದು ಸ್ಪಷ್ಟವಾಗಿತ್ತು. ಆದರೆ ಅವರು ತಮ್ಮ ಕರ್ತವ್ಯವನ್ನು ನೆರವೇರಿಸಬೇಕಾಗಿತ್ತು. ಗಾಂಧೀಜಿಯನ್ನು ಲೋಕಮಾನ್ಯ ತಿಲಕರಿಗೆ ಹೋಲಿಸಿ, ಅವರ ಮೇಲಿನ ಒಂದೊಂದು ಆಪಾದನೆಗೂ ಎರಡು ವರ್ಷಗಳ ಸಾದಾ ಕಾರಾಗೃಹ ಶಿಕ್ಷೆ, ಒಟ್ಟು ಆರು ವರ್ಷಗಳ ಶಿಕ್ಷೆಯನ್ನು ವಿಧಿಸಿ, ‘ಇದನ್ನು ನೀವು ಅನ್ಯಾಯವೆಂದು ಭಾವಿಸುವುದಿಲ್ಲವೆಂದು ತಿಳಿಯುತ್ತೇನೆ’ ಎಂದರು.

ಗಾಂಧೀಜಿ ತೀರ್ಪನ್ನು ಸ್ವಾಗತಿಸುತ್ತಾ ಹೇಳಿದ ಮಾತುಗಳಿವು: “ನನ್ನ ದೊಂದು ಮಾತು. ನೀವು ಬಾಲಗಂಗಾಧರ ತಿಲಕರ ವಿಚಾರಣೆಯನ್ನು ನೆನಪಿಗೆ ತರುವ ಗೌರವವನ್ನು ನನಗೆ ಮಾಡಿರುವುದರಿಂದ ಅವರ ಹೆಸರಿ ನೊಂದಿಗೆ ಸಂಪರ್ಕ ಹೊಂದುವುದು ನನಗೊಂದು ಹೆಮ್ಮೆಯ ಭಾಗ್ಯ, ಗೌರವ. ಶಿಕ್ಷೆಯನ್ನೇ ಕುರಿತು ಹೇಳುವುದಾದರೆ, ಯಾವ ನ್ಯಾಯಾಧೀಶನೇ ಆಗಲಿ

ನನಗೆ ವಿಧಿಸುವಷ್ಟೇ ಹಗುರವಾಗಿದೆ. ವಿಚಾರಣೆಯನ್ನು ಕುರಿತು ಹೇಳುವುದಾದರೆ ನಾನು ಇದಕ್ಕಿಂತ ಹೆಚ್ಚಿನ ಮರ್ಯಾದೆಯನ್ನು ನಿರೀಕ್ಷಿಸಲಾರೆ."

ಇವು ಸೌಜನ್ಯ-ನಮ್ರತೆಗಳು ರೂಪುಪಡೆದ ಮಾತುಗಳೇ ಸರಿ.

೧೯೩೪ರಲ್ಲಿ ಗಾಂಧೀಜಿ ಕಾಂಗ್ರೆಸ್ ಸಂಸ್ಥೆಯ ಸಾಮಾನ್ಯ ಸದಸ್ಯತ್ವದಿಂದಲೂ ನಿವೃತ್ತರಾಗಲು ನಿರ್ಧಾರಮಾಡಿದರು. ಇದು ಅವರ 'ಸಂಘ ಮುಕ್ತಿ'ಯ ನಿದರ್ಶನ; ನಿಸ್ಸಂಗ ಭಾವದ ನಿದರ್ಶನ. ಈ ಭಾವ ಅವರಲ್ಲಿ ಉಂಟಾಗಲು ಹಲವಾರು ಕಾರಣಗಳಿದ್ದವು. ಕಾಂಗ್ರೆಸ್ಸಿನ ಸಹಜ ವಿಕಾಸಕ್ಕೆ ಅವರು ಪ್ರಧಾನ ಕಾರಣರಾಗಿದ್ದರೂ, ಆ ಸಂಸ್ಥೆಯಲ್ಲಿ ಅಂದು ಅವರಿಗೆ ಕಂಡುಬಂದ ಕೆಲವು ಬೆಳವಣಿಗೆಗಳೇ ಅವರ ನಿರ್ಧಾರಕ್ಕೆ ಕಾರಣಗಳಾಗಿದ್ದವು. ಸತ್ಯ-ಅಹಿಂಸೆಗಳಿಗೆ ಬದ್ಧರಾದ ಅವರು ಸಂಸ್ಥೆಯಲ್ಲಿ ಕಂಡುಬಂದ ಅವುಗಳ ವಿಪರ್ಯಾಸವನ್ನು ನೋಡಿಕೊಂಡೇ ಅದರಲ್ಲಿರಲು ಇಷ್ಟಪಡಲಿಲ್ಲ. ಸರದಾರ್ ವಲ್ಲಭಭಾಯಿ ಪಟೇಲರು ಇದಕ್ಕೆ ಪೂರ್ಣ ಸಮ್ಮತಿಯನ್ನಿತ್ತಿದ್ದರು. ಉಳಿದ ರಾಷ್ಟ್ರ ಮುಖಂಡರು ಇದಕ್ಕೆ ಸಮ್ಮತಿಸಿರಲಿಲ್ಲ. ಕಾಂಗ್ರೆಸ್ ನಿರ್ಧಾರ ಮಾಡಿದ ಕಾರ್ಯಕ್ರಮಗಳ ಬಗೆಗೂ, ಅವುಗಳ ಉಪಯುಕ್ತತೆಯ ಬಗೆಗೂ ತರುಣ ವೃಂದ—ಆಗತಾನೇ ಬೆಳೆಯುತ್ತಿದ್ದ ಸಮಾಜವಾದಿಗಳು-ಅಸಂತುಷ್ಟಿಯನ್ನು ವ್ಯಕ್ತಪಡಿಸಿದ್ದರು. ಇಂಥ ಸಮಯದಲ್ಲಿ ರಾಷ್ಟ್ರದಲ್ಲಿ ಉತ್ಪನ್ನವಾಗಿದ್ದ ವಿವಿಧ ರೀತಿಯ ಊಹಾಪೋಹಗಳನ್ನು ನಿಲ್ಲಿಸುವುದಕ್ಕೂ, ಕಾಂಗ್ರೆಸ್ಸಿನ ಸ್ಥಾನಮಾನಕ್ಕೆ ಧಕ್ಕೆ ತಗುಲದಂತೆ ಇರುವ ದೃಷ್ಟಿಯಿಂದಲೂ ಅವರು ನೀಡಿದ ಹೇಳಿಕೆ ಚರಿತ್ರಾರ್ಹವಾದುದು. ಆ ಹೇಳಿಕೆಯ ಕೆಲವು ಭಾಗಗಳಿವು :

"ನಾನು ಭೌತಿಕ ದೃಷ್ಟಿಯಲ್ಲಿ ಕಾಂಗ್ರೆಸ್ಸಿನಿಂದ ನಿವೃತ್ತನಾಗುವ ವಿಚಾರ ಮಾಡುತ್ತಿರುವೆನೆಂದು ಹುಟ್ಟಿರುವ ವಾರ್ತೆ ನಿಜವಾದುದು. ಆದರೆ ಕಾರ್ಯಕಾರೀ ಸಮಿತಿಯ ಮತ್ತು ಪಾರ್ಲಿಮೆಂಟರಿ ಬೋರ್ಡಿನ ಸಭೆಗಾಗಿ ಕಳೆದ ವಾರ ವರ್ಧಾಕ್ಕೆ ಬಂದ ಮಿತ್ರರು ಮಾಡಿದ ಸಲಹೆಯ ಮೇರೆಗೆ, ನಾನು ಕಾಂಗ್ರೆಸ್ಸನ್ನು ಬಿಡುವುದೇ ಆದರೆ, ಮುಂದಿನ ಕಾಂಗ್ರೆಸ್ಸಿನ ಅಧಿವೇಶನದ ಅನಂತರ ಹಾಗೆ ಮಾಡಬೇಕೆಂದು ಒಪ್ಪಿದೆನು. ಕಾಂಗ್ರೆಸ್ಸಿನಲ್ಲಿರುವ ಅನೇಕ ಬುದ್ಧಿವಂತರು ನನ್ನ ವಿಧಾನಗಳಿಂದಲೂ, ಅಭಿಪ್ರಾಯಗಳಿಂದಲೂ ಅವುಗಳಿಂದ ಪ್ರೇರಿತವಾದ ಕಾರ್ಯಕ್ರಮಗಳಿಂದಲೂ ಬೇಸರಗೊಂಡಿರುವ

ರೆಂದೂ ಕಾಂಗ್ರೆಸ್ಸಿನ ಸಹಜ ವಿಕಾಸಕ್ಕೆ ನಾನು ಸಹಾಯಕನಾಗಿಲ್ಲದೆ ಅಡ್ಡಿಯಾಗಿದ್ದೇನೆಂದೂ, ಕಾಂಗ್ರೆಸ್ ಸಂಸ್ಥೆ ಉತ್ತಮ ಜನಶಕ್ತಿ-ಪ್ರತಿನಿಧಿತ್ವ ಇವುಗಳಿಂದ ಕೂಡಿದ ಸಂಸ್ಥೆಯಾಗಿರದೆ ನನ್ನ ವ್ಯಕ್ತಿತ್ವಕ್ಕೆ ಬಹಳ ಒಳಗಾಗಿದೆಯೆಂದೂ ಅದರಲ್ಲಿ ಸ್ವತಂತ್ರ ವಿಚಾರಕ್ಕೆ ಅವಕಾಶವಿಲ್ಲದಂತೆ ಆಗಿದೆಯೆಂದೂ—ಈ ಬಗೆಯ ವಿಚಾರಗಳು ನನ್ನಲ್ಲಿ ಮೂಡಿದ್ದವು—ಈ ಭಾವನೆಗಳು ನಿಜವೇ ಎಂದು ಪರೀಕ್ಷಿಸಲು ನನ್ನ ನಿವೃತ್ತಿಯನ್ನು ಮುಂದೂಡಬೇಕೆಂದು ಒತ್ತಾಯ ಮಾಡಿದುದರ ಫಲವಾಗಿ ನನಗೆ ಅವಕಾಶ ದೊರೆಯುವಂತೆ ಆದುದರಿಂದ ಅದು ನನ್ನನ್ನು ಆಕರ್ಷಿಸಿತು.

'ನನ್ನ ಈ ಭಾವನೆ ನಿಜವೇ ಇಲ್ಲವೇ ಎನ್ನುವುದನ್ನು ಪರೀಕ್ಷಿಸಬೇಕಾದರೆ, ನನಗೆ ಇಂಥ ಭಾವನೆ ಉಂಟಾಗುವುದಕ್ಕೆ ಕಾರಣಗಳನ್ನೂ ಆ ಆಧಾರದ ಮೇಲೆ ನನ್ನ ಸಲಹೆಗಳನ್ನೂ ಸಾರ್ವಜನಿಕರ ಮುಂದಿಡಬೇಕು. ನನ್ನ ಸಲಹೆಗಳ ಬಗೆಗೆ ಕಾಂಗ್ರೆಸ್ಸಿಗರು ತಮ್ಮ ಮತವನ್ನು ಕೊಟ್ಟು ತಮ್ಮ ಅಭಿಮತವನ್ನು ಸ್ಪಷ್ಟಪಡಿಸಬಹುದು.

'ನನ್ನಿಂದ ಸಾಧ್ಯವಾದಷ್ಟು ಸಂಕ್ಷೇಪವಾಗಿ ಇದನ್ನು ನಿಮ್ಮ ಮುಂದೆ ಇಡಲು ಪ್ರಯತ್ನಿಸುತ್ತೇನೆ. ಅನೇಕ ಕಾಂಗ್ರೆಸ್ಸಿಗರಿಗೂ ನನಗೂ ಮಧ್ಯೆ ಮೂಲಭೂತವಾದ ಕೆಲವು ಭಿನ್ನಾಭಿಪ್ರಾಯಗಳು ಉಂಟಾಗಿವೆ, ಮತ್ತು ಈ ಅಂತರ ಹೆಚ್ಚುತ್ತಿದೆಯೆಂದು ನನಗೆ ತೋರುತ್ತಿದೆ. ನನ್ನ ವಿಷಯದಲ್ಲಿ ಅನುಪಮವಾದ ನಿಷ್ಠೆ ಅಡ್ಡಬಾರದಿದ್ದರೆ, ಅನೇಕ ಮೇಧಾವಿಗಳಾದ ಕಾಂಗ್ರೆಸ್ಸಿಗರು ನಾನು ಹಿಡಿಯುತ್ತಿರುವ ದಾರಿಗೆ ನೇರವಾಗಿ ವಿರೋಧವಾದ ದಾರಿಯನ್ನು ಸಂತೋಷದಿಂದಲೂ ಉತ್ಸಾಹದಿಂದಲೂ ಹಿಡಿಯುತ್ತಿದ್ದರೆಂದು ತೋರುತ್ತದೆ. ನಾನು ಕಾಂಗ್ರೆಸ್ಸಿನ ಮುಂದೆ ಮಂಡಿಸಿದ ಸಲಹೆಗಳನ್ನು ಅವರು ಎಷ್ಟೇ ಆಕ್ಷೇಪಿಸಿದರೂ ನನ್ನ ಬಗೆಗೆ ಅನ್ಯಾದೃಶ ನಿಷ್ಠೆಯನ್ನೂ ಶ್ರದ್ಧೆಯನ್ನೂ ತೋರಿದ್ದಾರೆ. ಯಾವ ನಾಯಕನೂ ಇದಕ್ಕಿಂತ ಹೆಚ್ಚಾಗಿ ಬಯಸಲು ಸಾಧ್ಯವಿಲ್ಲ. ಈ ಬಗೆಯ ನಿಷ್ಠೆ ಮತ್ತು ಶ್ರದ್ಧೆಗಳನ್ನು ನಾನು ಮುಂದೆಯೂ ನಿರೀಕ್ಷಿಸುತ್ತಾ ಹೋಗುವುದೆಂದರೆ, ಅವರ ಮೇಲೆ ದೊಡ್ಡ ಭಾರ ಹೇರಿದಂತಾಗುವುದು. ಅವರು ತೋರಿಸುವ ಭಕ್ತಿಯ ಕಾರಣದಿಂದ ಅವರಿಗೂ ನನಗೂ ಇರುವ ಭಿನ್ನಾಭಿಪ್ರಾಯಗಳ ಕಡೆಗೆ ನಾನು ಕಣ್ಣು

ಮುಚ್ಚಿಕೊಂಡು ಇರಬಾರದು. ಬುದ್ಧಿವಂತರಾದ ಕಾಂಗ್ರೆಸ್ಸಿಗರಿಗೂ ನನಗೂ ಇರುವ ಭಿನ್ನಾಭಿಪ್ರಾಯಗಳು ಮೂಲಭೂತವಾದುವು."

ಈ ಭಿನ್ನಾಭಿಪ್ರಾಯಗಳನ್ನು ಕುರಿತು ಗಾಂಧೀಜಿ ಪ್ರಸ್ತಾಪಿಸಿದರು. ಚರಖಾಕ್ಕೂ ಖಾದೀಗೂ ಅವರು ಕೊಟ್ಟ ಅಗ್ರಸ್ಥಾನ ಪಾರ್ಲಿಮೆಂಟರಿ ಬೋರ್ಡಿನ ರಚನೆಯ ಅಗತ್ಯ, ಸಮಾಜವಾದಿ ಗುಂಪಿನ ರಚನೆ, ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಸಲಹೆ, ಅಸ್ಪೃಶ್ಯತೆಯ ವಿಚಾರ, ಕೊನೆಯದಾಗಿ ಅಹಿಂಸೆ, ಈ ಎಲ್ಲ ವಿಷಯಗಳಲ್ಲಿ ತೋರಿರುವ ಭಿನ್ನಾಭಿಪ್ರಾಯಗಳನ್ನು ಉಲ್ಲೇಖಿಸಿದರು. ಸಮಾಜವಾದಿ ಗುಂಪು ಮತ್ತು ಅಹಿಂಸೆಯ ಬಗೆಗೆ ಇದ್ದ ಭಿನ್ನಾಭಿಪ್ರಾಯಗಳನ್ನು ಹೀಗೆ ಎತ್ತಿ ತೋರಿಸಿದರು :

"ಸಮಾಜವಾದಿ ಗುಂಪೊಂದು ರೂಪುಗೊಂಡಿದೆ. ಅದನ್ನು ನಾನು ಸ್ವಾಗತಿಸುತ್ತೇನೆ. ಅವರಲ್ಲಿ ಅನೇಕರು ನನ್ನ ಗೌರವಕ್ಕೆ ಪಾತ್ರರಾದ ತ್ಯಾಗ ಶೀಲ ಸಹೋದ್ಯೋಗಿಗಳು. ಹೀಗಿದ್ದರೂ ಅವರು ಹೊರಡಿಸಿರುವ ಹೊತ್ತಗೆ ಯಲ್ಲಿ ಅವರು ಪ್ರಕಟಿಸಿರುವ ಕಾರ್ಯಕ್ರಮದಲ್ಲಿ ನನಗೆ ಮೂಲಭೂತವಾದ ಮತಭೇದವಿದೆ. ಆದರೆ ಅವರ ಪ್ರಕಟನೆಯ ಮೂಲಕ ಅವರ ವಿಚಾರ ಪ್ರಚಾರವನ್ನು ಅದುಮಿಡಲು ನೈತಿಕಬಲದಿಂದ ನಾನು ಹಾಗೆ ಮಾಡಬಹು ದಾದರೂ ನಾನು ಅದನ್ನು ಬಯಸುವುದಿಲ್ಲ. ಈ ಅಭಿಪ್ರಾಯಗಳು ಎಷ್ಟೇ ನನಗೆ ರುಚಿಸದಿದ್ದರೂ ಅವುಗಳನ್ನು ನಿರಾತಂಕವಾಗಿ ವ್ಯಕ್ತಪಡಿಸಲು ನಾನು ಅಡ್ಡಿ ಬರಲಾರೆ. ಕಾಂಗ್ರೆಸ್ಸಿನಲ್ಲಿ ಅವರದು ಮೇಲುಗೈ ಆದರೆ—ಅದು ಸಂಭವನೀಯವೇ—ನಾನು ಕಾಂಗ್ರೆಸ್ಸಿನಲ್ಲಿ ಉಳಿಯಲು ಸಾಧ್ಯವಿಲ್ಲ. ಏಕೆಂದರೆ ನಾನು ವಿರೋಧಪಕ್ಷದಲ್ಲಿರುವುದೆಂದರೆ ಅದು ನನ್ನ ವಿಚಾರಕ್ಕೆ ಮೀರಿದ ವಿಷಯ. ನನ್ನ ದೀರ್ಘವಾದ ಸಾರ್ವಜನಿಕ ಜೀವನದಲ್ಲಿ ಅನೇಕ ಸಂಸ್ಥೆಗಳೊಡನೆ ಆತ್ಮೀಯತೆಯನ್ನು ತಾಳಿದ್ದೇನೆ; ಎಂದೂ ವಿರೋಧಪಕ್ಷ ದಲ್ಲಿರಲಿಲ್ಲ . . . ."

ಈ ಮಾತು ಅವರ ಅಹಿಂಸೆಗೆ ಅನುಗುಣವಾದುದೇ. ಖಾದೀ ಮತ್ತು ಅಸ್ಪೃಶ್ಯತೆಯ ವಿಷಯದಲ್ಲಿ ಅವರು ವಿಧಾನ ಭೇದವನ್ನು ಗಮನಿಸಿದ್ದರು. ಅಹಿಂಸೆಯ ವಿಷಯದಲ್ಲಿ ಹೀಗೆ ನುಡಿದರು : "ಕೊನೆಯದಾಗಿ ಅಹಿಂಸೆಯ ವಿಷಯ. ಈ ಹದಿನಾಲ್ಕು ವರ್ಷಗಳಿಂದ ಅದರ ಪ್ರಯೋಗದ ಪ್ರಯತ್ನ ನಡೆ

ದಿದ್ದರೂ ಕಾಂಗ್ರೆಸ್ಸಿಗರಲ್ಲಿ ಬಹುಸಂಖ್ಯಾತರಿಗೆ ಅದೊಂದು ವ್ಯಾವಹಾರಿಕ ತಂತ್ರ. ನನಗಾದರೋ ಅದು ಮೂಲಭೂತ ಪ್ರಶ್ನೆ. ಕಾಂಗ್ರೆಸ್ಸಿಗರು ಹೀಗೆ ಭಾವಿಸದೆ ಇರುವುದು ಅವರ ತಪ್ಪಲ್ಲ. ನಾನು ಪ್ರತಿಪಾದಿಸುವ ರೀತಿಯಲ್ಲಿ ನಿಸ್ಸಂದೇಹವಾಗಿ ದೋಷವಿರಬೇಕು. ಅದಕ್ಕೂ ಹೆಚ್ಚಾಗಿ ಅದರ ಆಚರಣೆಯ ವಿಷಯದಲ್ಲಿ ದೋಷವಿರಬೇಕು. ಈ ಕಾರಣಗಳಿಂದ ಅಹಿಂಸೆಗೆ ಯಶಸ್ಸು ದೊರೆಯದಾಗಿದೆ. ನನ್ನ ಪ್ರತಿಪಾದನೆಯಲ್ಲಾಗಲೀ ಆಚರಣೆಯಲ್ಲಾಗಲೀ ಏನು ದೋಷವಿದೆಯೋ ಅದು ನನಗೆ ಗೋಚರವಾಗಲಿಲ್ಲ. ಆದರೆ ಕಾಂಗ್ರೆಸ್ಸಿಗರ ಜೀವನದಲ್ಲಿ ಅದು ಹಾಸುಹೊಕ್ಕಾಗಿಲ್ಲವೆಂದರೆ, ನಾನು ಈ ಬಗೆಯ ಅನುಮಾನವನ್ನೇ ತಾಳಬೇಕಾಗಿದೆ...."

ಸತ್ಯದ ದೃಷ್ಟಿಯಿಂದ ಎಲ್ಲವನ್ನೂ ಅಳೆಯುತ್ತಿದ್ದ ಗಾಂಧೀಜಿಗೆ ಇದು ಪ್ರಮಾದವೇ ಎನಿಸಿತು. ಅವರು ಮುಂದುವರಿಸಿ ಹೇಳಿದರು ಹೀಗೆ:

"ನಮ್ಮ ದೇಶ ಅದ್ಭುತವಾದ ಧೈರ್ಯವನ್ನೂ ತ್ಯಾಗವನ್ನೂ ತೋರಿಸಿದೆಯೆಂದು ಮೊದಲೇ ಹೇಳಿರುವ ಮಾತನ್ನು ಪುನಃ ಹೇಳುವುದು ಅನಾವಶ್ಯಕ. ಆದರೆ ಇದನ್ನು ಮಾತ್ರ ಹೇಳಬಯಸುತ್ತೇನೆ: ನಮ್ಮ ಅಹಿಂಸೆ ಕಾಯೇನ ವಾಚಾ ಮನಸಾ ಶುದ್ಧ ಮತ್ತು ಬೆರಕೆಯಿಲ್ಲದ ಅಹಿಂಸೆಯಾಗಿರಲಿಲ್ಲ. ಈಗ ಸರ್ಕಾರಕ್ಕೂ ಹಿಂಸಾವಾದಿಗಳಿಗೂ ನಮ್ಮ ಗುರಿಯನ್ನು ಮುಟ್ಟಲು ಹಾಗೂ ವ್ಯಾಪಕಾರ್ಥದಲ್ಲಿ ಎಲ್ಲ ಬಗೆಯ ಸ್ವಾತಂತ್ರ್ಯವನ್ನು ಪಡೆಯಲೂ ಅಹಿಂಸಾ ಮಾರ್ಗ ಶಕ್ತಿಯುತ ಸಾಧನವೆಂದು ಪ್ರಯೋಗಗಳ ಮೂಲಕ ತೋರಿಸಲು ಸಾಧನೋಪಾಯಗಳನ್ನು ಹುಡುಕುವುದು ನನ್ನ ಗುರುತರವಾದ ಕರ್ತವ್ಯವಾಗಿದೆ.

'ನನ್ನ ಜೀವನವೇ ಮುಡಿಪಾಗಿರುವ ಈ ಪ್ರಯೋಗಕ್ಕೆ ನಾನು ಪೂರ್ಣ ನಿರ್ಲಿಪ್ತನಾಗಿರಬೇಕು; ಕಾರ್ಯಮಾಡಲು ಸಂಪೂರ್ಣ ಸ್ವಾತಂತ್ರ್ಯ ಪಡೆದಿರಬೇಕು. ಸತ್ಯಾಗ್ರಹ (ಅದರಲ್ಲಿ ಕಾನೂನುಭಂಗ ಒಂದು ಭಾಗ ಮಾತ್ರ) ನನ್ನ ಮಟ್ಟಿಗೆ ಸರ್ವವ್ಯಾಪಿಯಾದ ಜೀವನ ನಿಯಮ. ಸತ್ಯವೇ ನನ್ನ ದೇವರು; ಆತನನ್ನು ನಾನು ಅರಸುವುದು ಅಹಿಂಸಾಮಾರ್ಗದಿಂದಲ್ಲದೆ ಬೇರೆ ಮಾರ್ಗದಿಂದಲ್ಲ. ನನ್ನ ದೇಶದ ಸ್ವಾತಂತ್ರ್ಯ ಇಡಿಯ ದೇಶದ ಸ್ವಾತಂತ್ರ್ಯ ಸಹ. ಅದು ಸತ್ಯದ ಅನ್ವೇಷಣೆಯಲ್ಲಿ ಖಂಡಿತವಾಗಿಯೂ ಅಡಕವಾಗಿದೆ.

ಯಾವ ಕಾರಣದಿಂದಾಗಲೀ—ಐಹಿಕ, ಆಮುಷ್ಮಿಕ ಸಿದ್ಧಿಗಾಗಲೀ—ಆ ಅನ್ವೇಷಣವನ್ನು ಬಿಡುವುದು ನನಗೆ ಸಾಧ್ಯವಿಲ್ಲ. ಇದಕ್ಕಾಗಿಯೇ ನಾನು ರಾಜಕೀಯ ರಂಗವನ್ನು ಪ್ರವೇಶಿಸಿದ್ದು; ಈ ಅನ್ವೇಷಣದಲ್ಲಿ ದೇಶದ ಸ್ವಾತಂತ್ರ್ಯ ಮತ್ತು ಸತ್ಯದ ಅಂಶಗಳಾದ ಇನ್ನೂ ಅನೇಕ ವಿಷಯಗಳು ಅಡಕವಾಗಿದೆಯೆಂದು ನಾನು ಹೇಳುವ ಮಾತು ಸುಶಿಕ್ಷಿತರಾದ ಕಾಂಗ್ರೆಸ್ಸಿಗರ ವಿಚಾರಪರತೆಯನ್ನೂ ಹೃದಯವನ್ನೂ ಒಲಿಸದಿದ್ದ ಪಕ್ಷಕ್ಕೆ ನಾನು ಏಕಾಂಗಿಯಾಗಿ ನನ್ನ ಕಾರ್ಯವನ್ನು ಮಾಡುತ್ತಾ ಹೋಗಬೇಕೆಂಬುದು ಇದೇ. ಇದು ಈ ಹೊತ್ತು ನನ್ನ ದೇಶಬಾಂಧವರಿಗೆ ಸ್ಪಷ್ಟವಾಗಿಲ್ಲದಿದ್ದರೂ ಮುಂದೆ ಎಂದಾದರೂ ಇಂತಹ ಅತಿ ಮುಖ್ಯವಾದ ಸಂದರ್ಭಗಳಲ್ಲಿ ಭಗವಂತ ನನ್ನ ಬಾಯಿಂದ ನುಡಿಸುವ ಸೂಕ್ತವಾದ ಮಾತಿನ ದೆಸೆಯಿಂದಲೋ ಸೂಕ್ತವಾದ ಕಾರ್ಯಕ್ಕೆ ನನ್ನನ್ನು ಪ್ರೇರಣೆ ಮಾಡುವುದರಿಂದಲೋ ನಮ್ಮ ಜನರಿಗೆ ಸ್ಪಷ್ಟವಾದೀತೆಂಬ ಭರವಸೆಯಿಂದ ನಾನು ಕಾರ್ಯ ಮಾಡುವೆನು . . . .”

ಹೀಗೆ ಸಣ್ಣ, ದೊಡ್ಡ ಎಲ್ಲ ವಿಷಯಗಳನ್ನೂ ಸತ್ಯ-ಅಹಿಂಸೆಗಳ ದೃಷ್ಟಿಯಿಂದಲೇ ಪರಿಶೀಲಿಸಿ, ಕಾರ್ಯಕ್ರಮ ರೂಪಿಸುತ್ತಿದ್ದರು ಗಾಂಧೀಜಿ. ಧ್ಯೇಯಕ್ಕೂ ಕಾರ್ಯನೀತಿಗೂ ಬರುವ ಅಂತರವೇ ಸಂಸ್ಥೆಗಳ ಅವನತಿಗೆ ಪ್ರಧಾನ ಕಾರಣ. ಅದು ಭ್ರಷ್ಟಾಚಾರವಾಗುತ್ತದೆ. ತನಗೆ ಅಂತರಂಗದಲ್ಲಿ ಇಷ್ಟವಿಲ್ಲದಿದ್ದರೂ ಆತ್ಮವಂಚನೆ ಮಾಡಿಕೊಂಡು ಸಂಸ್ಥೆಗಳಲ್ಲಿರುವುದು ಅವುಗಳ ನಾಶಕ್ಕೆ ಕಾರಣವಾಗುತ್ತದೆ. ಇದು ಪರಸತ್ಯಕ್ಕೆ ಅನ್ವಯಿಸುವಂತೆಯೇ ವ್ಯವಹಾರ ಸತ್ಯಕ್ಕೂ ಅನ್ವಯಿಸುತ್ತದೆ. ವ್ಯವಹಾರ ಧ್ಯೇಯಕ್ಕೆ ಅನುಗುಣವಾಗಿಲ್ಲವಾದರೆ, ಅದು ಒಂದು ವೇಳೆ ಗುರಿಯನ್ನು ಮುಟ್ಟಿದರೂ ನೈತಿಕ ದೃಷ್ಟಿಯಿಂದ ಕೆಡುಕೇ ಆಗಿ ಪರಿಣಮಿಸುತ್ತದೆ. ಅಷ್ಟೇ ಏನು, ಆ ಗುರಿ ಸಾಧನೆ ಕೇವಲ ಮರೀಚಿಕೆಯಾಗುತ್ತದೆ. ಈ ಒಂದು ದೃಕ್ಕೋಣದಿಂದಲೇ ಗಾಂಧೀಜಿಯ ಮಾತು, ಬರಹ, ಕ್ರಿಯೆ ಎಲ್ಲವನ್ನೂ ಪರಿಶೀಲಿಸಿ ಬೆಲೆಕಟ್ಟಬೇಕು.

೩. ಸಂಭಾಷಣೆ-ವಿನೋದ

ಸೂಚನೆ: ಈ ಅಧ್ಯಾಯದಲ್ಲಿ ಉದಾಹರಿಸಿರುವ ಭಾಗಗಳನ್ನು ಕನ್ನಡ ಗಾಂಧೀ ಗ್ರಂಥಮಾಲೆಯ 'ಸಂಭಾಷಣೆ' ಸಂಪುಟದಿಂದ ಆಯ್ದುಕೊಳ್ಳಲಾಗಿದೆ. —ಲೇ.

ಇಬ್ಬರು ಕಲೆತರೆ ಸಾಕು, ಮಾತಿಗೆ ಆರಂಭ. ಅದು ಎಷ್ಟೋ ಸಂದರ್ಭಗಳಲ್ಲಿ ಯಾವ ಗೊತ್ತುಗುರಿಯೂ ಇಲ್ಲದೆ ಕೇವಲ ವಿನೋದವೆನ್ನುವುದಕ್ಕಾಗಲೀ ಅಥವಾ ಕಾಲಹರಣ ಮಾಡುವುದಕ್ಕಾಗಲೀ ಆಗಬಹುದು. ಆಗ ಅದು 'ವ್ಯರ್ಥಾಲಾಪ' ಎನಿಸುತ್ತದೆ. ಅದೇ ಒಂದು ಉದ್ದೇಶದಿಂದ ವಿಚಾರ ವಿನಿಮಯ ದೃಷ್ಟಿಯಿಂದ ಮಾತು ಸಾಗಿದರೆ, ಅದು 'ಸಂಭಾಷಣೆ' ಎನಿಸುತ್ತದೆ. ಬಾಯಿ ಮಾತಿನ ರೂಪವಾದ ಭಾಷಣದಲ್ಲಿ ಅಥವಾ ಬರೆಹದಲ್ಲಿ ಕಂಡುಬರಬಹುದಾದ ಕೆಲವಾರು ಅಂಶಗಳಲ್ಲಿ ಸಂದಿಗ್ಧತೆ ಇದ್ದರೆ, ಅಸ್ಪಷ್ಟತೆ ಇದ್ದರೆ, ಅವುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಅಥವಾ ಒಬ್ಬರೊಬ್ಬರ ವಿಚಾರಗಳ ಬಗೆಗೆ ಇರಬಹುದಾದ ಶಂಕೆಗಳಿಗೆ ಸಮಾಧಾನ ಪಡೆಯುವುದಕ್ಕಾಗಿ ಪ್ರತ್ಯಕ್ಷ ಕುಳಿತು ಮಾತನಾಡುವ ಸಂಭಾಷಣೆಯಲ್ಲಿ ಅನೇಕ ಅನುಕೂಲಗಳುಂಟು. ಇಬ್ಬರ ಪರಸ್ಪರ ಪ್ರತ್ಯಕ್ಷ ಸಾನ್ನಿಧ್ಯದಿಂದ, ನೇರ ಮಾತಿನಿಂದ ಅನುಮಾನಗಳು ಬಗೆಹರಿದು, ಪರಸ್ಪರ ಸ್ಪಷ್ಟ ಅರಿವು ಮೂಡಬಹುದು; ಅಥವಾ ಪ್ರಾಮಾಣಿಕ ವ್ಯತ್ಯಾಸಗಳ ಬಗೆಗೆ ಪರಸ್ಪರ ಒಪ್ಪಿಗೆ ಹೊಂದುವುದಕ್ಕೂ ಸಾಧ್ಯವಾಗಬಹುದು. ಇದರಿಂದ ಪರಸ್ಪರರ ಉದ್ದೇಶಗಳ ಪ್ರಗತಿಗೆ ನೆರವಾಗುತ್ತದೆ.

ಸಂಭಾಷಣೆ ಒಂದು ವಿಚಾರದ ಗುರಿಯನ್ನೂ ಕಾರ್ಯವಿಧಾನವನ್ನೂ ಅರಿತುಕೊಳ್ಳುವುದಕ್ಕೆ ಆಗಬಹುದು; ಅಥವಾ ಅದರ ಬಗೆಗೆ ವಾದಕ್ಕಾಗಿ ಆಗಬಹುದು. ಮೊದಲನೆಯದು ಹಿತಕರ ಮತ್ತು ಶ್ರೇಯಸ್ಕರ. ಇದನ್ನು ಗುರು-ಶಿಷ್ಯರ ಸಂವಾದಕ್ಕೆ ಹೋಲಿಸಬಹುದು; ಗೆಳೆಯರ ವಿಚಾರ ವಿನಿಮಯಕ್ಕೆ ಹೋಲಿಸಬಹುದು. ಎರಡನೆಯದು ಕೇವಲ ವ್ಯಕ್ತಿಪ್ರತಿಷ್ಠೆ ಅಥವಾ ತತ್ವಪ್ರತಿಷ್ಠೆಗೆ ಆಗಬಹುದು. ಇದು ಎಷ್ಟೋ ಸಲ ವಿರೋಧಕ್ಕೆ ಕಾರಣವಾಗಬಹುದು.

ಸಂಭಾಷಣೆಯ ಕಲೆ ಬಹಳ ಪ್ರಾಚೀನವಾದುದು. ಎಷ್ಟೋ ತತ್ವಗಳನ್ನು ಇದರ ಮೂಲಕ ಶೃತಪಡಿಸುವ ಪದ್ಧತಿಯಿತ್ತು. ಅನೇಕ ವಿಷಯಗಳನ್ನು ಇದರ ಮೂಲಕ ತಿಳಿಸಲಾಗುತ್ತಿತ್ತು. ಗ್ರೀಸ್ ದೇಶದ ಸಾಕ್ರೆಟೀಸ್ ಸಂಭಾಷಣೆಗೆ ತುಂಬ ಪ್ರಸಿದ್ಧನಾಗಿದ್ದನು. ಅವನು ನಿಜ ಜ್ಞಾನ ಬೋಧೆ ಮಾಡುತ್ತಿದ್ದ ವಿಧಾನವೇ ಸಂಭಾಷಣೆ ಮೂಲಕ. ಆಧುನಿಕ ಕಾಲದಲ್ಲಿ ಇದರ ಮಹತ್ವ ಬಹಳ ಹೆಚ್ಚಿದೆ. ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿದವರು, ಪರಸ್ಪರ ಅರಿವಿಗೆ ಸಂಭಾಷಣೆಯನ್ನು ಅವಲಂಬಿಸಬೇಕಾಗುತ್ತದೆ.

ಗಾಂಧೀಜಿ ಹೇರಳವಾಗಿ ಭಾಷಣ ಮಾಡುತ್ತಿದ್ದರು, ಬರೆಯುತ್ತಿದ್ದರು. ಇವು ಎಷ್ಟೋ ಸಂದರ್ಭಗಳಲ್ಲಿ ಹಲವಾರು ಶಂಕೆಗಳನ್ನು ಮೂಡಿಸುತ್ತಿದ್ದವು. ಆದುದರಿಂದ ಅವರ ಖಚಿತವಾದ ನಿಲುವನ್ನು ತಿಳಿದುಕೊಳ್ಳಲು ಎಷ್ಟೋ ಮಂದಿ ಕಾತರರಾಗಿರುತ್ತಿದ್ದರು. ಅವರ ಅಭಿಪ್ರಾಯಗಳನ್ನು ಒಪ್ಪದಿದ್ದರೂ ಅವರೊಡನೆ ಸಂಭಾಷಣೆ ಮಾಡಿ ಪರಸ್ಪರ ವಿಚಾರಭೇದವನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೂ ಅಪೇಕ್ಷಿಸುತ್ತಿದ್ದುದುಂಟು.

ಗಾಂಧೀಜಿ ತಮಗೆ ಸರಿ ಎನಿಸಿದ ವಿಚಾರಗಳನ್ನು ನಿಶ್ಯಂಕೆಯಿಂದ ವ್ಯಕ್ತಪಡಿಸುತ್ತಿದ್ದರು. ಆದುದರಿಂದ ಅವರ ವಿಚಾರಗಳು ವಿವರಣೆಯ ಜತೆಗೆ ಇನ್ನೂ ಸ್ಪಷ್ಟತೆಯನ್ನು ಪಡೆಯಬೇಕಾದ ಸಂಭವವಿರುತ್ತಿತ್ತು; ಹೀಗಾಗಿ ಅವರು ನಾನಾ ಬಗೆಯ ಪ್ರವೃತ್ತಿಯವರ ಸಂಗಡ ಸಂಭಾಷಿಸಬೇಕಾಗುತ್ತಿತ್ತು. ಅವರು ಅದನ್ನು ಹರ್ಷದಿಂದ ಸ್ವಾಗತಿಸುತ್ತಿದ್ದರು. ಆಗ ನಡೆದ ಮಾತುಗಳನ್ನು ಅವರ ಆಪ್ತ ಕಾರ್ಯದರ್ಶಿಗಳು—ಮಹಾದೇವ ದೇಸಾಯಿ, ಪ್ಯಾರೇಲಾಲ್ ಇವರುಗಳು ಕರಾರುವಾಕಾಗಿ ಬರೆದಿಡುತ್ತಿದ್ದರು, ಅಥವಾ ಮಹತ್ವಪೂರ್ಣವಾದ ಸಂಭಾಷಣೆಗಳನ್ನು ಸಂಭಾಷಣೆ ನಡೆಸಿದವರೂ ಬರೆದಿಡುತ್ತಿದ್ದರು ಅಥವಾ ಅವರ ಕಾರ್ಯಕರ್ತರೂ ಅವುಗಳನ್ನು ಬರೆದಿಡುತ್ತಿದ್ದರು.

ಜೀವನದ ಮೂಲಭೂತ ತಾತ್ವಿಕ ವಿಚಾರಗಳನ್ನೂ ಅವುಗಳ ವ್ಯಾವಹಾರಿಕ-ವಾಸ್ತವಿಕ ಪರಿಣಾಮಗಳನ್ನೂ ಕುರಿತು, ಗಾಂಧೀಜಿ ತತ್ವಜ್ಞಾನಿಗಳೊಡನೆ, ವಿಚಾರವಂತರೊಡನೆ ಮಾತುಕತೆ ನಡೆಸಬೇಕಾಗುತ್ತಿತ್ತು. ಭಾರತಕ್ಕೆ ಬಂದ ದೇಶವಿದೇಶ ಪ್ರಾಜ್ಞರೊಡನೆ, ಲೇಖಕರೊಡನೆ, ಪತ್ರಕರ್ತರೊಡನೆ, ಸಮಾಜಸೇವಾ ದುರಂಧರರೊಡನೆ, ರಚನಾತ್ಮಕ ಕಾರ್ಯಕರ್ತ

ರೊಡನೆ, ವಿದ್ಯಾರ್ಥಿಗಳೊಡನೆ ಮಹಿಳೆಯರೊಂದಿಗೆ ಸಂಭಾಷಿಸ ಬೇಕಾಗುತ್ತಿತ್ತು.

ಸಂಭಾಷಣೆಯ ವಿಷಯದ ವ್ಯಾಪ್ತಿಗೆ ಮಿತಿಯಿರಲಿಲ್ಲ. ಅದು ದೇವರು, ಧರ್ಮ, ಮೋಕ್ಷ, ಶಿಕ್ಷಣ, ಸ್ವರಾಜ್ಯ, ಸ್ವಾತಂತ್ರ್ಯ ಇತ್ಯಾದಿಗಳಿಂದ ಹಿಡಿದು ಅನೇಕ ಲೌಕಿಕ ವಿಷಯಗಳವರೆಗೆ ಪ್ರಸರಿಸುತ್ತಿತ್ತು.

ಪ್ರಾಜ್ಞ ಮಹನೀಯರೊಡನೆ ಅವರು ನಡೆಸಿದ ಸಂಭಾಷಣೆಗಳಲ್ಲಿ ಫ್ರಾನ್ಸಿನ ತತ್ವಜ್ಞಾನಿ ರೋಮೇ ರೋಲಾ ಅವರೊಡನೆ ನಡೆಸಿದುದು ಬಹಳ ಪ್ರಸಿದ್ಧವಾದುದು. ಲೂಯಿ ಫಿಷರ್, ವಿನ್‌ಸೆಂಟ್ ಷೀನ್ ಮೊದಲಾದ ಲೇಖಕ ರೊಡನೆ ನಡೆಸಿದುದು ಮೌಲಿಕವಾದುದು. ಪತ್ರಿಕಾ ಪ್ರತಿನಿಧಿಗಳಂತೂ—ದೇಶವಿದೇಶಗಳವರು—ಅವರನ್ನು ಬಿಡದೆ ಸಂಭಾಷಣೆಗೆ ಎಳೆಯುತ್ತಿದ್ದರು. ಇಂಥ ಪ್ರಸಂಗಗಳಲ್ಲಿ ಗಾಂಧೀಜಿಯ ಸತ್ಯನಿಷ್ಠೆ, ಅವರ ಹರಿತವಾದ ತರ್ಕ ಸರಣಿ, ತಾಳ್ಮೆ, ವಿನೋದಭಾವ ಎಲ್ಲ ಬೆಳಕಿಗೆ ಬರುತ್ತಿದ್ದವು. ಹೀಗಾಗಿ ಅವರ ಸಂಭಾಷಣೆಗಳು ಎಷ್ಟೋ ಸಂದರ್ಭಗಳಲ್ಲಿ ಮೂಲ ಲೇಖನಗಳಲ್ಲಿ ಅಥವಾ ಹೇಳಿಕೆಗಳಲ್ಲಿ ಕಂಡುಬಂದ ಒಗಟೆಗಳಂಥ ಅಂಶಗಳ ಮೇಲೆ ಬೆಳ ಕನ್ನು ಚೆಲ್ಲುತ್ತಿದ್ದವು. ಆದುದರಿಂದ ಗಾಂಧೀಜಿಯ ಸಂಭಾಷಣೆಗಳು, ಅವು ಗಳ ವೈಖರಿ ವಿಶಿಷ್ಟವಾದುದು.

ರೋಮೇ ರೋಲಾ ಅವರೊಡನೆ ನಡೆಸಿದ ಸಂಭಾಷಣೆಯನ್ನು ಕೆಳಗೆ ಕೊಡಲಾಗಿದೆ. ರೋಲಾ ತತ್ವಜ್ಞಾನಿ ಆಗಿದ್ದುದರ ಜತೆಗೆ ಹೆಸರಾಂತ ಸಾಹಿತಿಯೂ ಆಗಿದ್ದರು. ಗಾಂಧೀಜಿಯನ್ನು ನೋಡದಿದ್ದರೂ ಅವರ ವ್ಯಕ್ತಿ ತ್ವಕ್ಕೆ ಮತ್ತು ತತ್ವ ವಿಚಾರಕ್ಕೆ ಮಾರುಹೋಗಿದ್ದರು. ಈ ಈರ್ವರು ಮಹನೀ ಯರೂ, ಗಾಂಧೀಜಿ-ದುಂಡುಮೇಜಿನ ಪರಿಷತ್ತಿಗೆ ಲಂಡನ್ನಿಗೆ ಹೋಗಿ ಭಾರತಕ್ಕೆ ಹಿಂದಿರುಗುವಾಗ ಸ್ವಿಡ್ಜರ್ಲೆಂಡಿನ ರೋಲಾ ಅವರ 'ಎಲ್ಲೆವಿನ್ಯೂ' ಎಂಬ ಸ್ಥಳದಲ್ಲಿ ಭೇಟಿಯಾಗಿ, ಆತ್ಮೀಯವಾಗಿ ಸಂಭಾಷಿಸಿದರು.

ರೋಲಾ : 'ನೀವು ದೇವರು ಎನ್ನುತ್ತೀರಲ್ಲ ಅದು ಏನು ? ಒಂದು ಆಧ್ಯಾತ್ಮಿಕ ವ್ಯಕ್ತಿಯೆ ಅಥವಾ ಪ್ರಪಂಚವನ್ನು ಆಳುವ ಒಂದು ಶಕ್ತಿಯೆ ?'

ಇದು ಮೂಲಭೂತ ಪ್ರಶ್ನೆ. ಬದುಕಿನ ಮೇಲೆ ಪ್ರಚಂಡ ಪ್ರಭಾವ ಬೀರುವಂಥದು.

ಗಾಂಧೀಜಿ ಉತ್ತರಿಸಿದರು : 'ದೇವರು ವ್ಯಕ್ತಿಯಲ್ಲ. ದೇವರು ಒಂದು ನಿತ್ಯತತ್ವ. ಆದುದರಿಂದಲೇ 'ಸತ್ಯವೇ ದೇವರು' ಎನ್ನುವುದು. ನಾಸ್ತಿಕರಿಗೂ ಸತ್ಯ ಬೇಕು. ಅವರೂ ಸತ್ಯದ ಅಗತ್ಯವಿಲ್ಲ ಎನ್ನರು.'

ರೋಲಾ ಒಂದು ಪ್ರಮುಖ ಪ್ರಶ್ನೆ ಎತ್ತಿದರು.

'ಸತ್ಯವೇ ದೇವರು ಎಂಬುದು ಸರಿ ಎಂದರೆ, ಅದರಲ್ಲಿ ಮುಖ್ಯ ಲಕ್ಷಣವೊಂದು ಇಲ್ಲವಾಗುತ್ತದೆ: ಆನಂದ. ಏಕೆ ಎನ್ನುವಿರೋ? ಆನಂದವಿಲ್ಲದ ದೇವರನ್ನು ನಾನು ಒಪ್ಪುವುದಿಲ್ಲ; ಖಂಡಿತ.'

ಇಲ್ಲಿನ ವಿಚಾರ ವಸ್ತು 'ಕಲೆ ಸತ್ಯವೇ ಆನಂದವೇ' ಎಂಬುದು. ಗಾಂಧೀಜಿಗೆ ಆನಂದವೇ ಪ್ರಧಾನವಲ್ಲ. ಅವರು ಹೀಗೆ ಉತ್ತರವಿತ್ತರು :

"ಕಲೆಗಾಗಿ ಕಲೆ ಎಂಬ ಸೂತ್ರಕ್ಕೆ ನಾನು ವಿರೋಧಿ. ನನಗಂತೂ ಸಮಸ್ತ ಕಲೆಯೂ ಸತ್ಯವನ್ನೇ ಅವಲಂಬಿಸಿರಬೇಕು. ಚೆಲುವಾದ ವಸ್ತುಗಳು ಸತ್ಯವನ್ನು ಪ್ರಕಟಿಸುವ ಬದಲು ಅಸತ್ಯವನ್ನು ತಿಳಿಸುವಂತಿದ್ದರೆ ಆ ಚೆಲುವಿನ ವಸ್ತುಗಳನ್ನು ನಾನು ತ್ಯಜಿಸುತ್ತೇನೆ. ಕಲೆ ಆನಂದದಾಯಕ, ಶುಭಕರ ಎಂಬ ಮಾತು ನನಗೆ ಒಪ್ಪಿಗೆ. ಆದರೆ ನಾನು ಹೇಳಿದ ನಿಯಮದ ಪ್ರಕಾರ ಕಲೆಯಲ್ಲಿ ಸತ್ಯವನ್ನು ಸಾಧಿಸಲು ಹೊರಗಿನ ವಸ್ತುಗಳ ತದ್ವತ್ ಪ್ರತಿಕೃತಿ ಬೇಕು ಎಂದು ನಿರೀಕ್ಷಿಸುವುದಿಲ್ಲ. ಜೀವಂತ ವಸ್ತುಗಳು ಮಾತ್ರವೇ ಜೀವಂತ ಆತ್ಮಕ್ಕೆ ಆನಂದವನ್ನು ಕೊಡಬಲ್ಲವು. ಅವನ್ನು ಉನ್ನತಿಗೊಳಿಸಬಲ್ಲವು."

ಗಾಂಧೀಜಿಯ ವಿಶ್ಲೇಷಣೆಯ ಪ್ರಕಾರ ಆನಂದವೀಯುವ ಕಲೆಗೂ ಸತ್ಯವೇ ಆಧಾರವಾಗಿರಬೇಕು. ಹಿಂದೆ ಒಂದು ಕಡೆ ಸತ್ಯದ ವಿವರಣೆಯನ್ನು ಕೊಡಲಾಗಿದೆ. ಅದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. 'ಸತ್ಯವಿದ್ದೆಡೆ ಆನಂದ, ಜ್ಞಾನ ಎರಡೂ ಇರುತ್ತವೆ,' ಅಂದರೆ ಆನಂದ, ಜ್ಞಾನ ಈ ಎರಡಕ್ಕೂ ಸತ್ಯವೇ ಆಧಾರವಾಗಬೇಕು. 'ಸಚ್ಚಿದಾನಂದ' ಎಂಬಲ್ಲಿ ಸತ್ಯವಿದ್ದರೆ ಮಾತ್ರ ಜ್ಞಾನ, ಆನಂದ ಇವು ಇರಲು ಸಾಧ್ಯ. ಅಸತ್ಯವಿರುವೆಡೆ ಅಜ್ಞಾನ ಮತ್ತು ಆನಂದರಹಿತ ಸ್ಥಿತಿ ಇರುತ್ತದೆ. 'ಅಸತ್-ಸತ್' ಎರಡೂ ಮಿಶ್ರವಾದ ಜಗತ್ತಿನಲ್ಲಿ 'ಅಸತೋಮಾ ಸದ್ಗಮಯ' ಎಂದರೇನೇ ಅಜ್ಞಾನ ಹರಿದು ಜ್ಞಾನ ಪ್ರಾಪ್ತಿಯಾದೀತು; ದುಃಖ ಕಳೆದು ಆನಂದ ಪ್ರಾಪ್ತಿಯಾದೀತು.

ಇದೇ ವಿಷಯವನ್ನು ಇನ್ನೊಮ್ಮೆ ಶ್ರೀ ಜಿ. ರಾಮಚಂದ್ರನ್ ಎನ್ನುವವರೊಡನೆ ಚರ್ಚಿಸುತ್ತಾ ಹೀಗೆ ವಿವರಿಸಿದ್ದಾರೆ ಗಾಂಧೀಜಿ: "ಎಲ್ಲ ವಸ್ತುಗಳಿಗೂ ಎರಡು ಅಂಗಗಳಿವೆ; ಅಂತರಂಗ-ಬಹಿರಂಗ. ಇವೆರಡರಲ್ಲಿ ನಾವು ಯಾವುದರ ಮೇಲೆ ಕಾಲೂರಿ ನಿಲ್ಲುತ್ತೇವೆ ಎಂಬುದು ಮುಖ್ಯ. ಯಾವುದರಲ್ಲಿ ಅಭಿರುಚಿ ಎಂಬುದು ಪ್ರಶ್ನೆ. ಅಂತರಂಗ ವಿಕಾಸಕ್ಕೆ ನೆರವಾಗದಿದ್ದರೆ ಬಹಿರಂಗವು ವ್ಯರ್ಥ; ಅದಕ್ಕೆ ಬೆಲೆಯಿಲ್ಲ. ಸತ್ಯವಾದ ಕಲೆ ಅಂತರಂಗದಿಂದ ಒಡಮೂಡಿ ಬಂದುದು; ವಿಕಾಸದ ಆವಿರ್ಭಾವ. ಒಳಗಿರುವ ಬೆಳಕನ್ನು ಎಷ್ಟೆಷ್ಟು ದೂರ ಹೊರಗೆ ಹರಿಸಬಲ್ಲೆವೋ ಅಷ್ಟಷ್ಟು ಬೆಲೆ ಹೊರಗಿನ ರೂಪಕ್ಕೆ. ಮಾನವನ ಅಂತರಂಗದ ಪ್ರತಿಬಿಂಬವಾದ ಪ್ರಮಾಣದಲ್ಲಿಯೇ ಬಹಿರಂಗಕ್ಕೆ ಬೆಲೆ.'

ಇದನ್ನು ಮುಂದುವರಿಸಿ ಹೀಗೆ ವಿವರಿಸಿದರು:

"ಜೀವಿಗೆ ತನ್ನ ಅಂತರಾತ್ಮ ದರ್ಶನ ಮಾಡಿಕೊಡದ ಕಲೆ ಕಲೆಯಲ್ಲ. ನನ್ನ ಮಟ್ಟಿಗೆ ಕಲಾ ಸಾಮಗ್ರಿ ಎನಿಸಿಕೊಂಡಿರುವ ಹೊರಗಣ ರೂಪ ವಸ್ತುಗಳ ಸಹಾಯ ನನ್ನ ಆತ್ಮ ಸಾಧನೆಗೆ ಆವಶ್ಯಕವಿಲ್ಲ. ನನ್ನ ಬಳಿ ಕಲಾಕೃತಿಗಳಾಗಲೀ ಕಲಾವಸ್ತುಗಳಾಗಲೀ ಕಾಣದಿದ್ದರೂ ನನ್ನ ಜೀವನವು ಕಲಾಪರಿಪೂರ್ಣವೆಂದು ನಾನು ಹೇಳುತ್ತೇನೆ. ನನ್ನ ಗುಡಿಸಲ ಗೋಡೆಗಳು ಶೂನ್ಯವಾಗಿರಬಹುದು. ನೆತ್ತಿಯ ಮೇಲೆ ನೀಲಾಗಿ ಕವಿದಿರುವ, ಅನಂತ ಸೌಂದರ್ಯದಿಂದ ತುಂಬಿದ ತಾರಾಮಂಡಲವನ್ನು ನೋಡಬೇಕೆಂದು ಗುಡಿಸಿಲಿನ ಚಪ್ಪರವನ್ನೂ ನಾನು ತೆಗೆದುಹಾಕೇನು. ಮೇಲೆ ನೋಡಿದರೆ ಕಾಣುವ ನಕ್ಷತ್ರ, ಗ್ರಹಗಳ ಅಲೌಕಿಕ ಲೀಲೆಯನ್ನೂ ಅವುಗಳ ಆನಂದವನ್ನೂ ಆ ರಮಣೀಯ ದೃಶ್ಯಗಳನ್ನೂ ಯಾವ ಮಾನವ ಕಲಾಕೃತಿ ಕೊಡಬಲ್ಲುದು? ಹೀಗೆಂದರೆ ಸಾಮಾನ್ಯ ಕಲಾ ವಸ್ತುಗಳನ್ನೆಲ್ಲ ನಾನು ಬಹಿಷ್ಕರಿಸಿದೇನೆಂದು ತಿಳಿಯಬಾರದು. ನಿಸರ್ಗ ಸೌಂದರ್ಯದ ಚಿರಂತನ ಪ್ರತೀಕಗಳೆದಿರು ಇವು ಎಷ್ಟು ನಿಸ್ಸಾರವೆಂಬುದನ್ನು ತೋರಿಸಿದೆ; ಅಷ್ಟೆ. ಮಾನವ ಕಲಾಕೃತಿಗೆ ಬೆಲೆ ಸಿಕ್ಕಬೇಕಾದರೆ, ಅದು ಆತ್ಮವಿಕಾಸಕ್ಕೆ ಸಹಾಯವಾಗಬೇಕು."

ರಾಮಚಂದ್ರನ್ ಮುಂದೆ ಹೀಗೆ ಪ್ರಶ್ನಿಸಿದರು: "ಆದರೆ ಬಹಿರಂಗ ಸ್ವರೂಪದಲ್ಲಿ ಸತ್ಯವನ್ನು ಕಂಡಿದೇವೆ; ಸತ್ಯದರ್ಶನ ಬಾಹ್ಯಾಕಾರದಲ್ಲಿದೆ ಎನ್ನುತ್ತಾರಲ್ಲ ಕಲಾವಿದರು. ಹಾಗೆ ಆ ದಾರಿಯಲ್ಲಿ ಸತ್ಯದರ್ಶನವಿಲ್ಲವೆ?"

ಗಾಂಧೀಜಿ ಹೀಗೆ ಉತ್ತರಿಸಿದರು: "ಇದನ್ನು ನಾನು ತಲೆಕೆಳಗು ಮಾಡಿದೇನೆ. ನನಗೆ ಸತ್ಯವೇ ಸೌಂದರ್ಯ; ಸತ್ಯದಲ್ಲಿಯೇ ಸೌಂದರ್ಯ. ಸತ್ಯದ ಭಾವನೆಯೇ ಅಲ್ಲ; ಸತ್ಯದ ಬೆಳಕನ್ನು ಕನ್ನಡಿಸುವ ಎಲ್ಲ ವಸ್ತುಗಳೂ ಚೆಲುವೇ. ನಿಜವಾದ ಚಿತ್ರ, ನಿಜವಾದ ರೂಪ, ನಿಜನಾದ ಸಂಗೀತ ಎಲ್ಲವೂ ತುಂಬ ಚೆನ್ನ. ಸಾಧಾರಣ ಮನುಷ್ಯನಿಗೆ ಸತ್ಯದಲ್ಲಿ ಚೆಲುವು ಕಾಣಿಸದು. ಅವನಿಗೆ ಸತ್ಯ ಭೀಕರವಾಗಿ ಕಾಣುತ್ತದೆ. ಅದರ ಚೆಲುವನ್ನು ಅರಿಯಲಾರದೆ ಬರಿಯ ಭೀಷಣತೆಯನ್ನು ಕಂಡು ಓಡಿಹೋಗುತ್ತಾನೆ. ಅವನ ಪಾಲಿಗೆ ಆ ಸೌಂದರ್ಯ ಇಲ್ಲವಾಗುತ್ತದೆ. ಸತ್ಯದಲ್ಲಿ ಸೌಂದರ್ಯವನ್ನು ಕಾಣಲು ಎಂದು ಮನುಷ್ಯ ಸಮರ್ಥನಾಗುವನೋ ಅಂದು ಅವನು ಕಲೆಯನ್ನು ಕಾಣಲರಿತ, ಕಲಾದರ್ಶನ ಮಾಡಲರಿತ ರಸಿಕನಾದ. ಆಗಲೇ ನಿಜವಾದ ಕಲೆ."

ಆಗ ರಾಮಚಂದ್ರನ್, "ಸತ್ಯವನ್ನೂ ಸೌಂದರ್ಯವನ್ನೂ ಬಿಡಿಸಿ ಬೇರೆ ಮಾಡಿದರಾಗದೆ?" ಎಂದು ಪ್ರಶ್ನಿಸಿದರು.

"ಜನ ಯಾವುದನ್ನು ಸೌಂದರ್ಯವೆನ್ನುತ್ತಾರೋ ಅದೇ ಸೌಂದರ್ಯ ಎಂದರೆ, ಸತ್ಯಸೌಂದರ್ಯಗಳೆರಡೂ ಗಾವುದ ಗಾವುದ ದೂರ. ಅಂದವಾದ ಕಣ್ಣು, ಮೂಗು ಉಳ್ಳ ಹೆಣ್ಣು ಚೆಲುವೆಯೆನ್ನಲೇ ಬೇಕು ಎಂದರೂ, ಅವಳ ಗುಣ ಕೆಟ್ಟದಾಗಿದ್ದರೂ ಅವಳು ಚಲುವೆಯೇನು? . . . . ಹೊರಗೆ ಹೇಗಾದರೂ ಇರಲಿ. ಅಂತರಂಗದ ಸತ್ಯ ಮಿಂಚುತ್ತಿರುವ ಮುಖವೇ ನಿಜವಾದ ಕಲಾವಿದನಿಗೆ ಚೆಲುವು. ಹೀಗೆಂದರೇನು? ಸತ್ಯವಿಲ್ಲದ ಸೌಂದರ್ಯವಿಲ್ಲ. ಅಷ್ಟೇ ಅಲ್ಲ; ಸ್ವಲ್ಪವೂ ಅಂದವಿಲ್ಲದ ವಸ್ತುವಿನಲ್ಲಿಯೂ ಸತ್ಯ ಪ್ರಕಟವಾಗಬಹುದು." ಇದನ್ನು ಸ್ಪಷ್ಟಪಡಿಸಲು ಅವರು ಬಾಹ್ಯರೂಪದಲ್ಲಿ ಅತ್ಯಂತ ಕುರೂಪಿಯಾಗಿದ್ದ ಸಾಕ್ರೆಟೀಸನ ಅಂತರಂಗದ ಸತ್ಯದ ಚೆಲುವನ್ನು ಕಾಣಲು ಕಲಾವಿದ ಫೀಡಿಯಸ್ಸನಿಗೆ ಸಾಧ್ಯವಾಯಿತೆಂದು ತಿಳಿಸಿದರು.

ರಾಮಚಂದ್ರನ್ ಮತ್ತೊಂದು ಪ್ರಶ್ನೆ ಹಾಕಿದರು: "ಪ್ರಪಂಚದ ಉತ್ತಮ ಕಲಾಕೃತಿಗಳಲ್ಲನೇಕ ಹೊಲಸು ಬಾಳು ಬಾಳಿದ ಜನರಿಂದ ರಚಿತ ವಾಗಿದೆಯಲ್ಲವೆ?"

ಗಾಂಧೀಜಿ ಉತ್ತರವಿತ್ತರು: "ಅದರರ್ಥ ಹೀಗೆ. ಬಾಳಿನಲ್ಲಿ ಸತ್ಯ-ಅಸತ್ಯಗಳೆರಡೂ ಕಲಬೆರಕೆಯಾಗಿವೆ. ಎರಡೂ ಒಟ್ಟಿಗೆ ಇರುತ್ತವೆ. ಕಲಾವಿದರಲ್ಲೂ ಈ ಎರಡೂ ಬುದ್ಧಿಗಳಿವೆ, ಎರಡೂ ದೃಷ್ಟಿಯಿವೆ. ಅವರ ನೋಟ ಸತ್ಯದಲ್ಲಿ ಸುಳಿದರೆ ಅದು ರಮಣೀಯವಾಗಿ ಕಾವ್ಯ, ಕಲೆ ಆಗುತ್ತದೆ. ಇಂಥ ರಸನಿಮಿಷಗಳು ಬಾಳಿನಲ್ಲಿ ಅಪರೂಪವಾದರೆ ಕಲೆಯೂ ಅಷ್ಟೆ."

ಕಡೆಗೊಂದು ಪ್ರಶ್ನೆ ಹಾಕಿದರು ರಾಮಚಂದ್ರನ್. "ಸತ್ಯವಾದುದು, ಒಳ್ಳೆಯದು ಮಾತ್ರವೇ ಚೆಂದವಾದರೆ, ನೀತಿಗೆ ಸಂಬಂಧವಿಲ್ಲದ ವಿಷಯ ಹೇಗೆ? ಸಂಧ್ಯಾರಾಗ ಸತ್ಯವಲ್ಲವೇ? ಚಿಕ್ಕೆಗಳ ನಡವೆ ಹೊಳೆವ ಅರ್ಧ ಚಂದ್ರನಲ್ಲಿ ಸತ್ಯವಿಲ್ಲವೇ?"

ಇದಕ್ಕೆ ಗಾಂಧೀಜಿಯ ಉತ್ತರ ಮನನೀಯ: 'ಏಕಿಲ್ಲ? ಈ ನೋಟಗಳೆಲ್ಲ ಸೃಷ್ಟಿಕರ್ತನ ಅಗಾಧ ಲೀಲೆಯ ಗುರುತು. ಇವನ್ನು ನೋಡಿದಾಗ ಆ ಲೀಲೆಯ ನೆನಪಾದರೆ ಇವು ಚೆಲುವು. ಇಲ್ಲದಿದ್ದರೆ ಆ ಚಲುವೆಲ್ಲಿಂದ ಬರಬೇಕು? ಬೆಳದಿಂಗಳ ನೋಟವನ್ನಾಗಲೀ, ಮುಳುಗುವ ರವಿಯ ಅಂದವನ್ನಾಗಲೀ ಕಂಡು ಆನಂದಿಸುವಾಗ ಧ್ಯಾನದಲ್ಲಿ ಮುಳುಗಿ ನನ್ನ ಮನಸ್ಸು ತುಂಬಿ ಹೋಗುತ್ತದೆ. ಆತ್ಮ ಅರಳುತ್ತದೆ. ಸರ್ವ ಸೃಷ್ಟಿಯಲ್ಲಿ ಆತನನ್ನೂ ಆತನ ಕೈವಾಡವನ್ನೂ ಗುರುತಿಸಿಕೊಳ್ಳುತ್ತೇನೆ. ಎಲ್ಲವೂ ಆತನ ದಯೆ. ಆತನ ನೆನಪೇ ಕೊಡದೆ ಹೋದರೆ, ಸೂರ್ಯೋದಯ ಸೂರ್ಯಾಸ್ತಗಳಿಂದ ಆಗಬೇಕಾದುದೇನು? ಅವೂ ಒಂದು ಆತಂಕವೇ, ಆತ್ಮೋನ್ನತಿಗೆ ಅಡ್ಡವಾದುದೆಲ್ಲ ಬರಿಯ ಬಯಲು, ಭ್ರಾಂತಿ, ಒಂದು ಜಾಲ; ನಮ್ಮ ಮೈ ಇದ್ದ ಹಾಗೆ. ಅನೇಕ ಸಲ ನಮ್ಮ ಮೈಯೆ ನಮ್ಮ ಮುಕ್ತಿಗೆ ಅಡ್ಡಿ.'

ಈ ದೀರ್ಘ ಸಂಭಾಷಣೆಯಲ್ಲಿಯೂ, ರೋಮೇ ರೋಲಾ ಅವರೊಡನೆ ನಡೆಸಿದ ಸಂಭಾಷಣೆಯಲ್ಲಿಯೂ ಕಲೆ, ಸೌಂದರ್ಯ, ಆನಂದ ಇವುಗಳ ಬಗೆಗೆ ಗಾಂಧೀಜಿ ಮಾಡಿದ ಮೀಮಾಂಸೆ ಕಂಡುಬರುತ್ತದೆ; ಇದೇ ವಿಚಾರ ಸರಣಿ ಸಂಗೀತ, ಸಾಹಿತ್ಯ ಇವುಗಳಿಗೂ ಅನ್ವಯಿಸುತ್ತದೆ. ಅವರಿಗೆ ಎಲ್ಲಕ್ಕೂ

ಸತ್ಯವೇ ಆಧಾರವಾಗಬೇಕು. ಸ್ಪಷ್ಟವಾದ ವಿಚಾರ ಮಂಡನೆ ಇದರಲ್ಲಿದೆ. ಈ ಪ್ರಶ್ನೋತ್ತರದಿಂದ ಸತ್ಯ ಹೊಮ್ಮಿಬರಲು ಸಾಧ್ಯವಾಗಿದೆ. ಸ್ಫುಟವಾದ ಅಭಿಪ್ರಾಯ ಮೂಡಿಬರಲು ಅವಕಾಶವಾಗಿದೆ.

ಗಾಂಧೀಜಿಯ ಬಳಿಗೆ ಸಂಭಾಷಣೆಗೆ ಬಂದವರು ಕೇಳುತ್ತಿದ್ದ ಪ್ರಶ್ನೆಗಳ ವಿಷಯ ಅನಂತಮುಖ. ಅವು ಅವರ ಜೀವನ, ವ್ಯಕ್ತಿತ್ವ ಮತ್ತು ಜಗತ್ತಿನ ಎಲ್ಲ ಜೀವಂತ ಪ್ರಶ್ನೆಗಳ ಬಗೆಗೆ ಪ್ರತಿಕ್ರಿಯೆ ತೋರುತ್ತಿದ್ದವು. ಸಂಭಾಷಣೆಗೆ ಬಂದವರು ಅವರನ್ನು ಸತ್ಯ-ಅಹಿಂಸೆಗಳ ಬಗೆಗೆ ಪ್ರಶ್ನಿಸುತ್ತಿದ್ದಂತೆಯೇ ಇತರ ವಿಷಯಗಳ ಬಗೆಗೂ ಪ್ರಶ್ನಿಸುತ್ತಿದ್ದುದುಂಟು. ಅವು ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ—ಹೀಗೆ ಎಲ್ಲ ವಿಷಯಗಳಿಗೂ ಸಂಬಂಧಿಸಿರುತ್ತಿದ್ದವು. ಲೂಯಿ ಫಿಷರ್ ಜತೆಗೆ ಅವರು ನಡೆಸಿದ ಸಂಭಾಷಣೆಗಳು ಸಮಾಜವಾದ, ಸಾಮ್ಯವಾದ, ಯಂತ್ರ ನಾಗರಿಕತೆ ಇವುಗಳ ಬಗೆಗೆ ವಿಶೇಷ ಬೆಳಕನ್ನು ಚೆಲ್ಲುತ್ತವೆ. ಹೊರದೇಶಗಳಿಂದ ಬಂದ ಪಾದರಿಗಳ, ಧರ್ಮಗುರುಗಳ ಜತೆ ನಡೆದಾಗ ಅದು ಅನಿವಾರ್ಯವಾಗಿಯೇ ಧರ್ಮ, ಹಿಂದೂ ಧರ್ಮ, ಸರ್ವ ಧರ್ಮ ಸಮಭಾವ ಇವುಗಳಿಗೆ ಸಂಬಂಧಿಸಿರುತ್ತಿತ್ತು. ಅಮೇರಿಕಾದ ಸಮಾಜ ಕಾರ್ಯಕರ್ತೆ ಮಿಸ್ ಮ್ಯೂರಿಯಲ್ ಲೆಸ್ಟರ್‌ವೊಂದಿಗೆ ಅವರು ನಡೆಸಿದ ಸಂಭಾಷಣೆ, ಮಹಿಳೆಯರ ವಿಮೋಚನೆಯ ಬಗೆಗೂ, ಸಂತಾನ ನಿಯಮನದ ಬಗೆಗೂ ಆಗಿದ್ದಿತು. ಆಕೆ ಕೇಳಿದಳು ಬೃಹದ್ ಸಂಖ್ಯೆಯಲ್ಲಿ ಬೆಳೆಯುತ್ತಿರುವ ಸಂತಾನದ ಮಹಾ ಪೀಡೆಯ ಬಗೆಗೆ ರಾಮಬಾಣದಂಥ ಔಷಧವನ್ನು. ಗಾಂಧೀಜಿ ಉತ್ತರವಿತ್ತರು : “ಸಂತಾನ ನಿರೋಧದ ಹಾದಿ ತುಳಿಯಲೆ ಎಂದು ನನ್ನನ್ನು ಕೇಳಿದ ಹೆಣ್ಣಿಗೆ ‘ಅಸ್ತು’ ಎನ್ನಲಾರೆ ; ಆಶೀರ್ವಾದ ಕೊಡಲಾರೆ ; ನನ್ನ ಮದ್ದು ನಿನಗೆ ಹಿಡಿಸಲಾರದು ; ಇನ್ನಾರನ್ನಾದರೂ ಮದ್ದು ಕೇಳು ಎಂದೇನು.” ಆತ್ಮ ನಿಗ್ರಹದ ತತ್ವವೊಂದೇ ತಮ್ಮ ದಾರಿ ಎಂದು ಹೇಳಿದರು.

ಮಾತು ಮಾತು ಬೆಳೆಯಿತು. ಪ್ರೇಮದ ವಿಷಯ ಬಂದಿತು. ಅದು ‘ದೈವೀಶಕ್ತಿ’ ಎಂದು ಆಕೆಯ ನಂಬಿಕೆ. ಆಕೆ ಹೇಳಿದಳು : “ಗಂಡು ಹೆಣ್ಣಿನ ಪ್ರೇಮ ಐಕ್ಯಾನುಸಂಧಾನ ; ಗಂಡ ಹೆಂಡಿರ ಸಂಬಂಧದ ಪೂರ್ಣಯೋಗ ; ಅದರಿಂದ ಪರಸ್ಪರ ಸ್ವರೂಪ ಜ್ಞಾನವಾಗುತ್ತದೆ, ಆಧ್ಯಾತ್ಮ ಸಮರಸ ಬೆಳೆಯುತ್ತದೆ.”

ಇದಕ್ಕೆ ಗಾಂಧೀಜಿ ಉತ್ತರವಿತ್ತರು : ತಾವು ಬೆಳೆಸಿದ ಮೈಯು ಸಲಿಗೆಯ ಫಲ ಉಣ್ಣಲು ಸಿದ್ಧರಲ್ಲದವರಿಬ್ಬರು ಕಲೆತರೆ ಅದು ಪ್ರೇಮವಲ್ಲ, ಕಾಮ. ಶುದ್ಧ ಪ್ರೇಮವಾದರೆ ಮೃಗಮದವ ಮೆಟ್ಟಿ, ಇಂದ್ರಿಯದಾಸೆ ಇಂಗಿಸಿ, ಯೋಗ್ಯದಾರಿ ಹಿಡಿದೀತು. ನಮಗೆ ಚಿತ್ತವೃತ್ತಿ ನಿರೋಧದ ಅಭ್ಯಾಸವಾಗಿಲ್ಲ. ಮಕ್ಕಳು ಬೇಡ, ಮೈಬಳಕೆಯಿರಲಿ ಎಂದರೆ, ಅದಕ್ಕೇನು ಅರ್ಥ? ಬರೀ ಕಾಮವಾಸನೆ ತಾನೆ? ಮಕ್ಕಳು ಬೇಡವೆನಿಸಿದರೆ ಮೈಬಳಕೆ ನಿಲ್ಲಿಸಬೇಕು. ಅಷ್ಟೆ. ಕಾಮದ ಚಪಲಕ್ಕೆ ಕೈಯೊಡ್ಡಿದೊಡನೇ ಪ್ರೇಮ ಕಾಮವಾಗುತ್ತದೆ; ಅದೇ ಗಳಿಗೆಯಲ್ಲೇ. ಅನ್ನದ ಮಾತೂ ಅಷ್ಟೆ. ಬಾಯ ರುಚಿಗಾಗಿ ತಿಂದರೆ, ಅದೂ ಕಾಮವೇ. ಹಸಿವು ತಣಿಸಲು ಚಾಕಲೇಟ್ ತಿನ್ನುತ್ತಾರೆಯೆ? ರುಚಿಗೆಂದು ತಿಂದು, ಮದ್ದಿಗೆಂದು ವೈದ್ಯನ ಬಳಿಗೆ ಓಡುತ್ತೇವೆ. ಹೆಂಡ ಕುಡಿದು ತಲೆ ಮಂಕಾಗಿದೆ. ಮದ್ದು ಕೊಡಿರೆಂದರೆ ವೈದ್ಯ ಕೊಟ್ಟಾನು; ಮಂಕು ಇಳಿಸುವ ಮದ್ದು. ಮದವೇಕೆ? ಈ ಮದ್ದೇಕೆ? ಚಾಕಲೇಟ್ ತಿನ್ನದೆ, ಹೆಂಡ ಕುಡಿಯದೆ ಇರುವುದು ಸಾಲದೆ?"

ಈ ದೃಷ್ಟಾಂತ ಆಕೆಗೆ ಒಪ್ಪಿಗೆಯಾಗಲಿಲ್ಲ. ಮಕ್ಕಳು ಬೇಡದ ಮೈಸಲಿಗೆಯಾಸೆ ಆತ್ಮದ ಗುಣ, ಜೀವದ ಆಸೆ, ಎಂದು ಅವಳ ಅಭಿಪ್ರಾಯವಾಗಿತ್ತು. ಆಕೆ ಹೇಳಿದಳು : "ಈ ಮೈಯ ಹುಚ್ಚು ಆತ್ಮದ ಹಸಿವು. ಫಲ ಮುಖ್ಯವಲ್ಲ ಇದರಲ್ಲಿ. ಅವರ ರೀತಿ ಮುಖ್ಯ. ಫಲವಿರಲಿ, ಬಿಡಲಿ, ಸಲಿಗೆಯ ರೀತಿಯೇನೋ ಇದ್ದೇಯಿದೆ. ಬಸಿರ ಬಯಕೆ ದಂಪತಿಗಳಿಗೆ ಇಲ್ಲದೆಯೇ ಅಕಸ್ಮಾತ್ತಾಗಿ ಹುಟ್ಟಿದ ಮಕ್ಕಳೇ ಬಹಳ; ಯಾರಿಗೆ ಗೊತ್ತಿಲ್ಲ ಇದು. ಮಕ್ಕಳು ಬೇಕೆಂದು ಮೈಬಳಸುವ ಜನ ಬಹು ಅಪರೂಪ. ಅಲ್ಲವೇ ನೀವೇ ಹೇಳಿ. ಒಬ್ಬರಲ್ಲೊಬ್ಬರು ಅನುರಕ್ತರಾದವರು ಜೊತೆಗೂಡಿದ್ದರೂ ಮಗು ಬೇಕೆನಿಸಿದಾಗ ಮಾತ್ರ ಎಂದರೆ, ಎರಡು ವರ್ಷಕ್ಕೊಮ್ಮೆ ಮಿಥುನಗೂಡಬೇಕೆಂದರೆ ಸಾಧ್ಯವೇ ಹೇಳಿ?" ಮುಂದುವರಿಸಿ ಹೇಳಿದಳು : "ಮಕ್ಕಳಿಗಾಗಿ ಮಿಥುನ ಬೆರೆತರೆ ಪ್ರೇಮ, ಮನಸ್ತೃಪ್ತಿಗಾದರೆ ಕಾಮ; ಇದು ಹೇಗಾದೀತು? ಎರಡೂ ಒಂದೇ ಅಲ್ಲವೆ?"

ಇದನ್ನು ಒಪ್ಪಿ ಗಾಂಧೀಜಿ ಹೀಗೆ ಹೇಳಿದರು : "ಅದು ಇದು ಎನ್ನಲೇಕೆ? ಎಲ್ಲ ಮೈಸಲಿಗೆಯೂ 'ಕಾಮ' ಎಂದರು. ತಮ್ಮ ಜೀವನದ ನಿದರ್ಶನ

ವನ್ನೇ ಕೊಟ್ಟು, 'ಕಾಮದ ಬಾಳನ್ನು ಸುಟ್ಟ ದಿನವೇ ನಮ್ಮ ಗೆಳೆತನ (ದಂಪತಿಗಳದು) ಆಧ್ಯಾತ್ಮ ಸಂಬಂಧವಾಯಿತು. ಕಾಮ ಸತ್ತು ಪ್ರೇಮ ಪಟ್ಟವೇರಿತು." ಎಂದರು. ಇದೂ ಆಕೆಗೆ ಒಪ್ಪಿಗೆಯಾಗಲಿಲ್ಲ; ಪ್ರಶ್ನಿಸಿದಳು: "ಅಲ್ಲ ಇಡಿಯ ಬದುಕಿನಲ್ಲಿ ಮೂರೋ ನಾಲ್ಕೋ ಸಲ ಬೆರೆತರೆ ಸಾಕೆ? ಇಷ್ಟೇಯೇ" ಎಂದು.

ಗಾಂಧೀಜಿ ಹೇಳಿದರು: "ಮೂರು ನಾಲ್ಕು ಮಕ್ಕಳಾದ ಮೇಲೆ ಸಂತಾನ ಸಾಕು.... ನಾಲ್ಕು ಮಕ್ಕಳೆಂದರೆ ಗಂಡ ಹೆಂಡರಿಗೆ ಬೇಕಾದಷ್ಟು ಕಾಮದಾಟವಾಯಿತು. ಇನ್ನಾದರೂ ಅವರ ಪ್ರೇಮ, ಅನುರಾಗ, ಮೇಲ್ಮಟ್ಟಕ್ಕೆ ಏರಬಾರದೇ?.... ಸಂತಾನ ನಿರೋಧ ಕಲಿಸಿದರೆ, ಅದಕ್ಕೆ ಆಳಾಗುತ್ತಾರೆ ಜನ. ಸಂತಾನ ನಿರೋಧ ವಿದ್ಯೆ ಕಲಿಸಿಕೊಟ್ಟು, 'ಜೋಕೆ, ಈ ಗೆರೆ ದಾಟಿ ಹೋಗಬೇಡಿ' ಎಂದು ಹೇಳುವಿರಾ? ಕುಡಿತವನ್ನು ಕಲಿಸಿ, ಮಿತವಾಗಿ ಕುಡಿಯಿರಿ ಎನ್ನುತ್ತೀರಾ? ಅದು ಸಾಧ್ಯವೇ? ಈ ಮಿಥ್ಯಾಚಾರಿಗಳನ್ನು ನಾನು ಬಲ್ಲೆ."

ಹೀಗೆ ಸಂಪೂರ್ಣ ಸಂಯಮದ ಹಾದಿ ಆಕೆಗೆ ರುಚಿಸಲಿಲ್ಲ. ಇದನ್ನು ಗಾಂಧೀಜಿ ಗಮನಿಸಿದರು. ಹೆಣ್ಣು ಮಕ್ಕಳ ಸಮಸ್ಯೆಗಳ ವಿಷಯದಲ್ಲಿ ಆಕೆಗಿದ್ದ ಕಳಕಳಿಯ ಉತ್ಸಾಹವನ್ನು ಅವರು ಶ್ಲಾಘಿಸಿದರೂ ಆಕೆಯ ಹಾದಿಯನ್ನು ಒಪ್ಪಲಿಲ್ಲ. ಇನ್ನೇನು ಅವರ ದಾರಿ ಅವರದು, ಇವರ ದಾರಿ ಇವರದು! ಇದು ಗಾಂಧೀಜಿಗೆ ಸರಿ ಎನಿಸಲಿಲ್ಲ. ಪ್ರತಿಪಕ್ಷವನ್ನು ಸೋಲಿಸಿ, ತಾವು ಗೆದ್ದೆವೆಂದು ವಿಜೃಂಭಿಸುವ ಸ್ವಭಾವವಲ್ಲ ಅವರದು. ವಿರೋಧದಲ್ಲಿಯೂ ಸಾಮರಸ್ಯ ಹುಡುಕುವ ವಿಶಾಲ ಮನಸ್ಸು ಅವರದು. ಇಬ್ಬರಿಗೂ ಒಪ್ಪಿಗೆಯಾದ ವಿಧಾನವನ್ನು ಸೂಚಿಸಿದರು. "ಗರ್ಭಪ್ರಸಾದ ಕಾಲವನ್ನು ವರ್ಜ್ಯಮಾಡಿ, 'ಕ್ಷೇಮಕಾಲ' ರತಿಯ ಪದ್ಧತಿ ಬರಲಿ. ತಿಂಗಳಿಗೆ ಹತ್ತು ದಿನ ಕ್ಷೇಮಕಾಲ. ಉಳಿದ ಇಪ್ಪತ್ತು ದಿನ ವರ್ಜ್ಯ." ಇದು ಅವರ ಸತ್ಯಾನ್ವೇಷಣೆಯ ದೃಷ್ಟಿ. ಮುಗಿಲ ಮಲ್ಲಿಗೆಗೆ ಕೈಚಾಚಿದರೂ ಪೃಥ್ವಿಯ ಮೇಲೆ ಸ್ಥಿರವಾದ, ವಾಸ್ತವಿಕ ನಿಲುವು. ಅವರೇ ಒಮ್ಮೆ ಹೇಳಿಕೊಂಡಂತೆ—'I am of the earth earthy.'

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಇಂಥ ಸಂಭಾಷಣೆಗಳು ಎಷ್ಟೋ ಬರುತ್ತವೆ. ಒಮ್ಮೆ ಗಾಂಧೀಜಿ ನಿರೀಶ್ವರ ವಾದಿಯೊಬ್ಬರೊಡನೆ ಸಂಭಾಷಣೆ ನಡೆಸಬೇಕಾದ ಪ್ರಸಂಗ ಬಂದಿತು. ಅವರಿಗೆ ಸತ್ಯರೂಪೀ ಈಶ್ವರ ನಲ್ಲಿ ಜೀವಂತ ನಂಬಿಕೆ; ಅವರ ಈಶ್ವರ ಭಕ್ತಿಯಲ್ಲಿ ನಿರೀಶ್ವರವಾದಿಗೂ ಸ್ಥಾನವಿತ್ತು.

'ಗೋರಾ'*—(ಗೋಪರಾಜು ರಾಮಚಂದ್ರರಾವ್, ಆಂಧ್ರ ದೇಶ ದವರು; ಅವರು ಒಬ್ಬ ನಿಷ್ಠಾವಂತ ಹರಿಜನ ಸೇವಕ, ಸಮಾಜ ಸೇವಕ)—ಇವರು ಮೂರು ಸಲ ಸೇವಾಗ್ರಾಮಕ್ಕೆ ಹೋಗಿ ಗಾಂಧೀಜಿಯೊಡನೆ ಈಶ್ವರ ಅಸ್ತಿತ್ವ ಕುರಿತು ಸಂಭಾಷಣೆ ನಡೆಸಿದರು. ೧೯೩೦ರಷ್ಟು ಹಿಂದೆಯೇ ಇಬ್ಬ ರಿಗೂ ಪತ್ರ ಮುಖೇನ ಸಂಪರ್ಕವುಂಟಾಗಿತ್ತು. ಗೋರಾ ಎರಡು ವಾಕ್ಯಗಳ ಒಂದು ಪತ್ರ ಬರೆದು 'ನೀವು ದೇವರು ಎಂಬ ಶಬ್ದವನ್ನು ಉಪಯೋಗಿಸು ತ್ತೀರಿ. ಇದರ ಅರ್ಥವೇನು ಮತ್ತು ಆ ಅರ್ಥ ಜೀವನಾನುಷ್ಠಾನದಲ್ಲಿ ಎಷ್ಟು ಹೊಂದಿಕೆಯಾಗಿದೆ ಎಂಬುದನ್ನು ನಾನು ತಿಳಿಯಬಹುದೇ?' ಎಂದು ಕೇಳಿ ದರು. ಇದಕ್ಕೆ ಗಾಂಧೀಜಿ ಒಂದೇ ಒಂದು ಸಾಲಿನ ಉತ್ತರವಿತ್ತರು: 'ದೇವರು ಮಾನವನ ಅರಿವಿಗೆ ಅತೀತನಾದವನು.' ೧೯೪೪ರಲ್ಲಿ ಇಬ್ಬರಿಗೂ ಪ್ರಥಮ ಭೇಟಿಯಾಯಿತು; ಗಾಂಧೀಜಿ ಅವರನ್ನು ದೃಷ್ಟಿಸಿದ ಕೂಡಲೇ ನಗುತ್ತಾ—'ನಿರೀಶ್ವರವಾದಿಯೊಡನೆ ನಾನೇನು ಸಂಭಾಷಿಸುವುದಿದೆ?' ಎಂದರು.

ಗೋರಾ ಹೇಳಿದರು—"ಬಾಪೂಜೀ, ನಾನು 'ದೇವರಿಲ್ಲದ ವ್ಯಕ್ತಿಯಲ್ಲ' (not a Godless man), ನಿರೀಶ್ವರವಾದಿ, ಅದೈವವಾದಿ (Atheist)."

"ಏನು ವ್ಯತ್ಯಾಸ ಎರಡಕ್ಕೂ" ಎಂದರು ಬಾಪೂ.

"ದೇವರಿಲ್ಲ ಎನ್ನುವುದು ನಿಷೇಧಾತ್ಮಕ. ಭಾವಶೂನ್ಯ (negative) ಅದು ದೇವರಿದ್ದಾನೆ ಎನ್ನುವುದನ್ನು ನಿರಾಕರಿಸುತ್ತದೆ. ಆದರೆ 'ಅದೈವವಾದ, ನಿರೀಶ್ವರವಾದ, 'ಅಭಾವವಲ್ಲದ್ದು'—ಭಾವಾತ್ಮಕ (positive). ಅದು ದೇವರಿಲ್ಲ ಎನ್ನುವುದರಿಂದ ಪರಿಣಾಮವಾಗುವ ಸ್ಥಿತಿಯನ್ನು ಪ್ರತಿಪಾದಿಸುತ್ತದೆ."

---

* 'An Atheist with Gandhi': Navajivan Publication.

"ಎಂದರೆ, ಅದ್ವೈವವಾದ ಭಾವಾತ್ಮಕ ಎನ್ನುವಿರಾ?" ಎಂದರು ಬಾಪೂ.

"ಹೌದು, ಭಾವರೂಪದಲ್ಲಿ ಅದ್ವೈವವಾದ ಆತ್ಮವಿಶ್ವಾಸ ಮತ್ತು ಇಚ್ಛಾ ಸ್ವಾತಂತ್ರ್ಯ, ಸ್ವಪ್ರೇರಣೆ (Free-Will) ಅದ್ವೈವವಾದ, ನಿರೀಶ್ವರವಾದ ನಿಷೇಧಕ ರೂಪದಲ್ಲಿ ಕಂಡುಬಂದರೂ ಅದು 'ಅಭಾವವಲ್ಲದ್ದು'. ಉದಾ: ಅಸಹಕಾರ, ಅಹಿಂಸೆ ಇತ್ಯಾದಿ ಪದಗಳಂತೆ. ಇವೆಲ್ಲ ನಿಷೇಧಾತ್ಮಕ ರೂಪ ದಲ್ಲಿದ್ದರೂ ಭಾವಾತ್ಮಕವೇ. ನಮಗೆ ಪರಿಚಯವಿಲ್ಲದ ಪದವನ್ನು ವ್ಯಕ್ತ ಪಡಿಸಲು ಅಭಾವದ ಅಭಾವವನ್ನು ಸೂಚಿಸುವ ಪದವನ್ನು ಉಪಯೋಗಿಸು ವುದಿಲ್ಲವೇ? ಉದಾ: 'ನಿರ್ಭಯತೆ' ಎನ್ನುವುದನ್ನು 'ಧೈರ್ಯ' ಎನ್ನುವು ದನ್ನು ಸೂಚಿಸಲು ಉಪಯೋಗಿಸುವುದಿಲ್ಲವೇ?"

"ನೀವು ಬರೀ ಶಬ್ದ ಜಾಲದಲ್ಲಿ ಸಿಕ್ಕಿದೀರಿ ಅಷ್ಟೆ" ಎಂದರು ಗಾಂಧೀಜಿ.

ಗೋರಾ ಹೇಳಿದರು: "ಜೀವನಾನುಷ್ಠಾನದಲ್ಲಿ ಅದ್ವೈವವಾದಕ್ಕೆ ಭಾವಾತ್ಮಕ ಸ್ಥಾನವಿದೆ. ದೇವರಲ್ಲಿ ನಂಬಿಕೆ ಎಂದರೆ, ಮಾನವ ಈಶ್ವರ ಚಿತ್ತಕ್ಕೆ ಅಧೀನ ಎಂದು ಅರ್ಥ. ಹಿಂದೂ ತತ್ವದ ಪ್ರಕಾರ ಮಾನವ ಜೀವನ ಕರ್ಮ ಅಥವಾ ಅದೃಷ್ಟಕ್ಕೆ ಅಧೀನ. ಸಾಮಾನ್ಯವಾಗಿ ಸೇಶ್ವರವಾದವೆಂದರೆ, ಮಾನವ ದಾಸ್ಯಭಾವದ ಅಭಿವ್ಯಕ್ತಿ. ಇದಕ್ಕೆ ವ್ಯತಿರಿಕ್ತವಾಗಿ ಅದ್ವೈವವಾದವು ಮಾನವನ ಸ್ವಾತಂತ್ರ್ಯಭಾವದ ಅಭಿವ್ಯಕ್ತಿ. ಹೀಗೆ ಸೇಶ್ವರವಾದ-ನಿರೀಶ್ವರ ವಾದ ಪರಸ್ಪರ ವಿರುದ್ಧವಾಗಿದ್ದು ಪರಸ್ಪರ ವಿರುದ್ಧ ಭಾವಗಳನ್ನು ಸೂಚಿಸು ತ್ತವೆ; ಎಂದರೆ, ದಾಸ್ಯ ಮತ್ತು ಸ್ವಾತಂತ್ರ್ಯಗಳನ್ನು ಸೂಚಿಸುತ್ತವೆ."

"ನೀವು ತೀರ ಸಿದ್ಧಾಂತವಾದಿ (Theorist). ನಾನು ಅಂಥ ಬುದ್ಧಿ ವಾದಿಯಲ್ಲ. ಪಂಡಿತರ ಬಳಿಗೆ ಹೋಗಿ ವಾದಿಸಿ" ಎಂದರು ಬಾಪೂ.

ಗಾಂಧೀಜಿಯ ಈ ಮಾತು ಅವರ ವಸ್ತುನಿಷ್ಠ ಮನೋಭಾವವನ್ನು ಸೂಚಿಸಿತು ಗೋರಾ ಅವರಿಗೆ. ಅದ್ವೈವವಾದಕ್ಕನುಗುಣವಾದ ತಮ್ಮ ವಸ್ತು ನಿಷ್ಠ ಕಾರ್ಯಕ್ರಮವನ್ನು ವಿವರಿಸತೊಡಗಿದರು, ಗೋರಾ. ತಾವು ಹರಿಜನ ವಾಡಾದಲ್ಲಿ ಮಾಡುತ್ತಿದ್ದ ಸಾಮಾಜಿಕ ಸೇವೆಯನ್ನು ಕುರಿತು ಹೇಳಿದರು. ಅದರಲ್ಲೂ ಹರಿಜನರ ಪ್ರಶ್ನೆ ಬಂದಾಗ ಉದ್ಭವಿಸುವ ಸಮಸ್ಯೆಗಳು ಎಷ್ಟು ಕಷ್ಟಕರವೆಂದು ತಿಳಿಸಿದರು. ಆಗ ಗಾಂಧೀಜಿ—"ಸರಿ, ಇದೆಲ್ಲ ನನಗೆ ಅರಿವಿದೆ.

ಈ ಎಲ್ಲ ಕಾರ್ಯಕ್ರಮವನ್ನೂ ಅದೈವವಾದವಿಲ್ಲದೆ ನಡೆಸಬಹುದಲ್ಲ" ಎಂದರು.

ಗೋರಾ ತಮ್ಮ ಅದೈವವಾದ ಕಾರ್ಯಕ್ರಮವನ್ನು ಇನ್ನೂ ವಿವರಿಸಲಾರಂಭಿಸಿದರು. ಅದೈವವಾದವನ್ನು ಅಂಗೀಕರಿಸಿರುವುದರಿಂದ ಹಿಂದೂ-ಮುಸ್ಲಿಂ-ಕ್ರೈಸ್ತ ಇತ್ಯಾದಿ ಮತೀಯ ಭಾವನೆಗಳು ದೂರವಾಗಿ ಇಚ್ಛಾಸ್ವಾತಂತ್ರ್ಯ ಬರುತ್ತದೆಂದೂ ಇದರಿಂದ ಮಾನವನ ಪ್ರಗತಿಗೆ ಎಡರಾಗಿರುವ 'ದೈವಭಾವ'-'ಸೇಶ್ವರಭಾವ' ಹೋಗಿ ನಿಜವಾದ ಸ್ವಾತಂತ್ರ್ಯಭಾವ ಜನಿಸುತ್ತದೆಂದೂ ಹೇಳಿದರು. ಇದಕ್ಕೋಸ್ಕರ ಸಮಾಜಸೇವೆಗೆ ಅದೈವವಾದವನ್ನು ಹರಡಬೇಕೆಂದು ವಾದಿಸಿದರು.

ಗಾಂಧೀಜಿ ತಾಳ್ಮೆಯಿಂದ ಕೇಳಿ "ನಿಮ್ಮ ಈ ಅದೈವವಾದ ಪ್ರಸಾರಕ್ಕೆ ಇದಿರಾಗಿ ನಾನು ಉಪವಾಸ ಮಾಡಿಯೇನು" ಎಂದರು. ಗೋರಾ— "ನಿಮ್ಮ ಉಪವಾಸಕ್ಕೆ ಇದಿರಾಗಿ ನಾನೂ ಉಪವಾಸ ಮಾಡುವೆ" ಎಂದರು.

'ನೀವೂ ಉಪವಾಸ ಮಾಡುವಿರಾ?' ಎನ್ನುತ್ತಾ ಗಾಂಧೀಜಿ ಗೋರಾ ಅವರ ಮುಖವನ್ನೇ ದಿಟ್ಟಿಸಿ ನೋಡಿದರು.

'ಹೌದು ಬಾಪೂಜಿ. ನೀವೇಕೆ ಉಪವಾಸವನ್ನು ಮಾಡಬೇಕು? ಅದೈವವಾದ ಏಕೆ ತಪ್ಪೆಂಬುದನ್ನು ನನಗೆ ತೋರಿಸಿಕೊಡಿ. ನಾನು ಬದಲಾಯಿಸುತ್ತೇನೆ' ಎಂದರು.

'ಆಹಾ, ಅದೈವವಾದದಲ್ಲಿ ನಿಮ್ಮ ನಂಬಿಕೆ ಆಳವಾಗಿದೆ' ಎಂದು ನಿಧಾನವಾಗಿ ನುಡಿದರು ಗಾಂಧೀಜಿ.

ಈ ವೇಳೆಗೆ ಪ್ಯಾರೇಲಾಲರು ಗಾಂಧೀಜಿಗೆ ಏನನ್ನೋ ಹೇಳಲು ಅವರ ಗಮನ ಸೆಳೆದರು.

ಮೂರು ದಿವಸಗಳ ಮೇಲೆ ಮತ್ತೆ ಸಂಭಾಷಣೆ ನಡೆಯಿತು. ಆಗ ಗಾಂಧೀಜಿ ಗೋರಾ ಅವರ ವಿವರಗಳನ್ನು ಕೇಳಿ ತಿಳಿದುಕೊಂಡರು. ಗೋರಾ ದೇವರ ಹೆಸರಿನಲ್ಲಿ ನಡೆಯುವ ಎಲ್ಲ ಸಾಮಾಜಿಕ ಅಸಮಾನತೆಗಳು, ದ್ವೇಷ, ಯುದ್ಧ, ಮಾನವ ಮಾನವನಿಗೆ ಮಾಡುವ ಅಪಚಾರ ಇವನ್ನೆಲ್ಲ ಹೇಳಿದರು. 'ದೇವರು ಸತ್ಯವಾಗಿದ್ದಲ್ಲಿ ನಾನು ಅವನನ್ನು ಕಿತ್ತುಹಾಕಲಾರೆ. ಅದು ಹಾಗಿಲ್ಲ. ದೇವರೆಂಬುದು ಮಾನವನ ಸುಳ್ಳು ಕಲ್ಪನೆ. ಎಲ್ಲ ಸುಳ್ಳು

ಕಲ್ಪನೆಗಳಂತೆ ಅದೂ ಆರಂಭದಲ್ಲಿ ಸ್ವಲ್ಪಮಟ್ಟಿಗೆ ಉಪಯುಕ್ತವಾಗಿತ್ತು. ಆದರೆ ಎಲ್ಲ ಸುಳ್ಳುಗಳಂತೆ ಅದು ಜೀವನವನ್ನು ಮಲಿನಗೊಳಿಸಿತು. ಆದುದರಿಂದ ದೇವರಲ್ಲಿ ನಂಬಿಕೆ ಹೋಗಬೇಕು. ಮಾನವಲೋಕದ ಭ್ರಷ್ಟಾಚಾರವನ್ನು ತೊಳೆಯುವುದಕ್ಕೂ ಲೋಕದಲ್ಲಿ ನೀತಿಯನ್ನು ಹೆಚ್ಚಿಸುವುದಕ್ಕೂ ಅದು ಈಗಲೇ ಹೋಗಬೇಕು. ಮಾನವನಿಗೆ ಆತ್ಮವಿಶ್ವಾಸ ಕೊಡುವುದಕ್ಕೂ ಅಹಿಂಸಕವಾಗಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಳನ್ನು ಸ್ಥಾಪಿಸುವುದಕ್ಕೂ ದೇವರಲ್ಲಿ ನಂಬಿಕೆ ಹೋಗಿ ನನಗೆ ಅದ್ವೈವ ವಾದ, ನಿರೀಶ್ವರ ವಾದ ಬೇಕು. ಬಾಪೂ ನನ್ನದೇನು ತಪ್ಪು ತೋರಿಸಿ.'

ಗೋರಾ ಅವರ ವಾದವನ್ನು ತಾಳ್ಮೆಯಿಂದ ಆಲಿಸಿದ ಗಾಂಧೀಜಿ ನಿಧಾನವಾಗಿ ನುಡಿದರು : 'ಹೌದು, ನಿಮ್ಮ ಮಾತಿನಲ್ಲಿ ನನಗೊಂದು ಆದರ್ಶ ಕಾಣುತ್ತಿದೆ. ನನ್ನ ನೇಶ್ವರವಾದ ಸರಿಯೋ ನಿಮ್ಮ ನಿರೀಶ್ವರ ವಾದ ಸರಿಯೋ ಹೇಳಲಾರೆ. ನಾವಿಬ್ಬರೂ ಸತ್ಯಾನ್ವೇಷಕರೇ, ತಪ್ಪು ಗೋಚರವಾದಾಗ ಇಬ್ಬರೂ ಬದಲಾಯಿಸುತ್ತೇವೆ. ನನ್ನ ಜೀವನದಲ್ಲಿ ಎಷ್ಟೋ ಸಲ ಹಾಗಾಗಿದೆ. ನೀವೊಬ್ಬರು ಕಾರ್ಯಕರ್ತರು. ನೀವು ಉನ್ಮತ್ತಭಾವದವರಾಗದಿರುವವರೆಗೆ ಯಾವ ಅಪಾಯವೂ ಇಲ್ಲ. ನೀವು ಸರಿಯೋ ನಾನು ಸರಿಯೋ ಎಂಬುದನ್ನು ಫಲವೇ ಹೇಳುತ್ತದೆ. ಆಗ ನಾನು ನಿಮ್ಮ ಮಾರ್ಗಕ್ಕೆ ಬರಬಹುದು. ಇಲ್ಲವೇ ನೀವೇ ನನ್ನ ಮಾರ್ಗಕ್ಕೆ ಬರಬಹುದು ; ಅಥವಾ ಇಬ್ಬರೂ ಬೇರೊಂದು ಮೂರನೆಯ ಮಾರ್ಗದಲ್ಲಿ ಹೋಗಬಹುದು. ನಿಮ್ಮ ಕೆಲಸವನ್ನು ಮುಂದುವರಿಸಿ. ನಿಮ್ಮ ಮಾರ್ಗ ನನ್ನದಕ್ಕೆ ವಿರುದ್ಧವಾಗಿದ್ದರೂ ನಾನು ನೆರವನ್ನು ನೀಡುತ್ತೇನೆ.'

'ಬಾಪೂ ನೀವು ನನ್ನನ್ನು ಪ್ರೋತ್ಸಾಹಿಸುತ್ತಿದೀರಿ. ನನ್ನ ಮಾರ್ಗದಲ್ಲಿರಬಹುದಾದ ಅಪಾಯಗಳ ಬಗೆಗೆ ನನಗೆ ಎಚ್ಚರಿಕೆ ಕೊಡಿ. ನಿಮ್ಮ ವಿವೇಕ ಮತ್ತು ಅನುಭವಗಳಿಂದ ನನ್ನ ತಪ್ಪುಗಳು ಕಡಿಮೆಯಾದಾವು.'

ಬಾಪೂ ಉತ್ತರವಿತ್ತರು : 'ತಪ್ಪು ಮಾಡುವುದೇ ತಪ್ಪಲ್ಲ. ಏಕೆಂದರೆ ಅದು ತಪ್ಪೆಂದು ತಿಳಿದರೂ ಯಾರೂ ತಪ್ಪು ಮಾಡರು. ಆದರೆ ತಪ್ಪು ಗೋಚರವಾದ ಮೇಲೂ ತಪ್ಪನ್ನು ತಿದ್ದಿಕೊಳ್ಳದಿದ್ದರೆ ಅದು ತಪ್ಪು ಆಗುತ್ತದೆ.

ತಪ್ಪು ಮಾಡಲು ನೀವು ಅಂಜಿದರೆ, ಯಾವುದನ್ನು ಮಾಡುವುದಕ್ಕೂ ನಿಮಗೆ ಅಂಜಿಕೆಯೇ. ತಪ್ಪು ಗೋಚರವಾದಾಗ ನೀವು ತಿದ್ದಿಕೊಳ್ಳುವಿರಿ.'

ಇಂಥ ಸಾಗರ ಸದೃಶ ಹೃದಯ ವೈಶಾಲ್ಯತೆ, ಭೂತಾಯಿಯ ಅನಂತ ತಾಳ್ಮೆಯಂಥ ತಾಳ್ಮೆ ಇವುಗಳಿಂದ ಗಾಂಧೀಜಿ 'ಬಾಪೂ' ಆದರು. ಅವರ ಸಂಭಾಷಣೆಗಳಲ್ಲಿ ಈ ಗುಣಗಳು ಅಪಾರ.

ಗಾಂಧೀಜಿಯ ಸಂಭಾಷಣೆಗಳಲ್ಲಿ ಇನ್ನೊಂದು ಪ್ರಧಾನ ವಿಷಯವಿರುತ್ತಿತ್ತು. ಅದು ಅವರ ವಿನೋದಪ್ರವೃತ್ತಿ. ಆದರಿಂದ ಸಂಭಾಷಣೆಗೆ ಕಾಂತಿ ಬರುತ್ತಿತ್ತು. ಸಂಭಾಷಣೆಯಲ್ಲಿ ತೊಡಗಿದವರ ಮನಸ್ಸು ತಿಳಿಯಾಗಿ ಹಗುರವಾಗುತ್ತಿತ್ತು ; ಹೊಸ ಹುರುಪು ಬರುತ್ತಿತ್ತು ಮಾತಿಗೆ. ಅದು ಅವರು ಗಹನ ಭಾವದ ನಡುವೆಯೇ ಹೊಂದಿದ್ದ ಸರಸತೆಗೆ ನಿದರ್ಶನವಾಗಿತ್ತು. ಅವರ ವಿನೋದ ಬಹಳ ಸಹಜವಾಗಿದ್ದು, ನಿರ್ದುಷ್ಟವಾಗಿರುತ್ತಿತ್ತು. ಅದು ಉರಿ ಬಿಸಿಲು ಕಾಯುತ್ತಿದ್ದಾಗ ಬೀಸಿದ ತಂಗಾಳಿಯ ಪ್ರಭಾವದಿಂದ ಕೂಡಿರುತ್ತಿತ್ತು. 'ನನಗೆ ವಿನೋದ ಪ್ರವೃತ್ತಿ ಇಲ್ಲದಿದ್ದರೆ, ಎಂದೋ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತಿತ್ತು' ಎಂದಿದ್ದಾರೆ. ಇತರರ ಮನಸ್ಸನ್ನು ಚುಚ್ಚಿ, ನೋಯಿಸುವ ಉದ್ದೇಶವಾಗಲೀ, ಮಾನವ ಸ್ವಭಾವದ ಬಗೆಗೆ ಜುಗುಪ್ಸೆ, ನಿರಾಶೆ, ದ್ವೇಷಭಾವ ಇವುಗಳಿಂದ ಹುಟ್ಟಿದ ಹಾಸ್ಯವಾಗಲೀ ಆಗಿರುತ್ತಿರಲಿಲ್ಲ ಅದು. ಎಲ್ಲರೂ ಅದನ್ನು ತೆರೆದ ಮನಸ್ಸಿನಿಂದ ಸವಿಯಬಹುದಾಗಿತ್ತು. ರಸದ ಬುಗ್ಗೆ ಪ್ರವಹಿಸುತ್ತಿತ್ತು ; ಸನ್ನಿವೇಶ ಹೊಸ ರೂಪ ತಾಳುತ್ತಿತ್ತು. ಇದಕ್ಕೆ ಎಷ್ಟೋ ನಿದರ್ಶನಗಳನ್ನು ಕೊಡಬಹುದು.

೧೯೩೨ರ ಸೆಪ್ಟೆಂಬರ್ ತಿಂಗಳಲ್ಲಿ ಗಾಂಧೀಜಿ ಪೂನಾದ ಎರವಾಡಾ ಸೆರೆಮನೆಯಲ್ಲಿ 'ಕೋಮುವಾರು ನಿರ್ಣಯ'ದ ಬಗೆಗೆ (Communa Award) ಉಪವಾಸ ಮಾಡಿದರು. ಉಪವಾಸ ಮುಕ್ತಾಯದ ದಿನ ದೇಶದ ಮಹಾನ್ ಹಿಂದೂ ನಾಯಕರು ಸಭೆ ಸೇರಿ, ಗಾಂಧೀಜಿಗೆ ಗೌರವ ತೋರಿಸಿದರು. ಆಗ ಹಾಸಿಗೆಯಿಂದ ಎದ್ದು ಮೇಜಿನ ಮಧ್ಯೆ ಕುಳಿತ ಗಾಂಧೀಜಿ 'ನಾನು ಈ ಸಭೆಯ ಅಧ್ಯಕ್ಷತೆ ವಹಿಸುವನಿದ್ದೇನೆ ಅಲ್ಲವೇ' ಎಂದು ಆರಂಭಿಸಿ, ಎಲ್ಲರನ್ನೂ ನಗುವಿನಲ್ಲಿ ಮುಳುಗಿಸಿದರು.

ಒಮ್ಮೆ ಒಬ್ಬ ವಿದೇಶೀ ಪತ್ರಿಕೋದ್ಯಮಿ ಅವರನ್ನು ಸಂದರ್ಶಿಸಲು ಬಂದಿದ್ದ. ಅದು ಇನ್ನೂ ಮುಗಿದಿರಲಿಲ್ಲ. ಅದರೊಳಗೇ ಮತ್ತೊಬ್ಬ ಭೇಟಿ ಅಪೇಕ್ಷಿಸಿದ. ಗಾಂಧೀಜಿ ಆತನನ್ನು ಸ್ವಾಗತಿಸಿ, 'ಒಬ್ಬಾತ ನನ್ನನ್ನು ಆಗಲೇ ವಿಚ್ಛೇದಿಸುತ್ತಿದ್ದಾನೆ. ನಿಮಗೂ ಸ್ವಾಗತವುಂಟು ; ಇಲ್ಲವೆನ್ನಲಾರೆ' ಎಂದು ನಗೆಮೂಡಿಸಿದರು.

ವಿರಕ್ತಿ, ಅನಾಸಕ್ತಿ ಗಾಂಧೀಜಿಗೆ ಒಂದು ಹೊರೆಯಾಗಿರಲಿಲ್ಲ. ಶ್ರೀಮತಿ ವೈಲ್ಸ್ ಎಂಬೊಬ್ಬ ವಿದೇಶೀ ಮಹಿಳೆ ಅವರನ್ನು ಕಾಣಲು ಬಂದಳು. ಸಂತ, ಅಹಿಂಸೆಯ ಪ್ರವಾದಿ, ಮಹಾತ್ಮಾ ಇತ್ಯಾದಿಯೆಲ್ಲ ಅವಳ ಮನಸ್ಸಿನಲ್ಲಿತ್ತು. 'ನೀವು ಕೋಪಗೊಳ್ಳುವಿರಾ?' ಎಂದು ಪ್ರಶ್ನಿಸಿದಳು. ತತ್‌ಕ್ಷಣ ಉತ್ತರ ಬಂದಿತು : 'ಅದಕ್ಕೆ ಶ್ರೀಮತಿ ಗಾಂಧೀಯವರನ್ನು ಪ್ರಶ್ನಿಸಿ. ನಾನು ಜಗತ್ತಿನೊಡನೆ ಅತ್ಯುತ್ತಮವಾಗಿ ನಡೆದುಕೊಂಡರೂ ಆಕೆಯೊಂದಿಗೆ ಅಷ್ಟಕ್ಕಷ್ಟೆ.' ಆಕೆ ಮುಂದುವರಿಸಿ—'ನನ್ನ ಪತಿ ನನ್ನೊಂದಿಗೆ ಅತ್ಯುತ್ತಮವಾಗಿ ವರ್ತಿಸುತ್ತಾರೆ' ಎಂದಳು. 'ಹಾಗಾದರೆ, ಮಿ. ವೈಲ್ಸ್ ನಿಮಗೆ ತುಂಬ ಲಂಚ ಕೊಟ್ಟಿರಬೇಕೆಂದು ನನ್ನ ನಂಬಿಕೆ' ಎಂದರು ಗಾಂಧೀಜಿ.

ಒಬ್ಬ ನಾವಿಕನನ್ನು ಗಾಂಧೀಜಿ ಪ್ರಶ್ನಿಸಿದರು, 'ನಿಮಗೆಷ್ಟು ಮಕ್ಕಳು?' ಎಂದು. ಆತ ಉತ್ತರವಿತ್ತ : 'ಎಂಟು ಮಂದಿ ; ನಾಲ್ಕು ಗಂಡು, ನಾಲ್ಕು ಹೆಣ್ಣು.' ಮಹಾತ್ಮಾ ನುಡಿದರು : 'ನಾನು ನಿಮ್ಮೊಡನೆ ಅರ್ಧದಾರಿ ಓಡಬಲ್ಲೆ ; ನನಗೆ ನಾಲ್ಕು ಮಕ್ಕಳು ಮಾತ್ರ.'

ಗಾಂಧೀಜಿ ರಾಜಾಜೀ ಅವರನ್ನು ಸೇವಾಗ್ರಾಮಕ್ಕೆ ಬಂದು ಕೆಲವು ದಿನ ಇರಬೇಕೆಂದು ಆಗಾಗ ಪ್ರೋತ್ಸಾಹಿಸುತ್ತಿದ್ದರು. ರಾಜಾಜಿ ಒಮ್ಮೆ ಬರಲು ಒಪ್ಪಿದರು.

'೩ನೆಯ ತಾರೀಖಿನ ಸುಮಾರಿಗೆ ಸೇವಾಗ್ರಾಮಕ್ಕೆ ಬಂದೇನು.'

'ಹಾಗಾದರೆ ನೀವು ಹೇಳಿದ ಹೊತ್ತಿಗೆ ಸರಿಯಾಗಿ ಎದುರು ನೋಡುತ್ತಿರುತ್ತೇನೆ.'

'ನಿಮಗೆ ಇಷ್ಟವಿದ್ದರೆ.'

'ನಿಮ್ಮನ್ನು ಎದುರು ನೋಡುತ್ತಿರುತ್ತೇನೆ ಎಂದರೆ ಏನು ಅರ್ಥ ಹಾಗಾದರೆ.'

'ಕೆಲವು ವೇಳೆ ಆಪತ್ತನ್ನು ಎದುರು ನೋಡಬೇಕಾಗುತ್ತದೆ.'

'ನೀವು ಹಾಗೆ ಹೇಳಿದರೆ ಹೇಳಿ. ನನಗೆ ಆ ಆಪತ್ತೂ ಬೇಕು. ಎಷ್ಟೋ ವಿಷಯವಿದೆ ತಾಳನೋಡಬೇಕಾದ್ದು.'

'ಆ ವೇಳೆಗೆ ಇಬ್ಬರೂ ಎಲ್ಲ ವಿಷಯಗಳನ್ನೂ ಮರೆತಿದ್ದರೆ? ತಾಳೆ ನೋಡಬೇಕಾದುದು ಏನೂ ಇರುವುದಿಲ್ಲ.'

'ಇನ್ನೇನೂ ಇರದಿದ್ದರೆ ಇಬ್ಬರೂ ಒಟ್ಟಿಗೆ ನಗೋಣ. ನಕ್ಕು ನಲಿದು ದಪ್ಪನಾಗೋಣ.'

ಹಾಗೇ ಮುಂದುವರಿಯಿತು. ಅದು ಉಪ್ಪಿಲ್ಲದ ಆಹಾರದ ಕಡೆಗೆ ತಿರುಗಿತು; ರಾಜಾಜಿ ಹೇಳಿದರು: 'ಊಟಕ್ಕೆ ಉಪ್ಪಿಲ್ಲದಂತೆ ಮಾಡಿದರೆ, ಜನ ಗೋಡೆಯನ್ನು ನೆಕ್ಕಿಯಾರು. ಉಪ್ಪಿನ ಆಸೆಗಾಗಿ ಮಣ್ಣು ಮುಕ್ಕಿಯಾರು ಮಕ್ಕಳ ಹಾಗೆ.'

ಗಾಂಧೀಜಿ ಉತ್ತರವಿತ್ತರು: 'ಒಳ್ಳೆಯದೇ ಆಯಿತು. ಗೋಡೆ ಚೊಕ್ಕಟವಾಗುತ್ತದೆ. ಸೇವಾಗ್ರಾಮದಲ್ಲಿ ನಗೋಣ ಯಥೇಚ್ಛವಾಗಿ ಎಂದೆ ನಲ್ಲ ಅದಕ್ಕೆ ಇದೇ ನಾಂದಿ.'

ಹೀಗೆ ಸವುರಾದ ಹಾಸ್ಯಲಹರಿಯನ್ನು ಹರಿಸುವ ಅಸಂಖ್ಯ ಪ್ರಸಂಗ ಗಳನ್ನು ಗಾಂಧೀಜಿಯ ಸಂಭಾಷಣೆಗಳಲ್ಲಿ ಕಾಣಬಹುದು. ೪೦ ಕೋಟಿ ಜನರ ಸ್ವಾತಂತ್ರ್ಯ ಸಮರದ ಮಹಾ ಸೇನಾನಿಗೆ, ಅಹಿಂಸೆಯ ವಿರಾಗಿಗೆ, ವೀತರಾಗನಿಗೆ, ನಕ್ಕು ನಗಿಸುವ, ಭಾರವಾದ ಬದುಕನ್ನು ಗಳಿಗೆಯೊಳಗೆ ಹಕ್ಕಿಯಂತೆ ಹಾರಿ ಹಗುರ ಮಾಡಿಕೊಳ್ಳುವ ಕಲೆಯೂ ಕರಗತವಾಗಿತ್ತು. ಅವರ ಇಹಜೀವನದ ಕಡೆಯ ದಿನದ ಕಡೆಯ ಗಳಿಗೆಯಲ್ಲೂ ಇದೇ ವಿನೋದ; ಮೊಮ್ಮಗಳು ಆಬಾಳೊಂದಿಗೆ, ೫-೩೦ರ ಪ್ರಾರ್ಥನಾ ಸಭೆಗೆ ಹೋಗುತ್ತಾ, (ಅಂದು ಮಧ್ಯಾಹ್ನದ ಊಟಕ್ಕೆ ಆಬಾ ಹಸಿ ಕ್ಯಾರೆಟ್ಟಿನ ಪಲ್ಯ ತಂದಿದ್ದಳು.) ಬಾಪೂ ಹೇಳಿದರು :

'ಅಂತೂ ದನಕ್ಕೆ ಹಾಕುವ ಮೇವನ್ನು ನನಗೆ ಹಾಕುವೆಯಲ್ಲವೇ?'

'ಬಾ, ಇದನ್ನು ಕುದುರೆಯ ಮೇವು ಎನ್ನುತ್ತಿದ್ದರು' ಎಂದಳು ಆಬಾ.

ಗಾಂಧೀಜಿ ಉತ್ತರಿಸಿದರು: 'ಯಾರಿಗೂ ರುಚಿಸದೆ ಇರುವುದು ನನಗೆ ರುಚಿಸುತ್ತದಲ್ಲಾ. ಅದ್ಭುತ ಅಲ್ಲವೇ ನನ್ನದು?'

'ಬಾಪೂ, ನಿಮ್ಮ ಗಡಿಯಾರಕ್ಕೆ ನನ್ನನ್ನು ಅಸಡ್ಡೆ ಮಾಡಿದಿರಲ್ಲಾ ಎನಿಸಿರಬೇಕು. ಸರದಾರರ ಜತೆ ಮಾತನಾಡುತ್ತಾ ಅದರ ಕಡೆ ಕಣ್ಣೆತ್ತಿ ನೋಡಲೇ ಇಲ್ಲವಲ್ಲಾ' ಎಂದಳು.

'ಏಕೆ ನೋಡಲಿ? ನೀನು ಇದ್ದೀಯಲ್ಲಾ ನನ್ನ ಗಡಿಯಾರ.'

'ನನ್ನ ಕಡೆಯೂ ನೋಡಲಿಲ್ಲವಲ್ಲ ನೀವು' ಮರುತ್ತರವಿತ್ತಳು ಅಬಾ.

ಗಾಂಧೀಜಿ ನಕ್ಕುಬಿಟ್ಟರು.

ಅದೇ ಅವರ ಇಹಜೀವನದ ಕಟ್ಟಕಡೆಯ ನಗು. ಅಂಥ ನಗು ಎಷ್ಟು ಮಂದಿಗೆ ನೋವನ್ನು ಕಳೆದು ಸಾಂತ್ವನ ನೀಡಿತ್ತೋ? ಜಗತ್ತನ್ನೇ ವಶೀಕರಣ ಮಾಡುವ ಶಕ್ತಿ ಇತ್ತು ಅದಕ್ಕೆ.

೪. ಪತ್ರಗಳು

ಸೂಚನೆ: ಈ ಅಧ್ಯಾಯದಲ್ಲಿ ಉದಾಹರಿಸುವ ಭಾಗಗಳನ್ನು ಕನ್ನಡ ಗಾಂಧೀ ಗ್ರಂಥಮಾಲೆಯ 'ಪತ್ರಗುಚ್ಛ' ಸಂಪುಟಗಳಿಂದ ಆಯ್ದುಕೊಳ್ಳಲಾಗಿದೆ. —ಲೇ.

ಭಾಷಣ, ಸಂಭಾಷಣೆ ಇವುಗಳಲ್ಲಿ ವ್ಯಕ್ತಿಯ ಪ್ರತ್ಯಕ್ಷ ಸಂಬಂಧವಿದ್ದು, ಅವುಗಳಿಗೆ ಒಂದು ವಿಶೇಷ ಮಹತ್ವ ಬರುತ್ತದೆಂಬುದು ನಿಜವಾದರೂ, ವಿವಿಧ ರೂಪಗಳ ಬರಹಗಳ ಪೈಕಿ ಪತ್ರಸಾಹಿತ್ಯವೂ ತನ್ನದೆ ಆದ ವೈಶಿಷ್ಟ್ಯದಿಂದ ಕೂಡಿರುತ್ತದೆ. ಪತ್ರ ಲೇಖನ ಏಕೆ ಎಂದರೆ, ಇಬ್ಬರು ವ್ಯಕ್ತಿಗಳ ಮನಸ್ಸಿನಲ್ಲಿ ಅಂತರಂಗದಲ್ಲಿ ಕೊರೆಯುತ್ತಿರುವ ಯಾವುದೋ ಗಹನವೂ ಆತ್ಮೀಯವೂ ಆದ ವಿಚಾರವನ್ನು ಕುರಿತು ಪ್ರತ್ಯಕ್ಷ ಎದುರೆದುರಿಗೆ ಇದ್ದಂತೆ ಹೇಳಿಕೊಳ್ಳುವುದಕ್ಕೆ ಎನ್ನಬಹುದು. ಇದು ಪ್ರಧಾನವಾಗಿ ಆತ್ಮೀಯ ವೈಯಕ್ತಿಕ ಭಾವಗಳ, ವಿಚಾರಗಳ ಕಥನ ಎಂದು ಸಾಮಾನ್ಯವಾಗಿ ಹೇಳಬಹುದು. ಜಮಯಂತಿ

ನಳನಿಗೆ ತನ್ನ ಪ್ರೇಮವನ್ನು ತಿಳಿಸಲು ಪತ್ರ ಬರೆದಳೆಂದು ಕೇಳಿದೇವೆ. ಮಂತ್ರಿ ದುಷ್ಟಬುದ್ಧಿ ತನ್ನ ಮಗನಿಗೆ ಒಂದು ಕಾಗದ ಬರೆದು, 'ಇವನಿಗೆ ವಿಷಕೊಡು' ಎಂದು ತಿಳಿಸಿ, ಅದನ್ನು ಚಂದ್ರಹಾಸನ ಕೈಯಲ್ಲೇ ಕಳಿಸಿದ ನಂತೆ. ಚಕ್ರವರ್ತಿ ಔರಂಗಸೇಬ್ ತನ್ನ ಅವಸಾನ ಕಾಲದಲ್ಲಿ ಹಿಂದಿನ ಎಲ್ಲ ದುಷ್ಕೃತ್ಯಗಳನ್ನೂ ನೆನಪು ಮಾಡಿಕೊಂಡು, ಅದಕ್ಕಾಗಿ ಪಶ್ಚಾತ್ತಾಪಪಟ್ಟು, ದುಃಖವನ್ನೆಲ್ಲ ತೋಡಿಕೊಂಡು ಮಕ್ಕಳಿಗೆ ಪತ್ರ ಬರೆಯುತ್ತಾನೆ. ಜವಾಹರ ಲಾಲ್ ನೆಹರೂ ಇಂದಿರಾಗೆ ಬರೆದ ಪತ್ರಗಳು ಒಂದು ಉತ್ತಮ ಶಿಕ್ಷಣದ ಅಂಗವೇ ಆಗಿವೆ. ಇದೇ ರೀತಿ ಗಾಂಧೀಜಿ ಎಷ್ಟೋ ಸಹಸ್ರ ವ್ಯಕ್ತಿಗಳಿಗೆ ಆತ್ಮೀಯ ಪತ್ರಗಳನ್ನು ಬರೆದು ಅವರಿಗೆ ಸಮಾಧಾನ, ವಿವೇಕ ಇತ್ಯಾದಿ ಗಳನ್ನು ಹೇಳಿದ್ದಾರೆ.

ಸಾರ್ವಜನಿಕ ಜೀವನದಲ್ಲಿ ತೊಡಗಿದ್ದ ಗಾಂಧೀಜಿಯಂಥ ಮಹಾ ವ್ಯಕ್ತಿಗೆ ಪತ್ರಲೇಖನ ಅನಿವಾರ್ಯವಾಗಿತ್ತು. ಅವರಿಗೆ ಅಂತರಂಗ–ಬಹಿರಂಗ ಎಂಬ ದ್ವಂದ್ವಾತ್ಮಕ ಜೀವನವಿಲ್ಲದ್ದರಿಂದಲೂ ಎರಡನ್ನೂ ಒಂದೇ ತತ್ವಗಳ ದೃಷ್ಟಿಯಿಂದ ಪರೀಕ್ಷಿಸಿಕೊಳ್ಳುತ್ತಿದ್ದುದರಿಂದಲೂ ಅವರ ಪತ್ರಲೇಖನ ಸಹಜ ವಾಗಿಯೇ ಎರಡು ವಿಧದ ರೂಪವನ್ನು ಪಡೆಯದೆ ಏಕತ್ರವಾಗಿರುತ್ತಿತ್ತು. ಅವರು ಪ್ರಧಾನವಾಗಿ ರಾಜಕೀಯ ವಿಚಾರಗಳನ್ನು ಕುರಿತು ಬರೆದ ಪತ್ರಗಳು ಅಥವಾ ಆತ್ಮೀಯ ಅನುಭವ ಸಲಹೆ ಇವುಗಳನ್ನು ಕೊಟ್ಟು ಬರೆದ ಪತ್ರಗಳು ಎಂದು ಎರಡು ಪ್ರತ್ಯೇಕವಾದ ಗುಂಪುಗಳಾಗಿ ಅವುಗಳನ್ನು ವಿಂಗಡಿಸಬಹು ದಾದರೂ ಅವುಗಳಲ್ಲಿ ಎರಡೂ ಬಗೆಯ ವಿಷಯಗಳು ಮಿಶ್ರವಾಗಿಯೇ ಇರು ತ್ತಿದ್ದವು. ಇದು ಗಾಂಧೀ ಪತ್ರಲೇಖನದ ಸ್ವಾರಸ್ಯ. ಅವರು ಜೀವನವನ್ನು ಸಮಗ್ರವಾಗಿ ಪರಿಗಣಿಸುತ್ತಿದ್ದುದರಿಂದ ಇದು ಸಹಜವಾಗಿಯೇ ಇದ್ದಿತು.

ಗಾಂಧೀಜಿ ತಮ್ಮ ಜೀವಮಾನ ಕಾಲದಲ್ಲಿ ಬರೆದ ಪತ್ರಗಳು ಒಂದು ಲಕ್ಷಕ್ಕೆ ಮೀರಿದೆಯೆಂದು ಹಿಂದೆ ಒಂದು ಕಡೆ ಹೇಳಿರುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ರಾಷ್ಟ್ರದ ನಾಯಕರಿಗೆ ರಾಜಕೀಯ ವಿಚಾರವಾಗಿ ಬರೆದ ಪತ್ರಗಳು, ತಮ್ಮ ಹಿರಿಯರು, ನಾಯಕರು ಎಂದು ಪರಿಗಣಿಸಿದವರಿಗೆ ಬರೆದ ಪತ್ರಗಳು, ಸಹೋದ್ಯೋಗಿಗಳಿಗೆ ಬರೆದ ಪತ್ರಗಳು, ಕಾರ್ಯಕರ್ತರಿಗೆ ಬರೆದ ಪತ್ರಗಳು, ಪರಿಚಿತರಿರಲಿ, ಅಪರಿಚಿತರಿರಲಿ ಅವರಿಗೆ ಉತ್ತರವಾಗಿ

ಬರೆದ ಪತ್ರಗಳು, ಮಹಿಳೆಯರಿಗೆ-ಮಕ್ಕಳಿಗೆ ಬರೆದ ಪತ್ರಗಳು, ಹೀಗೆ ಹಲವಾರು ವಿಧಗಳಲ್ಲಿ ಅವುಗಳನ್ನು ವಿಂಗಡಿಸಬಹುದು.

ಗಾಂಧೀಜಿ ಮೊದಲು ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿನ ಭಾರತೀಯ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸಿದುದರಿಂದಲೂ ಅನಂತರ ಭಾರತದ ಸ್ವಾತಂತ್ರ್ಯ ಹೋರಾಟದಂಥ ಮಹಾ ಕಾರ್ಯದಲ್ಲಿ ತೊಡಗಿದುದರಿಂದಲೂ ಮತ್ತು ವಿಶ್ವಶಾಂತಿಯ ಬಗೆಗೆ ಚಿಂತಿಸುತ್ತಿದ್ದುದರಿಂದಲೂ ಅವರು ರಾಷ್ಟ್ರದ ಆಡಳಿತ ಸೂತ್ರ ಹಿಡಿದವರೊಂದಿಗೂ, ಎಂದರೆ ಬ್ರಿಟಿಷ್ ಸರ್ಕಾರದ ಪ್ರಭೃತಿಗಳೊಂದಿಗೂ—ಭಾರತದ ವೈಸರಾಯಿ ಮತ್ತು ಇತರ ಉನ್ನತ ಅಧಿಕಾರಿಗಳು-ಪತ್ರವ್ಯವಹಾರ ನಡೆಸಬೇಕಾದ ಸಂದರ್ಭ ಬರುತ್ತಿತ್ತು. ಅಸಹಕಾರ ಆಂದೋಲನ, ಸತ್ಯಾಗ್ರಹ ಚಳುವಳಿಗಳು, ಕೈದಿಗಳ ಬಿಡುಗಡೆ, ರಾಜಕೀಯ ಸುಧಾರಣೆಯ ವಿಷಯಗಳು ಇತ್ಯಾದಿ ವಿಷಯಗಳು ಅವುಗಳಲ್ಲಿ ಪ್ರಸ್ತಾಪವಾಗುತ್ತಿದ್ದವು. ಅವು ಸಮಸ್ಯೆಗಳ ಸ್ವರೂಪ, ಅವುಗಳಿಗೆ ಪರಿಹಾರ, ಈ ಬಗೆಗೆ ರಾಷ್ಟ್ರೀಯ ಕಾಂಗ್ರೆಸ್ಸಿನ ನಿಲುವನ್ನೂ ಸತ್ಯ-ಅಹಿಂಸೆಗಳ ವಿಧಾನದ ಗಾಂಧೀಜಿಯ ನಿಲುವನ್ನೂ ಎತ್ತಿ ತೋರಿಸುತ್ತವೆ. ಅವು ಇಂದಿಗೂ ರಾಜಕೀಯ ಇತಿಹಾಸದ ಅರಿವಿಗೆ ಆಧಾರಗಳಾಗಿ ನಿಂತಿವೆ. ಅವುಗಳನ್ನು ಓದುವುದೇ ಒಂದು ರಾಜಕೀಯ ಶಿಕ್ಷಣವಾದೀತು. ಪ್ರಪಂಚ ದ್ವಿತೀಯ ಮಹಾಯುದ್ಧದ ಸಮಯದಲ್ಲಿ 'ಪ್ರತಿಯೊಬ್ಬ ಬ್ರಿಟನ್ನನಿಗೂ' ಎಂದು ಬರೆದ ಪತ್ರ, ಹಿಟ್ಲರ್‌ಗೆ ಬರೆದ ಪತ್ರ, ಇವು ಎಲ್ಲ ಕಾಲಕ್ಕೂ ನಿಲ್ಲುವಂಥ ಪತ್ರಗಳು; ಗಾಂಧೀಜಿ ಕೇವಲ ಭಾರತೀಯ ಸ್ವಾತಂತ್ರ್ಯ ಹೋರಾಟವನ್ನು ಮಾತ್ರ ದೃಷ್ಟಿಯಲ್ಲಿ ಇಟ್ಟುಕೊಳ್ಳದೆ, ಇಡಿಯ ವಿಶ್ವದ, ಯುದ್ಧಗಳಿಂದ ಒಳಲಿ ಕಂಗೆಟ್ಟು, ಆತ್ಮವಿನಾಶಮಾಡಿಕೊಂಡ ಜಗತ್ತಿನ ಬಗೆಗೆ ವಿಶ್ವಚೇತನದ ಅಳಲನ್ನು ತೋಡಿಕೊಂಡಂತೆ, ಮನುಜಕುಲದ ಪ್ರತಿನಿಧಿಯಾಗಿ ಶಾಂತಿಯ ದಾಹವನ್ನು ಪ್ರತಿಬಿಂಬಿಸಿದಂತೆ ಕಂಡುಬರುತ್ತದೆ. ಇವುಗಳಲ್ಲಿ ಕೆಲವನ್ನು ನೋಡೋಣ.

ಹಿಟ್ಲರ್‌ಗೆ ಬರೆದ ಪತ್ರವಿದು: 'ಮಾನವ ಕೋಟಿಯ ಸಲುವಾಗಿ, ನಿಮಗೆ ಪತ್ರ ಬರೆಯಬೇಕೆಂದು ಗೆಳೆಯರು ನನ್ನನ್ನು ಒತ್ತಾಯ ಮಾಡುತ್ತಿದ್ದಾರೆ. ಆದರೆ ನಾನು ನಿಮಗೆ ಪತ್ರ ಬರೆಯುವುದು ಅಧಿಕಪ್ರಸಂಗವಾದೀತು ಎಂದು ಅವರ ಕೋರಿಕೆಗೆ ಒಪ್ಪಿಲ್ಲ. ಆದರೂ ಅದಕ್ಕೆ ಬಂದ ಬೆಲೆ

ಬರಲಿ, ನಾನು ಮಾಡುವ ಬಿನ್ನಹವನ್ನು ಮಾಡಲೇಬೇಕು ಎಂದು ಯಾವುದೋ ನನಗೆ ಹೇಳುತ್ತಿದೆ. ಇವತ್ತು ಜಗತ್ತಿನಲ್ಲಿ ಯುದ್ಧವಾಗದಂತೆ ತಡೆಯಬಲ್ಲವರು ನೀವು ಒಬ್ಬರೇ ಎಂಬುದು ಸ್ಪಷ್ಟ. ಯುದ್ಧವಾದರೆ ಮಾನವ ಜಾತಿ ಜರ್ಜರತೆಗೆ ಇಳಿದೀತು. ಗುರಿ, ನಿಮಗೆ ಎಷ್ಟೇ ಯೋಗ್ಯವೆನಿಸಿದರೂ ಅದಕ್ಕಾಗಿ ಈ ಬೆಲೆಯನ್ನು ಕೊಡಬೇಕೆ? ಯುದ್ಧದ ಮಾರ್ಗವನ್ನು ವಿಚಾರ ಪೂರ್ವಕವಾಗಿ ತಿರಸ್ಕರಿಸಿ, ಅದರಲ್ಲಿ ಸಾಕಷ್ಟು ವಿಫಲತೆ ಪಡೆದವನ ಪ್ರಾರ್ಥನೆಗೆ ಕಿವಿಗೊಟ್ಟೀರಾ? ಅಂತೂ, ನಿಮಗೆ ಬರೆದುದು ತಪ್ಪು ಎಂದಾದರೆ.' ನಿಮ್ಮ ಕ್ಷಮೆಯನ್ನೂ ಮೊದಲೇ ಕೇಳುತ್ತೇನೆ.

ಈ ಪತ್ರದಲ್ಲಿ ಕಂಡುಬರುವ ನಮ್ರತೆ, ಅನಾಸಕ್ತಿಭಾವ, ಗಮನಾರ್ಹವಾದುದು. ಹೀಗೆ ಬರೆಯಬೇಕಾದುದು ಅವರ ಅಂತರಾತ್ಮನ ಕರೆಯೇ ಆಗಿತ್ತು.

೧೯೪೨ರ ಚಲೇ ಜಾವ್ ಚಳುವಳಿ ಸಂದರ್ಭದಲ್ಲಿ 'ಪ್ರತಿಯೊಬ್ಬ ಬ್ರಿಟನ್ನನಿಗೆ' ಎಂದು ಉದ್ದೇಶಿಸಿ ಬರೆದ ಪತ್ರ ಬ್ರಿಟನ್ನಿನ ಬಗೆಗೆ ಅವರಿಗಿದ್ದ ಪ್ರೇಮದ ಆಳವನ್ನು ತೋರಿಸುತ್ತದೆ. ಇದೇ ರೀತಿ ದಕ್ಷಿಣ ಆಫ್ರಿಕಾದ ಹೋರಾಟದಲ್ಲಿ ನಿರತರಾಗಿದ್ದರೂ ಪತ್ರ ಬರೆದಿದ್ದರು.

"ಈ ಗಳಿಗೆಯೇ ಏಷ್ಯಾದಿಂಡ, ಆಫ್ರಿಕಾದಿಂದ ಕನಿಷ್ಠ ಪಕ್ಷ ಹಿಂದೂಸ್ಥಾನದಿಂದಲಾದರೂ ಮರಳಿಹೋಗಿ ಎಂದು ನಾನು ಬ್ರಿಟಿಷರನ್ನು ಬೇಡುತ್ತಿದ್ದೇನೆ. ಪ್ರತಿಯೊಬ್ಬ ಬ್ರಿಟನ್ನನೂ ನನ್ನ ಈ ಬಿನ್ನಹಕ್ಕೆ ಬೆಂಬಲಕೊಡಲಿ ಎಂದು ಬೇಡುತ್ತೇನೆ. ಲೋಕದ ಕ್ಷೇಮಕ್ಕಾಗಿ, ನಾಜೀ–ಫ್ಯಾಸಿಸ್ಟ್ ತತ್ವಗಳ ಸಂಹಾರಕ್ಕಾಗಿ, ಈ ಹೆಜ್ಜೆ ಇಡುವುದು ಅತ್ಯಗತ್ಯ. ಇದರಲ್ಲಿ ಜಪಾನೀ ತತ್ವವೂ ಸೇರಿದೆ. ಅದು ಈ ಎರಡರ ಒಳ್ಳೆಯ ನಕಲು. ನನ್ನ ಬಿನ್ನಹಕ್ಕೆ ಒಪ್ಪಿದರೆ, ಎಲ್ಲ ವೈರಿ ರಾಜ್ಯಗಳ ಯುದ್ಧವ್ಯೂಹವೂ ಭಗ್ನವಾದೀತು. ಬ್ರಿಟನ್ನಿನ ರಣಪಂಡಿತರ ಮಂತ್ರಾಲೋಚನೆಯೂ ಸ್ತಂಭಿತವಾದೀತು...."

ಭಾರತದ ಅಳಲನ್ನು ತೋಡಿಕೊಂಡು, ಯುದ್ಧದ ಪರಿಸ್ಥಿತಿಯಿಂದ ಉಂಟಾದ ದುಃಖ ಕಥೆಯನ್ನು ವಿವರಿಸಿ, ಜೀವನದಲ್ಲೆಲ್ಲ ಕವಿದಿರುವ 'ಅಸತ್ಯ–ಮಿಥ್ಯೆ'ಗಳ ಬಗೆಗೆ ವಿವರಿಸಿ, ಕಡೆಗೆ ಹೀಗೆ ಬರೆದರು ಆ ಪತ್ರದಲ್ಲಿ: "ಸತ್ಯವೆಂದು, ಪೂರ್ಣಸತ್ಯವೆಂದು ನಂಬಿದ್ದನ್ನೇ ನಾನು ಹೇಳಿದ್ದೇನೆ.... ಈ

ಅಸ್ವಾಭಾವಿಕ ಅಧಿಕಾರವನ್ನು ರಕ್ತಪಾತವಿಲ್ಲದೆ ಕೊನೆಗಾಣಿಸೋಣ, ಹೊಸ ಯುಗವನ್ನೇ ಆರಂಭಿಸೋಣ ಎಂದು ಬೇಡುತ್ತೇನೆ."

ಜನಾಂಗಗಳ ಮೈತ್ರಿಯಲ್ಲಿ, ಪರಸ್ಪರ ಸಮಾನತೆಯ ಸ್ವತಂತ್ರ ಸಾಹಚರ್ಯದಲ್ಲಿ ವಿಶ್ವಶಾಂತಿ ಅಡಗಿದೆಯೆಂಬುದು ಅವರ ಅಭೇದ್ಯ ನಂಬಿಕೆಯಾಗಿತ್ತು. ಅದನ್ನೇ ಅವರು ಆತ್ಮಾಭಿಮಾನದಿಂದ ಹೇಳುವ ಸಾಮರ್ಥ್ಯವನ್ನು ಪಡೆದಿದ್ದರು. ಅಂತರಾತ್ಮನ ಕರೆ ಅವರಿಗೆ ಆ ರೀತಿ ಬರೆಯಲು ಪ್ರೇರಿಸುತ್ತಿತ್ತು.

ಬ್ರಿಟಿಷರು ಭಾರತದ ಅನೈಕ್ಯದ ಮಾತನ್ನು ಎತ್ತಿ ಹೇಳುತ್ತಿದ್ದರು ಭಾರತದ ಸ್ವಾತಂತ್ರ್ಯದ ಪ್ರಶ್ನೆ ಬಂದಾಗ; ಹಿಂದೂ-ಮುಸ್ಲಿಂ ಒಂದಾಗಿ ಎನ್ನುತ್ತಿದ್ದರು; ದೇಶೀಯ ಅರಸರ ಪ್ರಶ್ನೆಯನ್ನು ಎತ್ತುತ್ತಿದ್ದರು; ಭಿನ್ನ ಭಿನ್ನ ಜಾತಿಗಳವರು—ಹಿಂದುಳಿದವರು, ನಿಮ್ನ ವರ್ಗದವರು ಐಕ್ಯವಾಗಿ ಎನ್ನುತ್ತಿದ್ದರು. ಇದಕ್ಕಾಗಿ ಗಾಂಧೀಜಿ ಜಿನ್ನಾರೊಡನೆ ಪತ್ರವ್ಯವಹಾರ ನಡೆಸಿದರು. ನರೇಂದ್ರರಿಗೆ ಬುದ್ಧಿವಾದ ಹೇಳಿದರು. ಜಿನ್ನಾ ತಮ್ಮ ಪತ್ರದಲ್ಲಿ, "ಭಾರತದ ಮುಸಲ್ಮಾನರನ್ನು ಪ್ರತಿನಿಧಿಸುವ ಏಕೈಕ ಅಧಿಕೃತ ಸಂಸ್ಥೆಯೆಂದು ಮುಸ್ಲಿಂ ಲೀಗನ್ನು ಒಪ್ಪಿಕೊಳ್ಳಿ; ಕಾಂಗ್ರೆಸ್ಸಿಗೂ ಉಳಿದ ಹಿಂದೂಗಳಿಗೂ ನೀವು ಪ್ರತಿನಿಧಿ" ಎಂದು ಬರೆದಿದ್ದರು. ಅದಕ್ಕೆ ಗಾಂಧೀಜಿ ಹೀಗೆ ಉತ್ತರ ಬರೆದರು: "ಕಾಂಗ್ರೆಸ್ಸಿನ ಪರ, ದೇಶಾದ್ಯಂತದ ಹಿಂದೂಗಳ ಪರ ನಾನು ಮಾತನಾಡಬಲ್ಲೆನೆಂದು ನೀವು ಬರೆದಿದ್ದೀರಿ. ಆ ಪರೀಕ್ಷೆಗೆ ನಾನು ಅರ್ಹನಾಗಲಾರೆನೆಂದು ನನ್ನ ಅಂಜಿಕೆ. ನೀವು ಹೇಳುವ ಅರ್ಥದಲ್ಲಿ ನಾನು ಕಾಂಗ್ರೆಸ್ಸನ್ನು ಪ್ರತಿನಿಧಿಸಲಾರೆ, ಹಿಂದೂಗಳನ್ನೂ ಪ್ರತಿನಿಧಿಸಲಾರೆ. ಆದರೆ ನನಗಿರುವ ನೈತಿಕ ಪ್ರಭಾವವನ್ನೆಲ್ಲ ಪೂರ್ಣವಾಗಿ ಬೀರಿ, ಗೌರವಪೂರ್ಣ ಒಪ್ಪಂದವನ್ನು ಸಾಧಿಸಲು ಯತ್ನಿಸುತ್ತೇನೆ."

ದುರ್ದೈವ, ಜಿನ್ನಾರವರ ಹಠಮಾರಿತನ ದೇಶದ ವಿಭಜನೆಯ ಪ್ರಶ್ನೆಯನ್ನೇ ಮುಂದುವರಿಸಿತು.

ನರೇಂದ್ರರಿಗೆ ಹೀಗೆ ಬರೆದರು: "ನರೇಂದ್ರರು ಇಲ್ಲದಂತಾಗಲೆಂದು ನನ್ನ ಬಯಕೆಯಲ್ಲ. ಹೆಸರಿಗಲ್ಲ—ನಿಜವಾಗಿಯೂ ಯಜಮಾನತನವಾಗಲಿ ಅವರ ನಿರಂಕುಶಾಧಿಕಾರ ಎಂಬ ಪರಿವರ್ತನೆಯ ಆಸೆ ನನ್ನದು. ಅವರ

ಸ್ವೇಚ್ಛಾಚಾರ ಕೊನೆಗೊಳ್ಳಬೇಕು; ಎಂಥ ಪುರಾತನ ವಂಶದವರಾಗಲೀ ಜನರ ಸ್ವಾತಂತ್ರ್ಯ ಒಬ್ಬ ವ್ಯಕ್ತಿಯ ಇಷ್ಟಕ್ಕೆ ಅಧೀನವಾಗಬಾರದು. ರಾಜನಾಗಲೀ ಶ್ರೀಮಂತ ಜಾಗೀರುದಾರನಾಗಲೀ ವರ್ತಕನಾಗಲೀ ಯಾರೇ ಆಗಲೀ, ಪರಂಪರಾರ್ಜಿತವಾದ ಆಸ್ತಿಗೆಲ್ಲ ಸರ್ವಾಧಿಕಾರಿಯಾಗಿ ಮನಸ್ಸಿಗೆ ಬಂದಂತೆ ವ್ಯವಸ್ಥೆ ಮಾಡಲಾಗದು.'...ಮುಂದುವರಿಸಿ....'ದೇಶದಲ್ಲಿ ಕಾಂಗ್ರೆಸ್ಸಿಗಿರುವ ಶಕ್ತಿ ಪ್ರಭಾವಗಳನ್ನು ಕ್ಷುದ್ರವಾಗಿ ಎಣಿಸಬೇಡಿ—ಎಂದು ರಾಜರನ್ನು ಬೇಡುತ್ತೇನೆ. ಇನ್ನೂ ಕಾಂಗ್ರೆಸ್ಸಿನ ನೀತಿ ಅಹಿಂಸೆಯೇ. ಆಗಲೇ ಹಿಂಸೆಯ ಗಾಳಿ ಬಲವಾಗಿ ಬೀಸುತ್ತಿದೆ.... ತಮಗಾಗಿ, ತಾವು ಜನ್ಮವೆತ್ತಿದ ದೇಶಕ್ಕಾಗಿ ಅಹಿಂಸೆಯ ಪರವಾಗಿ ನಿಲ್ಲಿ ಎಂದು ನರೇಂದ್ರರನ್ನು ಪ್ರಾರ್ಥಿಸುತ್ತೇನೆ. ಕಾಂಗ್ರೆಸ್ ಹೆಚ್ಚು ಹೆಚ್ಚು ಅಹಿಂಸಾಪಂಥಿಯಾದರೂ ಆದೀತು, ಇಲ್ಲವೇ ಈಗಲೇ ಹಿಂಸಾಕೃತಿಗೆ ಕೈಯಿಕ್ಕದಿದ್ದರೂ ಮುಂದಿನ ಹಿಂಸಾಕಾರ್ಯಕ್ಕೆ ಸಿದ್ಧವಾಗುತ್ತಾ, ಹಿಂಸಾಪಂಥಿಯಾದೀತು. ಏನೇ ಆಗಲಿ, ಹೇಡಿಗಳಿಗೆ ಮಾತ್ರ ಆಸ್ಪದ ಕೊಡದು. ಕೊಟ್ಟರೆ, ಈಗ ಅದಕ್ಕಿರುವ ಪ್ರಭಾವ, ಬಲ ಇಳಿದೀತು..."

ಸ್ಪಷ್ಟವಾದ ಮಾತು; ಕಾಂಗ್ರೆಸ್ಸಿಗೂ ನರೇಂದ್ರರಿಗೂ! ಎರಡರ ದೌರ್ಬಲ್ಯಗಳನ್ನೂ ಎತ್ತಿ ತೋರಿಸಿ, ನೈಜ ಶಕ್ತಿಯ ಪಥ ಅನುಸರಿಸಲು ಸೂಚನೆ. ಇದು ಅವರ ಅಹಿಂಸಾಮಾರ್ಗದ ವೈಶಿಷ್ಟ್ಯ.

ಭಾರತದ ಅಧಿಕಾರ ಸೂತ್ರ ಹಿಡಿದ ಎಲ್ಲ ವರಿಷ್ಠರಿಗೂ ಪತ್ರ ಬರೆಯುತ್ತಿದ್ದರೂ, ಅವಕಾಶ ಬಂದಾಗ. ಕಾಲಕಾಲಕ್ಕೆ ಭಾರತಕ್ಕೆ ಬಂದ ವೈಸ್‌ರಾಯರಿಗೂ ಅವರು ಪತ್ರಗಳನ್ನು ಬರೆಯುತ್ತಿದ್ದರು. ಬ್ರಿಟಿಷ್ ಪ್ರಧಾನಿ, ಕಾರ್ಮಿಕ ನಾಯಕ ಮ್ಯಾಕ್ಡೊನಾಲ್ಡರಿಗೂ, ಸ್ಟಾಫರ್ಡ್ ಕ್ರಿಪ್ಸ್ ಮತ್ತು ಪೆಥಿಕ್ ಲಾರೆನ್ಸ್ ಅವರಿಗೂ ಪತ್ರ ಬರೆದರು:

೧೯೪೫ರಲ್ಲಿ ಲಾರ್ಡ್ ಲಾರೆನ್ಸ್‌ರಿಗೆ ಬರೆದ ಪತ್ರವಿದು: 'ನಿಮ್ಮ ಮದುವೆಯ ದಿನವೂ ನನ್ನ ಜನ್ಮ ದಿನವೂ ಎರಡೂ ಒಂದೇ ಸಲ ಬಂದದ್ದು ಎಷ್ಟು ಚೆನ್ನು. ನಿಮ್ಮ ಅಭಿನಂದನೆಗಳಿಗೆ ವಂದನೆಗಳು. ನಾನು ಅದನ್ನು ಮರು ನುಡಿಯಲೇ? ಮದುವೆಯೂ ಒಂದು ಹೊಸ ಜನ್ಮ ತಾನೇ?"...

ಎಂಥ ಆತ್ಮೀಯತೆಯಿದೆ ಈ ಪತ್ರದಲ್ಲಿ! ರಾಜಕೀಯ ವಿಚಾರಗಳನ್ನು ಗಹನವಾಗಿ ಚರ್ಚಿಸುವಾಗಲೇ ಇಂಥ ಹೃದಯ ಸೆಳೆವ ಪ್ರೇಮಭಾವ. ಭಾರತದ ಕಡೆಯ ವೈಸ್‌ರಾಯ್ ಲಾರ್ಡ್ ಮೌಂಟ್‌ಬೇಟನ್ನರಿಗೆ ಬರೆದ ಒಂದು ಪತ್ರದ ಭಾಗವಿದು : 'ಯಾರೇ ವಿರುದ್ಧವಾಗಿ ಏನೇ ಹೇಳಲಿ, ಭಾರತದ ವಿಭಜನೆಗೆ ಬ್ರಿಟಿಷರು ಭಾಗಿಗಳಾಗುವುದು ಮಹತ್ತರವಾದ ತಪ್ಪು ಆದೀತು. ವಿಭಜನೆ ಆಗುವುದೇ ಇದ್ದರೆ ಅದು ಬ್ರಿಟಿಷರು ಹೊರಟುಹೋದ ಮೇಲೆ ಆಗಲಿ. ಉಭಯ ಪಕ್ಷಗಳ ನಡುವೆ ಒಂದು ಒಪ್ಪಂದವಾಗಿ ಆಗಲಿ; ಕದನವಾಗಿ ಆಗಲಿ." ಈ ಮಾತನ್ನು ೧೯೪೭ರ ಮೇ ೮ರಂದು ಬರೆದರು. ದೇಶದ ವಿಭಜನೆಯ ವಿಷಯವನ್ನು ಅವರು ತೀರ ವಿರೋಧಿಸಿದ್ದರು. ವಿಭಜನೆಯ ಕೆಟ್ಟ ಹೆಸರು ಬ್ರಿಟಿಷರಿಗೆ ತಾನೆ ಏಕೆ ಬರಬೇಕು ಎಂಬುದು ಅವರ ಕಳಕಳಿಯ ವಾದವಾಗಿತ್ತು. ತನ್ನ ದೇಶದ ಬಗೆಗೆ ಎಷ್ಟು ಅಭಿಮಾನವೋ ಬ್ರಿಟನ್ನಿನ ಬಗೆಗೂ ಅಂಥದೇ ಅಭಿಮಾನ ಅವರಲ್ಲಿತ್ತು.

ರಾಷ್ಟ್ರದ ಮಹಾ ನಾಯಕರುಗಳ ಪೈಕಿ ಬಹುತೇಕ ಎಲ್ಲರೊಡನೆಯೂ ಅವರು ಪತ್ರ ಸಂಬಂಧವಿಟ್ಟುಕೊಂಡಿದ್ದರು. ದಾದಾಭಾಯಿ ನವರೋಜೀ, ಗೋಖಲೆ, ತಿಲಕ್, ಮದನಮೋಹನ ಮಾಳವೀಯ, ಮೋತೀಲಾಲ್ ನೆಹರೂ ಇವರೊಡನೆಯೂ ಮತ್ತು ಕವಿವರ್ಯ ಠಾಕೂರರೊಂದಿಗೂ ಆ ಸಂಬಂಧವಿತ್ತು. ಗೋಖಲೆ ಗಾಂಧೀಜಿಗೆ 'ರಾಜಕೀಯ ಗುರು'ವಿನ ಸಮಾನವಾಗಿದ್ದರು.

ಗಾಂಧೀಜಿ ಅಸಹಕಾರ ಆಂದೋಳನ ಆರಂಭಮಾಡಿ, ವಿದೇಶೀ ವಸ್ತ್ರ ದಹನಕ್ಕೆ ಕರೆಯಿತ್ತಾಗ, ಕಾವ್ಯಜೀವಿ ವಿಶ್ವಮಾನವವಾದಿ ಠಾಕೂರರಿಗೆ ಸರಿ ಎನಿಸಿಲಿಲ್ಲ. ಅವರು ತಮ್ಮ ನೋವನ್ನು ತೋಡಿಕೊಂಡು ಮಾಡರ್ನ್ ರಿವ್ಯೂದಲ್ಲಿ ಮೂರು ಲೇಖನಗಳನ್ನು ಬರೆದರು. ಅದಕ್ಕೆ ಗಾಂಧೀಜಿ ಬರೆದ ಉತ್ತರ ಹೀಗಿತ್ತು : '. . . . ಇಂಗ್ಲಿಷ್ ಆಡಳಿತಗಾರರು ಹೇಳಿದ್ದನ್ನೆಲ್ಲ ಹಾಗೇ ಒಪ್ಪಿ, ಸಹಕರಿಸಲು ನಾವು ಸಿದ್ಧರಿಲ್ಲ ಎಂಬುದು ನಮ್ಮ ಅಸಹಕಾರ.' ಇದು ಸರಳವಾಗಿ ಅಸಹಕಾರದ ಅರ್ಥ. ಅಸಹಕಾರ ಬ್ರಿಟಿಷ್ ಜನದ ವಿರೋಧವಲ್ಲ. ಮುಂದುವರಿಸಿ ಹೀಗೆ ಹೇಳಿದರು : "ಬನ್ನಿ, ನಮ್ಮ ನಿಯಮಗಳ ಪ್ರಕಾರ ನಮ್ಮೊಡನೆ ಸಹಕರಿಸಿರಿ. ಇದರಿಂದ ನಮಗೂ ನಿಮಗೂ ಜಗತ್ತಿಗೂ

ಒಳ್ಳೆಯದಾದೀತು ಎಂದು ಬ್ರಿಟಿಷರಿಗೆ ಹೇಳುತ್ತೇನೆ. ಕಾಲು ಹಿಡಿದು ಎತ್ತಿ ಒಗೆಸಿಕೊಳ್ಳಲು ನಾವು ಒಪ್ಪುವುದಿಲ್ಲ, ನಿರಾಕರಿಸುತ್ತೇವೆ. . ."

ಭಾರತೀಯ ರಾಷ್ಟ್ರೀಯತೆಯನ್ನು ಕುರಿತು ಹೀಗೆ ಹೇಳಿದರು: "... ಭಾರತೀಯ ರಾಷ್ಟ್ರೀಯತೆ ಪ್ರತ್ಯೇಕವಾದುದಲ್ಲ, ಪರರನ್ನು ಆಕ್ರಮಿಸುವ ಪ್ರವೃತ್ತಿಯಲ್ಲ, ವಿನಾಶಕಾರಿಯೂ ಅಲ್ಲ. ಆರೋಗ್ಯಪ್ರದ, ಧಾರ್ಮಿಕ, ಆದ್ದರಿಂದ ಕಾರುಣ್ಯಪೂರ್ಣ ಈ ಮನೋಧರ್ಮ. ಮಾನವ ಲೋಕಕ್ಕಾಗಿ ಸಾಯಲು ಬಯಸುವ ಮುನ್ನ ಭಾರತವು ಬದುಕಲು ಕಲಿಯಬೇಕು. ಬೆಕ್ಕಿನ ಹಲ್ಲಿನ ಸಂದಿಯಲ್ಲಿ ಸಿಕ್ಕ ಇಲಿಯ ಅಪರಿಹಾರ್ಯ ಆತ್ಮಾಹುತಿಗೆ ಏನು ಫಲ?"

ಮುಂದಿನ ಮಾತು ಗಾಂಧೀಜಿಯ ಹೃದಯಾಂತರಾಳದಿಂದ ಬಂದ ಮಾತು. ಇದು ಅವರ ಕವಿಸಮಯ ಎನ್ನಬೇಕು. "ರವೀಂದ್ರರದು ಕವಿ ಜೀವ. ಅವರು ಭವಿಷ್ಯದಲ್ಲಿ ವಿಹರಿಸುವವರು. ನಾವು ಹಾಗೆ ಮಾಡಬಲ್ಲೆವೇ? ನಸುಕಿನಲ್ಲಿ ನನ್ನಿವಾಡುಗಳನ್ನು ಉಲಿಯುತ್ತ ಗರಿಗೆದರಿ ಗಗನಕ್ಕೇರಿರುವ ಹಕ್ಕಿಗಳ ಸೊಗಸಾದ ಚಿತ್ರವನ್ನು ನಮ್ಮ ಮೆಚ್ಚುಗೆಯ ಕಣ್ಣಿಗೆ ತೋರಿಸುತ್ತಾರೆ. ನಮಗೂ ಕಣ್ಣು ತುಂಬುತ್ತದೆ. ಆ ಹಕ್ಕಿ ಹಿಂದಿನ ದಿನ ಹೊಟ್ಟೆ ತುಂಬ ತಿಂದು ಹಾಯಾಗಿ ಮಲಗಿ, ಅದಕ್ಕೆ ಹೊಸ ಬಲ ಹೊಸ ರಕ್ತ ಇರುಳಿನಲ್ಲಿ ಬಂದಿದೆ. ಬೆಳಗ್ಗೆ ಮತ್ತೆ ಮುಗಿಲಿಗೆ ಹಾರಲು ಆ ಬಲ ನೆರವಾಗುತ್ತದೆ. ನನ್ನ ದುಃಖವನ್ನೇನು ಹೇಳಲಿ? ನಾನು ನೋಡಿರುವ ಹಕ್ಕಿಗಳಿಗೆ ಹಾರುವುದು ಹಾಗಿರಲಿ ರೆಕ್ಕೆ ಬಡಿಯಲೂ ಗರಿಗೆದರಲೂ ಬರಲಿಲ್ಲ. ಆ ನೋಟ ತುಂಬ ನೋಯಿಸಿದೆ. ಹಿಂದೂಸ್ಥಾನದ ಮಾನವಪಕ್ಷಿಗೆ ನಿದ್ದೆ, ವಿಶ್ರಾಂತಿ ಎಲ್ಲಿಯದು? ಅದೊಂದು ಸೋಗು; ಸುಳ್ಳು ನಾಟಕ. ಆ ನಾಟಕ ಮುಗಿಸಿ, ಬೆಳಗ್ಗೆ ಎದ್ದಾಗ ಈ ಮಾನವ ಪಕ್ಷಿಗೆ ಮುನ್ನಿನ ದಿನಕ್ಕಿಂತ ಬಲ ಇಳಿದು ಹೋಗಿರುತ್ತದೆ. ಕೋಟ್ಯನುಕೋಟಿ ಜನಕ್ಕೆ ಬಾಳು ನಿತ್ಯ ಜಾಗರಣೆ ಅಥವಾ ಶಾಶ್ವತ ಸಮಾಧಿ. ಆ ಸಂಕಟ ಅವರ್ಣನೀಯ. ಅನುಭವಿಸಬೇಕಲ್ಲದೆ ಅದನ್ನು ಅರಿತುಕೊಳ್ಳಲು ಬೇರೆ ದಾರಿ ಇಲ್ಲ. ಸಂಕಟದಿಂದ ತಲ್ಲಣಿಸುವ ರೋಗಿಗಳಿಗೆ ಕಬೀರನ ಹಾಡು ಹೇಳಿ ಸಮಾಧಾನ ನೀಡಲಾದೀತೆ? ಹಸಿವಿನಿಂದ ತಲ್ಲಣಿಸುತ್ತಿರುವ ಈ ಜನ ಬೇಡುವ ಕಾವ್ಯ ಒಂದೇ—ಪುಷ್ಟಿಕರ ಅನ್ನ.

ಅದನ್ನು ಅವರಿಗೆ ನೀಡಲು ಸಾಧ್ಯವಿಲ್ಲ. ಅವರೇ ಅದನ್ನು ಗಳಿಸಬೇಕು. ಮೈಯ ಬೆವರು ಸುರಿಸಿ ಗಳಿಸಬೇಕು. . ."

ಗಾಂಧೀಜಿ ಕಂಡ ಜೀವನ ಸತ್ಯದಿಂದ ಉದ್ಭವಿಸಿ ಬಂದ ಕಾವ್ಯಧಾರೆಯಿದು. ಆ ಜೀವನದಲ್ಲಿ ಕಾಯೇನ ವಾಚಾ ಮನಸಾ ಸಮರಸರಾಗಿ ಅದರ ಏಳಿಗೆಯನ್ನೇ ತಪಸ್ಸನ್ನಾಗಿ ಹೊಂದಿದ್ದ ಗಾಂಧೀಜಿ ಮತ್ತಾವ ಕಾವ್ಯ ರಚಿಸಿಯಾರು? ಗೀತೆ ಹಾಡಿಯಾರು? ಈ ಕಾವ್ಯಸ್ಫುರಣೆ ಎಲ್ಲ ಕಾಲಕ್ಕೂ ನಿಲ್ಲುವಂಥದು.

ಗಾಂಧೀಜಿ ಜವಾಹರಲಾಲ್ ಮತ್ತು ಸರ್ದಾರ್ ಪಟೇಲ್ ಮತ್ತಿತರ ಮಹಾ ನಾಯಕರೊಡನೆ ಹೊಂದಿದ್ದ ಸಂಬಂಧ ಅವರ್ಣನೀಯ. ಈರ್ವರಿಗೂ ಅವರು ಬಹಳ ಪತ್ರಗಳನ್ನು ಬರೆದರು. ಇವುಗಳಲ್ಲಿ ಕಾಣುವ ಆತ್ಮೀಯ ಸ್ಪರ್ಶ (Personal touch) ಮಾನವೀಯ ಸ್ಪರ್ಶ (Human touch) ಹೇಳಿತೀರದು.

೧೯೨೮ರ ಸುಮಾರಿನಲ್ಲಿ ಜವಾಹರಲಾಲ್ ಗಾಂಧೀಜಿಗೆ ಪತ್ರ ಬರೆದು ತಮ್ಮ ಹೃದಯಾಂತರಾಳದ ಸಮಸ್ಯೆಯನ್ನು ಅವರ ಮುಂದೆ ತೋಡಿಕೊಂಡಿದ್ದರು. ಅವರ ಆರ್ಥಿಕ ಸ್ಥಿತಿ ಸಮರ್ಪಕವಾಗಿರಲಿಲ್ಲ. ತಂದೆಯೂ ಅವರ ವಿಷಯದಲ್ಲಿ ಕುಪಿತರಾಗಿದ್ದರು. ಆಗ ಗಾಂಧೀಜಿ ಹೀಗೆ ಬರೆದರು: "ನಿನ್ನ ಅತ್ಯಂತ ಹೃದಯಸ್ಪರ್ಶಿ ಪತ್ರ ಬಂದಿದೆ. ನೀನು ಧೀರತನದಿಂದ ವರ್ತಿಸುವೆಯೆಂದು ನನಗೆ ಗೊತ್ತು. ನಿಮ್ಮ ತಂದೆ ಈಗ ಕುಪಿತರಾಗಿದ್ದಾರೆ. ಸಾಧ್ಯವಾದರೆ ನೀನು ಅವರೊಂದಿಗೆ ಸ್ಪಷ್ಟವಾಗಿ ಮಾತನಾಡಿ, ಅವರನ್ನು ಕೆರಳಿಸುವಂಥ ಕಾರ್ಯವನ್ನು ಕೈಬಿಡಬೇಕು. ಅವರು ಅಸುಖಿಯಾದರೆ ನಾನೂ ಅಸುಖಿಯಾದಂತೆಯೇ. ಅವರ ಕೋಪವೇ ಅವರ ಅಸುಖದ ಸ್ಪಷ್ಟ ಚಿಹ್ನೆ ....ನಿನಗಾಗಿ ಸ್ವಲ್ಪ ಹಣ ಕೂಡಿಸಲು ಯತ್ನಿಸಲೆ? ನೀನೇಕೆ ಪ್ರತಿಫಲ ಕೊಡುವ ಕೆಲಸ ಕೈಗೊಳ್ಳಬಾರದು? ನಿಮ್ಮ ತಂದೆಯ ಮನೆಯಲ್ಲಿದ್ದರೂ ನೀನು ಬೆವರು ಹರಿಸಿ ದುಡಿದು ಜೀವಿಸಬೇಕು. ನೀನು ಯಾವುದಾದರೂ ಕೆಲವು ಪತ್ರಿಕೆಗಳಿಗೆ ಬಾತ್ಮೀದಾರನಾಗುವೆಯಾ? ಅಥವಾ ಪ್ರಾಧ್ಯಾಪಕ ವೃತ್ತಿಯನ್ನು ಕೈಗೊಳ್ಳುವೆಯಾ?"

ಪ್ರೀತಿಯ ತಂದೆಯೊಬ್ಬ ಮಗನಿಗೆ ಅವನ ಸಮಸ್ಯೆಗಳ ಬಗೆಗೆ ಬರೆದಂತಿದೆ.

ಮತ್ತೊಂದು ಪತ್ರದಲ್ಲಿ ಹೀಗೆ ಬರೆದರು : "…. ನಿನ್ನ ಆರೋಗ್ಯದ ಬಗೆಗೆ ನನಗೆ ಆತಂಕವಿದ್ದೇ ಇದೆ. ಆಗಾಗ ನಿನಗೆ ಬರುತ್ತಿರುವ ಈ ಜ್ವರ ಸರಿಯಾದುದಲ್ಲ. ನೀನೂ ಕಮಲಾ (ಪತ್ನಿ) ಇಬ್ಬರೂ ವಿಶ್ರಾಂತಿ ತೆಗೆದುಕೊಳ್ಳಬೇಕು.

"ನಿಮ್ಮ ತಂದೆ ನನಗೆ ಪತ್ರ ಬರೆದಿದಾರೆ. ಅವರು ಭಾವಿಸಿರುವಷ್ಟು ದೂರ ನಾನು ಹೋಗಲು ಯೋಚಿಸಿರಲಿಲ್ಲ. ನಿಮ್ಮ ತಂದೆಗೆ ನೆರವನ್ನು ನೀಡಲು ಯಾರನ್ನೂ ನಾನು ಪ್ರಾರ್ಥಿಸಲು ಯೋಚಿಸಲಾರೆ. ಆದರೆ ನಿನ್ನ ಸಾರ್ವಜನಿಕ ಸೇವೆಗಳನ್ನು ಪರಿಗಣಿಸಿ ಅದಕ್ಕೋಸ್ಕರ ಧನ ನೀಡುವುದು ತಮಗೆ ಸೌಭಾಗ್ಯವೆಂದು ಭಾವಿಸುವ ಮಿತ್ರನನ್ನೋ ಮಿತ್ರರನ್ನೋ ನಾನು ಪ್ರಾರ್ಥಿಸಲು ಶಂಕಿಸುವುದಿಲ್ಲ. ನೀನಿರುವ ಪರಿಸ್ಥಿತಿಯ ಕಾರಣದಿಂದ ನಿನ್ನ ಆವಶ್ಯಕತೆಗಳು ವಿಶೇಷ ರೂಪದ್ದಾಗಿರದೆ ಇದ್ದರೆ ನೀನು ಸಾರ್ವಜನಿಕ ನಿಧಿಯಿಂದ ಹಣ ಸ್ವೀಕರಿಸಬೇಕೆಂದು ಒತ್ತಾಯಪಡಿಸುತ್ತೇನೆ. ನೀನೇ ಯಾವುದಾದರೂ ಉದ್ಯಮ ಮಾಡಿ ನಿಮ್ಮ ನಿರ್ವಹಣೆ ಮಾಡಬೇಕು ಇಲ್ಲವೇ ನಿನ್ನ ಸೇವೆ ಸಲ್ಲುವಂತಾಗಲು ನಿನ್ನ ಆತ್ಮೀಯ ಗೆಳೆಯರು ನಿಧಿ ಕೊಡಲು ನೀನು ಒಪ್ಪಿಕೊಳ್ಳಬೇಕೆಂದು ನನಗೆ ಮನವರಿಕೆಯಾಗಿದೆ. ಯಾವುದಕ್ಕೂ ತ್ವರಿತವಿಲ್ಲ ; ನೀನು ಸಿಡಿಮಿಡಿಗೊಳ್ಳದೆ ಅಂತಿಮ ತೀರ್ಮಾನಕ್ಕೆ ಬರುವುದು ಒಳ್ಳೆಯದು. ನೀನು ಯಾವುದಾದರೂ ಉದ್ಯಮವನ್ನು ಮಾಡಲು ತೀರ್ಮಾನಿಸಿದರೂ ನನಗೇನೂ ಚಿಂತೆಯಿಲ್ಲ. ನಿನಗೆ ಮನಶ್ಶಾಂತಿ ಇರಬೇಕೆಂಬುದೇ ನನ್ನ ಆಸೆ. ಯಾವುದಾದರೂ ಉದ್ಯಮದ ವ್ಯವಸ್ಥಾಪಕನಾಗಿಯಾದರೂ ನೀನು ದೇಶಸೇವೆ ಸಲ್ಲಿಸಬಲ್ಲೆಯೆಂಬುದನ್ನು ನಾನು ಖಚಿತವಾಗಿ ಬಲ್ಲೆ. ನಿನಗೆ ಪೂರ್ಣ ಶಾಂತಿಯನ್ನು ಕೊಡುವ ಯಾವ ನಿರ್ಣಯಕ್ಕೆ ನೀನು ಬಂದರೂ ಅದರ ಬಗೆಗೆ ನಿಮ್ಮ ತಂದೆ ಚಿಂತಿಸುವುದಿಲ್ಲ ಎಂದು ನನ್ನ ನಂಬಿಕೆ."

ಇಬ್ಬರಿಗೂ ಭಿನ್ನಾಭಿಪ್ರಾಯ ಮೂಡಿದಾಗಲೂ ಇದೇ ವಾತ್ಸಲ್ಯ ; ಇದೇ ಗಾಂಭೀರ್ಯ ಕಂಡುಬರುತ್ತದೆ. ೧೯೨೭ರಲ್ಲಿ ಜವಾಹರಲಾಲ್

ಯೂರೋಪಿನ ಪ್ರವಾಸ ಮುಗಿಸಿಕೊಂಡು ಬಂದಮೇಲೆ ಅವರ ಚಟುವಟಿಕೆಗಳನ್ನು ಒಪ್ಪದಿದ್ದ ಗಾಂಧೀಜಿ ಹೀಗೆ ಬರೆದರು :

"ಈಗ ನಾನು ಬರೆಯುತ್ತಿರುವುದರ ಬಗೆಗೆ ನೀನು ಅಸಮಾಧಾನಪಟ್ಟು ಕೊಳ್ಳದಷ್ಟು ನನ್ನನ್ನು ಪ್ರೀತಿಸುತ್ತೀಯೆಂದು ಭಾವಿಸುತ್ತೇನೆ. ಅದು ಹೇಗಿದ್ದರೂ ನಾನು ನಿನಗೆ ಬರೆಯಲೇ ಬೇಕೆನಿಸಿದುದನ್ನು ಬರೆಯದಿರಲು ಲೇಖನಿಯನ್ನು ಹಿಡಿತದಲ್ಲಿಟ್ಟುಕೊಳ್ಳದಷ್ಟು ನಿನ್ನನ್ನು ಪ್ರೀತಿಸುತ್ತೇನೆ.

"ನೀನು ಬಹಳ ವೇಗವಾಗಿ ಹೋಗುತ್ತಿದೀಯೆ. ನೀನು ಚಿಂತಿಸುವುದಕ್ಕೂ ಪರಿಸ್ಥಿತಿಯನ್ನು ಅರಿತುಕೊಳ್ಳುವುದಕ್ಕೂ ಸ್ವಲ್ಪಕಾಲ ತೆಗೆದುಕೊಳ್ಳಬೇಕಾಗಿತ್ತು. . . . ನಿನ್ನ ಐರೋಪ್ಯ ಅನುಭವಗಳ 'ಬೆಳಕಿನಲ್ಲಿ ದೇಶವನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ಇಂದಿನ ವಿಧಾನಗಳಲ್ಲಿ, ಮಾರ್ಗಗಳಲ್ಲಿ ನಿನಗೆ ತಪ್ಪು ಕಂಡುಬಂದರೆ, ಅಗತ್ಯವಾಗಿ ನಿನ್ನ ಅಭಿಪ್ರಾಯಗಳನ್ನು ಆಚರಣೆಗೆ ತೆಗೆದುಕೊಂಡು ಬಾ. ಆದರೆ ದಯಮಾಡಿ ಒಂದು ವ್ಯವಸ್ಥಿತ ಪಕ್ಷವನ್ನು ಕಟ್ಟು."

ಇನ್ನೊಂದು ಪತ್ರದಲ್ಲಿ ಇನ್ನೂ ಕಠೋರವಾಗಿ ಬರೆದರು : "ನನ್ನ ಮೇಲೂ ನನ್ನ ಅಭಿಪ್ರಾಯಗಳ ಮೇಲೂ ನೀನು ಬಹಿರಂಗ ಹೋರಾಟ ನಡೆಸಬೇಕೆಂಬುದು ನನಗೆ ಸ್ಪಷ್ಟವಾಗಿ ಕಾಣುತ್ತದೆ. ನಾನು ತಪ್ಪಾಗಿದ್ದರೆ ದೇಶಕ್ಕೆ ಅಪಾರ ಹಾನಿ ಎಸಗಿದಂತಾಗುತ್ತದೆ. ನೀನು ಅದನ್ನು ಅರಿತುಕೊಂಡ ಮೇಲೆ ನನ್ನ ವಿರುದ್ಧ ದಂಗೆಯೇಳುವುದು ನಿನ್ನ ಕರ್ತವ್ಯ. . . ನಿನಗೂ ನನಗೂ ಇರುವ ವ್ಯತ್ಯಾಸಗಳು ಬಹಳ ಅಗಾಧವಾಗಿಯೂ ಬಹಳ ಮೂಲಭೂತವಾಗಿಯೂ ಇರುವುದರಿಂದ ಎರಡಕ್ಕೂ ಸಂಗಮ ಸ್ಥಳವೇ ಇಲ್ಲವೆಂದು ನನಗೆ ಕಾಣುತ್ತದೆ. . . ಬಹು ಕಾಲದಿಂದ ಒಂದೇ ಕುಟುಂಬದವರಾದೆವು. ಎಷ್ಟೇ ಉಗ್ರವಾದ ರಾಜಕೀಯ ವ್ಯತ್ಯಾಸಗಳು ಬಂದರೂ ನಾನು ಅಂತೆಯೇ ಇರುತ್ತೇನೆ. . . ನಿನ್ನ ಧ್ವಜವನ್ನು ಗಾಂಭೀರ್ಯದಿಂದ ಹಾರಿಸಬೇಕೆಂದು ಸಲಹೆ ಮಾಡುತ್ತೇನೆ.'

೧೯೩೦ರಲ್ಲಿ ಒಮ್ಮೆ ಜವಾಹರಲಾಲ್ ಖಾದಿಯನ್ನು 'ಸ್ವಾತಂತ್ರ್ಯ ಯೋಧರ ಪೋಷಾಕು' (Livery of Freedom) ಎಂದು ವರ್ಣಿಸಿದರು. ಆಗ ಗಾಂಧೀಜಿ ಹೀಗೆ ಬರೆದರು : "ನೀನು ಖಾದಿಯನ್ನು ಸ್ವಾತಂತ್ರ್ಯ

ಯೋಧರ ಪೋಷಾಕು' ಎಂದುದು ನಾವು ಭಾರತದಲ್ಲಿ ಆಂಗ್ಲ ಭಾಷೆಯನ್ನು ಆಡುತ್ತಿರುವವರೆಗೂ ನಿಂತಿದ್ದೀತು. ಆ ಮೋಹಕ ಶಬ್ದದ ಭಾವವನ್ನು ಹಿಂದೀಗೆ ಭಾಷಾಂತರಿಸಲು ಮಹಾಕವಿಯೇ ಬೇಕು. ನನಗಂತೂ ಅದು ಕೇವಲ ಕಾವ್ಯವೇ ಅಲ್ಲ, ಒಂದು ಮಹಾ ಸತ್ಯವನ್ನು ವ್ಯಕ್ತಪಡಿಸುತ್ತದೆ. ಅದರ ಪೂರ್ಣ ಪ್ರಭಾವವನ್ನು ನಾನಿನ್ನೂ ಅರಿತುಕೊಳ್ಳಬೇಕಾಗಿದೆ."

ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಇಬ್ಬರೂ ಸಂಧಿಸಲು ಆಗುತ್ತಿರಲೇ ಇಲ್ಲ. ಗಾಂಧೀಜಿಗೆ ಹಿಂದೂ–ಮುಸ್ಲಿಂ ಸೌಹಾರ್ದ ಸಾಧನೆಯ ಮಹಾ ಯಜ್ಞ; ಜವಾಹರರಿಗೆ ರಾಷ್ಟ್ರದ ಹೊಣೆಗಾರಿಕೆ. ಡೆಲ್ಲಿಯಲ್ಲಿ ಗಾಂಧೀಜಿ ತಮ್ಮ ಜೀವನದ ಕಡೆಯ ಉಪವಾಸ ಕೈಗೊಂಡಾಗ, ಆತ್ಮಬೇಗೆಗೊಂಡ ಜವಾಹರಲಾಲ್ ಒಂದೆರಡು ದಿನ ಆಹಾರ ತೆಗೆದುಕೊಳ್ಳಲಿಲ್ಲ. ಇದು ಹೇಗೋ ಗಾಂಧೀಜಿಗೆ ತಿಳಿಯಿತು. ಅವರು ಜವಾಹರ್‌ಗೆ ಈ ಪತ್ರ ಬರೆದರು; ಅದೇ ಕಡೆಯ ಪತ್ರವಾಯಿತು ಜವಾಹರ್‌ಲಾಲರಿಗೆ:

"ಪ್ರಿಯ ಜವಾಹರ್,

ನಿನ್ನ ಉಪವಾಸವನ್ನು ನಿಲ್ಲಿಸು.

× × × ×

ದೀರ್ಘಾಯುವಾಗು. 'ಭಾರತ ರತ್ನ'ನಾಗಿ ಎಂದೆಂದಿಗೂ ಶೋಭಿಸು."

ಮಹಾತ್ಮರ ಮನಸ್ಸು ವಜ್ರಕ್ಕಿಂತ ಕಠೋರ, ಕುಸುಮಕ್ಕಿಂತ ಮೃದು ಅಲ್ಲವೆ!

ರಾಷ್ಟ್ರದಾದ್ಯಂತ ಸಹಸ್ರಾರು ಕಾರ್ಯಕರ್ತರಿಗೆ ಗಾಂಧೀಜಿ ಪತ್ರ ಬರೆಯುತ್ತಿದ್ದರು. ಅವರ ಕಷ್ಟಸುಖಗಳನ್ನು ಹಂಚಿಕೊಳ್ಳುವುದರ ಜತೆಗೆ ಅವರ ಸಮಸ್ಯೆಗಳನ್ನು ಪರಿಹರಿಸಿ, ಉತ್ಸಾಹಕೊಟ್ಟು, ಕಾರ್ಯಪ್ರವೃತ್ತರಾಗುವಂತೆ ಮಾಡುತ್ತಿದ್ದರು. ಈ ಕಾರ್ಯಕರ್ತರಲ್ಲಿ ಸ್ತ್ರೀಪುರುಷರಾದಿಯಾಗಿ ಇರುತ್ತಿದ್ದರು. ಮಹಿಳೆಯರಿಗೆ ಬರೆದ ಪತ್ರಗಳ ರೀತಿಯೇ ಬೇರೆಯಿರುತ್ತಿತ್ತು. ಅವರು ಉತ್ತಮ ಗೃಹಿಣಿಯರಾಗುವುದಕ್ಕೂ ಉತ್ತಮ ಸಮಾಜ ಸೇವಕರಾಗುವುದಕ್ಕೂ ಅಗತ್ಯವಾದ ಅಂಶಗಳನ್ನು ತಿಳಿಸುತ್ತಿದ್ದರು. ಸಾಮಾನ್ಯ

ಓದು ಬರಹ ಇಷ್ಟು ಮಾತ್ರ ಬರುತ್ತಿದ್ದ ಕಸ್ತೂರ ಬಾಗೆ ಬರೆಯುತ್ತಿದ್ದ ಪತ್ರಗಳು ಅವರ ದಾಂಪತ್ಯ ಜೀವನದ ಮಾಧುರ್ಯವನ್ನು ತೋರಿಸುತ್ತವೆ. ಪುಟ್ಟ ಮಕ್ಕಳಿಗೂ ಗಾಂಧೀಜಿ ಬಹಳ ಪತ್ರಗಳನ್ನು ಬರೆದಿದ್ದಾರೆ.

ಆಶ್ರಮದ ಒಂದು ಮಗು ಲಂಡನ್‌ನನ್ನು ವರ್ಣಿಸಬೇಕೆಂದು ಗಾಂಧೀಜಿಯನ್ನು ಕೇಳಿತು. ಅವರು ಹೀಗೆ ಬರೆದರು: "ಲಂಡನ್ ಒಂದು ದೊಡ್ಡ ನಗರ. ಅಲ್ಲಿ ಅನೇಕ ಹೊಗೆ ಕೊಳವೆಗಳಿವೆ (Chimneys). ಅವು ಎಲ್ಲವನ್ನೂ ಕಪ್ಪಾಗಿ ಮಾಡುತ್ತವೆ. ಅಲ್ಲಿ ಯಾವುದೂ ಬಿಳಿಯಾಗಿ ಉಳಿಯದು. ಸೂರ್ಯ ದರ್ಶನ ಅಪರೂಪ. ಆಂಗ್ಲ ಜನರು ನಮಗಿಂತ ಹೆಚ್ಚು ಉದ್ಯೋಗಶೀಲರು. ಇಂಗ್ಲೆಂಡಿನ ರಸ್ತೆಗಳೆಲ್ಲ ಬಹಳ ಚೊಕ್ಕಟವಾಗಿರುತ್ತವೆ."

ಮಕ್ಕಳ ಮನೋಧರ್ಮಕ್ಕೆ ಅನುಗುಣವಾಗಿ ಶಿಕ್ಷಣ ಕೊಡುವಂತಿದೆ ಬರವಣಿಗೆ ಈ ಪತ್ರದಲ್ಲಿ.

ಗಾಂಧೀಜಿ ಸೆರೆಮನೆಯ ಬೆಕ್ಕನ್ನೂ ಅದರ ಮರಿಗಳನ್ನೂ ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಇದನ್ನು ಕಂಡ ಒಬ್ಬ ಹುಡುಗಿ ತಾನೂ ಬೆಕ್ಕಾಗಿ ಹುಟ್ಟಬೇಕಾಗಿತ್ತೆಂದು ಅಪೇಕ್ಷಿಸಿದಳು. ಅದಕ್ಕೆ ಗಾಂಧೀಜಿ ಬರೆದುದು ಹೀಗೆ: "ನಾನು ಬೆಕ್ಕಿನ ಮರಿಗಳನ್ನು ಪ್ರೀತಿಸುವಷ್ಟೇ ಮಕ್ಕಳನ್ನೂ ಪ್ರೀತಿಸುತ್ತೇನೆ. ಆದರೆ ಬೆಕ್ಕು ನಮ್ಮಂತೆ ವಿಚಾರಪರತೆಯಿಂದ ಕೂಡಿಲ್ಲ. ಆದ್ದರಿಂದ ಬೆಕ್ಕಾಗಿ ಜನಿಸುವುದೇನೂ ಒಳ್ಳೆಯದಲ್ಲ."

ಎಸ್ತರ್ ಎಂಬಾಕೆ ಒಬ್ಬ ಡೇನಿಷ್ ಮಹಿಳೆ. ಆಕೆ ಗಾಂಧೀಜಿಗೆ ಬಹಳ ಪ್ರಿಯವಾದಳು. ಆಕೆಯ ಮಗಳು ಮತ್ತು ಇತರ ಆಂಗ್ಲ ಮಕ್ಕಳೂ ಬರೆದ ಒಂದು ಪತ್ರಕ್ಕೆ ಗಾಂಧೀಜಿ ಬರೆದ ಉತ್ತರವಿದು:

"ನೀವು ವಿನೋದಕ್ಕಾಗಿ ಬರೆದ ಚಿತ್ರಗಳನ್ನೊಳಗೊಂಡ ನಿಮ್ಮ ಸೊಗಸಾದ ಪತ್ರಗಳು ನನಗೆ ಹರ್ಷವನ್ನುಂಟುಮಾಡಿವೆ. ನಿಮ್ಮೆಲ್ಲರಿಗೂ ನಾನೊಂದೇ ಪತ್ರವನ್ನು ಬರೆಯುವುದನ್ನು ನೀವು ಅನ್ಯಥಾ ಭಾವಿಸುವುದಿಲ್ಲವೆಂದು ನಂಬಿದೇನೆ. ನೀವೆಲ್ಲ ದೇಹದಲ್ಲಿ ಬೇರೆ ಬೇರೆ ಇದ್ದರೂ ಏಕ ಮನಸ್ಕರಾಗಿದ್ದೀರಿ. ಹೌದು. ನಿಮ್ಮಂಥ ಪುಟಾಣಿ ಮಕ್ಕಳೇ ಎಲ್ಲ ಯುದ್ಧವನ್ನೂ ನಿಲ್ಲಿಸತಕ್ಕವರು. ಇದರ ಅರ್ಥ—ನೀವು ನಿಮ್ಮಲ್ಲಿಯೇ ಜಗಳವಾಡುವುದಿಲ್ಲ ಎಂದು: ಇತರ ಬಾಲಕ–ಬಾಲಕಿಯರೊಂದಿಗೂ ಆಡುವುದಿಲ್ಲ ಎಂದು.

ನೀವುಗಳೇ ಪುಟ್ಟ ಯುದ್ಧಗಳನ್ನು ಮಾಡುತ್ತಿದ್ದರೆ ನೀವು ದೊಡ್ಡ ಯುದ್ಧಗಳನ್ನು ನಿಲ್ಲಿಸಲಾರಿರಿ. ನ್ಯಾನಿ, ಆನಾ ಇವರ ಹುಟ್ಟು ಹಬ್ಬದ ಸಂದರ್ಭದಲ್ಲಿ ನಾನೂ ನಿಮ್ಮೊಂದಿಗೆ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ದೇವರ ಅನುಗ್ರಹ ನಿಮಗೆಲ್ಲ ಲಭಿಸಲಿ. ನಿಮಗೆ ನಾನು ಮುತ್ತು ಕೊಡಬಹುದಾದರೆ ಅದನ್ನು ಸ್ವೀಕರಿಸಿ."

ಇಂಥ ನಿಷ್ಕಲಂಕ ಪ್ರೇಮವೇ ಗಾಂಧೀ ವಿಚಾರದ ಅವರ ಸಮಗ್ರ ಬದುಕಿನ ಮರ್ಮ. ಅವರ 'ಮಹಾತ್ಮಾ' ತನದ ಅರ್ಥ ಈ ಪ್ರೇಮದ ಮೂಲಕ ಪರಕಾಯ ಪ್ರವೇಶಮಾಡಿ, ಅವರನ್ನು ಗೆಲ್ಲುವ ಕಲೆ ಗಾಂಧೀಜಿಯದಾಗಿತ್ತು.

೫

ಗಾಂಧೀಜಿಯ ಬಗೆಗೆ ಇತರರು ಬರೆದವು

ಇದುವರೆಗೂ ಗಾಂಧೀಜಿಯೇ ಸೃಷ್ಟಿಸಿದ ಸಾಹಿತ್ಯದ ವಿವಿಧ ಪ್ರಕಾರಗಳನ್ನೂ ಅವುಗಳ ವೈಶಿಷ್ಟ್ಯ ಮತ್ತು ಪ್ರಭಾವಗಳನ್ನೂ ಕುರಿತು ಸಂಗ್ರಹವಾಗಿ ವಿವೇಚಿಸಲಾಗಿದೆ. ಈ ಅಧ್ಯಾಯದಲ್ಲಿ ಗಾಂಧೀಜಿಯ ಬಗೆಗೆ ಇತರರು ಬರೆದುದರ ಬಗೆಗೆ ಸಂಕ್ಷೇಪವಾಗಿ ನೋಡೋಣ.

ಹಿಂದೆಯೇ ಈ ವಿಷಯವನ್ನು ಕುರಿತು ಪ್ರಸ್ತಾಪಿಸಿರುವಾಗ ಜಗತ್ತಿನ ನಾನಾ ಭಾಷೆಗಳಲ್ಲಿ ಗಾಂಧೀಜಿಯ ಜೀವನ ಮತ್ತು ವಿಚಾರಧಾರೆ ಇವುಗಳನ್ನು ಕುರಿತು ಬಹಳ ಗ್ರಂಥಗಳು ಬಂದಿವೆಯೆಂದು ತಿಳಿಸಲಾಗಿದೆ.

೧೯೫೬ರಲ್ಲಿ ಶ್ರೀ ಜಗದೀಶ್ ಶರ್ಮ ಎನ್ನುವವರು, ೧೯೦೮ರಿಂದ ೧೯೫೫ರವರೆಗೆ ಜಗತ್ತಿನ ವಿವಿಧ ಭಾಷೆಗಳಲ್ಲಿ ಗಾಂಧೀ ಸಾಹಿತ್ಯ (ಭಾರತೀಯ ಭಾಷೆಗಳನ್ನು ಬಿಟ್ಟು) ಯಾವ ಪ್ರಮಾಣದಲ್ಲಿದೆ ಎಂಬುದನ್ನು ಕಂಡುಹಿಡಿಯಲು ಒಂದು ಪ್ರಯತ್ನ ಮಾಡಿದರು. (Mahatma Gandhi : A Bibliography—Published by S. Chand & Co., Delhi) ಅವರು ಹೀಗೆ ಹೇಳಿದ್ದಾರೆ: ‘ ಈ ಅಧ್ಯಯನದಲ್ಲಿ ೩೬೭೧ ದಾಖಲೆಗಳ ಬಗೆಗೆ ಉಲ್ಲೇಖವಿದೆ. ಇವುಗಳಲ್ಲಿ ಶೇಕಡ ೮೯.೮ ಇಂಗ್ಲಿಷ್ ಭಾಷೆಯಲ್ಲಿವೆ; ಉಳಿದವು ೯ ಪ್ರಧಾನ ಐರೋಪ್ಯ ಭಾಷೆಗಳಲ್ಲಿವೆ; ಎಂದರೆ ಡಚ್ (೨೦); ಫ್ರೆಂಚ್ (೫೮); ಜರ್ಮನ್ (೧೭೭); ಇಟಾಲಿಯನ್ (೧೪೬); ನಾರ್ವಿಜಿಯನ್ (೬);

ಪೋರ್ಚುಗೀಸ್ (೨); ರಷ್ಯನ್ (೨); ಸ್ಪಾನಿಷ್ (೧೭) ಮತ್ತು ಸ್ವೀಡಿಷ್ (೨೦).

ಅಲ್ಲಿಂದ ಈಚೆಗೆ ಈ ೧೪ ವರ್ಷಗಳಲ್ಲಿ—ಅದರಲ್ಲಿಯೂ ಗಾಂಧೀ ಶತಮಾನೋತ್ಸವ ಸಮಯದಲ್ಲಿ ನೂರಾರು ಗ್ರಂಥಗಳು ಬಂದಿವೆ.

ಹೀಗೆ ಭಾರತದಲ್ಲೂ ವಿಶಾಲ ಜಗತ್ತಿನಲ್ಲೂ ಗಾಂಧೀಜಿಯ ವ್ಯಕ್ತಿತ್ವದ ಪ್ರಭಾವ, ಅವರ ಕೃತಿಗಳ ಪ್ರಭಾವ ಅದ್ಭುತವಾಗಿ ಆಗಿದೆ ಎಂಬುದು ನಿರ್ವಿವಾದ.

ಭಾರತೀಯ ಭಾಷೆಗಳಲ್ಲೂ ಈ ಪ್ರಭಾವ ಗಣನೀಯ ಪ್ರಮಾಣದಲ್ಲಿ ಕಂಡುಬರುತ್ತದೆ. ಉತ್ತರ ಭಾರತ ಹಾಗೂ ದಕ್ಷಿಣ ಭಾರತದ ಎಲ್ಲ ಭಾಷೆಗಳಲ್ಲೂ ಸಣ್ಣ ದೊಡ್ಡ ಪುಸ್ತಕಗಳು ಪ್ರಕಟವಾಗಿವೆ. ಗಾಂಧೀಜಿ ಸ್ವತಃ ಸೃಷ್ಟಿಸಿದ ಸಾಹಿತ್ಯದ ರೀತಿಯಲ್ಲಿಯೇ ಈ ಬಗೆಯ ಸಾಹಿತ್ಯವೂ ವಿಪುಲವಾಗಿದೆ.

ಗಾಂಧೀಜಿಯ ಜೀವನ ಕುರಿತು ಆಂಗ್ಲಭಾಷೆಯಲ್ಲಿ ಬಂದಿರುವ ಗ್ರಂಥಗಳಲ್ಲಿ ಭಾರತೀಯರೇ ಆದ ಡಿ. ಜಿ. ತೆಂಡುಲಕರರು ರಚಿಸಿರುವ ಎಂಟು ಸಂಪುಟಗಳ ಬೃಹದ್ ಕೃತಿ ಮತ್ತು ಅದರ ಜತೆಗೆ ಪ್ಯಾರೇಲಾಲರು ರಚಿಸುತ್ತಿರುವ ಸಮಗ್ರ ಜೀವನ ಕಥೆಯ ಸಂಪುಟಗಳು ಬಹುಶಃ ಎಲ್ಲ ಕಾಲಕ್ಕೂ ಆಧಾರ ಗ್ರಂಥಗಳಾಗಿ ನಿಲ್ಲತಕ್ಕವು. ಈ ಕೃತಿಗಳೂ, ಭಾರತೀಯ ಭಾಷೆಗಳಲ್ಲಿ ಈವರೆಗೆ ಬಂದಿರುವ ಮತ್ತು ಮುಂದೆ ಬರಬಹುದಾದ ಇತರ ಕೃತಿಗಳೂ ವಿಶಿಷ್ಟ ರೀತಿಯಲ್ಲಿ ನಿಲ್ಲತಕ್ಕವು.

ಕನ್ನಡ ಭಾಷೆಯಲ್ಲೂ ಹಲವಾರು ಕೃತಿಗಳು ಬಂದಿವೆ. ಇವುಗಳ ಒಂದು ಸಮೀಕ್ಷೆಯನ್ನು ಶ್ರೀ ಟಿ.ವಿ. ಸುಬ್ರಹ್ಮಣ್ಯಂ ಮತ್ತು ಶ್ರೀಮತಿ ಲೀಲಾ ಸುಬ್ರಹ್ಮಣ್ಯಂ ಅವರು ಮಾಡಿದ್ದಾರೆ. ಅದು ಪ್ರಬುದ್ಧ ಕರ್ಣಾಟಕದ ಗಾಂಧೀ ಶತಾಬ್ದಿ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅವರ ಸಮೀಕ್ಷೆಯ ಫಲ ಹೀಗಿದೆ: ೧. ಗಾಂಧೀಜಿಯವರ ಬರಹಗಳ ಕನ್ನಡ ಅನುವಾದಗಳು (೭೫); ಗಾಂಧೀಜಿಯವರನ್ನು ಕುರಿತ ಕನ್ನಡ ಬರಹಗಳು ಮತ್ತು ಕನ್ನಡ ಅನುವಾದಗಳು (೧೩೦); ಗಾಂಧೀಜಿಯವರ ಬಗೆಗೆ ಗ್ರಂಥಾಂತರ್ಗತ ಲೇಖನಗಳು (೧೧೦). ಇದು ಒಂದು ಶ್ಲಾಘನೀಯ ಕಾರ್ಯ. ಈ ಬಗೆಗೆ ಇನ್ನೂ ವ್ಯಾಪಕವಾದ ಸಮೀಕ್ಷೆಯೂ ಮತ್ತು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕನ್ನಡದ ಕವಿಗಳು,

ಕಾದಂಬರಿಗಾರರು, ವಿಮರ್ಶಕರು, ನಾಟಕಕಾರರು, ಪ್ರಬಂಧ ರಚನಕಾರರು, ಪತ್ರಿಕೋದ್ಯಮಿಗಳು ಇದರ ಮೇಲೆ ಗಾಂಧೀಜಿಯ ಪ್ರಭಾವ ಹೇಗಾಗಿದೆ ಎಂಬುದನ್ನು ಪರಿಶೀಲಿಸಬೇಕಾದ ಒಂದು ದೊಡ್ಡ ಪ್ರಯತ್ನವೂ ಸಾಗ ಬೇಕಾಗಿದೆ.

ಹೀಗೆ 'ಯುಗಪುರುಷ' ಎನಿಸಿಕೊಂಡ ಗಾಂಧೀಜಿಯ ಬಗೆಗಿನ ಸಾಹಿತ್ಯ ದೊಡ್ಡ ಪ್ರಮಾಣದಲ್ಲಿದೆ. ಇದು ಆಧುನಿಕ ಭಾರತದ ಸ್ವಾತಂತ್ರ್ಯ ಹೋರಾಟದ ನಿಟ್ಟು ನೆಲೆಗಳನ್ನೂ ಗಾಂಧೀಜಿಯ ಅಧ್ಯಾತ್ಮ ಸಾಹಸಗಳನ್ನೂ ಅಧ್ಯಯನ ಮಾಡಿ ಅರಿತುಕೊಳ್ಳುವುದಕ್ಕೆ ನೆರವಾಗುತ್ತದೆ. ಇಂದಿನ ಬರಡು ಭೌತವಸ್ತು ಪ್ರಧಾನ ಜೀವನದ ಪ್ರಚಂಡ ಅಲೆ ಏರುತ್ತಿರುವ ಕಾಲದಲ್ಲಿಯೇ ಆ ಅಲೆಯ ಎದುರಿಗೆ ನಿಂತು ಅದಕ್ಕೆ ಸವಾಲು ಹಾಕಿದ ಧೀರ ಚೇತನ ವೊಂದಿತ್ತು. ಆ ಚೇತನ ವಿಶ್ವಚೇತನದ ಸಾಕ್ಷಿಯಾಗಿತ್ತು, ಮಾನವನ ಆತ್ಮ ಗಾಂಭೀರ್ಯ, ಆತ್ಮವಾಣಿ ಇವುಗಳ ಪ್ರತೀಕವಾಗಿತ್ತು ಎಂಬುದಕ್ಕೆ ಅದೊಂದು ಅವಿನಾಶಿ ನಿದರ್ಶನವಾಗಿದೆಯೆಂದರೆ ಯುಕ್ತವಲ್ಲವೆ?

೬

ಲೇಖಕ ಗಾಂಧೀಜಿ

ಗಾಂಧೀ ಸಾಹಿತ್ಯದ ಸಾರಸಂಗ್ರಹ ರೂಪದ ಈ ಸಮೀಕ್ಷೆಯ ಈ ಪುಟ್ಟ ಹೊತ್ತಗೆ ಇಲ್ಲಿಗೆ ಮುಗಿಯಬಹುದಾದರೂ, ಇನ್ನೆರಡು ವಿಷಯಗಳನ್ನು ಕುರಿತು ಅಷ್ಟಿಷ್ಟು ಹೇಳದೆ ಹೋದರೆ, ಇದು ಸಮಗ್ರವಾಗಲಾರದೆಂದು ಭಾವಿಸಿ, 'ಲೇಖಕ ಗಾಂಧೀಜಿ' ಮತ್ತು 'ಗಾಂಧೀ ಸಾಹಿತ್ಯ-ಇಂದು ನಾಳೆ' ಎಂಬ ಎರಡು ಅಧ್ಯಾಯಗಳನ್ನು ಇದರೊಂದಿಗೆ ಸೇರಿಸಲಾಗಿದೆ.

ಇಷ್ಟೊಂದು ವಿಪುಲ ಸಾಹಿತ್ಯ ಸೃಷ್ಟಿಸಿರುವ ಮತ್ತು ಸಾಹಿತ್ಯ ಸೃಷ್ಟಿಗೆ ಕಾರಣವಾಗಿರುವ ಗಾಂಧೀಜಿ ಲೇಖಕರೇ ಎಂದು ಯೋಚಿಸಿದರೆ, ವೃತ್ತಿ ದೃಷ್ಟಿಯಿಂದಾಗಲೀ ಹವ್ಯಾಸದ ದೃಷ್ಟಿಯಿಂದಾಗಲೀ ಅವರು ಲೇಖಕರಂತೂ ಅಲ್ಲವೇ ಅಲ್ಲ. ಬದುಕಿನಲ್ಲಿ ಯಾವುದನ್ನೂ ಬಯಸದವನಿಗೆ ಎಲ್ಲವೂ ಲಭ್ಯವಾಗುವ ಯೋಗ ಅಥವಾ ಕೌಶಲ್ಯವೊಂದುಂಟು. ಹಾಗೆಯೇ ಗಾಂಧೀಜಿ ಲೇಖಕನಾಗಬೇಕೆಂದು ಬಯಸದಿದ್ದರೂ, ಅನಾಸಕ್ತಿಯಿಂದ ಅವರು ಮಾಡಿದ ಕೃಷಿಯ ಪರಿಣಾಮ ಉತ್ತಮೋತ್ತಮ ಲೇಖಕರಲ್ಲಿ ಅವರೊಬ್ಬರು ಎಂದು ಪರಿಗಣನೆಗೆ ಬರುವಂತಾಗಿದೆ. ಆಲಂಕಾರಿಕ ಭಾಷೆಯಿಂದ, ಮನಸೆಳೆವ ಶೈಲಿಯಿಂದ, ಕಲ್ಪನಾತ್ಮಕ ಭಾವಗಳಿಂದ ಅವರು ಲೇಖಕರಾಗಬೇಕೆಂದು ಬಯಸಿದವರಲ್ಲ. ಸತ್ಯದ ಸಹಜತೆ, ಸರಳತೆ, ಮಿಗಿಲಾಗಿ ಸಹೃದಯತೆ ಇವುಗಳಿಂದ ಕೂಡಿದ ಅವರ ಬರಹ, ಮಾತು ಸತ್ಯವಾಗಿಯೇ ಎಲ್ಲ ಕಾಲಕ್ಕೂ

ನಿಲ್ಲುವಂತಾಯಿತು. ಅವರು ತಮ್ಮ ಮಾತೃಭಾಷೆಯಾದ ಗುಜರಾತಿಯಲ್ಲೇ ಬರೆಯಲಿ, ಇಂಗ್ಲಿಷಿನಲ್ಲೇ ಬರೆಯಲಿ ಅದರಲ್ಲೊಂದು ನೈಜ ಸೊಗಸು, ಸ್ಥಾಯಿಯಾದ ತೂಕ, ವಿಚಾರದ ಬೆಳಕು ಕಂಡುಬರುತ್ತಿತ್ತು.

ಗಾಂಧೀಜಿಯ ಬರಹ ಸತ್ವಪೂರ್ಣವಾಗಿರುತ್ತಿತ್ತು. ಅದು ಅವರ ಆಕಾಂಕ್ಷೆಗಳನ್ನೂ ನಂಬಿಕೆಗಳನ್ನೂ ದುಃಖ ದುಮ್ಮಾನಗಳನ್ನೂ ಪ್ರತಿಬಿಂಬಿಸುತ್ತಿತ್ತು. ಅವರ ಜೀವನ ಎಷ್ಟು ಸರಳವೋ, ಎಷ್ಟು ಶುದ್ಧವೋ, ಕೃತಕತೆಗಳಿಂದ ದೂರವೋ ಅಂತೆಯೇ ಅವರ ಬರಹದ ರೀತಿಯೂ. ಅವರ ಲೇಖನಿಯಿಂದಾಗಲೀ ಮಾತಿನಲ್ಲಾಗಲೀ ತೂಕತಪ್ಪಿದ ಒಂದು ಶಬ್ದವೂ ಬರುತ್ತಿರಲಿಲ್ಲ. ಅವರ ಇಂಗ್ಲಿಷನ್ನು ಇಂಗ್ಲಿಷರೇ ಮೆಚ್ಚಿಕೊಳ್ಳುತ್ತಿದ್ದರು. ಋಜುತೆ ಅದಕ್ಕೆ ಶ್ರೇಷ್ಠತೆಯನ್ನು ಕೊಡುತ್ತಿತ್ತು. ಗಾಂಧೀಜಿ ದುಂಡು ಮೇಜಿನ ಪರಿಷತ್ತಿಗೆ ಹೋಗಿದ್ದಾಗ ಅವರ ಹೇಳಿಕೆಗಳ ಕರಡನ್ನು ತಯಾರಿಸಲು ಆಕ್ಸ್‌ಫರ್ಡಿನ ಒಬ್ಬ ಆಂಗ್ಲ ಭಾಷಾ ಪರಿಣತರನ್ನು (ಎಡ್ವರ್ಡ್ ಥಾಂಸನ್) ನೆರವಿಗೆ ಕೊಡಲಾಗಿತ್ತು. ಆತ ಹೀಗೆ ಹೇಳಿರುವುದು ಗಮನಾರ್ಹವಾಗಿದೆ: "ಗಾಂಧೀಜಿಯಂತೆ ಉಪಸರ್ಗಗಳ (Prepositions) ಪ್ರಯೋಗ ಪರಿಣತರಾದ ಇನ್ನೊಬ್ಬ ಭಾರತೀಯನನ್ನು ನಾನು ಕಂಡಿಲ್ಲ. . . . ಕರಡುಗಳನ್ನು ತಯಾರಿಸುವುದರಲ್ಲಿ ನಾನು ಬಹಳ ಎಚ್ಚರಿಕೆ ವಹಿಸುತ್ತಿದ್ದೆ. ಗಾಂಧೀಜಿ ಅದರ ಮೇಲೆ ಕಣ್ಣು ಹಾಯಿಸಿ, ಒಂದು ಉಪಸರ್ಗದ ಬದಲಾವಣೆ ಮಾಡುತ್ತಿದ್ದರು. ಅದು ತುಂಬ ಪರಿಣಾಮ ಮಾಡಿಬಿಡುತ್ತಿತ್ತು. ನನ್ನ ಅರ್ಥ ಗಾಂಧೀಜಿಯ ಅರ್ಥವಾಗಿ ಪರಿಣಮಿಸುತ್ತಿತ್ತು."

ಮಾತನ್ನು ಬಳಸುವುದರಲ್ಲಿ ಗಾಂಧೀಜಿ ಬಹಳ ನಿಕರವಾಗಿರುತ್ತಿದ್ದರು. ಔಚಿತ್ಯ ಅದರಲ್ಲಿ ಎದ್ದು ಕಾಣುತ್ತಿತ್ತು. ಪರಭಾಷೆಯ ಮೇಲೂ ಇಂಥ ಸ್ವಾಮ್ಯ ಅವರಿಗಿರಲು ಕಾರಣವೇನು ? ಬಹುಶಃ ಅವರ ಓದಿನ ಪರಿಣಾಮ. ಅವರು ಮೊದಲು ಓದಿದುದು ಬಹಳ ಕಡಿಮೆಯಿದ್ದರೂ ಓದಿದ ಗ್ರಂಥಗಳು ಶುದ್ಧ ಭಾಷೆಯ ನಿದರ್ಶನಗಳಾಗಿದ್ದು ಅವುಗಳ ಪ್ರಭಾವ ಅವರ ಮೇಲೆ ಅಚ್ಚಳಿಯದಂತೆ ಆಗಿದ್ದಿತೆನ್ನಬಹುದು. ಬೈಬಲ್ ಆಂಗ್ಲಭಾಷೆಯಲ್ಲಿ ಉತ್ತಮೋತ್ತಮ ಸಾಹಿತ್ಯವೆಂದು ಪರಿಗಣಿತವಾಗಿದೆ. ಗಾಂಧೀಜಿ ಅದನ್ನು ಚೆನ್ನಾಗಿ ಓದಿದ್ದರು. ಹಾಗೆಯೇ ರಸ್ಕಿನ್, ಎಡ್ವಿನ್ ಆರ್ನಾಲ್ಡ್, ಕಾರ್ಲೈಲ್

ಮುಂತಾದವರ ಗ್ರಂಥಗಳೂ ಅವರ ಭಾಷೆಯ ಮೇಲೆ ಪ್ರಭಾವ ಬೀರಿರಬೇಕು. ಯುಕ್ತ ಶಬ್ದಪ್ರಯೋಗದ ಬಗೆಗೆ ಅವರ ಕಿವಿ ಚೆನ್ನಾಗಿ ಪಳಗಿತ್ತು ಎನ್ನಬಹುದು. ಇದರ ಜತೆಗೆ ಅವರು ಓದಿದುದನ್ನು ಸಾರಾಂಶರೂಪವಾಗಿ ಬರೆದಿಡುತ್ತಿದ್ದರು; ಅಷ್ಟೇ ಅಲ್ಲ, ತಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಿದವುಗಳನ್ನು ಗುಜರಾತೀ ಭಾಷೆಗೆ ತಾವೇ ಭಾಷಾಂತರ ಮಾಡುತ್ತಿದ್ದರು. ರಸ್ಕಿನ್ನನ 'ಅಂಟು ದಿಸ್ ಲಾಸ್ಟ್' ಹೊತ್ತಗೆಯನ್ನು ಅವರು ಭಾಷಾಂತರಿಸಿದ ವಿಚಾರವನ್ನು ಆಗಲೇ ಅರಿತಿದೇವೆ. ಹಾಗೆಯೇ ಕಾರ್ಲೈಲನ ವಿಚಾರಗಳಲ್ಲಿ ಕೆಲವು ಭಾಗಗಳನ್ನು ಅವರು ಭಾಷಾಂತರಿಸಿದ್ದರು. ಪ್ಲೇಟೋವಿನ 'ಸಾಕ್ರೆಟೀಸನ ಸಮರ್ಥನೆ ಮತ್ತು ಸಾವು' ಎಂಬುದನ್ನು ಭಾಷಾಂತರಿಸಿ, ಅದಕ್ಕೆ 'ಒಬ್ಬ ಸತ್ಯಾಗ್ರಹಿಯ ಕಥೆ' ಎಂಬ ಹೆಸರನ್ನಿಟ್ಟರು. ಅವರು ಸೆರೆಮನೆಯಲ್ಲಿದ್ದಾಗ 'ಆಶ್ರಮ ಭಜನಾವಳಿ'ಯನ್ನು 'Songs from Prison' ಎಂಬ ಹೆಸರಿನಿಂದ ಇಂಗ್ಲಿಷಿಗೆ ಭಾಷಾಂತರಿಸಿದ್ದರು. ಗಾಂಧೀಜಿಯ ಬರಹಗಳನ್ನು ಕುರಿತು ಜೆ. ಎಚ್. ಹೋಮ್ಸ್ ಎಂಬಾತ ಹೀಗೆ ನುಡಿದಿದ್ದಾರೆ: "ಗಾಂಧಿಯವರೊಬ್ಬ ಸಾಹಿತಿಯೆಂಬ ಅರ್ಥದಲ್ಲಿ ಎಂದಿಗೂ ಲೇಖಕರಾಗಿರಲಿಲ್ಲ ಎಂಬ ಕಾರಣದಿಂದಲೇ ಅವರ ಸಾಹಿತ್ಯಿಕ ಸಾಧನೆ ಅಸಾಧಾರಣವಾಗಿದೆ. ತಮ್ಮ ಪ್ರಸಿದ್ಧ ಸಮಕಾಲೀನ ಕವಿವರ್ಯ ರವೀಂದ್ರನಾಥರಂತೆಯೂ ಮತ್ತು ಪ್ರಸಿದ್ಧ ಲೇಖಕ ಜವಾಹರಲಾಲ್‌ರಂತೆಯೂ ವಿಶಿಷ್ಟ ಬರಹ ಶೈಲಿಯನ್ನು ಅವರು ಹೊಂದಿರಲಿಲ್ಲ. ಗಾಂಧಿಯವರ ಆಸಕ್ತಿ ಎಂದಿಗೂ ಸೌಂದರ್ಯದ ಕಡೆಗೇ ಇರಲಿಲ್ಲ; ಅದು ಪ್ರಧಾನವಾಗಿ ಉಪಯುಕ್ತತೆಯ ಕಡೆಗೆ ಇರುತ್ತಿತ್ತು. ಅವರು ಕಲಾವಿದನಾಗಬೇಕೆಂಬ ಆಸೆಯನ್ನಾಗಲೀ ಆಸಕ್ತಿಯನ್ನಾಗಲೀ ಹೊಂದಿರಲಿಲ್ಲ. ಅವರ ಚಿಂತನೆ ಒಂದೇ; ತನ್ನ ದೇಶಬಾಂಧವರದ್ದು; ಅವರನ್ನು ಸ್ವತಂತ್ರರನ್ನಾಗಿ ಮಾಡುವುದು ಹೇಗೆಂಬುದು. ಹೀಗಾಗಿ ಅವರು ಸಂಯಮಿತ ಸರಳತೆಯಿಂದ ಬರೆದರು; ತಾವು ಬರೆದುದು ಚೆನ್ನಾಗಿ ಅರ್ಥವಾಗಬೇಕೆಂಬುದೇ ಅವರ ಗುರಿಯಾಗಿತ್ತು. ಇದರ ಪರಿಣಾಮ–ಸಾಹಿತ್ಯ ಕಲೆಯ ಒಂದು ಮುಖ್ಯ ಗುಣ-ಎಂದರೆ ಸ್ಪಷ್ಟತೆಯ ಸಿದ್ಧಿ. ಗಾಂಧೀ ಬರೆದುದರಲ್ಲೆಲ್ಲ ಯಾವುದಾದರೊಂದು ವಾಕ್ಯವೂ ಅವರ ಮನಸ್ಸಿನಲ್ಲಿ ಹೊಂದಿದ್ದ ಅರ್ಥವನ್ನು ತಿಳಿಸದೆ ವಿಫಲವಾಯಿತೆಂದು ಕಾಣುವುದು ಕಷ್ಟವೇ. ಗಾಂಧೀ ತಮ್ಮ ಅಭಿಪ್ರಾಯ

ವ್ಯಕ್ತಪಡಿಸುವ ಸಾಧನವನ್ನು ಚೆನ್ನಾಗಿ ಸ್ವಾಧೀನ ಮಾಡಿಕೊಂಡಿದ್ದರು. ಅವರು ಗಳಿಸಿದ ಶೈಲಿ, ವಿಚಾರ ತಿಳಿಸುವುದಕ್ಕೆ ಪರಿಪೂರ್ಣವಾಗಿದ್ದಿತು. ಅವರ ಬರಹಗಳನ್ನು ಓದುವುದೆಂದರೆ, ವಿಷಯಗ್ರಹಣ, ಶೈಲಿಯಲ್ಲ. ಇದರರ್ಥ ಗುರಿ ಸಾಧಿಸಲು ಸಾಧನವನ್ನು ಯಶಸ್ವಿಯಾಗಿ ಬಳಸಿಕೊಳ್ಳುವುದು."[1]

ಈ ವಿಶ್ಲೇಷಣವನ್ನು ಓದಿದಾಗ ಗಾಂಧೀಜಿ ಸಾಧ್ಯಕ್ಕಿಂತ ಸಾಧನಕ್ಕೆ ನೀಡುತ್ತಿದ್ದ ಪ್ರಾಧಾನ್ಯತೆಯ ನೆನಪು ಬರುತ್ತದೆ. ಸಾಧನ ಶುದ್ಧವಾದಷ್ಟೂ ಉತ್ತಮ ಗುರಿ ಸಾಧಿತವಾಗುತ್ತದೆಂದು ಅವರ ನಂಬಿಕೆಯಾಗಿತ್ತು. ಇದೇ ನಿಯಮವೇ ಅವರ ಕ್ರಿಯೆಗಳಿಗೂ ಅನ್ವಯಿಸಿತ್ತು.

ಗಾಂಧೀಜಿ ತಮ್ಮ ಮಾತೃಭಾಷೆಯಾದ ಗುಜರಾತೀ ಭಾಷೆಗೆ ತುಂಬ ಗಾಂಭೀರ್ಯವನ್ನು ತಂದುಕೊಟ್ಟರು. ಅವರ ಮಾತೃಭಾಷಾ ಪ್ರೇಮ ಎಷ್ಟಿತ್ತೆಂಬುದಕ್ಕೆ ಕಾಕಾ ಸಾಹೇಬ್ ಕಾಲೇಲ್‌ಕರರು ಈ ನಿದರ್ಶನವನ್ನು ಕೊಟ್ಟಿದ್ದಾರೆ: ೧೯೧೫ನೆಯ ಇಸವಿ. ವಿದೇಶದಲ್ಲಿ ವಿಜಯೀ ವೀರನಾಗಿ, 'ಕರ್ಮವೀರ ಗಾಂಧೀ' ಎನಿಸಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿ ಬಂದ ಸನ್ನಿವೇಶ. ಮುಂಬೈ ರೇವಿನಲ್ಲಿ ಅಸಂಖ್ಯ ಜನ ಅವರನ್ನು ಸ್ವಾಗತಿಸಲು ನೆರೆದಿದ್ದರು. ಹತ್ತಾರು ಪತ್ರಿಕೋದ್ಯಮಿಗಳೂ ಅಲ್ಲಿದ್ದರು. ಅವರಲ್ಲಿ ಒಬ್ಬಾತ ತಾನೇ ಮೊದಲು ಪ್ರಶ್ನಿಸಿ, ಬಂದ ಉತ್ತರವನ್ನು ತನ್ನ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬ ಉತ್ಸುಕತೆಯಿಂದ ಮುಂದೆ, ಮುಂದೆ ನುಗ್ಗಿ ಹೋಗಿ, ಗಾಂಧೀಜಿಯನ್ನು ಇಂಗ್ಲಿಷಿನಲ್ಲಿ ಪ್ರಶ್ನಿಸಿದ. ಅದಕ್ಕೆ ಗಾಂಧೀಜಿ ಗುಜರಾತೀಯಲ್ಲಿ ಉತ್ತರವೀಯುತ್ತಾ, 'ಏಕೆ, ಸಹೋದರ? ನಾನು ಗುಜರಾತಿನವನು. ನೀನೂ ಗುಜರಾತಿನವನು. ನನ್ನನ್ನೇಕೆ ಇಂಗ್ಲಿಷಿನಲ್ಲಿ ಮಾತನಾಡಿಸುವೆ? ಇಷ್ಟು ವರ್ಷಗಳು ನಾನು ವಿದೇಶದಲ್ಲಿ ಇದ್ದುದರಿಂದ ನನಗೆ ಗುಜರಾತಿ ಮರೆತುಹೋಗಿದೆಯೆಂದು ಭಾವಿಸುವೆಯಾ?' ಎಂದು ಛೀಮಾರಿ ಹಾಕಿದರು.

ಹಾಗೆಯೇ ಮುಂದಿನ ವರ್ಷ ೧೯೧೭ರಲ್ಲಿ ಗುಜರಾತಿನ ಗೋಧ್ರಾದಲ್ಲಿ ನಡೆದ ಗುಜರಾತೀ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ, ಎಲ್ಲ ಕಾರ್ಯ

---

1. Homer A. Jack (Ed): The wit and wisdom of Gandhi, Preface pp. vii-viii.

ಕ್ರಮಗಳನ್ನು ಗುಜರಾತೀಯಲ್ಲಿ ನಡೆಸಿದರು ; ಭಾರತದ ಪ್ರಾಂತೀಯ ಭಾಷೆಗಳ ಅಭಿವೃದ್ಧಿಯನ್ನು ಕುರಿತು ಒತ್ತಿ ಹೇಳಿದರು: "ಈ ಕೋಟಿ ಕೋಟಿ ಜನದ ಯೋಚನೆ ನಿಮಗೆ ಇದೆಯೆ? ಇವರು ಹಸಿವು-ಆಕಾಂಕ್ಷೆಗಳ ಬಗೆಗೆ ಏನಾದರೂ ಚಿಂತಿಸಿದೀರಾ? ಯಾರಿಗಾಗಿ ಈ ನಮ್ಮ ಎಲ್ಲ ಸಾಹಿತ್ಯ? ಅವರಿಗೆ ನಾನು ಏನನ್ನು ಓದಿ ಹೇಳಲಿ?"[1] ಈ ರೀತಿ ತಮ್ಮ ಮನದ ನೋವನ್ನು ವ್ಯಕ್ತಪಡಿಸಿದರು. ಅಂದಿನಿಂದ ಪ್ರಾಂತೀಯ ಭಾಷೆಗಳ ಬೆಳವಣಿಗೆಗೆ ಒಳ್ಳೆಯ ಉತ್ತೇಜನ ಸಿಕ್ಕಂತೆ ಆಯಿತು.

ಗಾಂಧೀಜಿ ತಮ್ಮ ಭಾಷಣಗಳಲ್ಲೂ ಮತ್ತು ಬರಹಗಳಲ್ಲೂ ರಾಮ, ಕೃಷ್ಣ, ಮೊಹಮ್ಮದ್ ಮೊದಲಾದ ಪ್ರವಾದಿಗಳ ಜೀವನದಲ್ಲಿ ದೊರಕುವ ನೈತಿಕ ಸನ್ನಿವೇಶಗಳನ್ನು ಹೇರಳವಾಗಿ ಉಪಯೋಗಿಸಿ, ತಮ್ಮ ಅಭಿಪ್ರಾಯಗಳು ಜನಗಳ ಮನಸ್ಸಿಗೆ ಸ್ಪಷ್ಟವಾಗಿ ಹಿಡಿಸುವಂತೆ ಮಾಡುತ್ತಿದ್ದರು. ಅವರು ತಮ್ಮ ಕಲ್ಪನೆಯ ಸ್ವರಾಜ್ಯವನ್ನು 'ರಾಮರಾಜ್ಯ'ವೆಂದೇ ಕರೆದರು. ಹೀಗೆಯೇ ಅವರು ಎಷ್ಟೋ ಸೊಗಸಾದ ಶಬ್ದಗಳನ್ನು ಸೃಷ್ಟಿಸುತ್ತಿದ್ದರು. ಇಂಗ್ಲಿಷಿನಲ್ಲಿ 'ಡೆತ್ ಡಾನ್ಸ್' ಎಂಬುದಕ್ಕೆ 'ಪತಂಗ ನೃತ್ಯ' ಎಂಬ ಸೊಗಸಾದ ಶಬ್ದವನ್ನು ಉಪಯೋಗಿಸಿದರು. ಪತಂಗಗಳು ದೀಪದ ಸುತ್ತ ಹಾರಾಡಿ, ಹಾರಾಡಿ ಸತ್ತುಹೋಗುವುದನ್ನು ಯಾರು ನೋಡಿಲ್ಲ.

ಶ್ವೇತವರ್ಣೀಯರು ಭಾರತೀಯ 'ವರ್ಣೀಯ'ರ ಬಗೆಗೆ ತೋರಿಸಿದ ದೌರ್ಜನ್ಯವನ್ನು 'ಬಿಳಿಯರ ಗೂಂಡಾಗಿರಿ' (White hooliganism) ಎಂದು ಕರೆದರು. ಸ್ವಾರ್ಥಿ ಕಾಂಗ್ರೆಸ್ಸಿಗರನ್ನು 'ಶ್ವೇತ ವಸ್ತ್ರಧಾರೀ ಗೂಂಡಾಗಳು' (White-robed goondas) ಎಂದು ಕರೆದರು.

ಮತಧರ್ಮಗಳಲ್ಲಿ ಕಂಡುಬಂದ ಆಭಾಸ ಮತ್ತು ಕಾಠಿಣ್ಯವನ್ನು ಕಂಡು ಒಮ್ಮೆ ಹೀಗೆ ಹೇಳಿದರು: 'ಮೊಹಮ್ಮದ್ ಮತ್ತು ಅವರ ಶಾಂತಿ ಸಂದೇಶವೆಲ್ಲ ಎಲ್ಲಿ ಹೋಯಿತು? ಇಂದು ಮೊಹಮ್ಮದ್ ಭಾರತಕ್ಕೆ ಬಂದರೆ, ತಮ್ಮ ಮತ ಬಾಂಧವರಲ್ಲಿ ಅನೇಕರನ್ನು ತಮ್ಮವರೆಂದು ತಿರಸ್ಕರಿಸಿ ಯಾರು

---

1. Quoted by Anu Bandyopadhayaya: 'Bahuroopee Gandhi'.

ನನ್ನನ್ನು ನಿಜ ಮುಸ್ಲಿಂ ಎಂದು ಸ್ವಾಗತಿಸಿಯಾರು; ಹಾಗೆಯೇ ಜೀಸಸ್ ನನ್ನನ್ನು ನಿಜ ಕ್ರೈಸ್ತನೆಂದು ಸ್ವಾಗತಿಸಿಯಾರು. ಇಂದು ಪಾಶ್ಚಾತ್ಯ ದೇಶಗಳಲ್ಲಿ ಕ್ರೈಸ್ತ ಧರ್ಮವೇ ಇಲ್ಲ. ಅದು ಇದ್ದಿದ್ದರೆ ಯುದ್ಧವಿರುತ್ತಿರಲೇ ಇಲ್ಲ."[1]

ಎಷ್ಟು ಧೈರ್ಯದ ಮಾತು ಇವು! ಆತ್ಮಸ್ಥೈರ್ಯದಿಂದ ಹೊಮ್ಮಿ ಬಂದ ಕಿಡಿಗಳು ಇವು.

ಗಾಂಧೀಜಿ ಸರಳ ಗದ್ಯದಲ್ಲಿ ಸೊಗಸಾದ, ಕಣ್ಣಿಗೆ ಕಟ್ಟುವ ಚಿತ್ರಗಳನ್ನು ಆಗಾಗ ಬಣ್ಣಿಸುತ್ತಿದ್ದರು. ಇದು ಬೇಲೂರಿನ ಶಿಲ್ಪಸೌಭಾಗ್ಯ ಕಂಡು ಬರೆದುದು:

"ಮೈಸೂರಿನ ಒಂದು ಪ್ರಾಚೀನ ದೇವಾಲಯದ ಶಿಲೆಯ ಚಾಚುಪೀಠದ ಮೇಲೆ ಒಂದು ಸಣ್ಣ ಪ್ರತಿಮೆಯನ್ನು ನೋಡಿದೆ. ಅದು ನನ್ನೊಂದಿಗೆ ಬಾಯಿಬಿಟ್ಟು ಮಾತನಾಡುವಂತಿತ್ತು. ಆ ಪ್ರತಿಮೆ ಅರೆ ನಗ್ನ ಸ್ತ್ರೀಯದು. ಆಕೆ ಮನ್ಮಥನ ಬಾಣಗಳಿಂದ ತಪ್ಪಿಸಿಕೊಳ್ಳಲು ತನ್ನ ವಸ್ತ್ರದ ಮಡಿಕೆಗಳೊಂದಿಗೆ ಹೋರಾಡುತ್ತಿದ್ದಳು. ಮನ್ಮಥ ಸೋತು, ಚೇಳಿನ ರೂಪದಲ್ಲಿ ಆಕೆಯ ಪಾದದಲ್ಲಿ ಶರಣಾಗಿ ಬಿದ್ದಿದ್ದಾನೆ. ಚೇಳು ಕುಟುಕಿದ ವ್ಯಥೆ ಆ ಪ್ರತಿಮೆಯ ಭಂಗಿಯಲ್ಲಿ ಕಂಡು ಬಂದಿತು."[2]

ಗಾಂಧೀಜಿ ಭಾರತದ ಮೂಲೆಮೂಲೆಯಲ್ಲಿ ಸಂಚರಿಸಿ, ಪ್ರತ್ಯಕ್ಷ ಕಂಡ ಜನಜೀವನದ ದಾರುಣ ಚಿತ್ರ ಅವರ ಕಣ್ಣಮುಂದೆ ಸದಾ ಕಟ್ಟಿರುತ್ತಿತ್ತು. ಒರಿಸ್ಸಾದ ದಟ್ಟದಾರಿದ್ರ್ಯ ಕಂಡು ಹೀಗೆ ಬರೆದರು: "ಒರಿಸ್ಸಾ ದೇಶ ಮತ್ತು ಅದರ ಅಸ್ಥಿಪಂಜರಗಳನ್ನು ನೀವು ಬಲ್ಲಿರಾ? ಆ ಅಸ್ಥಿಪಂಜರಗಳ ಹಸಿವು ದಾರಿದ್ರ್ಯಗಳ ನಾಡಿನಿಂದ ಮೂಳೆ, ಕೊಂಬು, ಬೆಳ್ಳಿ ಇವುಗಳಲ್ಲಿ ಅಚ್ಚರಿಯ ವಸ್ತುಗಳನ್ನು ತಯಾರಿಸಿರುವ ಜನ ಇಲ್ಲಿಗೆ ಬಂದಿದ್ದಾರೆ. ಹೋಗಿ ನೋಡಿ;

---

1. Quoted by Anu Bandyopadhyaya; 'Bahuroopee Gandhi'.

2. Ibid.

ದೇಹ ದಾರಿದ್ರ್ಯದಿಂದ ಎಷ್ಟೇ ಗಳಿತವಾಗಿದ್ದರೂ ಮಾನವನ ಆತ್ಮ ಕೊಂಬು, ಲೋಹ ಇವುಗಳಿಗೆ ಎಂಥ ಜೀವಕಳೆಯನ್ನು ತುಂಬುವುವು ಎಂಬುದನ್ನು. ಒಬ್ಬ ಬಡ ಕುಂಬಾರ ಮಣ್ಣಿನಲ್ಲಿ ಅದ್ಭುತ ವೈಖರಿಯನ್ನು ರಚಿಸಿದ್ದಾನೆ."[1]

ಗಾಂಧೀಜಿ ತಮ್ಮ ಸಂಪರ್ಕಕ್ಕೆ ಬಂದವರನ್ನು ಕುರಿತು, ಅವರ ಗುಣ ವಿಶೇಷಣಗಳನ್ನು ಕುರಿತು ಬಹಳ ಬರೆದಿದ್ದಾರೆ. ಅವು ಸುಂದರವಾದ ವ್ಯಕ್ತಿ ಚಿತ್ರಣಗಳಾಗಿವೆ. ಆತ್ಮಕಥೆಯಲ್ಲಿ ತಮ್ಮ ತಂದೆ-ತಾಯಿಗಳನ್ನು ಹೀಗೆ ವರ್ಣಿಸಿದ್ದಾರೆ: "ನಮ್ಮ ತಂದೆ ಕುಟುಂಬಪ್ರೇಮಿ, ಸತ್ಯಪ್ರಿಯ, ಶೂರ ಮತ್ತು ಉದಾರಿ, ಜತೆಗೆ ಕೋಪದ ಸ್ವಭಾವದವರು. ಸ್ವಲ್ಪಮಟ್ಟಿಗೆ ವಿಷಯಾಸಕ್ತರೆಂದೂ ನನ್ನ ಭಾವನೆ. ಅವರು ತಮ್ಮ ನಲವತ್ತು ವರ್ಷಗಳಾದ ಮೇಲೆ ನಾಲ್ಕನೆಯ (ಕೊನೆಯ) ಮದುವೆಯನ್ನು ಮಾಡಿಕೊಂಡರು. ಅವರು ಲಂಚಕ್ಕೆ ವಶವಾದವರಲ್ಲ. ಕುಟುಂಬದಲ್ಲಿಯೂ ಹೊರಗಡೆಯೂ ನಿಷ್ಪಕ್ಷಪಾತ ಮನೋವೃತ್ತಿಗೆ ಪ್ರಸಿದ್ಧಿಯನ್ನು ಸಂಪಾದಿಸಿದ್ದರು. ಅವರ ರಾಜನಿಷ್ಠೆ ಎಲ್ಲರಿಗೂ ತಿಳಿದಿದ್ದಿತು. ಒಂದು ಸಲ ಒಬ್ಬ ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟರು ರಾಜಕೋಟೆ ಠಾಕೂರ ಸಾಹೇಬರಿಗೆ ಅವಮಾನ ಮಾಡಿದುದರಿಂದ ಅವರನ್ನು ಎದುರಿಸಿದರು. ಇದರ ಫಲವಾಗಿ ಸಾಹೇಬನಿಗೆ ಕೋಪ ಬಂದು, 'ಕ್ಷಮಾ ಯಾಚಿಸು' ಎಂದು ಹೇಳಿದರು. ನಮ್ಮ ತಂದೆ ಕ್ಷಮಾ ಯಾಚಿಸಲು ತಿರಸ್ಕರಿಸಿದರು. ಸಾಹೇಬ ಅವರನ್ನು ಕೆಲವು ಘಂಟೆಗಳ ಕಾಲ ಸೆರೆಮನೆಯಲ್ಲಿ ಇಟ್ಟರು. ಆದರೆ ನಮ್ಮ ತಂದೆ ವಜ್ರದಂತಹ ಮನಸ್ಸುಳ್ಳವರೆಂದು ಕಂಡುಕೊಂಡ ಏಜೆಂಟ್, ಅವರ ಬಿಡುಗಡೆಗೆ ಆಜ್ಞೆ ಮಾಡಿದರು.

'ನನ್ನ ತಂದೆಗೆ ಧನಸಂಗ್ರಹದ ಲೋಭ ಎಂದಿಗೂ ಇರಲಿಲ್ಲ. ಆದುದರಿಂದ ಅವರು ನಮಗೆ ಅಲ್ಪಸ್ವಲ್ಪ ಆಸ್ತಿ ಮಾತ್ರ ಬಿಟ್ಟುಹೋದರು.

'ನಮ್ಮ ತಂದೆಯವರ ಶಿಕ್ಷಣ, ಕೇವಲ ಅನುಭವದಿಂದ ದೊರೆತದ್ದು. ಇಂದು ನಾವು ಯಾವುದನ್ನು ಉಚ್ಚ ಪ್ರಾಥಮಿಕ ಶಿಕ್ಷಣ ಎನ್ನುತ್ತೇವೆಯೋ ಅಷ್ಟೆ ಅವರಿಗೆ ದೊರೆತಿದ್ದುದು. ಅವರಿಗೆ ಭೂಗೋಳ, ಇತಿಹಾಸ ಇವುಗಳ

1. Quoted by Anu Bandyopadhyaya: 'Bahuroopee Gandhi'.

ಜ್ಞಾನ ಸ್ವಲ್ಪವೂ ಇರಲಿಲ್ಲ. ಆದರೆ ಅವರು ವ್ಯಾವಹಾರಿಕ ಜ್ಞಾನ ಸಂಪತ್ತಿನಿಂದ ಕೂಡಿದ್ದರು; ಅದರ ಬಲದಿಂದ ಅತ್ಯಂತ ಕ್ಲಿಷ್ಟವಾದ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸುತ್ತಿದ್ದರು. ನೂರಾರು ಜನರನ್ನು ಅಂಕೆಯಲ್ಲಿ ಇಟ್ಟುಕೊಳ್ಳಬಲ್ಲವರಾಗಿದ್ದರು. ಅವರಿಗೆ ಧಾರ್ಮಿಕ ಶಿಕ್ಷಣ ಇಲ್ಲವೆಂಬುದೇನೋ ಸರಿ. ಆದರೆ ದೇವಸ್ಥಾನಕ್ಕೆ ಹೋಗುವುದರಿಂದಲೂ ಕಥೆ ಪುರಾಣಗಳನ್ನು ಕೇಳುವುದರಿಂದಲೂ ಅಸಂಖ್ಯ ಹಿಂದೂಗಳಿಗೆ ಸಹಜವಾಗಿ ಲಭಿಸುವ ಧರ್ಮಜ್ಞಾನವನ್ನು ಅವರು ಗಳಿಸಿಕೊಂಡಿದ್ದರು. ಅವರು ತಮ್ಮ ಬಾಳಿನ ಕೊನೆಯಲ್ಲಿ ನಮ್ಮ ಕುಟುಂಬದ ಮಿತ್ರರಾದ ಒಬ್ಬ ಬ್ರಾಹ್ಮಣ ಪಂಡಿತರ ಸಲಹೆಯಂತೆ ಗೀತಾಧ್ಯಯನವನ್ನು ಪ್ರಾರಂಭಮಾಡಿದ್ದರು. ಪೂಜೆಯ ಸಮಯದಲ್ಲಿ ನಿತ್ಯವೂ ಕೆಲವು ಶ್ಲೋಕಗಳನ್ನು ಗಟ್ಟಿಯಾಗಿ ಹೇಳುತ್ತಿದ್ದರು.

'ನಮ್ಮ ತಾಯಿಯನ್ನು ಕುರಿತು ನನ್ನ ಮನಸ್ಸಿನಲ್ಲಿ ಬಹು ಮುಖ್ಯವಾಗಿ ನಿಂತಿರುವ ನೆನಪು, ಅವರು ಪರಮ ಸಾಧ್ವಿ ಎಂಬುದು. ಅವರು ಬಹಳ ಧಾರ್ಮಿಕ ಸ್ವಭಾವದವರು. ದಿನವೂ ಪ್ರಾರ್ಥನಾಕಾರ್ಯ ಮುಗಿಯುವವರೆಗೆ ಅವರು ಎಂದೂ ಊಟದ ಯೋಚನೆಯನ್ನೇ ಮಾಡುತ್ತಿರಲಿಲ್ಲ. ದಿನವೂ ವಿಷ್ಣುದೇವಾಲಯಕ್ಕೆ ಹೋಗುವುದು ಅವರ ಕರ್ತವ್ಯವಾಗಿತ್ತು. ಚಾತುರ್ಮಾಸ್ಯದ ಆಚರಣೆಯನ್ನು ಅವರು ಒಂದು ಸಲವಾದರೂ ಬಿಟ್ಟುದು ನನಗೆ ನೆನಪಿಲ್ಲ. ಅವರು ಅತ್ಯಂತ ಕಠಿಣವಾದ ವ್ರತಗಳನ್ನು ಆರಂಭಿಸಿ, ಅವುಗಳನ್ನು ನಿರ್ವಿಘ್ನವಾಗಿ ಪೂರ್ತಿಗೊಳಿಸುತ್ತಿದ್ದರು. ಬೇನೆ ಬಿದ್ದರೂ ವ್ರತವನ್ನು ಬಿಡುತ್ತಿರಲಿಲ್ಲ. ಒಂದು ಸಲ ಚಾಂದ್ರಾಯಣ ವ್ರತವನ್ನು ಹಿಡಿದಿದ್ದಾಗ ಅವರು ರೋಗದಿಂದ ನರಳುತ್ತಿದ್ದರೂ ಬಿಡದೆ ಅದನ್ನು ಪೂರೈಸಿದುದು ನನಗೆ ನೆನಪಿದೆ. ಚಾತುರ್ಮಾಸ್ಯದಲ್ಲಿ ಅವರಿಗೆ ಒಪ್ಪತ್ತಿನ ಊಟ ಸಾಮಾನ್ಯ ರೂಢಿಯಾಗಿತ್ತು. ಅಷ್ಟರಿಂದ ತೃಪ್ತರಾಗದೆ, ದಿನಬಿಟ್ಟು ದಿನ ಉಪವಾಸ ಮಾಡುತ್ತಿದ್ದರು. ಒಟ್ಟಿಗೆ ಎರಡು ಮೂರು ದಿನ ಉಪವಾಸ ಮಾಡುವುದು ಅವರಿಗೆ ದೊಡ್ಡ ವಿಷಯವಾಗಿರಲಿಲ್ಲ. ಒಂದು ಸಲ ಚಾತುರ್ಮಾಸ್ಯದಲ್ಲಿ ಸೂರ್ಯನಾರಾಯಣನ ದರ್ಶನ ಮಾಡದೆ, ಊಟ ಮಾಡೆನೆಂಬ ನಿಯಮವನ್ನು ಹಿಡಿದರು. ಆಗ ಹುಡುಗರಾಗಿದ್ದ ನಾವು ಸೂರ್ಯ

ಕಾಣಿಸಿಕೊಂಡಾಗ ನಮ್ಮ ತಾಯಿಗೆ ತಿಳಿಸಲು ಆಕಾಶದ ಕಡೆಗೆ ನೋಡುತ್ತಾ ನಿಂತಿರುತ್ತಿದ್ದೆವು. ಮಳೆಗಾಲ ಅಧಿಕವಾದಾಗ ಸೂರ್ಯನ ದರ್ಶನ ದುರ್ಲಭವೆಂದು ಎಲ್ಲರಿಗೂ ಗೊತ್ತು. ಸೂರ್ಯ ಕಾಣಿಸಿಕೊಂಡ ಕೂಡಲೇ ಅದನ್ನು ಅವರಿಗೆ ತಿಳಿಸಲು ನಾವು ಧಾವಿಸುತ್ತಿದ್ದುದು ನನಗೆ ನೆನಪಿದೆ. ಅವರು ಸ್ವತಃ ದರ್ಶನ ಮಾಡಲು ಹೊರಗೆ ಓಡಿಬರುವಷ್ಟರಲ್ಲಿ ಸೂರ್ಯ ಕಣ್ಮರೆಯಾಗುತ್ತಿದ್ದನು. ಇದರಿಂದ ಅವರಿಗೆ ಊಟ ಇಲ್ಲವಾಗುತ್ತಿತ್ತು. ಆಗ ಅವರು ಹರ್ಷಚಿತ್ತರಾಗಿ 'ಏನೂ ಚಿಂತೆಯಿಲ್ಲ. ನಾನು ಈ ದಿನ ಊಟ ಮಾಡಬೇಕಾದುದು ದೇವರ ಚಿತ್ತದಲ್ಲಿಲ್ಲ' ಎನ್ನುತ್ತಿದ್ದರು. ಎಂದಿನಂತೆ ತಮ್ಮ ಕೆಲಸಕ್ಕೆ ಹಿಂತಿರುಗುತ್ತಿದ್ದರು.

'ನಮ್ಮ ತಾಯಿ ವ್ಯವಹಾರ ಕುಶಲೆ. ದರಬಾರಿನ ಎಲ್ಲ ವಿಷಯಗಳೂ ಅವರಿಗೆ ತಿಳಿದಿತ್ತು. ರಾಣೀವಾಸದವರು ಅವರ ಬುದ್ಧಿಕೌಶಲ್ಯವನ್ನು ಮೆಚ್ಚಿದ್ದರು. ನನ್ನ ಬಾಲ್ಯದಲ್ಲಿ ನಾನು ಅನೇಕ ವೇಳೆ ನಮ್ಮ ತಾಯಿಯ ಜತೆ ರಾಣೀವಾಸಕ್ಕೆ ಹೋಗುತ್ತಿದ್ದೆನು. ಅಲ್ಲಿ ನಮ್ಮ ತಾಯಿಗೂ ಠಾಕೂರ್ ಸಾಹೇಬರ ವಿತಂತು ತಾಯಿಗೂ ನಡೆಯುತ್ತಿದ್ದ ಸಂವಾದಗಳು ನನಗೆ ಇನ್ನೂ ನೆನಪಿದೆ." [1]

ಸರಳ ಮಾತಿನ ಈ ವರ್ಣನೆ ಮನೋಹರವಾಗಿದೆ. ತಂದೆತಾಯಿಗಳ ವಿಷಯದಲ್ಲಿ ಗಾಂಧೀಜಿಗಿದ್ದ ಅಗಾಧ ಪೂಜ್ಯಭಾವ ಗೋಚರವಾಗುತ್ತಿದೆ ಇದರಲ್ಲಿ. ತಾಯಿಯ ಚಿತ್ರವಂತೂ ಮೂರ್ತ ಸ್ವರೂಪವಾಗಿದೆ. ಇಂಥ ತಾಯಿ ಯಾರಿಗೆ ಬೇಡ ಎನಿಸುತ್ತದೆ.

ಗಾಂಧೀಜಿಯ ಮೇಲೆ ಗೋಖಲೆಯವರ ಪ್ರಭಾವ ಅಸಾಧಾರಣವಾಗಿದ್ದಿತು. ಅದನ್ನು ಈ ಮಾತುಗಳಲ್ಲಿ ಮನೋಜ್ಞವಾಗಿ ವರ್ಣಿಸಿದ್ದಾರೆ:

"ಅನಂತರ ನಾನು ಗೋಖಲೆಯವರನ್ನು ಹೋಗಿ ನೋಡಿದೆನು. ಅವರು ಫೆರ್ಗ್ಯುಸನ್ ಕಾಲೇಜಿನ ಆವರಣದಲ್ಲಿದ್ದರು. ಅವರು ನನ್ನನ್ನು ಪ್ರೇಮದಿಂದ ಸ್ವಾಗತಿಸಿದರು. ನನ್ನ ಹೃದಯ ಕೂಡಲೇ ಅವರಿಗೆ ಮಾರು

---

1 ಆತ್ಮಕಥೆ

ಹೋಯಿತು. ಅವರೊಂದಿಗೆ ಅದೇ ನನ್ನ ಪ್ರಥಮ ಭೇಟಿಯಾಗಿದ್ದಿತು. ಆದರೆ ನಮ್ಮ ಭೇಟಿ ಹಳೆಯ ಮಿತ್ರತ್ವದ ಪುನರುಜ್ಜೀವನವೋ ಎಂಬಂತೆ ತೋರಿತು. ಸರ್ ಫಿರೋಜ್ ಷಾ ನನಗೆ ಹಿಮಾಲಯದಂತೆ ಕಂಡಿದ್ದರು. ಲೋಕಮಾನ್ಯರು ಸಾಗರದಂತೆ ಕಂಡಿದ್ದರು. ಆದರೆ ಗೋಖಲೆ ಗಂಗಾ ನದಿಯಂತಿದ್ದರು. ಆ ಪವಿತ್ರವಾದ ನದಿಯಲ್ಲಿ ಯಾರು ಬೇಕಾದರೂ ಚೈತನ್ಯದಾಯಕ ಸ್ನಾನ ಮಾಡಬಹುದಾಗಿದ್ದಿತು. ಹಿಮಾಲಯವನ್ನು ಹತ್ತುವುದು ಸಾಧ್ಯವಿರಲಿಲ್ಲ; ಸಮುದ್ರದಲ್ಲಿ ಯಾನ ಮಾಡುವುದೂ ಸುಲಭ ವಲ್ಲ. ಆದರೆ ಗಂಗಾ ನದಿ ಎಲ್ಲವನ್ನೂ ತೊಡೆಯ ಮೇಲೆ ಆಡಲು, ಹೃದಯ ದಲ್ಲಿ ನಲಿದಾಡಲು ಆಹ್ವಾನಿಸುತ್ತಾಳೆ. ಗಂಗಾ ನದಿಯಲ್ಲಿ ಪುಟ್ಟ ದೋಣಿ ಗಳಲ್ಲಿ ಹುಟ್ಟು ಹಾಕುತ್ತಾ ಹೋಗಬಹುದು. ಅದೇ ಒಂದು ಆನಂದ. ಉಪಾಧ್ಯಾಯನು ಶಾಲೆಗೆ ಸೇರಲು ಬಂದಿರುವ ವಿದ್ಯಾರ್ಥಿಯನ್ನು ಪರೀಕ್ಷಿಸು ವಂತೆ ಗೋಖಲೆಯವರು ನನ್ನನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರು. ನಾನು ಯಾರು ಯಾರನ್ನು ನೋಡಬೇಕು? ಹೇಗೆ ನೋಡಬೇಕು? ಎಂದೆಲ್ಲ ಅವರು ನನಗೆ ಹೇಳಿಕೊಟ್ಟರು. ನನ್ನ ಭಾಷಣವನ್ನು ನೋಡಲು ಬಯಸಿ ದರು. ನನಗೆ ಕಾಲೇಜನ್ನೆಲ್ಲ ತೋರಿಸಿದರು. 'ಯಾವಾಗ ಬೇಕಾದರೂ ನನ್ನನ್ನು ಬಂದು ನೋಡಿ, ಭಂಡಾರಕರರನ್ನು ಸಂದರ್ಶಿಸಿದ ತರುವಾಯ ಫಲಿತಾಂಶವನ್ನು ಬಂದು ಹೇಳಿ' ಎಂದು ನನ್ನನ್ನು ಅತ್ಯಂತ ಸುಖಿಯಾಗಿ ಬೀಳ್ಕೊಟ್ಟರು. ಗೋಖಲೆಯವರು ಜೀವಿಸಿದ್ದಾಗಲೂ ಮತ್ತು ಈಗಲೂ ರಾಜಕೀಯ ಕ್ಷೇತ್ರದಲ್ಲಿ ನನ್ನ ಹೃದಯದಲ್ಲಿ ಆಕ್ರಮಿಸಿದ ಸ್ಥಾನವನ್ನು ಮತ್ತಾರೂ ಆಕ್ರಮಿಸಲಿಲ್ಲ. ಅದು ವಿಶೇಷ ರೀತಿಯಾಗಿದ್ದಿತು."[1]

ಇಂಥ ಸೊಗಸಾದ ವರ್ಣನೆ ಸಿಗುವುದು ಬಹಳ ಅಪರೂಪ. ಮೂವರು ಮಹಾ ವ್ಯಕ್ತಿಗಳ ಪರಸ್ಪರ ಹೋಲಿಕೆಯನ್ನು ಇಲ್ಲಿ ಕಾಣಬಹುದು; ಹಿಮಾ ಲಯ, ಸಾಗರ, ಗಂಗಾ ನದಿ. ಎಷ್ಟೊಂದು ಸಂಗತವಿದು! ಒಂದೊಂದರ ಭವ್ಯತೆ ಅದರದರದೇ, ವೈಶಿಷ್ಟ್ಯ ಅದರದರದೇ.

---

1 ಆತ್ಮಕತೆ

ಈ ಬಗೆಯ ವ್ಯಕ್ತಿ ಚಿತ್ರಣವನ್ನು ಗಾಂಧೀಜಿಯವರ ಬರಹಗಳಲ್ಲಿ ಅನೇಕಕಡೆ ಕಾಣಬಹುದು. ಇವು ಮೂಡಿಸುವ ಪ್ರತಿಮೆ, ಆಡಂಬರವಿಲ್ಲದ ನಿರಾಭರಣ ಸುಂದರಿಯಂತೆ. ಮೂವರು ವ್ಯಕ್ತಿಗಳ ಬಗೆಗೆ ಗೌರವ ಭಾವ ಜನಿಸಿದರೂ, ಗೋಖಲೆಯವರ ಬಗೆಗಿನ ಚಿತ್ರಣ ಚೇತೋಹಾರಕ.

ಲೋಕಮಾನ್ಯ ತಿಲಕರ ಬಗೆಗೆ ಗಾಂಧೀಜಿ ಬರೆದುದು ಅವರ ಗೌರವ ಭಾವದ ದ್ಯೋತಕ.

"ತಿಲಕರಲ್ಲಿದ್ದ ತ್ಯಾಗವೃತ್ತಿಯಲ್ಲಿ ನೂರರಲ್ಲೊಂದು ಪಾಲು, ಸಾವಿರದಲ್ಲೊಂದು ಪಾಲು ಕೂಡ ನಮ್ಮಲ್ಲಿ ಕಂಡುಬರುವುದಿಲ್ಲ. ಇನ್ನು ಅವರ ಸರಳತೆಯೋ! ಅವರ ಕೋಣೆಯಲ್ಲಿ ಯಾವುದೇ ರೀತಿಯ ಪೀಠೋಪಕರಣ, ಯಾವುದೇ ವಿಶಿಷ್ಟ ಅಲಂಕಾರ ಇರುತ್ತಿರಲಿಲ್ಲ. ಅಪರಿಚಿತರಿಗೆ ಅದೊಂದು ಮಹಾ ಪುರುಷನೊಬ್ಬನ ನಿವಾಸ ಸ್ಥಾನ ಎಂಬ ಕಲ್ಪನೆ ಬರುವುದೂ ಶಕ್ಯವಿರಲಿಲ್ಲ. ಕಣ-ಕಣಗಳಲ್ಲಿ ತುಂಬಿರುವ ಅವರ ಸರಳತೆಯನ್ನು ನಾನು ಅನುಸರಿಸಿದರೆ, ಎಷ್ಟೋ ಚೆಂದ! ಅವರ ಧೈರ್ಯವಂತೂ ಅದ್ಭುತ. ತಮ್ಮ ಕರ್ತವ್ಯದಲ್ಲಿ ಅವರು ನಿಶ್ಚಲರು; ಎಂದಿಗೂ ಅದನ್ನು ಮರೆಯುತ್ತಿರಲಿಲ್ಲ. ಧರ್ಮ ಪತ್ನಿಯ ಮರಣ ಸುದ್ದಿಯನ್ನು ಕೇಳಿದ ಮೇಲೂ ಅವರ ಲೇಖನಿ ಓಡುತ್ತಲೇ ಇದ್ದಿತು . . . ತಿಲಕರು ತಮ್ಮ ಜೀವನದ ಒಂದು ಕ್ಷಣವನ್ನಾದರೂ ಭೋಗ ವಿಲಾಸದಲ್ಲಿ ಕಳೆದುದನ್ನು ಕಾಣಲು ಸಾಧ್ಯವೆ? ಅವರಲ್ಲಿ ಸಹಿಷ್ಣುತೆ ಇತ್ತು. ಅಂದರೆ, ಎಷ್ಟೇ ಉದ್ದಂಡನಾದ ಮನುಷ್ಯನಿಂದಲಾದರೂ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಲೋಕ ನಾಯಕರಲ್ಲಿ ಅಂಥ ಶಕ್ತಿ ಇರಬೇಕು; ಆದರಿಂದ ಹಾನಿ ಏನೂ ಆಗದು. ಇಂಥ ಮನುಷ್ಯನಿಂದ ಕೆಲಸ ಮಾಡಿಸಿಕೊಳ್ಳಬಾರದು ಎಂಬ ಸಂಕುಚಿತ ಭಾವನೆ ನಮಗೆ ಬಂದರೆ ನಾವು ಕಾಡಿನಲ್ಲಿ ಹೋಗಿ ಇರಬೇಕು, ಇಲ್ಲವೇ ಮನೆಯಲ್ಲಿ ಕುಳಿತು ಗೃಹಸ್ಥ ಜೀವನ ನಡೆಸಬೇಕು. ಅಂತೂ ಒಂದು ಮಾತು; ಅಲಿಪ್ತರಾಗಿರಬಲ್ಲವರಾಗಿರಬೇಕು."[1]

---

1 ಕನ್ನಡ ಗಾಂಧೀ ಗ್ರಂಥಮಾಲೆಯ 'ನನ್ನ ಸಮಕಾಲೀನರು' ಸಂಪುಟದಿಂದ.

'ನಿಷ್ಕಾಮ ಕರ್ಮಯೋಗ' ಬರೆದ ಮಹಾನುಭಾವನಿಗೆ 'ಅನಾಸಕ್ತಿ ಯೋಗ' ಬರೆದ ಮಹನೀಯನಿಂದ ಎಂಥ ಶ್ಲಾಘನೀಯ ಮಾತು!

ಗಾಂಧೀಜಿ ತಮ್ಮ ಆಪ್ತ ಕಾರ್ಯದರ್ಶಿಯಾಗಿದ್ದ ಮಹಾದೇವ ದೇಸಾಯಿ ಅವರ ಬಗೆಗೆ ಬರೆದುದು ಅವರ ಹೃದಯದ ಆಳಲಿನಂತಿದೆ:

"ಮಹಾದೇವ ಒಂದು ಗುಲಾಬಿ ಹೂ. ಅವನು ನನ್ನ ಜೀವನ ಚರಿತ್ರೆ ಬರೆಯಲು ಅಪೇಕ್ಷಿಸಿದ್ದನು; ಆದರೂ ನನಗಿಂತ ಮೊದಲು ಸಾಯಲು ಅಪೇಕ್ಷಿಸಿದ್ದನು. ಅದಕ್ಕಿಂತ ಉತ್ತಮವಾದುದನ್ನು ಅವನೇನು ಮಾಡಿಯಾನು? ಸರಿ. ಅವನು ಹೊರಟುಹೋದ . . . ಮಕ್ಕಳು ತಂದೆತಾಯಿಗಳಿಗಿಂತ ಮೊದಲು ಸಾಯಲು ಬಯಸುವುದಕ್ಕಿಂತ ನಿರ್ದಯತೆ ಮತ್ತಾವುದುಂಟು? ಇದು ಅವನ ಶುದ್ಧ ಸ್ವಾರ್ಥ. ಬೇರೆಯವರಿಗೆ ಮನವರಿಕೆ ಮಾಡಿಕೊಡಲು ಆಗದಿದ್ದರೂ ನನಗೆ ಅನಿಸುವುದು ಹೀಗೆ; ಮರಣ ಎಂದಿಗೂ ಕಾಲಕ್ಕೆ ಮುಂಚೆ ಬರುವುದಿಲ್ಲ."[1]

ಇದು ಸರದಾರ ಪಟೇಲರ ಬಗೆಗೆ ಬರೆದುದು:

"ಸರದಾರರ ದೃಷ್ಟಿಯಲ್ಲಿ ಎಲ್ಲರೂ ಸಮಾನರೇ. ಭಂಗಿ, ಬ್ರಾಹ್ಮಣ, ಮದರಾಸೀ, ಗುಜರಾತೀ ಎಂಬ ಭೇದವೆಣಿಸದೆ ಬಡವರ ಸೇವೆ ಮಾಡುವುದೇ ಅವರ ಕರ್ತವ್ಯ. ರಾಷ್ಟ್ರ ಅವರ ಈ ಯೋಗ್ಯತೆಯನ್ನು ಅರಿತು ಅವರನ್ನು ರಾಷ್ಟ್ರಪತಿಯನ್ನಾಗಿ ಮಾಡಿತು."[2]

ಜವಾಹರಲಾಲರ ಬಗೆಗೆ ಗಾಂಧೀಜಿಗೆ ಒಂದು ರೀತಿಯ ಪುತ್ರ ವಾತ್ಸಲ್ಯ! ಈ ಮಾತುಗಳು ಮತ್ತೊಬ್ಬರ ವಿಷಯದಲ್ಲಿ ಬರಲು ಸಾಧ್ಯವೇ!

"ಜವಾಹರಲಾಲನಿಗೂ ನನಗೂ ಇರುವ ಸಂಬಂಧ ಎಂಥದು ಎಂಬುದನ್ನು ತಿಳಿದವರಿಗೆ ನಾನು ಅಧ್ಯಕ್ಷನಾದರೂ ಒಂದೇ, ಜವಾಹರಲಾಲ್ ಅಧ್ಯಕ್ಷನಾದರೂ ಒಂದೇ ಎಂಬುದು ತಿಳಿದಿದೆ. ವಿಚಾರ ಹಾಗೂ ಬುದ್ಧಿಯ ದೃಷ್ಟಿಯಿಂದ ನಮ್ಮಲ್ಲಿ ಮತಭೇದ ಇರಬಹುದಾದರೂ ನಮ್ಮ ಹೃದಯ ಒಂದೇ. ಎರಡನೆಯದಾಗಿ, ವಯೋಗುಣದ ಉಗ್ರತೆ ಇದ್ದರೂ ಕಟ್ಟು

1, 2 ಕನ್ನಡ ಗಾಂಧೀ ಗ್ರಂಥಮಾಲೆಯ 'ನನ್ನ ಸಮಕಾಲೀನರು' ಸಂಪುಟದಿಂದ.

ನಿಟ್ಟಾದ ಶಿಸ್ತು, ಏಕನಿಷ್ಠೆ ಮೊದಲಾದ ಗುಣಗಳಿಂದ ಅವನು ಪೂರ್ಣ ವಿಶ್ವಾಸಕ್ಕೆ ಅರ್ಹನಾದ ಅದ್ವಿತೀಯ 'ಸಖ' ಆಗಿದ್ದಾನೆ.

" ಆಂಗ್ಲರ ದೃಷ್ಟಿಯಲ್ಲಿ ಪ್ರಾಮಾಣಿಕತೆ, ವೀರತೆ, ಧೈರ್ಯ ಹಾಗೂ ಸ್ಪಷ್ಟವಾದಿತ್ವ ಅಮೂಲ್ಯ ಗುಣಗಳು. ಈ ಗುಣಗಳು ಜವಾಹರಲಾಲನಲ್ಲಿ ಸಾಕಷ್ಟು ಪ್ರಮಾಣದಲ್ಲಿವೆ.

" ಪರಾಕ್ರಮದಲ್ಲಿ ಅವನನ್ನು ಯಾರೂ ಮೀರಿಸಲಾರರು. ದೇಶಪ್ರೇಮದಲ್ಲಿ ಅವನಿಗಿಂತ ಮುಂದೆ ಸಾಗಬಲ್ಲವರಾರು? ಅವನು ಆತುರದ ಪ್ರಕೃತಿಯವನೆಂದೂ ತಾಳ್ಮೆಯಿಲ್ಲದವನೆಂದೂ ಕೆಲವರು ಹೇಳುತ್ತಾರೆ. ಈ ಸಮಯಕ್ಕೆ ಅದು ಒಂದು ಗುಣವೇ. ಅಲ್ಲದೆ ವೀರಯೋಧನ ತೀವ್ರತೆ ಹಾಗೂ ಅಸಹನೆ ಇರುವಂತೆಯೇ ರಾಜನೀತಿಜ್ಞನ ವಿವೇಕವೂ ಇದೆ. ಅವನು ಸ್ಫಟಿಕ ಮಣಿಯಂತೆ ಪವಿತ್ರ. ಅವನ ಸತ್ಯಶೀಲತೆ ಸಂಶಯಾತೀತ. ಅವನು ಅಹಿಂಸಕ ಹಾಗೂ ಅಭಿನಂದನೀಯ ಯೋಧ. ಅವನ ಕೈಯಲ್ಲಿ ರಾಷ್ಟ್ರ ಸುರಕ್ಷಿತವಾಗಿದೆ.

"ಕೇವಲ ಮತಭೇದ ನಮ್ಮನ್ನು ಬೇರ್ಪಡಿಸಲಾರದು. ನಾವು ಜತೆಯಾಗಿ ಕೆಲಸ ಮಾಡಲಾರಂಭಿಸಿದಂದಿನಿಂದಲೂ ನಮ್ಮಲ್ಲಿ ಮತಭೇದ ನಡೆದೇ ಬಂದಿದೆ. ಆದರೂ ಅನೇಕ ವರ್ಷಗಳಿಂದಲೂ ಈ ಮಾತನ್ನು ಹೇಳುತ್ತ ಬಂದಿದೇನೆ; ಈಗಲೂ ಹೇಳುತ್ತೇನೆ: 'ನನ್ನ ಉತ್ತರಾಧಿಕಾರಿ ಜವಾಹರಲಾಲ್ ಆದಾನೇ ಹೊರತು ರಾಜಾಜಿ ಅಲ್ಲ.' ನನ್ನ ಭಾಷೆ ಅವನಿಗೆ ಅರ್ಥವಾಗುವುದಿಲ್ಲವೆಂದು ಹೇಳುತ್ತಾನೆ. ಇದು ಸರಿಯೋ ಅಲ್ಲವೋ ನನಗೆ ತಿಳಿಯದು. ಆದರೆ ಹೃದಯದ ಏಕತೆಗೆ ಭಾಷೆ ಬಾಧಕವಾಗದು. ನಾನು ಕಣ್ಮರೆಯಾದ ಮೇಲೆ ಜವಾಹರಲಾಲ್ ನನ್ನ ಭಾಷೆಯಲ್ಲಿಯೇ ಮಾತನಾಡುವನೆಂಬುದನ್ನು ನಾನು ಬಲ್ಲೆ."[1]

ಲೋಕಮಾನ್ಯರ 'ಅಲಿಪ್ತತೆ'ಯ ಬಗೆಗೆ ಹೇಳಿರುವುದು ಮಹಾದೇವ ಭಾಯಿಯನ್ನು 'ಗುಲಾಬಿ ಹೂ'ಗೆ ಹೋಲಿಸಿರುವುದು, ಸರದಾರ್ ಪಟೇಲರ 'ರಾಷ್ಟ್ರಭಾವ'ದ ಬಗೆಗೆ ಹೇಳಿರುವುದು, ಜವಾಹರಲಾಲರನ್ನು 'ನನ್ನ ಉತ್ತ

---

1 ಕನ್ನಡ ಗಾಂಧೀ ಗ್ರಂಥಮಾಲೆಯ 'ನನ್ನ ಸಮಕಾಲೀನರು' ಸಂಪುಟದಿಂದ.

ರಾಧಿಕಾರಿ' ಎಂದಿರುವುದು, ಗಾಂಧೀಜಿಯ ಪ್ರೇಮ-ಆದರ ಭಾವಗಳ ನಿದರ್ಶನಗಳಾಗಿವೆ. ಈ ಬಗೆಯ ವ್ಯಕ್ತಿ ಚಿತ್ರಣಗಳು ಓದುಗರ ಮನಸ್ಸಿನ ಮೇಲೆ ಸ್ಥಿರವಾದ ಪರಿಣಾಮಗಳನ್ನು ಬೀರುತ್ತವೆ. ವಿಶಿಷ್ಟ ಗುಣಗಳು ಎಂದಿಗೂ ಮರೆಯದಂತಾಗುತ್ತವೆ.

ಇನ್ನು ಗಾಂಧೀಜಿಯ ವಿಸ್ತಾರವಾದ ಬರವಣಿಗೆಯಲ್ಲಿ ಅಲ್ಲಲ್ಲೇ ಕಂಡುಬರುವ ಅನೇಕ ವಾಕ್ಯಗಳು ಎಂದೆಂದಿಗೂ ಸ್ಮರಣಯೋಗ್ಯವಾದುವು ; ಚಿಂತನಾರ್ಹವಾದುವು. ಕೆಲವನ್ನು ಮಾತ್ರ ಇಲ್ಲಿ ನಿದರ್ಶನಾರ್ಥವಾಗಿ ಉದಾಹರಿಸಲಾಗಿದೆ :

'ಗೋವು ಕರುಣೆಯ ಕಾವ್ಯ'.

*　　*　　*　　*

'ವ್ಯಕ್ತಿಯನ್ನೋ ವಸ್ತುವನ್ನೋ ಉದ್ದೇಶಿಸಿ ಪ್ರಾರ್ಥನೆ ಮಾಡಬಹುದು. ಅದಕ್ಕೆ ಫಲವೂ ಸಿಕ್ಕೀತು. ಆದರೆ ಉದ್ದೇಶವಿಲ್ಲದೆ ಮಾಡಿದ ಪ್ರಾರ್ಥನೆಯಿಂದ ಮಾತ್ರ ಆತ್ಮಕಲ್ಯಾಣ, ಜಗದ್ಧಿತ ಆದೀತು.'

*　　*　　*　　*

'ಸತ್ಯ ಶೋಧನೆಯಲ್ಲಿ ಸಿಕ್ಕ ರಸವನ್ನು ನಾನು ಹೊಟ್ಟೆ ತುಂಬ ಕುಡಿದಿದ್ದೇನೆ. ದೊರೆತರೆ ಇನ್ನೂ ಕುಡಿಯಲು ಸಿದ್ಧ. ಸತ್ಯದ ಪೂಜಾರಿಗೆ ಎಲ್ಲವೂ ಸಹಜ ಪ್ರಾಪ್ತಪ್ರವೃತ್ತಿ.'

*　　*　　*　　*

'ಶ್ರದ್ಧಾವಂತರಾದ ಜನ ಮುಂದಿನ ಯೋಚನೆ ಮಾಡುವುದಿಲ್ಲ. ಮುಂದಿನ ಯೋಚನೆ, ಸಿದ್ಧತೆ, ಮಾಡುವ ಶ್ರದ್ಧೆ ಶ್ರದ್ಧೆಯಲ್ಲ; ಹಾಗಿದ್ದರೆ ಅದು ದುರ್ಬಲ ಶ್ರದ್ಧೆ.'

*　　*　　*　　*

'ಗಂಡು-ಹೆಣ್ಣಿನ ದಾಂಪತ್ಯಕ್ಕೆ ಅಡಿಗಲ್ಲು ಭೋಗ. ಅದರೊಳಗಿನಿಂದ ತ್ಯಾಗವನ್ನು ಅರಳಿಸುವ ಪ್ರಯತ್ನವನ್ನು ಹಿಂದೂ ಧರ್ಮ ಮಾಡಿದೆ. ಎಲ್ಲ ಧರ್ಮಗಳೂ ಆ ಪ್ರಯತ್ನ ಮಾಡಿವೆ.'

'ಲೋಕಮತ ಎಂದರೆ, ನಾವು ಬೆಲೆ ಕೊಡುವ ಸಾಮಾಜಿಕ ಅಭಿಪ್ರಾಯ. ಇದೂ ಕೂಡ ನೀತಿವಿರುದ್ಧವಾಗದಿರುವ ತನಕ ಅದಕ್ಕೆ ಬೆಲೆ.'

* * * *

'ಜಗತ್ತನ್ನು ಇದಿರಿಸಿ ನಿಲ್ಲುವ ಬಲವನ್ನು ಗಳಿಸಲು—ಸೊಕ್ಕು, ತಿರಸ್ಕಾರ ಬೇಕಿಲ್ಲ. ಏಸು ಜಗತ್ತಿಗೆ ಎದುರು ನಿಂತ. ಬುದ್ಧ ತನ್ನ ಕಾಲಕ್ಕೆ ಎದುರು ನಿಂತ. ಪ್ರಹ್ಲಾದನೂ ಹಾಗೆಯೇ. ಅವರೆಲ್ಲರೂ ವಿನಯದ ವಿಗ್ರಹಗಳೇ.'

* * * *

'ನಮ್ಮ ದಾರಿಯಲ್ಲಿ ನಾವೇ ಮುಳ್ಳು ಚೆಲ್ಲಿ ಚುಚ್ಚುತ್ತದೆ ಎಂದು ದೂರುತ್ತೇವೆ. ನಮ್ಮ ಬಲವನ್ನೇ ನಾವು ನಂಬಿದರೆ ಯಾವುದೂ ಸಫಲವಾಗದು. ದೇವರ ಬಲವನ್ನು ನಂಬಿದರೆ ಎಂಥ ಕಗ್ಗತ್ತಲಿನಲ್ಲೂ ಬೆಳಕು ಕಂಡೀತು.'

* * * *

'ಅಹಂಕಾರದ ಬೀಜ ನಾಶವಾಗಲು ಶೂನ್ಯತೆಯ ಅನುಭವವಾಗಬೇಕು. ಒಂದು ಗಳಿಗೆ ಹೊತ್ತು ತನ್ನೊಳಗೆ ತಾನೇ ಆಳವಾಗಿ ಇಳಿದು ನೋಡಿದರೆ, ತಾನು ಅತ್ಯಲ್ಪ ಎಂಬ ಜ್ಞಾನ ಬರುತ್ತದೆ.'

* * * *

'ಯಾವುದಾದರೂ ತತ್ವ ವ್ಯವಹಾರದಲ್ಲಿ ಸಾಧ್ಯವಿಲ್ಲ ಎನಿಸಿದರೆ, ಆ ತತ್ವ ನಮಗೆ ಸರಿಯಾಗಿ ಅರ್ಥವಾಗಿಲ್ಲ ಎಂದು ತಿಳಿಯಬೇಕು. ಶುದ್ಧ ತತ್ವ ವ್ಯವಹಾರದಲ್ಲಿ ಬರಲೇಬೇಕು. ಯಾವ ತತ್ವವೂ ಸಂಪೂರ್ಣವಾಗಿ ವ್ಯವಹಾರದಲ್ಲಿ ಬರಲಾರದು; ಅದು ಅಸಾಧ್ಯ. ಆದರೆ ತತ್ವದ ನೆರೆಗೇ ಹತ್ತದ ವ್ಯವಹಾರ ಅಶುದ್ಧ, ತ್ಯಾಜ್ಯ.'

* * * *

'ಇಡಿಯ ಕಾಲಚಕ್ರದಲ್ಲಿ ಜಗತ್ತು ಮಾಯೆ; ನಿಜ. ಆದರೆ ಯಾವ ಗಳಿಗೆಯಲ್ಲಿ ಇದೆಯೋ ಆ ಗಳಿಗೆಯಲ್ಲಿ ಇದ್ದೇ ಇದೆ.'

* * * *

'ಸತ್ತ ಮೇಲೆ ಪಾಪ-ಪುಣ್ಯ ಜೀವಿಯ ಜತೆಯಲ್ಲೇ ಇರಲಿ, ಸೂಕ್ಷ್ಮ ಶರೀರದಲ್ಲೇ ಇರಲಿ, ಸ್ಥೂಲ ಶರೀರದಲ್ಲೇ ಇರಲಿ, ಜೀವ ಆ ಪಾಪ-ಪುಣ್ಯವನ್ನು ಭೋಗಿಸಲೇ ಬೇಕು.'

* * * *

'ತಪ್ಪು ಎಲ್ಲರಿಂದಲೂ ಆಗುವುದು ಸಹಜ. ಅದಕ್ಕೆ ದುಃಖ ಬೇಡ. ತಪ್ಪನ್ನು ಮುಚ್ಚಿಟ್ಟು, ಅದು ಹೇಗೋ ಹೊರಬಿದ್ದಾಗ ಅಯೋಗ್ಯ ರೀತಿಯಿಂದ ನಮ್ಮ ತಪ್ಪಿನ ಸಮರ್ಥನೆ ಮಾಡಲು ನಾವು ಪ್ರಾರಂಭಿಸಿದರೆ ಅದು ಬಹಳ ಕೆಟ್ಟದ್ದು.'

* * * *

'ಬ್ರಹ್ಮಚರ್ಯದ ಅಭಿಮಾನ ಮೂಡಿದ ಕೂಡಲೇ ನಾರದ ಕೆಳಗೆ ಬಿದ್ದ. ಎಲ್ಲರ ಬ್ರಹ್ಮಚರ್ಯಕ್ಕೂ ದೇವರೇ ಆಧಾರ. ಅಂತೇ ನಮಗೆ ನಮ್ರತೆ ಬೇಕು.'

* * * *

'ಹಸಿವು ಇಲ್ಲದಿದ್ದರೆ ತಿನ್ನಬಾರದು. ಮನಸ್ಸಿಲ್ಲದಿದ್ದರೆ ತಿರುಗಾಡಬಾರದು. ಹಾಗೆಯೇ ಬರೆಯುವ ಹುರುಪಿಲ್ಲದಾಗ ಬರಯಬಾರದು, ಅಥವಾ ಬಹಳ ಬಳಲಿದೇನೆ ಎಂದು ಅಷ್ಟೇ ಬರೆದು ಮುಗಿಸಬೇಕು.'

* * * *

'ಶೂನ್ಯದಂತೆ ಆಗುವುದು ಎಂದರೆ, ನಾನು ಮಾಡುತ್ತೇನೆ ಎಂಬ ಭಾವವನ್ನು ಬಿಡುವುದು. ಇದರಲ್ಲಿ ನಿರಾಶಾವಾದಕ್ಕೆ ಸ್ಥಾನವೇ ಇಲ್ಲ.'

* * * *

'ವ್ಯಕ್ತಿ ಪ್ರೇಮ ಅಷ್ಟೇನೂ ತಿರಸ್ಕರಣೀಯವಲ್ಲ. ಅದು ವಿಶ್ವಪ್ರೇಮಕ್ಕೆ, ಪ್ರಭು ಪ್ರೇಮಕ್ಕೆ ವಿರೋಧವಾಗಲಾರದು ಅಷ್ಟೆ.'

* * * *

'ತನ್ನ ಕೆಲಸದಲ್ಲಿ ತನ್ಮಯನಾದವನಿಗೆ ಕೆಲಸ ಭಾರ ಎನಿಸುವುದೂ ಇಲ್ಲ, ಆದರಿಂದ ಅವನಿಗೆ ಆಯಾಸವೂ ಇಲ್ಲ ; ಕೆಲಸದಲ್ಲಿ ರುಚಿ ಇಲ್ಲದವ

ರಿಗೆ ಸ್ವಲ್ಪ ಕೆಲಸವಾದರೂ ಗುಡ್ಡದಷ್ಟು. ಕೈದಿಗೆ ಒಂದು ದಿನ ಒಂದು ವರ್ಷ ; ಭೋಗಿಗೆ ಒಂದು ವರ್ಷ ಒಂದು ದಿನ.'

* * * *

'ಯಾವ ದೇಶಕ್ಕೂ ವ್ಯಕ್ತಿಗೂ ಕಲೆಯು ಗುತ್ತಿಗೆ ಕೊಟ್ಟಿಲ್ಲ. ಯಾವುದರಲ್ಲಿ ಮರೆಮಾಡಬೇಕಾದದ್ದು ಇದೆಯೋ ಅದು ಕಲೆಯಲ್ಲ.'

* * * *

'ದೇವರನ್ನು ಒಪ್ಪಿದರೂ ಅದೃಷ್ಟ ಸುಳ್ಳಾಗದು. ಅದೃಷ್ಟ ಪೂರ್ವ ಕರ್ಮದ ಫಲ.'

* * * *

'ವಸ್ತು ಒಂದೇ ಆದರೂ ಅದನ್ನು ನೋಡುವವರ ನೋಟ ಬೇರೆ ಬೇರೆ. ಇದು ನಿಜ. ಒಂದು ಶಕ್ತಿಯ ಉಪಯೋಗ ಬೇರೆ ಬೇರೆ ರೀತಿಯಲ್ಲಿ ಆಗುತ್ತದೆ; ನಾವು ನೋಡುತ್ತೇವೆ.'

* * * *

'ಸತ್ಯ ಶೋಧನೆಗೆ ಲೋಕಾಚಾರ ಅಡ್ಡಿ ಬಂದರೆ ಅದನ್ನು ಕಿತ್ತೊಗೆಯಬೇಕು.'

* * * *

'ಸರಕಾರ ಒಂದು ಯಂತ್ರದಂತೆ. ಅದನ್ನು ನಡಸುವ ಯಾಂತ್ರಿಕರೂ ಇದ್ದಾರಲ್ಲ !'

* * * *

'ಶುದ್ಧ ಪ್ರೇಮಕ್ಕೆ ಶರೀರ ಸ್ಪರ್ಶ ಅಗತ್ಯವಿಲ್ಲ. ಹೀಗೆಂದರೆ, ಸ್ಪರ್ಶವೆಂದದ್ದೆಲ್ಲ ಅಪವಿತ್ರ ಎಂದಲ್ಲ. ತಾಯಿಯ ಮೇಲೆ ನನಗೆ ಮುಗ್ಧ ಪ್ರೀತಿಯಿತ್ತು. ಆಕೆಯ ಕಾಲು ಒತ್ತುತ್ತಿದ್ದೆ. ಅದರಲ್ಲೇನೂ ಅಪವಿತ್ರತೆ ಇರಲಿಲ್ಲ. ವಿಕಾರ ಸ್ಪರ್ಶ ದೂಷಿತವಾದದ್ದು. ಶರೀರ ಸ್ಪರ್ಶವಿಲ್ಲದ್ದು ಶುದ್ಧ ಪ್ರೇಮವಲ್ಲ ಎನ್ನುವವರಿಗೆ ಶುದ್ಧ ಪ್ರೇಮವೆಂದರೇನೋ ಗೊತ್ತೇ ಇಲ್ಲ.'

* * * *

ಇವು ಅಲ್ಲೊಂದು ಇಲ್ಲೊಂದು ಆಯ್ದ ನುಡಿಮುತ್ತುಗಳು ; ಭಾವಾರ್ಥ ಭಂಡಾರಗಳು. ಅಗಾಧವಾಗಿರುವ ಗಾಂಧೀ ಸಾಹಿತ್ಯ ಸಾಗರದಲ್ಲಿ ಇಂಥವು

ಎಷ್ಟೋ ಅಡಗಿವೆ. ಒಮ್ಮೆ ಸುಮ್ಮನೆ ಮುಳುಗಿದರೆ ಸಾಕು; ಎಷ್ಟೋ ದೊರೆ ತಾವು. ಆಳವಾಗಿ ಮುಳುಗಿದರೆ ಹೇಳುವುದೇನು! ಆದರೆ ಮುಳುಗುವ ಕಾರ್ಯಕ್ಕೆ ಹೊಣೆ ಯಾರದು?

* * * *

ಇಂಥ ಮಂತ್ರ ರೂಪದ ಮೋಹಕ ವಚನಗಳು ತಮ್ಮ ಸೊಗಸಿನಿಂದ, ಅರ್ಥದಿಂದ ಹಿರಿಕಿರಿಯರ ಭಾವಬುದ್ಧಿಗಳನ್ನು ಸೂರೆಗೊಂಡಾವು; ಬದುಕನ್ನು ಹಸನು ಮಾಡಿ ಸಾರ್ಥಕಗೊಳಿಸಿಯಾವು; ಯುಗ ಯುಗ ಕಳೆದರೂ ಈ ರೀತಿ ಮಾಡುವ ಚೈತನ್ಯ ಅವುಗಳಲ್ಲಿ ಅಡಗಿದೆ.

೭

ಗಾಂಧೀ ಸಾಹಿತ್ಯ: ಇಂದು-ನಾಳೆ

ಇನ್ನೊಂದು ವಿವೇಚನೆಯಿಂದ ಗಾಂಧೀ ಸಾಹಿತ್ಯ ಸಾರಸಂಗ್ರಹದ ಈ ಸರಳ ಸಮೀಕ್ಷೆಯನ್ನು ಮುಗಿಸಬಹುದು. ಅದು 'ಗಾಂಧೀ ಸಾಹಿತ್ಯ: ಇಂದು-ನಾಳೆ' ಎಂಬುದು.

ಹಿಂದೆ ಒಂದೆಡೆ ಗಾಂಧೀ ಸೇವಾ ಸಂಘದ ವಿಷಯವಾಗಿ ಉಲ್ಲೇಖಿಸಲಾಗಿದೆ. ಆ ಸಂಘದ ಸದಸ್ಯರನ್ನು ಉದ್ದೇಶಿಸಿ, ಗಾಂಧೀಜಿ ಮಾಡಿದ ಪ್ರವಚನದ ಭಾಗ ಈ ರೀತಿ ಇದೆ: "ನಿಲ್ಲುವುದು ನನ್ನ ಕೃತಿಯೇ ಹೊರತು ನನ್ನ ಮಾತೂ ಅಲ್ಲ ಬರಹವೂ ಅಲ್ಲ. ಇತ್ತೀಚೆಗೆ ಈ ಮಾತನ್ನು ನಾನು ಅನೇಕ ಸಲ ಹೇಳಿದ್ದೇನೆ; ಸಕಲ ಶಾಸ್ತ್ರಗಳೂ ಒಂದು ವೇಳೆ ವಿನಾಶ ಹೊಂದುವುದಾದರೂ, ಹಿಂದೂ ಧರ್ಮದ ಸಾರವನ್ನು ಸಾರಲು ಈಶೋಪನಿಷತ್ತಿನ ಒಂದು ಮಂತ್ರ ಸಾಕು. ಆದರೆ ಅದನ್ನು ಅನುಷ್ಠಾನಕ್ಕೆ ತರಲು ಯಾರೊಬ್ಬನೂ ಇಲ್ಲದಿದ್ದರೆ ಆ ಒಂದು ಮಂತ್ರವೂ ನಿರರ್ಥಕ. ಅದರಂತೆಯೇ ನನ್ನ ಮಾತು ಬರಹಗಳು ಸತ್ಯ. ಅಹಿಂಸೆಯ ಮಹಾ ತತ್ವಗಳನ್ನು ರಕ್ತಗತ ಮಾಡಿಕೊಳ್ಳಲು ನೆರವು ನೀಡಿರುವಷ್ಟರಮಟ್ಟಿಗೆ ಮಾತ್ರ ಉಪಯುಕ್ತ. ನೀವು ಹಾಗೆ ರಕ್ತಗತ ಮಾಡಿಕೊಳ್ಳದಿದ್ದರೆ ನನ್ನ ಬರಹಗಳಿಂದ ನಿಮಗೆ

ಯಾವ ಪ್ರಯೋಜನವೂ ಇಲ್ಲ. ಒಬ್ಬ ಸತ್ಯಾಗ್ರಹಿಯಾಗಿ ನಾನು ಈ ಒಂದೊಂದು ಮಾತನ್ನೂ ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ." [1]

ಈ ಮಾತುಗಳನ್ನು ಗಮನಿಸಿದಾಗ, ಗಾಂಧೀಜಿ ತಮ್ಮ ಬರಹಗಳ ಬಗೆಗೆ,-' ಇಂದು-ನಾಳೆ 'ಬಗೆಗೆ, ಫಲಶ್ರುತಿ ನುಡಿದರೋ ಎನ್ನುವಂತಿದೆ. ಸತ್ಯ ಅಹಿಂಸೆಗಳನ್ನು ಕೇವಲ ಸಮಯ ಸಿಂಧುವಾಗಿ ಉಪಯೋಗಿಸಿಕೊಂಡಿದ್ದು ದನ್ನು ಅವರು ಅರಿತುಕೊಂಡಿದ್ದರು. ಗಾಂಧೀ ಜೀವನ, ಅದರಿಂದ ಮೂಡಿ ಬಂದ ವಿಚಾರದರ್ಶನ, ಇವು ಇಂದಿನ ರಾಷ್ಟ್ರಜೀವನದಮೇಲೆ ಯಾವ ಪ್ರಭಾವ ಉಳಿಸಿವೆ ಎಂಬುದನ್ನೂ ಸ್ವಲ್ಪ ವಿಚಾರ ಮಾಡಿದರೂ ಸಾಕು, ಅವರ ಮಾತಿನ ಅರ್ಥ ಗೋಚರಿಸುತ್ತದೆ. ಸತ್ಯದ ಸೊಲ್ಲು, ಸತ್ಯದ ಆಚರಣೆ ಎಲ್ಲಿ ಅಡಗಿ ಹೋಗಿದೆಯೋ ? ಅಹಿಂಸೆಯ ಅಥವಾ ಪ್ರೇಮದ ಮಾತು ಏರುತ್ತಿರುವ ಹಿಂಸೆಯ ಜ್ವಾಲೆಯಲ್ಲಿ ಭಸ್ಮವಾಗಿ ಹೋದಂತಿದೆ. ಹೀಗಿರುವಾಗ ನಾಳಿನ ಮಾತೇನು ?

ಗಾಂಧೀಜಿ ಯಾವ ನಾಗರಿಕತೆ, ಯಾವ ಸಂಸ್ಕೃತಿ ಲೋಕಕ್ಕೆ ಕಂಟಕ ವಾಗುತ್ತಿದೆಯೆಂದು ಭಾವಿಸಿದ್ದರೋ, ಯಾವ ರಾಜಕೀಯ ವಿಚಾರ ಬದುಕ ನ್ನೆಲ್ಲ ಕಲಕಿದೆಯೆಂದು ನುಡಿಯುತ್ತಿದ್ದರೋ, ಯಾವ ಆರ್ಥಿಕ ಸಾಮಾಜಿಕ ಶೋಷಣೆಯಿಂದ ಮಾನವತೆ ಆತ್ಮಶ್ರೀವಿದೂರವಾಗಿ ಕುಗ್ಗಿ ಹೋಗುತ್ತಿದೆ ಯೆಂದು ನುಡಿದರೋ, ಅದೇ ಇಂದು ಸಿಂಹ ಪೀಠದಲ್ಲಿ ಕುಳಿತು ವಿಜೃಂಭಿಸು ತ್ತಿದೆ. ದರ್ಪ, ದೌರ್ಜನ್ಯ, ಅನೀತಿ ಸಹಸ್ರ ಹೆಡೆಗಳ ಶೇಷನಾಗನಂತೆ ಬುಸುಗುಟ್ಟುತ್ತಾ ಬಿಸಿಯುಸಿರನ್ನು, ವಿಷದುಸಿರನ್ನು ಕಾರುತ್ತಿದೆ. ಇದಕ್ಕೆಲ್ಲ ಮದ್ದು 'ಸತ್ಯಾಗ್ರಹ'—ಸತ್ಯವನ್ನು ಗ್ರಹಿಸಿ, ಅದರ ಪ್ರತಿಷ್ಠಾಪನೆಗೆ ಜೀವಕದ ಹಂಗು ತೊರೆದು, ವ್ಯಕ್ತಿ ಮತ್ತು ಸಮಾಜ ಶ್ರಮಿಸಬೇಕೆಂದು, ಅವರು ದೃಷ್ಟಾಂತಪೂರ್ವಕವಾಗಿ ತೋರಿಸಿಕೊಟ್ಟರು. ಆದರೆ ನಾವು ಸ್ವಾರ್ಥಪರ ರಾಗಿ ಕಂಡ ಸತ್ಯವೇ ಪರಸತ್ಯವೆಂದು ಭಾವಿಸಿ, ಅದರ ಸ್ಥಾಪನೆಗೆ 'ದುರಾ ಗ್ರಹ 'ದ ಪಥವನ್ನು ಆರಿಸಿಕೊಂಡಿದ್ದೇವೆ. ಇದರ ಫಲವಾಗಿ ಶಾಂತಿ, ಸಮಾ ಧಾನ, ಯಾರಿಗೂ ಇಲ್ಲವಾಗಿದೆ. ಜೀವನದ ಎಲ್ಲ ಕ್ಷೇತ್ರಗಳೂ ಇದಕ್ಕೆ ಬಲಿ

1 ತೆಂಡುಲಕರ್ : ಸಂಪುಟ—೫. ಪುಟ ೬೫-೬೬.

ಯಾಗಿವೆ. ಹೀಗಿರುವಾಗ 'ನಾಳಿನ' ಮಾತೇನು? ಇಂದಿನಂತೆಯೇ ನಾಳೆಯೂ. ಇದು ಸಾಮಾನ್ಯ ತರ್ಕ.

ಈ ಪರಿಸ್ಥಿತಿ ನೋಡಿದಾಗ, ಸಹಸ್ರಾರು ವರ್ಷಗಳ ಹಿಂದಿನ ಒಂದು ಪರಿಸ್ಥಿತಿ ನೆನಪಿಗೆ ಬರುತ್ತದೆ. ಭಗವಾನ್ ವೇದವ್ಯಾಸರು ಹದಿನೆಂಟು ಮಹಾ ಪುರಾಣಗಳನ್ನೂ ಮತ್ತು ಹದಿನೆಂಟು ಕಿರು ಪುರಾಣಗಳನ್ನೂ ರಚಿಸಿದರು. ಮಾನವನ ಉನ್ನತಿಗಾಗಿ, ಆದರೇನಾಯಿತು? ಅವರು ಲೋಕದ ಸ್ಥಿತಿ ಕಂಡು ಮರುಗಿ ಕಣ್ಣೀರಿಟ್ಟರು. ಅವರು ಹೇಳಿದರು :

" ಊರ್ಧ್ವಬಾಹುರ್ವಿರೌಮ್ಯೇಷಃ ನ ಚ ಕಶ್ಚಿತ್ ಶ್ರುಣೋತಿ ಮಾಮ್ ।
ಧರ್ಮಾದರ್ಥಶ್ಚ ಕಾಮಶ್ಚ ಸಧರ್ಮಃ ಕಿಂ ನ ಸೇವ್ಯತೇ ॥ "

(ತೋಳುಗಳನ್ನು ಎತ್ತಿ ನಾನು ಸಾರಿ ಹೇಳುತ್ತೇನೆ ; ಆದರೆ ನನ್ನ ಮಾತಿಗೆ ಯಾರೂ ಕಿವಿಗೊಡುವುದಿಲ್ಲವಲ್ಲ ; ಇಗೋ ಧರ್ಮದಿಂದಲೇ ಅರ್ಥವಪ್ಪಾ ; ಲಾಭವೂ ಕಾಮವೂ ಕೂಡ ಅದರಿಂದಲೇ ಸರಿ. ಅಂದ ಬಳಿಕ ಇಂಥ ಧರ್ಮವನ್ನು ನೀವು ಆಚರಿಸಬಾರದೇಕೆ ?)

ಏಕೆ ಹೀಗಾಯಿತು ? ಧರ್ಮ ಅಥವಾ ಸತ್ಯ ಅಹಿಂಸೆಗಳು ಕೇವಲ ವ್ಯಕ್ತಿ ಜೀವನದ ಅದರಲ್ಲೂ ಎಲ್ಲೋ ಕೆಲವೇ ಮಂದಿಯ ಜೀವನದ ನಿಯಮಗಳಾದುವು. ಬರುಬರುತ್ತ ಅವೂ ಪ್ರಭಾವಹೀನವಾದುವು. ತಮ್ಮ ಕಾಲದಲ್ಲೂ ಹೀಗೆ ಆದುದನ್ನು ಅರಿತುಕೊಂಡ ಗಾಂಧೀಜಿ, ಗಾಂಧೀ ಸೇವಾ ಸಂಘದ ಸದಸ್ಯರನ್ನು ಕುರಿತು ಹೀಗೆ ನುಡಿದಿದ್ದರು : " ಸತ್ಯ-ಅಹಿಂಸೆಗಳನ್ನು ಕೇವಲ ವೈಯಕ್ತಿಕ ಅನುಷ್ಠಾನದ ತತ್ವಗಳನ್ನಾಗಿ ಮಾಡಿಕೊಂಡರೆ ಸಾಲದು ; ಸಮಾಜ, ಸಮುದಾಯಗಳು, ರಾಷ್ಟ್ರಗಳೂ ಕೂಡ, ಅವುಗಳನ್ನು ಅನುಷ್ಠಾನಕ್ಕೆ ತರುವಂತಾಗಬೇಕು. ಹೇಗೇ ಆಗಲಿ, ಅದಂತೂ ನನ್ನ ಕನಸು. ನನ್ನ ಬದುಕೆಲ್ಲ ಅದರ ಸಾಕ್ಷಾತ್ಕಾರದ ಪ್ರಯತ್ನಕ್ಕಾಗಿಯೇ ; ನನ್ನ ಸಾವೂ ಅದರಲ್ಲಿಯೇ. ನನ್ನ ಶ್ರದ್ಧೆ ನನಗೆ ಅನುದಿನವೂ ನೂತನ ಸತ್ಯಗಳನ್ನು ಕಾಣಿಸುತ್ತಿದೆ. ಆತ್ಮದ ಸ್ವರೂಪವೇ ಅಹಿಂಸೆ ; ಆದುದರಿಂದಲೇ ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕು. ಎಲ್ಲ ಕ್ಷೇತ್ರ

ಗಳಲ್ಲೂ ಅದನ್ನು ಅನುಷ್ಠಾನ ಮಾಡದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ'[1]

ಮೇಲಿನ ಕಡೆಯ ಎರಡು ವಾಕ್ಯಗಳು ಬಹಳ ಪ್ರಭಾವಯುತವಾದುವು. ನಾವು ಎಲ್ಲ ಕ್ಷೇತ್ರಗಳಲ್ಲೂ ಅನುಷ್ಠಾನಕ್ಕೆ ತಂದಿದೇವೆಯೆ? ಕಡೆಗೆ ತರಲು ಯತ್ನಿಸಿದ್ದೇವೆಯೇ? ಇಲ್ಲ ಎನ್ನುವ ಧೀರ, ದಿಟ್ಟತನ ನಮಗೆ ಇಲ್ಲವಾದರೆ, ದೊಡ್ಡದೊಂದು ಪ್ರಶ್ನಾರ್ಥಕ ಚಿಹ್ನೆಯೇ ನಮ್ಮ ಕಣ್ಣನ್ನು ಇರಿದೀತು. ಆದರೂ ವ್ಯಾಸರಂತೆ ಖಿನ್ನರಾಗಲಿಲ್ಲ ಗಾಂಧೀಜಿ; ಒಮ್ಮೊಮ್ಮೆ ಖಿನ್ನರಾದರೂ ಬಿಡದೆ ಸಾಧಿಸಲು ಯತ್ನಿಸುವ ಮಹಾ ಸಾಹಸಿಯಾದರು. ರಾಷ್ಟ್ರ ವಿಭಜನೆಯಿಂದ ಮಾಡಿದ ಮಹಾ ಜ್ವಾಲೆಗೆ ಆಹುತಿಯಾದರು.

'ತತ್ವಾನುಷ್ಠಾನದ ಜೀವನ ಪುಸ್ತಕಕ್ಕಿಂತ ಶ್ರೇಷ್ಠ' ಎಂಬುದು ಅವರ ಗಾಢ ನಂಬಿಕೆಯಾಗಿತ್ತು. ಗಾಂಧೀ ಸಾಹಿತ್ಯ ಗಾಂಧೀ ಜೀವನ ಮತ್ತು ವಿಚಾರಗಳ ಸಾಕಾರ ರೂಪ. ಆ ಸಾಹಿತ್ಯ ಜೀವಂತವಾಗಬೇಕಾದರೆ, ಅದು ಇಂದಿಗೂ ನಾಳೆಗೂ ಶಕ್ತಿ ನೀಡುವ, ಸತ್ವ ತುಂಬುವ ಅಂಶವಾಗಬೇಕಾದರೆ, ಸತ್ಯ-ಅಹಿಂಸೆಗಳ ಅನುಷ್ಠಾನವೊಂದೇ ಶರಣ್ಯ. ಇನ್ನೊಮ್ಮೆ ಗಾಂಧೀಜಿಯೇ ನುಡಿದಿರುವಂತೆ, "ನಾವು ಸತ್ಯ-ಅಹಿಂಸೆಗಳ ನಿಜವಾದ ಆರಾಧಕರಾಗುವ ಪಕ್ಷದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯವಾಗಿ ಬೇಕಾದ ಬುದ್ಧಿಶಕ್ತಿಯನ್ನು ಭಗವಂತನೇ ದಯಪಾಲಿಸುತ್ತಾನೆ"[2] ಭಗವಂತನಲ್ಲಿ ಈ ಅಭೇದ್ಯ ನಂಬಿಕೆಯೇ ಸರ್ವಸ್ವ. ಆಗ ಗಾಂಧೀ ಸಾಹಿತ್ಯ ಅಕ್ಷರ (ಕ್ಷರರಹಿತ) ಸಾಹಿತ್ಯ ಆದೀತು.

ಮಾನವತೆಯನ್ನು ಬಾಯ್ದೆರೆದು ನುಂಗಲು ದುರುಗುಟ್ಟಿಕೊಂಡು ಬರುತ್ತಿದ್ದಾಳೆ ಹಿಂಸಾ ರಕ್ಕಸಿ–ಇಂದು. ಮಾನವ ಕುಲ ಅಳಿಯದೆ ಉಳಿಯಬೇಕಾದರೆ, ಈ ನವಯುಗ ದೃಷ್ಟಾರನ ಮಂತ್ರವೊಂದೇ ತಾರಕ. ಜಾಗ್ರತ

---

1 ಗಾಂಧೀ ಸೇವಾ ಸಂಘದ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದಿಂದ— ತೆಂಡುಲಿಕರ ಸಂಪುಟ ೫; ಪುಟ ೧೨೮-೩೦

2 ಗಾಂಧೀ ಸೇವಾ ಸಂಘದ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದಿಂದ. ತೆಂಡುಲಕರ್ : ಸಂಪುಟ ೫; ಪುಟ ೨೩೩-೩೪.

ಜಗತ್ತು ಇದನ್ನು ಅರಿವ ಬುದ್ಧಿ ಕಾಲ ಮಿಂಚಿದ ಮೇಲೆ ಬಂದೀತೋ ಹೇಗೋ? 'ಅಟ್ಟ ಮೇಲೆ ಒಲೆ ಉರಿದಂತೆ, ಊರು ಕೊಳ್ಳೆಯಾದ ಮೇಲೆ ಕೋಟೆ ಬಾಗಿಲು ಹಾಕಿದಂತೆ'.

ಭಾರತವಂತೂ, ಲೋಕಕ್ಕೊಂದು ಸುವರ್ಣಪಥ ತೋರಿಸುವ ಅವಕಾಶವನ್ನು ಕಳೆದುಕೊಂಡುದು ದೊಡ್ಡ ದೌರ್ಭಾಗ್ಯವೇ ಸರಿ. ಗಾಂಧಿಯೋತ್ತರ ಭಾರತ ಮಹಾಪಥವನ್ನು ತ್ಯಜಿಸಿ, ತುಳಿದು ಸವೆದ ಸತ್ವಹೀನ ಜಾಡನ್ನೇ ಹಿಡಿದಂತಾಗಿದೆ. ಯುಗಗಳೇ ಕಳೆದರೂ, ತಪ್ಪು ಹೆಜ್ಜೆಯಿಟ್ಟು, ಪರಿತಪಿಸಿ, ಪಾಠ ಕಲಿತ ಭಾರತ-ವಿಶ್ವ, ತನ್ನಾತ್ಮಶಕ್ತಿಯ ನೆಲೆಯನ್ನು ಅರಿತು ಹಿಂಸಾ ರೂಪದ ಪಶು ಬಲವನ್ನು ವರ್ಜಿಸಿ, ಸತ್ಯ-ಪ್ರೇಮ-ಅಹಿಂಸೆಗಳ ಪಥ ಹಿಡಿದೀತು. ಇಂಥ ನಂಬಿಕೆಯೇ ಮಾನವನನ್ನು ಮಾನವನನ್ನಾಗಿ ಉಳಿಸಿ, ಕಾಪಾಡುತ್ತಿರುವುದು. 'ಧರ್ಮೋ ರಕ್ಷತಿ ರಕ್ಷಿತಃ' ಅಲ್ಲವೇ?

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೬	೭	ಎಲ್ಲಿ	ಎಲ್ಲ
೧೮	೨೧	ಅರಾಜಿಕವಾದಿ	ಅರಾಜಕವಾದಿ
೨೨	೪	ನಾಮುಸೂತ್ರದ	ನಾಮುಮಾತ್ರದ
೨೨	೧೭	ಸತ್ಯಮೇವ ಜಯತೆ	ಸತ್ಯಮೇವ ಜಯತೇ
೩೨	೨೩	ತರ್ಕಶಕ್ತಿಯನ್ನು	ತರ್ಕಶಕ್ತಿ
೩೬	೩	ವಿಷಯುಗಳು.	ವಿಷಯುಗಳು,
೫೬	೨೧	ಲಕ್ಷಾಂತರ	ಲಕ್ಷಾಂತರ ಮಂದಿಯು
೬೯	೫	ವಸ್ತುವಿನ	ವಸ್ತುವನ್ನು
೮೨	೨೦	ನುಲಿಕಾಂಡ	ಮುಲಿಕಾಂಡ
೧೧೩	೧೧	ನೇಶ್ವರವಾಡ	ಸೇಶ್ವರವಾದ
೧೩೩	೭	ಇದರ	ಇವರ
೧೫೦	೧೫	ಸ್ಪರ್ಶವೆಂದದ್ದೆಲ್ಲ	ಸ್ಪರ್ಶವಾದದ್ದೆಲ್ಲ

Vijaya Evening College Library

BANGALORE

This book should be returned on or before the date last stamped. An overdue charge of 10 paise will be levied for each day, if the book is kept beyond that date.

25 AUG 1988

4213

ಗಾಂಧೀ ಸಾಹಿತ್ಯ

"ಗಾಂಧಿಜೀಯವರ ಬರವಣಿಗೆ ಒಂದು ರೀತಿಯಲ್ಲಿ ಭಾರತ ಸ್ವಾತಂತ್ರ್ಯದ ಹೋರಾಟದ ಕಥೆ."

"ಕಥೆಯಲ್ಲಿ ಹೋರಾಟದ ಸ್ವರೂಪ, ರಾಜಕೀಯ ವ್ಯಕ್ತಿಯ ಸ್ವಭಾವ, ಗುರಿ, ನಿಷ್ಠೆ, ಸತ್ಯಾಚರಣೆ ವೈರಿಯನ್ನು ಎದುರಿಸುವ ಮನೋಭಾವ, ವ್ಯಕ್ತಿಬೆಳಸಿಕೊಳ್ಳಬೇಕಾಗುವ ಮನಃಸ್ಥೈರ್ಯ, ಆತ್ಮಾಭಿಮಾನ, ಶತ್ರುಗಳನ್ನು ಕುರಿತು ಸಂದರ್ಶಿಸುವಾಗ ಆಡಬೇಕಾದ ಎಚ್ಚರಿಕೆಯ ಮಾತುಗಾರಿಕೆ... ದೇಶದ ಜನದ ಸಂಪರ್ಕವನ್ನು ಬೆಳಸಿಕೊಳ್ಳಬೇಕಾದ ಅಗತ್ಯ, ಸಾಮಾನ್ಯ ಜನರೊಡನೆ, ಮಕ್ಕಳೊಡನೆ, ಮಹಿಳೆಯರೊಡನೆ, ನಡೆದುಕೊಳ್ಳುವ ರೀತಿ ಮೊದಲಾದ ವಿವರಣೆಗಳನ್ನು ಕಾಣುತ್ತೇವೆ."

"ಇದು ಯುಗಧರ್ಮಕ್ಕೆ ಅನುಗುಣವಾದ ಜಂಬೋ ಜೆಟ್‌ನಲ್ಲಿ ಕುಳಿತು ಗಾಂಧೀ ಸಾಹಿತ್ಯ ಲೋಕದಲ್ಲಿ ವಿಹಾರಕ್ಕೆ ಹೊರಟಂತಿದೆ."